ಭಾನುವಾರ, ಏಪ್ರಿಲ್ 5, 2026 ₹ 7.00

www.prajavani.net

prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೆಮಿಗೆ ವಿಶ್ವನಾಥ್

ಭಾರತದ ಬಾಕ್ಸರ್ ವಿಶ್ವನಾಥ್ ಸುರೇಶ್ ಮಂಗೋಲಿಯಾದಲ್ಲಿ ನಡೆಯುತ್ತಿರುವ ಏಷ್ಯಾ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ಪುರುಷರ 50 ಕೆ.ಜಿ. ವಿಭಾಗದಲ್ಲಿ ಸೆಮಿಫೈನಲ್ ತಲುಪಿದರು





ರಜತ್ ತಾಲೀಮು

ಆರ್‌ಸಿಬಿ ತಂಡದ ನಾಯಕ ರಜತ್ ಪಾಟೀದಾರ್ ಶನಿವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಭ್ಯಾಸ ನಡೆಸಿದರು. ಆರ್‌ಸಿಬಿ ತಂಡವು ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಭಾನುವಾರ ಎದುರಿಸಲಿದೆ

ಜ್ಞಾನದ ಕುತೂಹಲ ತಣಿಸಿದ 'ಎಡ್ಯುವರ್ಸ್'

ಸುಮಾರು 70 ಮಳಿಗೆಗಳಲ್ಲಿ ಶೈಕ್ಷಣಿಕ ಮಾಹಿತಿ ನೀಡಿದ ಶಿಕ್ಷಣ ಸಂಸ್ಥೆಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಆಯೋಜಿಸಿರುವ ಶೈಕ್ಷಣಿಕ ಮೇಳ 'ಎಡ್ಯುವರ್ಸ್'ನಲ್ಲಿ ವಿದ್ಯಾರ್ಥಿಗಳು, ಅವರ ಪೋಷಕರು ಸಿಇಟಿ, ನೀಟ್ ಸಹಿತ ವಿವಿಧ ಪರೀಕ್ಷೆಗಳ ಬಗ್ಗೆ ಮಾಹಿತಿ ಪಡೆದರು. ಹೊಸ ಕೋರ್ಸ್‌ಗಳ ಬಗ್ಗೆ ಕೇಳಿ ತಿಳಿದು, ಗೊಂದಲಗಳನ್ನು ಪರಿಹರಿಸಿಕೊಂಡರು.

ಅರಮನೆ ಮೈದಾನದ ಗಾಯತ್ರಿ ಗ್ರ್ಯಾಂಡ್‌ನಲ್ಲಿ ಶನಿವಾರ ಆರಂಭಗೊಂಡ 'ಪ್ರೀಮಿಯರ್ ಎಜುಕೇಷನ್ ಎಕ್ಸ್‌ಪೋ'ದಲ್ಲಿ ಶಿಕ್ಷಣ ಸಂಸ್ಥೆಗಳ 70ಕ್ಕೂ ಅಧಿಕ ಮಳಿಗೆಗಳಿದ್ದವು. ಭಿನ್ನ ಮತ್ತು ಹೊಸ ಕೋರ್ಸ್‌ಗಳನ್ನು ಪರಿಚಯಿಸುವ ಶಿಕ್ಷಣ ಸಂಸ್ಥೆಗಳ ಮಳಿಗೆಗಳ ಮುಂದೆ ವಿದ್ಯಾರ್ಥಿಗಳು, ಪೋಷಕರ ಸಂಖ್ಯೆ ಹೆಚ್ಚಿತ್ತು.

ಕೃತಕ ಬುದ್ಧಿಮತ್ತೆ (ಎಐ), ಏರೊನಾಟಿಕಲ್ ಎಂಜಿನಿಯರಿಂಗ್, ಫಿಲ್ಮ್ ಮೇಕಿಂಗ್, ಗೇಮ್ ಆರ್ಟ್ ಆ್ಯಂಡ್ ಡಿಸೈನ್, ಇಂಟೆಲೆಕ್ಚುವಲ್ ಪ್ರಾಪರ್ಟಿ ಕಾನೂನು, ವಾಸ್ತುಶಿಲ್ಪ, ಬ್ಯುಸಿನೆಸ್ ಅಡ್ಮಿನಿಸ್ಟ್ರೇಷನ್, ನೌಕಾಪಡೆ, ಹೋಟೆಲ್ ಮ್ಯಾನೇಜ್‌ಮೆಂಟ್, ವೈದ್ಯಕೀಯ ವಿಭಾಗದ ಹಲವು ವಿಷಯಗಳ ಸಹಿತ ನೂರಾರು ಕೋರ್ಸ್‌ಗಳ ಕುರಿತು ವಿದ್ಯಾರ್ಥಿಗಳು ಮತ್ತು ಪೋಷಕರು ವಿವರ ಪಡೆದರು.

ಬಿಎಸ್‌ಸಿ, ಎಂಬಿಎ, ಎಂಜಿನಿಯರಿಂಗ್ ಸಹಿತ ಭಿನ್ನ ಭಿನ್ನ ಕೋರ್ಸ್‌ಗಳ ಮಾಹಿತಿಗಳನ್ನು ಎಲ್ಲ ವಿದ್ಯಾಸಂಸ್ಥೆಗಳವರು ಆಕರ್ಷಕ ಕರಪತ್ರದೊಂದಿಗೆ ನೀಡಿದರು. ಮಾಹಿತಿ ಪಡೆಯಲು ಬಂದವರನ್ನು ಕೂರಿಸಿ ಚಾಕೊಲೆಟ್, ಪೆನ್ನುಗಳನ್ನು ನೀಡಿ ಖುಷಿಪಡಿಸಿ ಕಳುಹಿಸುತ್ತಿರುವುದು ಕಂಡು ಬಂತು.

ಪ್ರಮುಖ ಶೈಕ್ಷಣಿಕ ಕಾರ್ಯಕ್ರಮವಾದ ಎಡ್ಯುವರ್ಸ್, ದ್ವಿತೀಯ ಪಿಯುಸಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗಾಗಿ ವಿಶೇಷವಾಗಿ ವಿನ್ಯಾಸಗೊಳಿಸಲಾಗಿದೆ. ಈ ಕಾರ್ಯಕ್ರಮವು ಉನ್ನತ ಶಿಕ್ಷಣ ಸಂಸ್ಥೆಗಳು ನೀಡುವ ವೈವಿಧ್ಯಮಯ ವೃತ್ತಿ ಅವಕಾಶಗಳನ್ನು ಅನ್ವೇಷಿಸಲು ಒಂದು ವೇದಿಕೆಯಾಗಿ ಕಾರ್ಯನಿರ್ವಹಿಸಿತು. ಸಾಂಸ್ಕೃತಿಕ ಪ್ರದರ್ಶನಗಳ ಜೊತೆಗೆ, ಈ ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ಉಜ್ವಲ ಭವಿಷ್ಯವನ್ನು ರೂಪಿಸುವಲ್ಲಿ ಮಾರ್ಗದರ್ಶನ ನೀಡಲು ಪ್ರಖ್ಯಾತ ಭಾಷಣಕಾರರಿಂದ ಒಳನೋಟವುಳ್ಳ ಅವಧಿಗಳನ್ನು ಒಳಗೊಂಡಿತ್ತು.

ಪರೀಕ್ಷೆಯ ಪ್ರಮುಖ ಅಂಶಗಳು ಮತ್ತು ಕಾಲೇಜು ಆಯ್ಕೆ ಪ್ರಕ್ರಿಯೆಯ ಬಗ್ಗೆ, ಸಿಇಟಿ ಬಗ್ಗೆ ಶಿಕ್ಷಣ ತಜ್ಞ ಎ.ಎಸ್. ರವಿ ಮಾಹಿತಿ ನೀಡಿದರು. ಉನ್ನತ ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆ ಬಗ್ಗೆ ರೇವಾ ವಿಶ್ವವಿದ್ಯಾಲಯದ ಮುಖ್ಯ ಮಾರ್ಗದರ್ಶಕ ಜೆ.ಬಿ. ಸಿಂಹ ಆಕರ್ಷಕವಾಗಿ ತಿಳಿಸಿಕೊಟ್ಟರು. ನಂತರ ವಿದ್ಯಾರ್ಥಿಗಳು ತಮ್ಮ ಪರೀಕ್ಷಾ ತಯಾರಿ ಮಟ್ಟವನ್ನು ಪರಿಶೀಲಿಸಲು ಅನುಕೂಲವಾಗುವಂತೆ ಅಣಕು ಸಿಇಟಿ ಪರೀಕ್ಷೆ ನಡೆಯಿತು. ಅನೇಕ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಪಾಲ್ಗೊಂಡರು.



ಬೆಂಗಳೂರಿನ ಅರಮನೆ ಮೈದಾನದ ಗಾಯತ್ರಿ ವಿಹಾರ್‌ನಲ್ಲಿ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಶನಿವಾರ ಆಯೋಜಿಸಿದ್ದ 'ಎಡ್ಯುವರ್ಸ್' ಮೇಳದಲ್ಲಿ ವಿದ್ಯಾರ್ಥಿಗಳು ಮಳಿಗೆಯೊಂದರಲ್ಲಿ ಮಾಹಿತಿ ಪಡೆದರು ಪ್ರಜಾವಾಣಿ ಚಿತ್ರ

ಇಂದಿನ ಕಾರ್ಯಕ್ರಮ

'ಎಡ್ಯುವರ್ಸ್' ಎಕ್ಸ್‌ಪೊದ ಎರಡನೇ ದಿನವಾದ ಭಾನುವಾರ ಪ್ರಮುಖವಾಗಿ ಎರಡು ಗೋಷ್ಠಿಗಳು ನಡೆಯಲಿವೆ.

ಬೆಳಿಗ್ಗೆ ನಟ ಧ್ರುವ ಸರ್ಜಾ ಭಾಗವಹಿಸಲಿದ್ದಾರೆ. ಎಚ್‌ಆರ್ ವೃತ್ತಿ ಜೀವನದ ಅಗತ್ಯತೆ ಬಗ್ಗೆ ಎನ್‌ಎಚ್‌ಆರ್‌ಡಿ ಕಾರ್ಯದರ್ಶಿ ನಾಗನಗೌಡ ಎಸ್.ಜೆ. ಮಾಹಿತಿ ನೀಡಲಿದ್ದಾರೆ. ವಿನ್ಯಾಸ ಚಿಂತನೆ ಮತ್ತು ತಂತ್ರಜ್ಞಾನ ಆಧಾರಿತ ನಾವೀನ್ಯತೆ ಬಗ್ಗೆ ರೇವಾ ವಿಶ್ವವಿದ್ಯಾಲಯದ ಸಹ ಕುಲಪತಿ ಪ್ರಮೋದ್ ಆರ್. ಕುಲಕರ್ಣಿ ಮಾಹಿತಿ ನೀಡಲಿದ್ದಾರೆ.

ಬೆಳಿಗ್ಗೆ 9ರಿಂದ ಸಂಜೆ 6ರವರೆಗೆ ವಿದ್ಯಾರ್ಥಿಗಳು, ಪೋಷಕರು ಭಾಗವಹಿಸಬಹುದು.

ಎ.ಐ ಸ್ಥಿರತೆಗೆ ಬೇಕು ಐದು ದಶಕ: ಜೆ.ಬಿ.ಸಿಂಹ

ಬೆಂಗಳೂರು: ವೈದ್ಯಕೀಯ ಸೇರಿದಂತೆ ಯಾವುದೇ ಕೋರ್ಸ್‌ಗಳಿಗಿಂತ ಕೃತಕ ಬುದ್ಧಿಮತ್ತೆ (ಎಐ) ಅತ್ಯಂತ ಅನಿಶ್ಚಿತತೆಯಿಂದ ಕೂಡಿದೆ. ಸಂಪೂರ್ಣ ಸ್ಥಿರತೆ ಕಾಣಲು ಇನ್ನೂ ಐದು ದಶಕಗಳು ಬೇಕು ಎಂದು ರೇವಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಜೆ.ಬಿ.ಸಿಂಹ ಹೇಳಿದರು.

'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಸಹಯೋಗದಲ್ಲಿ ಅರಮನೆ ಮೈದಾನದಲ್ಲಿ ಆಯೋಜಿಸಿರುವ ಎರಡು ದಿನಗಳ ಅತಿ ದೊಡ್ಡ ಶೈಕ್ಷಣಿಕ ಮೇಳ 'ಎಡ್ಯುವರ್ಸ್'ನಲ್ಲಿ 'ಉನ್ನತ ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆ' ವಿಷಯ ಕುರಿತು ಅವರು ಮಾತನಾಡಿದರು.

ಮನುಷ್ಯರ ಕೆಲಸದ ಅಗಾಧ ಸಮಯವನ್ನು ಎಐ ಉಳಿತಾಯ ಮಾಡಿದೆ. ಎಲ್ಲ ಕ್ಷೇತ್ರಗಳನ್ನೂ ಆವರಿಸಿಕೊಳ್ಳುತ್ತಿದೆ. ಹಾಗಂತ ಅದು ನಿಶ್ಚಿತ ಹಂತ ತಲುಪಿಲ್ಲ. ಪ್ರತಿ ಮೂರು ತಿಂಗಳಿಗೆ ಬದಲಾಗುತ್ತಲೇ ಸಾಗಿದೆ. ಚಾಟ್ ಜಿಪಿಟಿ ಸೇರಿದಂತೆ ಯಾವುದೇ ಎಐ ಆಧಾರಿತ ಸರ್ಚ್ ಎಂಜಿನ್‌ಗಳು ಶೇ 100ರಷ್ಟು ಖಚಿತ ಉತ್ತರ ನೀಡಲು ಸಾಧ್ಯವಾಗಿಲ್ಲ. ಮನುಷ್ಯನ ಬುದ್ಧಿಗಿಂತ ಎಐ ಮಿಗಿಲಾದುದಲ್ಲ. ಅತಿಯಾದ ಅವಲಂಬನೆಯೂ ಒಳ್ಳೆಯದಲ್ಲ. ಒಮ್ಮೆ ತಂತ್ರಜ್ಞಾನ ಕೈಕೊಟ್ಟರೆ ಅದನ್ನೇ ನಂಬಿದ ವಲಯಗಳು ಭಾರಿ ಸಂಕಷ್ಟ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪ್ರಶ್ನೆ ಮಾಡಬೇಕು ಎನ್ನುವುದು ಹಿಂದಿನಿಂದಲೂ ಇರುವ ಮಾತು. ಎಐ ಸಹ ಪ್ರಶ್ನಿಸಿದರಷ್ಟೇ ಉತ್ತರಿಸುತ್ತದೆ. ಅದು ನೀಡುವ ಉತ್ತರ ಸರಿಯೇ, ಇಲ್ಲ ತಪ್ಪೇ ಎನ್ನುವುದಕ್ಕೂ ಮಾನವನಿಗೆ ಅಗತ್ಯ ಜ್ಞಾನಬೇಕು. ಅಂತಹ ಜ್ಞಾನ ಸಂಪಾದಿಸಿದ ನಂತರವೇ ಎಐ ಬಳಕೆಗೆ ಮುಂದಾಗಬೇಕು. ಪದವಿಗಳಲ್ಲಿ ಪಡೆಯುವ ಅಂಕಗಳಿಂದ ಕೌಶಲ ಸಿಗುವುದಿಲ್ಲ. ನಿರಂತರ ಪ್ರಯೋಗಗಳಿಗೆ ತೆರೆದುಕೊಂಡಾಗ ಮಾತ್ರ ಸಿದ್ಧಿಸುತ್ತದೆ ಎಂದರು.

ಎಐ ಎಂದರೆ ಅದೊಂದು ಸಾಮಾನ್ಯ ಜ್ಞಾನ. ಮಾನವ ಸಂಬಂಧಗಳಿಗೆ ಅದು ಬೇಕಿಲ್ಲ. ನಂಬಿಕೆ ಮೇಲೆ ಎಲ್ಲ ಸೌಧಗಳೂ ನಿಂತಿವೆ. ಮನುಷ್ಯನಿಗೆ ಗೊತ್ತಿಲ್ಲದ್ದು ಯಾವುದೂ ಇಲ್ಲ. ಮನುಷ್ಯನೇ ನಿಜವಾದ ಜ್ಞಾನಿ. ಎಐ ತಂತ್ರಜ್ಞಾನವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಅಷ್ಟೆ ಎಂದು ಹೇಳಿದರು.

ಸಿಇಟಿ, ನೀಟ್, ಕಾಮೆಡ್–ಕೆ ಕೌನ್ಸೆಲಿಂಗ್ ಬಗ್ಗೆ ನಿವೃತ್ತ ಪ್ರಾಂಶುಪಾಲ ಎ.ಎಸ್.ರವಿ ಮಾಹಿತಿ ನೀಡಿದರು.

ವಿದ್ಯಾರ್ಥಿಗಳ ಭವಿಷ್ಯ ಕೊಲ್ಲಬೇಡಿ: ಡಾ.ಬ್ರೋ

ಕೋರ್ಸ್‌ಗಳ ಆಯ್ಕೆಯನ್ನು ವಿದ್ಯಾರ್ಥಿಗಳಿಗೇ ಬಿಡಬೇಕು. ಒತ್ತಡ ಹಾಕಿ ಅವರ ಭವಿಷ್ಯದ ಕನಸುಗಳನ್ನು ಕೊಲ್ಲಬಾರದು ಎಂದು ಗೋ ಪ್ರವಾಸ ಸಂಸ್ಥೆಯ ಸಂಸ್ಥಾಪಕ 'ಡಾ.ಬ್ರೋ' ಗಗನ್ ಶ್ರೀನಿವಾಸ್ ಹೇಳಿದರು.

ಪ್ರತಿಯೊಬ್ಬರಿಗೂ ಅವರದೇ ಕನಸುಗಳು ಇರುತ್ತವೆ. ಕನಸುಗಳಿಗೆ ನೀರೆರೆಯುವ ಕೆಲಸವನ್ನು ಪೋಷಕರು, ಸಮಾಜ ಮಾಡಬೇಕು. ಒತ್ತಡ ಹಾಕಿ ಇಂತಹ ಕೋರ್ಸ್ ಓದಬೇಕು ಎನ್ನಬಾರದು. ಪ್ಯಾಷನ್ ಹಿಂದೆ ಹೋಗಲು ಬಯಸುವವರನ್ನು ಮುಕ್ತವಾಗಿ ಬಿಡಬೇಕು ಎಂದು ಸಲಹೆ ನೀಡಿದರು.

ಬಾಲ್ಯದ ಕಷ್ಟದ ದಿನಗಳು, ಆರ್ಥಿಕ ಮುಗ್ಗಟ್ಟಿನಿಂದ ಓದಿಗೆ ಆದ ತೊಡಕು. ಪ್ಯಾಷನ್ ಬೆನ್ನತ್ತಿ, ಎರಡು ವರ್ಷಗಳ ಹಿಂದೆ ಸ್ಥಾಪಿಸಿದ ತಮ್ಮ ಗೋ ಪ್ರವಾಸ ಸಂಸ್ಥೆಯ ಯಶಸ್ಸನ್ನು ಹಂಚಿಕೊಂಡರು.

ಪೋಷಕರ ಮಾತು


ಯಲಹಂಕದಲ್ಲೊಂದು, ಹೊಸೂರಿನಲ್ಲೊಂದು ಹೀಗೆ ಎಲ್ಲೆಲ್ಲೋ ದೂರದಲ್ಲಿ ಕಾಲೇಜುಗಳಿದ್ದರೆ ಅಲ್ಲೆಲ್ಲ ಅಲೆದಾಡುವುದು ಕಷ್ಟ. ಎಲ್ಲೆಲ್ಲೋ ಇರುವ ಕಾಲೇಜುಗಳ ಮಾಹಿತಿ ಇಲ್ಲಿ ಒಂದೇ ಕಡೆ ಸಿಗುತ್ತಿರುವುದರಿಂದ ನಮ್ಮಂಥ ಪೋಷಕರಿಗೆ ಅನುಕೂಲವಾಗಿದೆ. ಮಗಳನ್ನು ಯಾವ ಕೋರ್ಸ್‌ಗೆ ಸೇರಿಸಬೇಕು? ಯಾವ ಕಾಲೇಜಿಗೆ ಸೇರಿಸಬೇಕು ಎಂಬ ಬಗ್ಗೆ 'ಎಡ್ಯುವರ್ಸ್' ಮೇಳದಲ್ಲಿ ಒಂದು ಐಡಿಯಾ ಸಿಕ್ಕಿದೆ.

ಸುಮಿತ್ರಾ, ವಿಜಯನಗರ


ಕಾಲೇಜು ಅಥವಾ ಕೋರ್ಸ್‌ಗಳ ಬಗ್ಗೆ ಇಂಟರ್‌ನೆಟ್‌ನಲ್ಲಿ ಹುಡುಕುವುದಕ್ಕಿಂತ ಇಂಥ ಮೇಳಗಳಲ್ಲಿ ನೇರವಾಗಿ ಭಾಗಿಯಾಗಿ ಮಾಹಿತಿ ಪಡೆದಾಗ ಸಿಗುವ ಅನುಭವ ಬೇರೆ. ಸರಿಯಾದ ನಿರ್ಧಾರಗಳನ್ನು ಕೈಗೊಳ್ಳಲು 'ಎಡ್ಯುವರ್ಸ್' ಅನುಕೂಲ ಮಾಡಿಕೊಟ್ಟಿದೆ. ಕರ್ನಾಟಕದಲ್ಲಿಯೇ ಕಲಿಯಬೇಕು ಎಂದು ಆಸೆ ಇರುವವರಿಗೆ ಬಹಳ ಉಪಕಾರಿಯಾಗಿದೆ.

ಅಶೋಕ, ಕಡಬಗೆರೆ


ಮಗಳು ಪಿಯುಸಿಯಲ್ಲಿ ವಿಜ್ಞಾನ ತೆಗೆದುಕೊಂಡಿದ್ದು, ಪರೀಕ್ಷೆ ಬರೆದಿದ್ದಾಳೆ. ಮುಂದೆ ಏನು ಮಾಡುವುದು ಎಂಬುದನ್ನು ತಿಳಿಯಲು ನಾವು ಈ ಮೇಳಕ್ಕೆ ಬಂದಿದ್ದೇವೆ. ಉತ್ತಮ ಮಾರ್ಗದರ್ಶನ ದೊರೆಯಿತು. 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳಿಗೆ ಧನ್ಯವಾದಗಳು.

ಚಂದನಾ, ವಿಜಯನಗರ

ವಿದ್ಯಾರ್ಥಿಗಳ ಅಭಿಪ್ರಾಯ

ಯಾವ ಕಾಲೇಜನ್ನು ಆಯ್ಕೆ ಮಾಡಿಕೊಳ್ಳಬೇಕು? ಯಾವ ವಿಷಯ ತೆಗೆದುಕೊಂಡರೆ ಒಳ್ಳೆಯದು ಎಂಬ ಪ್ರಶ್ನೆಗಳು ನನ್ನಲ್ಲಿದ್ದವು. ಉತ್ತಮ ಗುಣಮಟ್ಟದ ಅನೇಕ ಕಾಲೇಜುಗಳ ವಿವರಗಳು ಇಲ್ಲಿ ಒಂದೇ ಕಡೆ ಸಿಕ್ಕಿದವು. ಕಂಪ್ಯೂಟರ್ ಸೈನ್ಸ್ ಮಾಡಬೇಕು ಎಂದು ನಿರ್ಧರಿಸಿದ್ದೇನೆ. 'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್' ಪ್ರಮುಖ ವಿದ್ಯಾಸಂಸ್ಥೆಗಳನ್ನು ಒಂದೆಡೆ ಸೇರಿಸಿದೆ.


ಐಶ್ವರ್ಯ, ವಿದ್ಯಾರ್ಥಿನಿ, ದೀಪಾಂಜಲಿ ನಗರ

ನಮ್ಮ ಸುತ್ತಮುತ್ತಲಿನಲ್ಲಿ ಹಲವು ಕಾಲೇಜುಗಳಿವೆ. ಯಾವುದನ್ನು ಆಯ್ಕೆ ಮಾಡಬೇಕು? ಯಾವುದನ್ನು ಬಿಡಬೇಕು ಎಂಬ ಗೊಂದಲಗಳಿದ್ದವು. ಎಲ್ಲಿ ಯಾವ ಕೋರ್ಸ್ ನಮಗೆ ಸೂಕ್ತ ಎಂದು ಆಯ್ಕೆ ಮಾಡಿಕೊಳ್ಳುವ ಅವಕಾಶ ಸಿಕ್ಕಿತು. ಡೇಟಾ ಸೈನ್ಸ್ ಕೋರ್ಸ್ ಮಾಡಬೇಕು ಎಂಬ ಯೋಚನೆ ಬಂದಿದೆ.


ಧನುಶ್ರೀ, ವಿದ್ಯಾರ್ಥಿನಿ, ಶ್ರೀನಗರ

ಎಷ್ಟೊಂದು ಕಾಲೇಜುಗಳು, ಎಷ್ಟೊಂದು ಕೋರ್ಸ್‌ಗಳು ಇವೆ ಎಂಬುದು 'ಎಡ್ಯುವರ್ಸ್' ಮೇಳಕ್ಕೆ ಬಂದಿದ್ದರಿಂದ ಗೊತ್ತಾಯಿತು. ಕಂಪ್ಯೂಟರ್ ಸೈನ್ಸ್ ಅಥವಾ ಡೇಟಾ ಸೈನ್ಸ್ ಎರಡರಲ್ಲಿ ಒಂದು ಕೋರ್ಸ್ ತಗೊಬೇಕು ಎಂಬ ಯೋಚನೆ ಇದೆ. ಅನೇಕ ಕೋರ್ಸ್‌ಗಳ ಬಗ್ಗೆ, ಫೀಸ್ ಬಗ್ಗೆ ತಿಳಿಯಲು ಈ ಮೇಳ ಸಹಕಾರಿಯಾಯಿತು.


ಚೈತ್ರಾ, ವಿದ್ಯಾರ್ಥಿನಿ, ಶ್ರೀನಗರ

ಯಾವ ಕೋರ್ಸ್‌ಗಳಿವೆ ಎಂದು ತಿಳಿದುಕೊಳ್ಳಲು ಈ ಕಾರ್ಯಕ್ರಮಕ್ಕೆ ಬಂದಿದ್ದೆ. ಹಲವು ಕೋರ್ಸ್‌ಗಳ ಮಾಹಿತಿ ಸಿಕ್ಕಿತು. ಆರ್ಕಿಟೆಕ್ಟ್ ಅಥವಾ ಏವಿಯೇಶನ್ ಕೋರ್ಸ್ ಮಾಡಬೇಕು ಎಂದಿದ್ದೇನೆ.


ದೀಕ್ಷಿತಾ, ವಿದ್ಯಾರ್ಥಿನಿ, ವಿಜಯನಗರ

ಕೋರ್ಸ್ ಬಗ್ಗೆ ಮಾರ್ಗದರ್ಶನ


ಪಿಯುಸಿ ಪರೀಕ್ಷೆ ಮುಗಿಸಿ ಫಲಿತಾಂಶಕ್ಕೆ ಕಾಯುತ್ತಿರುವ ವಿದ್ಯಾರ್ಥಿಗಳು ಗೊಂದಲದಲ್ಲಿದ್ದಾರೆ. ಯಾವ ಕೋರ್ಸ್ ಆಯ್ಕೆ ಮಾಡಿಕೊಳ್ಳುವುದು? ಯಾವ ಕಾಲೇಜಿಗೆ ಹೋಗುವುದು? ಮುಂದೇನು ಮಾಡುವುದು ಎಂಬುದರ ಬಗ್ಗೆ ಗೊತ್ತಿಲ್ಲದಿರುವುದು ಮತ್ತು ಅನೇಕ ಆಯ್ಕೆಗಳಿರುವುದು ಈ ಗೊಂದಲಕ್ಕೆ ಕಾರಣ. ನಮ್ಮ ಸಿಬ್ಬಂದಿ ಅವರಿಗೆ ಸರಿಯಾಗಿ ಮಾಹಿತಿ ನೀಡಿ, ಅವರ ಆಸಕ್ತಿಯ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳುವಂತೆ ಸೂಚಿಸುತ್ತಿದ್ದಾರೆ. ಮಾರ್ಗದರ್ಶನ ಮಾಡುತ್ತಿದ್ದಾರೆ.

ಅಶೋಕ್ ಕೆ.ಜೆ., ವ್ಯವಸ್ಥಾಪಕ, ಚಾಣಕ್ಯ ವಿಶ್ವವಿದ್ಯಾಲಯ

ಪ್ರಾಯೋಗಿಕ ತರಬೇತಿ

'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಕಾರ್ಯಕ್ರಮವನ್ನು ಸಂಯೋಜಿಸಿದ್ದಾರೆ. ನಮ್ಮ ಮಳಿಗೆಗೆ ಬರುವ ವಿದ್ಯಾರ್ಥಿಗಳು ಎಐ ಸಹಿತ ಹೊಸ ಕೋರ್ಸ್‌ಗಳ ಬಗ್ಗೆಯೇ ಹೆಚ್ಚು ವಿಚಾರಿಸಿದ್ದಾರೆ. ಸಿಎಂಆರ್ ವಿಶ್ವವಿದ್ಯಾಲಯವು ಉತ್ತಮ ಮೂಲಸೌಕರ್ಯ ಮತ್ತು ಗುಣಮಟ್ಟದ ಶಿಕ್ಷಣಕ್ಕೆ ಹೆಸರಾಗಿದೆ. ಜಗತ್ತಿನ ನೈಜ ಸವಾಲುಗಳನ್ನು ಎದುರಿಸಲು ಪ್ರಾಯೋಗಿಕ ತರಬೇತಿ ನೀಡಲಾಗುತ್ತದೆ.


ಅರುಣ್ ಟಿ.ಎಂ., ಮುಖ್ಯಸ್ಥ, ಸಿಎಂಆರ್ ವಿಶ್ವವಿದ್ಯಾಲಯ

ಒಂದೇ ಕಡೆ ಹಲವು ಮಾಹಿತಿ

ಶೈಕ್ಷಣಿಕ ಕ್ಷೇತ್ರದಲ್ಲಿ ರಾಮಯ್ಯ ವಿಶ್ವವಿದ್ಯಾಲಯವು ದಂತಕಥೆಯಾಗಿದೆ. ನಮ್ಮಲ್ಲಿ ಎಂಜಿನಿಯರಿಂಗ್, ವಾಣಿಜ್ಯ ಸಹಿತ ವಿವಿಧ ಕೋರ್ಸ್‌ಗಳಿವೆ. ವೈದ್ಯಕೀಯ ಕೋರ್ಸ್‌ಗೆ ಹೆಚ್ಚು ಬೇಡಿಕೆ ಇದೆ. ಯಾಕೆಂದರೆ ನಮ್ಮದೇ ಆಸ್ಪತ್ರೆಗಳಿವೆ. ನಮ್ಮಲ್ಲೇ ಕಲಿತು ನಮ್ಮಲ್ಲೇ ಉದ್ಯೋಗ ಪಡೆಯುವ ಅವಕಾಶ ಇರುವುದರಿಂದ ಈ ಬೇಡಿಕೆ ಸೃಷ್ಟಿಯಾಗಿದೆ. 'ಎಡ್ಯುವರ್ಸ್' ಮೇಳವು ಒಂದೇ ಕಡೆ ಅನೇಕ ಕಾಲೇಜುಗಳ ವಿದ್ಯಾರ್ಥಿಗಳಿಗೆ ಮಾಹಿತಿ ಪಡೆಯಲು ಅನುಕೂಲ ಮಾಡಿಕೊಟ್ಟಿದೆ.


ಶೀತಲ್ ಮಾನೆ, ಸಹಾಯಕ ವ್ಯವಸ್ಥಾಪಕಿ (ಅಡ್ಮಿನ್), ರಾಮಯ್ಯ ವಿಶ್ವವಿದ್ಯಾಲಯ

ಕಲಿಕಾ ಶುಲ್ಕದ ಜ್ಞಾನ

ವಿದ್ಯಾರ್ಥಿಗಳು ಮತ್ತು ಹೆತ್ತವರೊಂದಿಗೆ ಸಮಾಲೋಚನೆ ಮಾಡಿದಾಗ ಅವರಿಗೆ ಬಹಳಷ್ಟು ಮಾಹಿತಿಯ ಕೊರತೆ ಇದೆ ಎಂಬುದು ಗೊತ್ತಾಯಿತು. ಎಲ್ಲ ಗೊತ್ತಿದೆ ಎಂದು ಕೆಲವರು ತಿಳಿದುಕೊಂಡಿದ್ದರು. ಇಲ್ಲಿರುವ ಕೋರ್ಸ್‌ಗಳ ಮಾಹಿತಿ ಪಡೆದು ಆಮೇಲೆ ಆಶ್ಚರ್ಯಪಟ್ಟರು. ಅನೇಕರಿಗೆ ಕಲಿಕಾ ಶುಲ್ಕದ ಬಗ್ಗೆಯೇ ಜ್ಞಾನ ಇರಲಿಲ್ಲ. ಕೇಂಬ್ರಿಜ್ ವಿಶ್ವವಿದ್ಯಾಲಯವರು ಗುಣಮಟ್ಟದ ಶಿಕ್ಷಣ ಮತ್ತು ಉದ್ಯೋಗ ಒದಗಿಸುವುದರಲ್ಲಿ ಮುಂಚೂಣಿಯಲ್ಲಿರುವ ಸಂಸ್ಥೆ. ಕೆಲಸಕ್ಕಾಗಿ ಅಲೆದಾಡುವ ಬದಲು ಕೆಲಸ ಕೊಡುವವರು ಆಗಬೇಕು ಎಂಬುದು ನಮ್ಮ ಧ್ಯೇಯ. ನಮ್ಮಲ್ಲಿ ಈಗಾಗಲೇ 12 ಸ್ಟಾರ್ಟ್‌ಅಪ್‌ಗಳಿವೆ.


ಅವಿನಾಶ್ ಪಿ.ಎಸ್., ಪ್ರಾಧ್ಯಾಪಕ ಕೇಂಬ್ರಿಜ್ ವಿಶ್ವವಿದ್ಯಾಲಯ

ಹಲವು ವರ್ಷಗಳ ಅನುಬಂಧ

'ಎಡ್ಯುವರ್ಸ್' ಮೇಳಕ್ಕೆ 'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್'ನೊಂದಿಗೆ ನಾವು ಬಹಳ ವರ್ಷಗಳಿಂದ ಕೈಜೋಡಿಸುತ್ತಾ ಬಂದಿದ್ದೇವೆ. ಒಂದೇ ಸೂರಿನಡಿ ಎಲ್ಲ ಕೋರ್ಸ್‌ಗಳ ವಿವರ ನೀಡಲು ಇಂಥ ಮೇಳಗಳ ಮೂಲಕ ಸಾಧ್ಯವಾಗಿದೆ. ನಮ್ಮ ವಿದ್ಯಾಸಂಸ್ಥೆಯು ಐದು ದಶಕಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡುತ್ತಾ ಬಂದಿದೆ. ಎಐಎಂಎಲ್, ಡೇಟಾ ಎಂಜಿನಿಯರಿಂಗ್, ಬಯೋ ಇನ್‌ಫಾರ್ಮೆಟಿಕ್ಸ್, ಸೈಬರ್ ಸೆಕ್ಯೂರಿಟಿ, ಬ್ಲಾಕ್ ಚೈನ್ ಸಹಿತ ಅನೇಕ ನವೀನ ಕೋರ್ಸ್‌ಗಳು ನಮ್ಮಲ್ಲಿ ಇರುವುದರಿಂದ ವಿದ್ಯಾರ್ಥಿಗಳು, ಪೋಷಕರು ನಮ್ಮ ಸಂಸ್ಥೆಗೆ ಆದ್ಯತೆ ನೀಡುತ್ತಿದ್ದಾರೆ. ಹಾಗಾಗಿ 25 ಸಾವಿರ ವಿದ್ಯಾರ್ಥಿಗಳು ನಮ್ಮಲ್ಲಿ ಕಲಿಯುತ್ತಿದ್ದಾರೆ.


ಅಶೋಕ್ ಭಟ್, ಉಪ ಪ್ರಧಾನ ವ್ಯವಸ್ಥಾಪಕ, ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ

ಎಲ್ಲ ಕೋರ್ಸ್‌ಗಳಲ್ಲಿ ಎಐ

ಒಂದೇ ಸೂರಿನಡಿ ವಿವಿಧ ಶಿಕ್ಷಣ ಸಂಸ್ಥೆಗಳ ಮಾಹಿತಿ, ಕೋರ್ಸ್‌ಗಳ ವಿವರ ಸಿಗಲು 'ಎಡ್ಯುವರ್ಸ್' ಕಾರಣವಾಗಿದೆ. ಎಲ್ಲ ಕೋರ್ಸ್‌ಗಳಿಗೆ ಎಐ ಬಳಸಿದ ಹಿರಿಮೆ ನಮ್ಮ ಸಂಸ್ಥೆಯದ್ದಾಗಿದೆ. ಸ್ಕೂಲ್ ಆಫ್ ಎಂಜಿನಿಯರಿಂಗ್, ಆರೋಗ್ಯ ವಿಜ್ಞಾನ, ಸ್ಕೂಲ್ ಆಫ್ ಮೆಡಿಸಿನ್, ಕಾಲೇಜ್ ಆಫ್ ನರ್ಸಿಂಗ್, ಕಾಲೇಜ್ ಆಫ್ ಫಾರ್ಮಾಸ್ಯುಟಿಕಲ್ ಸೈನ್ಸ್, ಕಾಲೇಜ್ ಆಫ್ ಫಿಶಿಯೋಥೆರಪಿ ಅನೇಕ ಕೋರ್ಸ್‌ಗಳಿವೆ. ಬೆಂಗಳೂರಿನಲ್ಲಿ ನಾಲ್ಕು ಕ್ಯಾಂಪಸ್‌ಗಳಿವೆ. ಇಂಥ ಅವಕಾಶವನ್ನು ವಿದ್ಯಾರ್ಥಿಗಳು, ಪೋಷಕರು ಬಳಸಿಕೊಳ್ಳಬೇಕು.


ಮನೋಜ್ ಕುಮಾರ್ ಜೆ., ಸಹಾಯಕ ನಿರ್ದೇಶಕ (ಆಡಳಿತ) ದಯಾನಂದ ಸಾಗರ್ ವಿಶ್ವವಿದ್ಯಾಲಯ

'ಬದುಕು ಜಟಕಾ ಬಂಡಿ, ನಾನದರ ಸಾಹೇಬ..' ಕೃತಿ ಜನಾರ್ಪಣೆ

'ರಾಜಕಾರಣಿಗಳ ಬಗೆಗಿನ ತಪ್ಪು ಗ್ರಹಿಕೆ ದೂರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಧಿಕಾರಿಗಳು, ಸಚಿವರು, ಮುಖ್ಯಮಂತ್ರಿಗಳಿಂದ ಸದಾ ದೂರವೇ ಇರುವ ನನಗೆ, ಅವರ ಬಗೆಗೆ ಇದ್ದ ತಪ್ಪುಗ್ರಹಿಕೆ ವಿಠ್ಠಲ ಮೂರ್ತಿ ಅವರ ಪುಸ್ತಕದಿಂದ ದೂರವಾಯಿತು' ಎಂದು ಚಲನಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿ ಹೇಳಿದರು.

ಬಹುರೂಪಿ ಫೌಂಡೇಶನ್ ಶನಿವಾರ ಹಮ್ಮಿಕೊಂಡಿದ್ದ, ನಿವೃತ್ತ ಐಎಎಸ್ ಅಧಿಕಾರಿ ಐ.ಎಂ.ವಿಠ್ಠಲಮೂರ್ತಿ ಅವರ 'ಬದುಕು ಜಟಕಾ ಬಂಡಿ, ನಾನದರ ಸಾಹೇಬ..' ಎಂಬ ಕೃತಿ ಜನಾರ್ಪಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

'ಕೃತಿಯಲ್ಲಿ ಉಲ್ಲೇಖವಾಗಿರುವ ಅನೇಕ ಘಟನೆಗಳು ಅರಿವು ಮೂಡಿಸಿವೆ. ರಾಜ್ಯದ ರಾಜಕಾರಣಿಗಳ ಬಗ್ಗೆ ಇದ್ದ ತಪ್ಪುಗ್ರಹಿಕೆಯನ್ನು ಅವರು ಸರಿ ಮಾಡಿದ್ದಾರೆ. ಅನೇಕ ಮುಖ್ಯಮಂತ್ರಿಗಳ ಬಗ್ಗೆ ಏನು ಮಾತನಾಡುವುದು ಅಂದುಕೊಂಡಿದ್ದೆ. ಗುಂಡೂರಾವ್, ರಾಮಕೃಷ್ಣ ಹೆಗಡೆ, ಎಚ್.ಡಿ. ದೇವೇಗೌಡ, ಸಿದ್ದರಾಮಯ್ಯ ಅವರ ಇನ್ನೊಂದು ಮುಖವನ್ನು ಪರಿಚಯಿಸಿದ್ದಾರೆ' ಎಂದು ತಿಳಿಸಿದರು.

ಸಾಮಾನ್ಯವಾಗಿ ಅಧಿಕಾರಿಗಳಲ್ಲಿ ರೂಲ್‌ಬುಕ್ ಹೇಳಿದ ಹಾಗೆ ನಡೆಯುವವರೇ ಹೆಚ್ಚು. ಆದರೆ, ವಿಠ್ಠಲಮೂರ್ತಿ ಅವರು, ರೂಲ್ ಬುಕ್ ಅನ್ನು ಓದಿ ಅರ್ಥ ಮಾಡಿಕೊಂಡು, ಅದರಲ್ಲಿರುವ ಆಶಯಗಳನ್ನು ದಾಟಿ ಮುಂದೆ ಸಾಗಿದವರು. ಇಂದು ಶಾಲೆಗಳ ಬದಲಿಗೆ ದೇವಾಲಯ ಜೀರ್ಣೋದ್ಧಾರದಲ್ಲಿ ಆಸಕ್ತಿ ತೋರುವವರೇ ಹೆಚ್ಚು. ಆದರೆ, ವಿಠ್ಠಲ ಮೂರ್ತಿ ಅವರು ಸರ್ಕಾರದ ಅನುದಾನ ಬರದಿದ್ದಾಗ, ಊರಿನವರನ್ನು ಒಗ್ಗೂಡಿಸಿ 800 ಶಾಲೆಗಳನ್ನು ಅಭಿವೃದ್ಧಿಪಡಿಸಿದವರು ಎಂದರು.

ದಿ ಪ್ರಿಂಟರ್ಸ್ (ಮೈಸೂರು) ಪ್ರೈವೆಟ್ ಲಿಮಿಟೆಡ್ ನಿರ್ದೇಶಕ ಕೆ.ಎನ್. ಶಾಂತಕುಮಾರ್ ಮಾತನಾಡಿ, 'ಪ್ರಜಾವಾಣಿ'ಯಲ್ಲಿ ಪ್ರಕಟಗೊಂಡಿದ್ದ ವಿಠ್ಠಲ ಮೂರ್ತಿ ಅವರ 'ಆಡಳಿತದ ನೆನಪುಗಳು' ಅಂಕಣ ಬರಹಗಳ ಸಂಕಲನ ಈ ಕೃತಿಯಾಗಿದೆ. 'ಠೇವಣಿ ದುಡ್ಡಿಗಾಗಿ ತಡಕಾಡಿದ ಗುಂಡೂರಾವ್' ಶೀರ್ಷಿಕೆಯಡಿ ಮೊದಲ ಅಂಕಣ ಪ್ರಕಟವಾದಾಗ ಸಾಕಷ್ಟು ಜನರು ಮೆಚ್ಚಿ ಪತ್ರ ಬರೆದಿದ್ದರು ಮತ್ತು ಕರೆಯನ್ನೂ ಮಾಡಿದ್ದರು' ಎಂದು ನೆನಪಿಸಿಕೊಂಡರು.

'ವಿಠ್ಠಲಮೂರ್ತಿ ಮಾನವೀಯ ತುಡಿತದ ಅಧಿಕಾರಿಯಾಗಿದ್ದರು. ಹಾಗಾಗಿಯೇ ಅವರನ್ನು ಸರ್ಕಾರ 27 ಬಾರಿ ವರ್ಗ ಮಾಡಿತ್ತು. ಅವರ ಬರಹಗಳಲ್ಲಿ ಬದುಕಿನ ಬನಿ ಇದೆ. ರಾಜಕೀಯದ ಒಳನೋಟ ಇದೆ. ಸಾಮಾಜಿಕ ಪಲ್ಲಟಗಳ ಮೇಲೊಂದು ಚಿಕಿತ್ಸಕ ದೃಷ್ಟಿಕೋನ ಇದೆ. ಸಾಹಿತ್ಯದ ತುಡಿತವಿದೆ. ಈ ಬರಹಗಳು 12 ವರ್ಷಗಳಷ್ಟು ಹಳೆಯದಾದರೂ, ಈಗಲೂ ತಾಜಾತನದಿಂದ ಕೂಡಿವೆ. ಅವರಿಂದ ಇನ್ನಷ್ಟು ಬರಹಗಳು ಬರಲಿ' ಎಂದು ಆಶಿಸಿದರು.

ಬಾಲ್ಯದ ಅನುಭವಗಳು, ಶಾಲಾ ದಿನಗಳು, ಸರ್ಕಾರಿ ಸೇವೆ ಬಗ್ಗೆ ಕೃತಿಯಲ್ಲಿ ಉಲ್ಲೇಖಿಸಿರುವುದಾಗಿ ಲೇಖಕ ಐ.ಎಂ. ವಿಠ್ಠಲಮೂರ್ತಿ ಹೇಳಿದರು. ಬಹುರೂಪಿ ಪ್ರಕಾಶನದ ಜಿ.ಎನ್.ಮೋಹನ್ ಸ್ವಾಗತಿಸಿದರು.

'ಹಾಸ್ಯಪ್ರಜ್ಞೆವುಳ್ಳ ವಿಠ್ಠಲಮೂರ್ತಿ'

'ವಿಠ್ಠಲಮೂರ್ತಿ ಅವರು ಹಾಸ್ಯ ಪ್ರಜ್ಞೆವುಳ್ಳವರಾಗಿದ್ದು, ಪುಸ್ತಕದಲ್ಲಿರುವ ಎಲ್ಲಾ ವಿಷಯಗಳು ಆಸಕ್ತಿದಾಯಕವಾಗಿವೆ' ಎಂದು ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಘ್ ಹೇಳಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 'ಉತ್ತಮ ಮುಖ್ಯಮಂತ್ರಿಗಳಾಗಿದ್ದ ಜೆ.ಎಚ್.ಪಟೇಲ್, ಗುಂಡೂರಾವ್, ನರಗುಂದ ಬಂಡಾಯ, ಪಟ್ಟದಕಲ್ಲು ಉತ್ಸವ, ಆಡಳಿತದಲ್ಲಿ ಭ್ರಷ್ಟಾಚಾರ, ಕನ್ನಡಕ್ಕೆ ಒಬ್ಬನೇ ರಾಜಕುಮಾರ ಎಂಬುದರ ಕುರಿತು ಬರೆದಿದ್ದಾರೆ. ಸಿದ್ದರಾಮಯ್ಯ ಬಗ್ಗೆಯೂ ಬರೆದಿದ್ದಾರೆ. ಆದರೆ, ಸಿದ್ದರಾಮಯ್ಯ ಅವರನ್ನು ದೇವರಾಜ ಅರಸು ಅವರಿಗೆ ಹೋಲಿಕೆ ಮಾಡುವುದು ಸರಿಯಲ್ಲ. ಅರಸು ಆಡಳಿತವನ್ನು ಹತ್ತಿರದಿಂದ ನೋಡಿದ್ದೇನೆ' ಎಂದರು.


'ಬದುಕು ಜಟಕಾ ಬಂಡಿ, ನಾನದರ ಸಾಹೇಬ..' ಕೃತಿ ಜನಾರ್ಪಣೆ ಕಾರ್ಯಕ್ರಮದಲ್ಲಿ ಜಿ.ಎನ್. ಮೋಹನ್, ಗಿರೀಶ್ ಕಾಸರವಳ್ಳಿ, ಚಿರಂಜೀವಿ ಸಿಂಘ್, ಕೆ.ಎನ್. ಶಾಂತಕುಮಾರ್, ಟಿ.ಎನ್. ಸೀತಾರಾಂ, ಐ.ಎಂ. ವಿಠ್ಠಲಮೂರ್ತಿ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಅನ್ಯಾಯವಾದವರಿಗೆ ನ್ಯಾಯ ಕೊಡಿಸುವ ಕೆಲಸವನ್ನು ಒಂದು ವ್ಯವಸ್ಥೆ ಮಾಡಬೇಕು. ಅದನ್ನು ಐ.ಎಂ.ವಿಠ್ಠಲಮೂರ್ತಿ ಮಾಡಿದ್ದಾರೆ. ಕಾನೂನು ಯಾವಾಗಲೂ ನ್ಯಾಯದ ಕಡೆ ಇರಬೇಕು

ಟಿ.ಎನ್.ಸೀತಾರಾಂ, ನಿರ್ದೇಶಕ



'ಯುದ್ಧ ಬೇಡ ಶಾಂತಿ ಬೇಕು' ಎಂಬ ಘೋಷವಾಕ್ಯದೊಂದಿಗೆ ಶಾಸಕ ಬಿ. ಆರ್. ಪಾಟೀಲ ನೇತೃತ್ವದಲ್ಲಿ ನಡೆದ ಸತ್ಯಾಗ್ರಹದಲ್ಲಿ ಮೋಹನ್ ಕೊಂಡಜ್ಜಿ, ಶ್ರೀಕಂಠಮೂರ್ತಿ, ರಾಮು ಮನೋಹರ ಪಾಲ್ಗೊಂಡಿದ್ದರು

'ಯುದ್ಧ ಬೇಡ ಶಾಂತಿ ಬೇಕು' ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮ ಏಷ್ಯಾದಲ್ಲಿನ ಯುದ್ಧ ಮುಗ್ಧ ಜನರ ಮಾರಣ ಹೋಮ ನಡೆಯುತ್ತಿರುವುದನ್ನು ಪ್ರತಿಭಟಿಸಿ, 'ಯುದ್ಧ ಬೇಡ ಶಾಂತಿ ಬೇಕು' ಎಂಬ ಘೋಷ ವಾಕ್ಯದೊಂದಿಗೆ ಆಳಂದ ಕಾಂಗ್ರೆಸ್ ಶಾಸಕ ಬಿ.ಆರ್. ಪಾಟೀಲ ಅವರ ನೇತೃತ್ವದಲ್ಲಿ ಗಾಂಧಿ ಭವನದಲ್ಲಿ ಶನಿವಾರ ಸತ್ಯಾಗ್ರಹ ನಡೆಯಿತು.

'ಯುದ್ಧ ಕನಸುಗಳನ್ನು ಕೊಲ್ಲುತ್ತದೆ', 'ಯುದ್ಧ ಬೇಡ, ಮಾನವೀಯತೆ ಆಯ್ಕೆ ಮಾಡಿ', 'ಶಕ್ತಿಗಾಗಿ ಅಲ್ಲ ಶಾಂತಿಗಾಗಿ ಹೋರಾಡಿ', 'ನಾನು ಯುದ್ಧ ವಿರೋಧಿ, ಶಾಂತಿ ಬೇಕು' ಮುಂತಾದ ಘೋಷಣೆಗಳಿರುವ ಭಿತ್ತಿ ಫಲಕಗಳನ್ನು ಸತ್ಯಾಗ್ರಹದಲ್ಲಿ ಭಾಗವಹಿಸಿದವರು ಪ್ರದರ್ಶಿಸಿ ಶಾಂತಿ ಪರವಾದ ತಮ್ಮ ನಿಲುವು ವ್ಯಕ್ತಪಡಿಸಿದರು.

ಅಲ್ಲದೆ, 'ರಘುಪತಿ ರಾಘವ ರಾಜಾರಾಂ...' ಹಾಡುವ ಮೂಲಕ ಬುದ್ಧ ಹಾಗೂ ಗಾಂಧಿಯ ಸತ್ಯ, ಅಹಿಂಸೆಯ, ಶಾಂತಿಪ್ರಿಯ ದೇಶ ಎಂದೆಲ್ಲಾ ಕರೆಯಿಸಿಕೊಳ್ಳುವ ನಾವು ಜಗತ್ತಿನಲ್ಲಿ ಯುದ್ಧೋನ್ಮಾದದಲ್ಲಿ ಮಗ್ನರಾಗಿರುವ ದೇಶಗಳ ಮುಗ್ಧ ಜನರ ಮಾರಣ ಹೋಮವನ್ನು ಖಂಡಿಸದೆ ಸುಮ್ಮನಿರುವುದು ಅಪರಾಧ. ಮನುಷ್ಯತ್ವಕ್ಕೇ ಅಪಮಾನ. ಹೀಗಾಗಿ. ಮಾನವೀಯ ಮೌಲ್ಯಗಳಿಗೆ ಬೆಲೆ ಕೊಡಬೇಕಿದೆ ಎಂದು ಪ್ರತಿಪಾದಿಸಿದರು.

ಸತ್ಯಾಗ್ರಹದಲ್ಲಿ ಶ್ರೀಕಂಠ ಮೂರ್ತಿ, ಮೋಹನ್ ಕೊಂಡಜ್ಜಿ, ಸಿದ್ದನಗೌಡ ಪಾಟೀಲ, ನಾಗೇಶ ಹೆಗಡೆ, ರಾಮ ಮನೋಹರ, ಸಿರಿಮನೆ ನಾಗರಾಜ್ ಮೊದಲಾದವರು ಪಾಲ್ಗೊಂಡಿದ್ದರು.

ನಗರದಲ್ಲಿ ಇಂದು

ಅಖಂಡ ಭಜನೆ: ಆಯೋಜನೆ ಹಾಗೂ ಸ್ಥಳ: ಸತ್ಯಸಾಯಿ ಆಶ್ರಮ, ಸಾಯಿ ರಮೇಶ್ ಹಾಲ್, ಬೃಂದಾವನ, ಕಾಡುಗೋಡಿ, ಬೆಳಿಗ್ಗೆ 9

ಬದುಕಬನಿ ಮೂರುಧ್ವನಿ: ಭಾರತಿ ವಸ್ತ್ರದ ಅವರ 'ಚೇತನ ಭಾರತಿ', ರಶ್ಮಿ ಎಸ್. ಅವರ 'ಮಿದು ಮಾತು' ಹಾಗೂ ಅರ್ನಿ ಸಿ. ನವೀನ್ ಅವರ 'ಎಕೋಸ್ ಫ್ರಮ್ ಮೈ ಜಾರ್' ಪುಸ್ತಕ ಬಿಡುಗಡೆ ಕಾರ್ಯಕ್ರಮ: ಉದ್ಘಾಟನೆ: ರವೀಂದ್ರ ಭಟ್ಟ, ಕೃತಿ ಪರಿಚಯ: ಎನ್. ರವಿಶಂಕರ್, ಆಯೋಜನೆ: ಬೆರಗು ಪ್ರಕಾಶನ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಭವನ, ಸ್ಕೌಟ್ಸ್ ಆ್ಯಂಡ್ ಗೈಡ್ಸ್, ಅರಮನೆ ರಸ್ತೆ, ಬೆಳಿಗ್ಗೆ 10.30

ಯುಪಿಎಸ್‌ಸಿ ಪರೀಕ್ಷೆಯಲ್ಲಿ ರ‍್ಯಾಂಕ್ ಪಡೆದ ಅಭ್ಯರ್ಥಿಗಳಿಗೆ ಅಭಿನಂದನಾ ಸಮಾರಂಭ: ಉದ್ಘಾಟನೆ: ಶಿವರಾಜ್ ವಿ. ಪಾಟೀಲ, ಅತಿಥಿಗಳು: ರಾಘವೇಂದ್ರ ಔರಾದ್ಕರ್, ಹನುಮಂತ, ಅಧ್ಯಕ್ಷತೆ: ಚಂದ್ರಕಾಂತ ಭಂಡಾರೆ, ಆಯೋಜನೆ: ಕಲ್ಯಾಣ ಕರ್ನಾಟಕ ನಿವಾಸಿಗಳ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸಂಘ, ಸ್ಥಳ: ಎಂಜಿನಿಯರ್ಸ್ ಭವನ, ಪಿಡಬ್ಲ್ಯುಡಿ ಸಂಕೀರ್ಣ, ಕೆ.ಆರ್. ವೃತ್ತ, ಬೆಳಿಗ್ಗೆ 10.30

ಎಂ.ಎಸ್. ಕೃಷ್ಣನ್ ಜನ್ಮ ಶತಮಾನೋತ್ಸವ ಅಂಗವಾಗಿ 'ಪ್ರಜಾಪ್ರಭುತ್ವ ಮತ್ತು ರಾಜಕೀಯ ಮೌಲ್ಯಗಳು' ವಿಷಯದ ಬಗ್ಗೆ ಚಿಂತನಾ ಸಮಾವೇಶ, 'ಎಂ.ಡಿ. ಹರಿಗೋವಿಂದ' ಪುಸ್ತಕ ಬಿಡುಗಡೆ: ಅತಿಥಿಗಳು: ಬಿ.ಆರ್. ಪಾಟೀಲ, ಬಾಬು ಮ್ಯಾಥ್ಯೂ, ಜಿ. ರಾಮಕೃಷ್ಣ, ಸಿದ್ದನಗೌಡ ಪಾಟೀಲ, ಅಧ್ಯಕ್ಷತೆ: ಡಾ. ವಸುಂಧರಾ ಭೂಪತಿ, ಆಯೋಜನೆ: ಎಂ.ಎಸ್. ಕೃಷ್ಣನ್ ಸ್ಮರಣ ಸಂಸ್ಥೆ, ಎಐಟಿಯುಸಿ ಬೆಂಗಳೂರು ಜಿಲ್ಲಾ ಸಮಿತಿ, ಸ್ಥಳ: ಬಾಪೂ ಸಭಾಂಗಣ, ಗಾಂಧಿ ಭವನ, ಕುಮಾರಕೃಪ ರಸ್ತೆ, ಬೆಳಿಗ್ಗೆ 10.30

ದೊಡ್ಡರಂಗೇಗೌಡ ಅವರ 'ಹೃದಯ ಸಮುದ್ರ' ಮತ್ತು ಡಿ. ಭರತ್ ಅವರ 'ಅವಲೋಕನ' ಪುಸ್ತಕ ಬಿಡುಗಡೆ: ಅಧ್ಯಕ್ಷತೆ: ವೈ.ಕೆ. ಮುದ್ದುಕೃಷ್ಣ, ಅತಿಥಿಗಳು: ಸುಚೇಂದ್ರ ಪ್ರಸಾದ್, ಶ್ರೀನಿವಾಸ್ ಪ್ರಸಾದ್, ಆಯೋಜನೆ: ಚೋಳೇಶ್ವರಸ್ವಾಮಿ ಪ್ರಕಾಶನ, ಸ್ಥಳ: ಬಿಎಂಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ಮಾಸದ ಮಂಥನ 85ನೇ ಸಂಭ್ರಮ: ಸಂವಾದ: ಶ್ರೀನಾಥ್, ಸ್ಥಳ: ನಂ.17, ಸಾನಿಧ್ಯ, 1ನೇ ಅಡ್ಡರಸ್ತೆ, ದೊಡ್ಡಕನ್ನೆಲ್ಲಿ, ಬೆಳಿಗ್ಗೆ 11

ದತ್ತಿ ಉಪನ್ಯಾಸಗಳು: 'ಫಿಕ್ಸಿಂಗ್ ಸೈನ್ಸ್ ಇನ್ ಇಂಡಿಯಾ: ಎ ಸೋಶಿಯೊ–ಎಕನಾಮಿಕ್ ಪ್ರಿಸ್ಕ್ರಿಪ್ಶನ್' ವಿಷಯದ ಬಗ್ಗೆ ಉಪನ್ಯಾಸ: ಗೌತಮ್ ಆರ್. ದೇಸಿರಾಜು, 'ಕುಮುದೇಂದು ಮುನಿಯ ಸಿರಿಭೂವಲಯ' ವಿಷಯದ ಬಗ್ಗೆ ಉಪನ್ಯಾಸ: ಸುಧಾರ್ಥಿ ಹಾಸನ, ಆಯೋಜನೆ ಹಾಗೂ ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

ಮುತ್ಯಾಲಮ್ಮ ದೇವಿಯ 66ನೇ ವರ್ಷದ ಹೂವಿನ ಕರಗ ಶಕ್ತ್ಯೋತ್ಸವ ಹಾಗೂ ಹೂವಿನ ಪಲ್ಲಕ್ಕಿ ಉತ್ಸವ: ಆಯೋಜನೆ ಹಾಗೂ ಸ್ಥಳ: ಮುತ್ಯಾಲಮ್ಮ ದೇವಿ, ಸತ್ಯಮ್ಮ ದೇವಿ, ಮಹೇಶ್ವರಮ್ಮ ದೇವಿ ದೇವಸ್ಥಾನ, ದೂಪನಹಳ್ಳಿ, ಎಚ್‌ಎಎಲ್ 2ನೇ ಹಂತ, ಇಂದಿರಾನಗರ, ಬೆಳಿಗ್ಗೆ 11

ಕರ್ನಾಟಕ ರಾಜ್ಯ ದೇವಾಂಗ ಮಹಿಳಾ ಜಾಗೃತಿ ಸಮಾವೇಶ: ಸಾನ್ನಿಧ್ಯ: ದಯಾನಂದಪುರಿ ಸ್ವಾಮೀಜಿ, ಸನ್ಮಾನ: ಎಸ್.ಜಿ. ಸುಶೀಲಮ್ಮ, ಉಮಾಶ್ರೀ, ಆಶಾ ಕೆ. ನಾಗಪ್ಪ ಶೆಟ್ಟಿ, ಉದ್ಘಾಟನೆ: ಪ್ರೀತಿ ವಿನಾಯಕ ಕಾಮಕರ, ವಿಶೇಷ ಸಂಚಿಕೆ ಬಿಡುಗಡೆ: ಗಾಯತ್ರಿ ರಾಮಕೃಷ್ಣ, ಅಧ್ಯಕ್ಷತೆ: ನಾಗೇಶ್ ಕುಮಾರ್ ಡಿ., ಮುಖ್ಯ ಭಾಷಣ: ಪಿ. ಪ್ರಸನ್ನಕುಮಾರ್, ಶೃತಿ ಎಸ್.ಟಿ., ಆಯೋಜನೆ: ಕರ್ನಾಟಕ ರಾಜ್ಯ ದೇವಾಂಗ ನೌಕರರ ಸಂಘ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಬೆಳಿಗ್ಗೆ 10


ಎಸ್.ಜಿ ಸುಶೀಲಮ್ಮ


33ನೇ ಶ್ರೀರಾಮನವಮಿ ಸಂಗೀತೋತ್ಸವ: ಬೆಳಿಗ್ಗೆ 9ಕ್ಕೆ 'ಶ್ರೀರಾಮ ಕಾರುಣ್ಯ' ಪ್ರಶಸ್ತಿ ಪ್ರದಾನ ಹಾಗೂ ಸನ್ಮಾನ, ಬೆಳಿಗ್ಗೆ 10.30ಕ್ಕೆ ಸಂಗೀತ ಕಛೇರಿ: ವೀಣೆ: ಸುಮಾ ಸುಧೀಂದ್ರ, ಪಿಟೀಲು: ನಳಿನಾ ಮೋಹನ್, ಮೃದಂಗ: ಆನೂರು ಅನಂತಕೃಷ್ಣ ಶರ್ಮ, ಘಟ: ಎಸ್.ಎನ್. ನಾರಾಯಣಮೂರ್ತಿ, ಸಂಜೆ 6.30ಕ್ಕೆ ನಾಮಸಂಕೀರ್ತನೆ: ಉದಯಲೂರ್ ಕಲ್ಯಾಣರಾಮ, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ


ಸುಮಾ ಸುಧೀಂದ್ರ

ಪದ್ಮಿನಿ ನಾಗರಾಜು ಅವರ 'ಕ್ಷಮಿಸು ಗೊಮ್ಮಟನಂತೆ' ಪುಸ್ತಕ ಬಿಡುಗಡೆ: ಎಸ್.ಜಿ. ಸಿದ್ಧರಾಮಯ್ಯ, ಅಧ್ಯಕ್ಷತೆ: ಮನು ಬಳಿಗಾರ್, ಪುಸ್ತಕದ ಬಗ್ಗೆ ಮಾತು: ಸೂರ್ಯಕೀರ್ತಿ, ಉಪಸ್ಥಿತಿ: ರೇಖಾ ಬಸವರಾಜು, ಆಯೋಜನೆ ಹಾಗೂ ಸ್ಥಳ: ಪದ್ಮನಾಭನಗರ ವನಿತಾ ಸಮಾಜ, ಟಿ. ತಿಮ್ಮಯ್ಯ ರಸ್ತೆ, ಪದ್ಮನಾಭನಗರ, ಸಂಜೆ 4

88ನೇ ಶ್ರೀರಾಮನವಮಿ ಸಂಗೀತೋತ್ಸವ: ಸಂಸ್ಥಾಪನಾ ದಿನ, ಸಂಗೀತ ಕಛೇರಿ: ರಂಜನಿ, ಗಾಯತ್ರಿ, ಚಾರುಮತಿ ರಘುರಾಂ, ದಿಲ್ಲಿ ಸಾಯಿರಾಂ, ಎಸ್.ಕೃಷ್ಣ, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5ರಿಂದ

'ಮ್ಯೂಸಿಕ್ ಫಾರ್ ಎ ಮಿಷನ್' ಶಾಸ್ತ್ರೀಯ ಸಂಗೀತ: ಗಾಯನ: ವಿದ್ಯಾಭೂಷಣ, ಅತಿಥಿಗಳು: ಸಿ. ಸೋಮಶೇಖರ್, ಎಸ್. ಷಡಾಕ್ಷರಿ, ಜಿ. ಮೋಹನ್, ಎನ್. ಮೋಹನ್ ಕುಮಾರ್, ಆಯೋಜನೆ: ಲಯನ್ಸ್ ಕ್ಲಬ್ ಆಫ್ ಬೆಂಗಳೂರು ಸಂಕಲ್ಪ, ಸ್ಥಳ: ಎಡಿಎ ರಂಗಮಂದಿರ, ಕಲಾಸಿಪಾಳ್ಯ, ಸಂಜೆ 5.30


ವಿದ್ಯಾಭೂಷಣ

ವಾರ್ಷಿಕೋತ್ಸವ ಹಾಗೂ ಮಾಧವ ಗುಡಿ ಮತ್ತು ರಾಮ ರಾವ್ ಜಂತ್ಲಿ ಅವರ ಸ್ವರ ಶ್ರದ್ಧಾಂಜಲಿ: ಸನ್ಮಾನ ಹಾಗೂ ಗಾಯನ: ರಾಜೇಂದ್ರ ರಾಥೋಡ, ಗಾಯನ: ರಾಘವೇಂದ್ರ ಗುಡಿ, ತಬಲಾ: ಕಿಶೋರ ಕುಲಕರ್ಣಿ, ಹಾರ್ಮೋನಿಯಂ: ನರಸಿಂಹ ಕುಲಕರ್ಣಿ, ಅಧ್ಯಕ್ಷತೆ: ವಾಸು ಎಂ. ದೇಶಪಾಂಡೆ, ಆಯೋಜನೆ: ಕಿರಾಣಾ ಗಂಧರ್ವ ಸಭಾ, ಸ್ಥಳ: ಪೂರ್ಣಪ್ರಜ್ಞ ವಿದ್ಯಾಪೀಠ ಸಂಶೋಧನಾ ಕೇಂದ್ರ, ಸಂಜೆ 5.30

'ವೀಕೆಂಡ್' ನಾಟಕೋತ್ಸವ: 'ಅಣ್ಣನ ನೆನಪು' ನಾಟಕ ಪ್ರದರ್ಶನ, ನಿರ್ದೇಶನ: ಹನು ರಾಮಸಂಜೀವ, ತಂಡ: ಪ್ರವರ ಥಿಯೇಟರ್, ಸ್ಥಳ: ಕೆ.ಇ.ಎ. ಪ್ರಭಾತ್ ರಂಗಮಂದಿರ, ಬಸವೇಶ್ವರನಗರ, ಸಂಜೆ 6.30

ಮುತ್ಯಾಲಮ್ಮ ದೇವಿ ರಥೋತ್ಸವ: ವಿವಿಧ ಧಾರ್ಮಿಕ ವಿಧಿವಿಧಾನ, ಆಯೋಜನೆ ಮತ್ತು ಸ್ಥಳ: ಮುತ್ಯಾಲಮ್ಮ ದೇವಿ ದೇವಸ್ಥಾನ ಟ್ರಸ್ಟ್, ಮುತ್ಯಾಲಮ್ಮ ಕೆ. ಸ್ಟ್ರೀಟ್, ಶಿವಾಜಿನಗರ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..

nagaradalli_indu@prajavani.co.in

ಭಾನುವಾರ, ಏಪ್ರಿಲ್ 5, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 94 | ಪುಟ 20
www.prajavani.net prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಬ್ಯಾಂಕ್ ಸಾಲ ನೀಡಿಕೆ ಹೆಚ್ಚಳ 8
ಗಾಯಗೊಂಡಿದ್ದೇನೆ: ಛಡ್ಡಾ ತಿರುಗೇಟು 9

DH
ಪ್ರಜಾವಾಣಿ
ಎಡ್ಯುವರ್ಸ್™
ಪ್ರಿಮಿಯರ್ ಎಜುಕೇಶನ್ ಎಕ್ಸ್‌ಪೋ
ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಒಂದು ಕರೆ!
ಇಂದು ಕೊನೆಯ ದಿನ!
ಬೆಳಿಗ್ಗೆ 9 ರಿಂದ ಸಂಜೆ 6 ರವರೆಗೆ
ಗಾಯತ್ರಿ ಗ್ರಾಂಡ್, ಅರಮನೆ ಮೈದಾನ
(Gate 4), ಬೆಂಗಳೂರು

ಬದುಕು ನುಂಗಿದ ಕರಿದೂಳು

ವಾಯು ಮಾಲಿನ್ಯದ ಅವಾಂತರ • ಮಣ್ಣುಪಾಲಾದ ಕೃಷಿ, ಜನಜೀವನ

ಒಳನೋಟ

• ಪ್ರಮೋದ ಕುಲಕರ್ಣಿ

ಕೊಪ್ಪಳ: ಕೈ ಕಾಲುಗಳಲ್ಲಿ ಸ್ವಾಧೀನವಿಲ್ಲದೆ ಸದಾ ಮಲಗಿ ಬದುಕು ಕಳೆಯುತ್ತಿರುವ ಹಾಗೂ ಪ್ರತಿಯೊಂದಕ್ಕೂ ಇನ್ನೊಬ್ಬರನ್ನು ಅವಲಂಬಿಸಿರುವ ತಮ್ಮ ಮಗ ಸಂತೋಷನನ್ನು ತೊಡೆಗಳ ಮೇಲೆ ಮಲಗಿಸಿಕೊಂಡಿದ್ದ ತಾಯಿ ಸಿದ್ದಮ್ಮ 'ಕೋರ್ಟ್ ಯಾರಿಗೋ ದಯಾಮರಣ ಕೊಟ್ಟೈತಿ ಅಂತಲ್ರೀ, ನಮಗೂ ಸಿಗುತ್ತೇನ್ರಿ' ಎಂದು ಪ್ರಶ್ನಿಸಿದಳು.

ಆ ಪ್ರಶ್ನೆ ಕೇಳುವಾಗ ಸಿದ್ದಮ್ಮನ ಧ್ವನಿಯಲ್ಲಿ ಇದ್ದಿದ್ದು ಭರಿಸಲಾಗದ ನೋವು. ದೈಹಿಕವಾಗಿ ಬೆಳವಣಿಗೆ ಇಲ್ಲದ 18 ವರ್ಷದ ಮಗನನ್ನು ಕಣ್ಣಲ್ಲಿ ಕಣ್ಣಿಟ್ಟು ಕಾಯ್ದುಕೊಂಡು ಬಂದಿರುವ ಸಿದ್ದಮ್ಮ ಹಾಗೂ ದೇವಪ್ಪ ದಂಪತಿಗೆ ದುಡಿಯಲು ಮನೆಬಿಟ್ಟು ಹೋಗಲಾಗದೆ, ಮನೆಯಲ್ಲಿ ಇರಲೂ ಆಗದ ಪರಿಸ್ಥಿತಿ. ಎರಡ್ಮೂರು ವರ್ಷಗಳಿಂದ ಸಂತೋಷನ ಆರೋಗ್ಯ ಕ್ಷೀಣಿಸುತ್ತಿದೆ. ಮೊದಲು ಒಂದೆಡೆ ನಿಸ್ತೇಜನಾಗಿ ಮಲಗಿರುತ್ತಿದ್ದ ಆತ ಈಗ ವೇದನೆ ತಾಳಲಾಗದೆ ಅರಚುತ್ತಾನೆ. ಪೋಷಕರ ಕರುಳು ಕಿವುಚುತ್ತದೆ. 'ಕಪ್ಪುಕಣಗಳ ದೂಳು ನಿಮ್ಮ ಮಗನ ಆರೋಗ್ಯ ದಿನದಿಂದ ದಿನಕ್ಕೆ ಹಾಳು ಮಾಡುತ್ತಿದೆ ಎಂದು ವೈದ್ಯರು ಹೇಳುತ್ತಿದ್ದಾರೆ' ಎಂದು ಆ ದಂಪತಿ ಕಣ್ಣೀರು ಹಾಕಿದರು.

> **ಕಾರ್ಖಾನೆಗಳು ವಿಸ್ತರಣೆಯಾದರೆ ಬಾಧಿತ ಗ್ರಾಮಗಳನ್ನೇ ಸ್ಥಳಾಂತರಿಸಬೇಕಾಗುತ್ತದೆ. ಕಾರ್ಖಾನೆಗಳು ಹಾಗೂ ಊರು ಎರಡೂ ಒಟ್ಟಿಗೆ ಇರಲು ಸಾಧ್ಯವಾಗದಷ್ಟು ಮಾಲಿನ್ಯವಾಗಿದೆ**
> **ಅಲ್ಲಮಪ್ರಭು ಬೆಟ್ಟದೂರು,** ಜಂಟಿ ಕ್ರಿಯಾವೇದಿಕೆ ಪ್ರಧಾನ ಸಂಚಾಲಕ

> **ಹೊಸ ಕಾರ್ಖಾನೆಗಳ ವಿಸ್ತರಣೆಯಾದರೆ ಗವಿಸಿದ್ಧೇಶ್ವರ ಸ್ವಾಮೀಜಿ ಹೇಳಿದಂತೆ ನಮ್ಮೂರಿನಲ್ಲಿ ತೊಟ್ಟಿಲು ತೂಗುವ ಕೈಗಳಿಗಿಂತ ಸ್ಮಶಾನಕ್ಕೆ ಹೋಗುವವರ ಸಂಖ್ಯೆಯೇ ಹೆಚ್ಚಾಗುತ್ತದೆ**
> **ಮಹೇಶ,** ಹಿರೇಬಗನಾಳ ಗ್ರಾಮದ ರೈತ


ಕಾರ್ಮಿಕರ ಕೈಗಳಿಗೆ ಮೆತ್ತಿಕೊಂಡ ಮಾಲಿನ್ಯದ ದೂಳು

ಈ ದಂಪತಿ ಜೊತೆ ಮಾತು ಮುಂದುವರಿಸಿದಾಗ, ದೇವಪ್ಪ ಅವರ ಸಹೋದರ ಮಾರುತಿ ಕೂಡ ತಮ್ಮ ಕಣ್ಣೀರಿನ ಕಥೆ ಹಂಚಿಕೊಂಡರು. 'ಮದುವೆಯಾಗಿ ಐದಾರು ವರ್ಷಗಳಾಗಿದ್ದು ಮೂರು ಬಾರಿ ಪತ್ನಿ ನೇತ್ರಾಗೆ ಗರ್ಭಪಾತ ವಾಗಿದೆ. ವಿಪರೀತ ದೂಳು ದೇಹಕ್ಕೆ ಹೋಗಿ ಹೊಟ್ಟೆಯಲ್ಲಿನ ಶಿಶುವಿನ ಮೇಲೂ ಪರಿಣಾಮವಾಗಿದೆ. ಪತ್ನಿ ಈಗ ಮತ್ತೆ ಮೂರು ತಿಂಗಳ ಗರ್ಭಿಣಿ. ಸುಸೂತ್ರವಾಗಿ ಮಗು ಜನಿಸಲಿ ಎನ್ನುವ ಕಾರಣಕ್ಕೆ ಆಕೆಯನ್ನು ತವರಿಗೆ ಕಳುಹಿಸಿದ್ದೇನೆ. ನಮ್ಮೂರಿನಲ್ಲಿದ್ದರೆ ನಮಗೆ ಮಕ್ಕಳೇ ಆಗುವುದಿಲ್ಲ' ಎಂದು ನೋವು ತೋಡಿಕೊಂಡರು.

ಇವು ಕೊಪ್ಪಳ ತಾಲ್ಲೂಕಿನ ಹಿರೇಬಗನಾಳ ಗ್ರಾಮದ ಕುಟುಂಬಗಳ ಕಣ್ಣೀರಿನ ಕಥೆಗಳು. ಗ್ರಾಮದ ಪ್ರತಿ ಮನೆಯಲ್ಲಿಯೂ ಇಂಥ ವ್ಯಥೆಗಳಿವೆ. ಈ ಗ್ರಾಮದ ಜನರದ್ದು ಆಸ್ತಿ ಮಾಡುವ, ಮಕ್ಕಳ ಭವಿಷ್ಯ ರೂಪಿಸುವ ಸಲುವಾಗಿ ಹೋರಾಟವಲ್ಲ. ನೆಮ್ಮದಿಯಾಗಿ ಬದುಕಿದರೆ ಸಾಕು ಎನ್ನುವ ಚಿಕ್ಕ ಆಸೆ.

ಹಿರೇಬಗನಾಳ ಗ್ರಾಮದ ಸುತ್ತಲೂ ಕೇಂದ್ರೀಕೃತವಾಗಿರುವ ಸ್ಪಾಂಜ್ ಮತ್ತು ಐರನ್ ಕಾರ್ಖಾನೆಗಳು ನಿಯಮ ಉಲ್ಲಂಘಿಸಿ ಮನಬಂದಂತೆ ಕಪ್ಪುಕಣಗಳ ದೂಳನ್ನು ಹೊರಬಿಡುತ್ತಿವೆ. ಇದರಿಂದ ವ್ಯಾಪಕ ಮಾಲಿನ್ಯವಾಗಿ ಜನರ ಬದುಕು ಮೂರಾಬಟ್ಟೆಯಾಗಿದೆ. ▶6

ಲೋಪ; ಮಂಡಳಿಯ ವರದಿಯಲ್ಲಿ ಬಹಿರಂಗ

ಸ್ಪಾಂಜ್ ಐರನ್ ಘಟಕಗಳಿಗೆ ಸಮರ್ಪಕವಾದ ಬಫರ್ ವಲಯ ಇಲ್ಲದಿರುವುದು ಸಮಸ್ಯೆಗೆ ಮೂಲ ಕಾರಣವಾಗಿರುವುದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವರದಿಯಲ್ಲಿದೆ.

ಮಾಲಿನ್ಯದ ಕುರಿತು ತಪಾಸಣೆ ನಡೆಸಲು 2024ರಲ್ಲಿ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಸೂಚನೆಯಂತೆ ಬೆಂಗಳೂರು ಪ್ರಾದೇಶಿಕ ಕಚೇರಿ ಮತ್ತು ಕೊಪ್ಪಳ ಜಿಲ್ಲಾ ಕೈಗಾರಿಕಾ ಕೇಂದ್ರದ ತಜ್ಞರ ಸಮಿತಿ ರಚಿಸಲಾಗಿತ್ತು. ಈ ತಂಡ ಕೊಪ್ಪಳ ತಾಲ್ಲೂಕಿನ ಕೈಗಾರಿಕೆಗಳಿಗೆ ಭೇಟಿ ನೀಡಿ ವರದಿ ನೀಡಿದೆ.

ಕಾರ್ಖಾನೆಗಳ ಸುತ್ತಲೂ ಸೂಕ್ಷ್ಮ ದೂಳಿನ ಕಣಗಳ ಪ್ರಮಾಣ ನಿಗದಿತ ಮಾನದಂಡಗಳನ್ನು ಮೀರಿದೆ. ಹಗಲಿಗಿಂತಲೂ ರಾತ್ರಿ ಹೊತ್ತಿನಲ್ಲಿ ದೂಳಿನ ಪ್ರಮಾಣ ಹೆಚ್ಚಿದೆ. ಇದರ ಬಗ್ಗೆ ತುರ್ತಾಗಿ ಕ್ರಮ ವಹಿಸಬೇಕು ಎನ್ನುವ ಪ್ರಮುಖ ಅಂಶಗಳನ್ನು ಉಲ್ಲೇಖಿಸಲಾಗಿದೆ. ಇವುಗಳು ಅನುಷ್ಠಾನಗೊಂಡಿಲ್ಲ ಎಂದು ಬಾಧಿತ ಗ್ರಾಮಗಳ ಜನ ಆಕ್ರೋಶ ವ್ಯಕ್ತಪಡಿಸುತ್ತಾರೆ.

ವಿದ್ಯಾರ್ಥಿಗಳ ಉತ್ಸಾಹ...

ಪ್ರಜಾವಾಣಿ ಚಿತ್ರ



ಬೆಂಗಳೂರಿನ ಅರಮನೆ ಮೈದಾನದ ಗಾಯತ್ರಿ ವಿಹಾರದಲ್ಲಿ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಶನಿವಾರ ಆಯೋಜಿಸಿದ್ದ 'ಎಡ್ಯುವರ್ಸ್' ಮೇಳದಲ್ಲಿ ವಿದ್ಯಾರ್ಥಿಗಳು ವಿವಿಧ ಕೋರ್ಸ್‌ಗಳ ಕುರಿತು ಮಾಹಿತಿ ಪಡೆದರು

ಸಾಮೂಹಿಕ ಅತ್ಯಾಚಾರ: ಬಂಧನ

ಪ್ರಜಾವಾಣಿ ವಾರ್ತೆ

ಯಾದಗಿರಿ: ತಾಲ್ಲೂಕಿನ ಗ್ರಾಮವೊಂದರಲ್ಲಿ ಬಯಲು ಬಹಿರ್ದೆಸೆಗೆ ತೆರಳಿದ್ದ ಮಹಿಳೆಯ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ ಆರೋಪದಡಿ ಇಬ್ಬರನ್ನು ಮಹಿಳಾ ಠಾಣೆಯ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಬಸಪ್ಪ ನಿಂಗಪ್ಪ (25) ಹಾಗೂ ರಡೆಪ್ಪ ಗಂಜಲಪ್ಪ (30) ಬಂಧಿತ ಆರೋಪಿಗಳು.

ಸಂತ್ರಸ್ತೆ ಶುಕ್ರವಾರ ಸಂಜೆ ಬಯಲು ಬಹಿರ್ದೆಸೆಗೆ ತೆರಳಿ ಮನೆಗೆ ಮರಳುತ್ತಿದ್ದರು. ಮಹಿಳೆಯನ್ನು ಅಡ್ಡಗಟ್ಟಿದ್ದ ಬಸಪ್ಪ, 'ನಿನ್ನ ನಾದಿನಿಯನ್ನು ಪ್ರೀತಿಸುತ್ತಿರುವ ವಿಚಾರವನ್ನು ಕುಟುಂಬಸ್ಥರಿಗೆ ಏಕೆ ಹೇಳಿದೆ' ಎಂದು ಪ್ರಶ್ನಿಸಿ ಮಹಿಳೆಯನ್ನು ಎಳೆದೊಯ್ದಿದ್ದ. ಬಳಿಕ ರಡೆಪ್ಪನನ್ನು ಸ್ಥಳಕ್ಕೆ ಕರೆಯಿಸಿಕೊಂಡಿದ್ದ. 'ನಂತರ ಇಬ್ಬರೂ ಸೇರಿ ಸಾಮೂಹಿಕ ಅತ್ಯಾಚಾರ ಎಸಗಿದ್ದಾರೆ. ಮಾಹಿತಿ ಬಹಿರಂಗಗೊಳಿಸಿದರೆ ಜೀವ ತೆಗೆಯುವುದಾಗಿ ಬೆದರಿಕೆಯನ್ನೂ ಹಾಕಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ಐಪಿಎಲ್: ಟಿಕೆಟ್‌ಗೆ ಶಾಸಕರ ಆಪ್ತರ ಕ್ಯೂ!


ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ (ಏ. 5) ನಡೆಯಲಿರುವ ಐಪಿಎಲ್ ಕ್ರಿಕೆಟ್ ಪಂದ್ಯಕ್ಕೆ ಕೆಎಸ್‌ಸಿಎ ನೀಡಿದ ತಲಾ 3 ಉಚಿತ ಟಿಕೆಟ್ ಪಡೆಯಲು ವಿಧಾನಸೌಧದ ಸಭಾಧ್ಯಕ್ಷರ ಕಚೇರಿ ಮುಂದೆ ಶಾಸಕರ ಆಪ್ತ ಸಹಾಯಕರು ಶನಿವಾರ ಸರದಿ ಸಾಲಿನಲ್ಲಿ ನಿಂತಿದ್ದರು.

'ಒಟ್ಟು 188 ಶಾಸಕರಿಗೆ ತಲಾ 3ರಂತೆ 564 ಟಿಕೆಟ್‌ಗಳನ್ನು ಸಭಾಧ್ಯಕ್ಷರ ಕಚೇರಿಗೆ ಕಳುಹಿಸಿ ಕೊಡಲಾಗಿತ್ತು. ಸಚಿವರಿಗೆ ಪ್ರತ್ಯೇಕವಾಗಿ, ನೇರವಾಗಿ ಟಿಕೆಟ್‌ಗಳನ್ನು ಕಳುಹಿಸಲಾಗಿದೆ. 564 ಟಿಕೆಟ್‌ಗಳ ಪೈಕಿ ಒಂಬತ್ತು ಟಿಕೆಟ್ (ಮೂವರ ಶಾಸಕರ) ಬಾಕಿ ಇದೆ' ಎಂದು ಸಭಾಧ್ಯಕ್ಷರ ಕಚೇರಿಯ ಮೂಲಗಳು ತಿಳಿಸಿವೆ.

ಐಪಿಎಲ್ ಪಂದ್ಯದ ಟಿಕೆಟ್ ಉಚಿತವಾಗಿ ನೀಡುವಂತೆ ವಿಧಾನಸಭೆಯಲ್ಲಿ ಶಾಸಕರು ಆಗ್ರಹಿಸಿದ್ದರು. ಅದರಂತೆ, ಉಚಿತ ಟಿಕೆಟ್ ಕೊಡಲು ವ್ಯವಸ್ಥೆ ಮಾಡುವಂತೆ ಸಭಾಧ್ಯಕ್ಷರು ಸೂಚಿಸಿದ್ದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಜೊತೆ ಇತ್ತೀಚೆಗೆ ಚರ್ಚೆ ನಡೆಸಿದ್ದ ಕೆಎಸ್‌ಸಿಎ ಪದಾಧಿಕಾರಿಗಳು, ಶಾಸಕರಿಗೆ ಮೂರು ಟಿಕೆಟ್ ಉಚಿತವಾಗಿ ನೀಡಲು ಒಪ್ಪಿದ್ದರು. ▶8

'ನನ್ನ ತೀವ್ರ ವಿರೋಧವಿದೆ'



'ಯಾವುದೇ ಕಾರಣಕ್ಕೂ ನನಗೆ ಐಪಿಎಲ್ ಕ್ರಿಕೆಟ್‌ನ ಟಿಕೆಟ್ ಬೇಡ. ನನ್ನ ಹೆಸರಿನಲ್ಲಿ ಈ ಟಿಕೆಟ್‌ಗಳನ್ನು ಬೇರೆಯವರು ಪಡೆಯುವುದಕ್ಕೂ ನನ್ನ ಅನುಮತಿ ಇಲ್ಲ. ಒಂದೊಮ್ಮೆ ಈ ರೀತಿ ಪರಭಾರೆ ಮಾಡಿದರೆ ಅದಕ್ಕೆ ನನ್ನ ತೀವ್ರ ವಿರೋಧವಿದೆ' ಎಂದು ಬಿಜೆಪಿಯ ಎಸ್. ಸುರೇಶ್ ಕುಮಾರ್ ಹೇಳಿದ್ದಾರೆ.

ವಿಧಾನ ಸಭಾಧ್ಯಕ್ಷರಿಗೆ ಮಾರ್ಚ್ 28ರಂದು ಬರೆದಿದ್ದ ಪತ್ರವನ್ನು ಫೇಸ್ ಬುಕ್ ಖಾತೆಯಲ್ಲಿ ಶನಿವಾರ ಮತ್ತೊಮ್ಮೆ ಹಂಚಿಕೊಂಡಿರುವ ಅವರು, 'ಟಿಕೆಟ್ ನಿರಾಕರಿಸಿರುವ ಶಾಸಕರ ಹೆಸರಿನ ಟಿಕೆಟ್ ಅಥವಾ ಪಾಸುಗಳನ್ನು ಬೇರೆಯವರು ಪಡೆಯುತ್ತಿರುವ ಮಾಹಿತಿ ನನಗೆ ದೊರಕಿದೆ. ಕಾಳಸಂತೆಯಲ್ಲೂ ಈ ರೀತಿಯ ಟಿಕೆಟ್‌ಗಳು ಭಾರಿ ಮೊತ್ತಕ್ಕೆ ಬಿಕರಿಗಿವೆ ಎಂಬುದನ್ನು ಕೆಲವರು ನನಗೆ ತಿಳಿಸಿದ್ದಾರೆ' ಎಂದಿದ್ದಾರೆ.

ಹಿಂದಿ ಹೇರಿಕೆಗೆ ಕೇಂದ್ರದ ಹುನ್ನಾರ ಸ್ಟಾಲಿನ್ ಟೀಕೆ

ಚೆನ್ನೈ (ಪಿಟಿಐ): 'ಕೇಂದ್ರ ಸರ್ಕಾರದ ತ್ರಿಭಾಷಾ ಸೂತ್ರದ ಹಿಂದೆ ಹಿಂದಿ ಭಾಷೆ ಹೇರಿಕೆಯ ಹುನ್ನಾರವಿದೆ' ಎಂದು ತಮಿಳುನಾಡು ಮುಖ್ಯಮಂತ್ರಿ ಹಾಗೂ ಡಿಎಂಕೆ ವರಿಷ್ಠ ಎಂ.ಕೆ. ಸ್ಟಾಲಿನ್ ಶನಿವಾರ ಆರೋಪಿಸಿದ್ದಾರೆ.


ಎಂ.ಕೆ.ಸ್ಟಾಲಿನ್

ಸಿಬಿಎಸ್‌ಇಯ ಪಠ್ಯಕ್ರಮದ ಚೌಕಟ್ಟನ್ನು ರಾಷ್ಟ್ರೀಯ ಶಿಕ್ಷಣ ನೀತಿ–2020ರೊಂದಿಗೆ ಜೋಡಿಸಿರುವುದು ಶೈಕ್ಷಣಿಕ ಸುಧಾರಣೆಗಾಗಿ ಅಲ್ಲ. ಹಿಂದಿ ಹೇರಿಕೆಗೆ ಎಂದಿದ್ದಾರೆ.

'ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಭಾರತೀಯ ಭಾಷೆಗಳನ್ನು ಉತ್ತೇಜಿಸುವ ನೆಪದಲ್ಲಿ ದೇಶದ ಶ್ರೀಮಂತ ಹಾಗೂ ವೈವಿಧ್ಯಮಯ ಭಾಷಾ ಪರಂಪರೆಯನ್ನು ಅಂಚಿನಲ್ಲಿಟ್ಟುಕೊಂಡು, ಹಿಂದಿಗೆ ಸವಲತ್ತು ನೀಡುವ ಕೇಂದ್ರೀಕೃತ ಕಾರ್ಯಸೂಚಿಯನ್ನು ಆಕ್ರಮಣಕಾರಿಯಾಗಿ ಮುನ್ನಡೆಸುತ್ತಿದೆ' ಎಂದು ಆರೋಪಿಸಿದ್ದಾರೆ. ▶9


ಕಲಬುರಗಿಯಲ್ಲಿ ದಿನೇದಿನೆ ಬಿಸಿಲಿನ ಝಳ ಹೆಚ್ಚುತ್ತಿದ್ದು, ಶರಣಬಸವೇಶ್ವರ ದೇವಸ್ಥಾನದ ಬಳಿ ಶನಿವಾರ ಮಡಿಕೆಗಳ ಮಾರಾಟದಲ್ಲಿ ನಿರತರಾಗಿದ್ದ ಮಹಿಳೆ ಚಿತ್ರ: ತಾಜುದ್ದೀನ್ ಆಜಾದ್

ನರೇಗಾಗೆ ಹಣವಿಲ್ಲ • ವಿಬಿ ಜಿರಾಮ್‌ಜಿಗೆ ಕೇಂದ್ರ ಇನ್ನೂ ನಿಯಮ ರೂಪಿಸಿಲ್ಲ

ಉದ್ಯೋಗ ಖಾತರಿ ಮೇಲೆ ತೂಗುಗತ್ತಿ

₹1,165.16 ಕೋಟಿ ನರೇಗಾ ಅಡಿ ಕೇಂದ್ರ ರಾಜ್ಯಕ್ಕೆ ನೀಡಬೇಕಿರುವ ಬಾಕಿ	₹301.04 ಕೋಟಿ ಕೇಂದ್ರವು ರಾಜ್ಯಕ್ಕೆ ಕೊಡಬೇಕಿರುವ ಕೂಲಿ ಮೊತ್ತ	₹834.68 ಕೋಟಿ ಕೇಂದ್ರ ಸರ್ಕಾರವು ರಾಜ್ಯಕ್ಕೆ ಬಾಕಿ ಉಳಿಸಿಕೊಂಡಿರುವ ಸಾಮಗ್ರಿ ವೆಚ್ಚ	₹29.44 ಕೋಟಿ ಆಡಳಿತ ವೆಚ್ಚ ಬಾಕಿ

• ಜಯಸಿಂಹ ಆರ್.

ಬೆಂಗಳೂರು: ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ (ನರೇಗಾ) ಬದಲಿಗೆ ಕೇಂದ್ರ ಸರ್ಕಾರವು ರೂಪಿಸಿರುವ ವಿಬಿ ಜಿರಾಮ್‌ಜಿ ಯೋಜನೆಯು ಈವರೆಗೆ ಅನುಷ್ಠಾನಕ್ಕೆ ಬರದೇ ಇರುವುದರಿಂದ, ಗ್ರಾಮೀಣ ಭಾಗದ ಜನರಿಗೆ ಉದ್ಯೋಗದ ಖಾತರಿ ಇಲ್ಲದಾಗಿದೆ.

2025ರ ಡಿಸೆಂಬರ್‌ನಲ್ಲಿಯೇ ವಿಬಿ ಜಿರಾಮ್‌ಜಿ ಮಸೂದೆಗೆ ರಾಷ್ಟ್ರಪತಿಯ ಅಂಕಿತ ಬಿದ್ದು, ಅದು ಕಾಯ್ದೆಯಾಗಿದೆ. ಆದರೆ, ಮೂರು ತಿಂಗಳ ನಂತರವೂ ಕೇಂದ್ರ ಸರ್ಕಾರವು ನೂತನ ಯೋಜನೆಗಾಗಿ ನಿಯಮಗಳನ್ನು ರೂಪಿಸಿಲ್ಲ. ನೂತನ ಯೋಜನೆ ಜಾರಿಯಾದರಷ್ಟೇ, ನರೇಗಾ ರದ್ದಾಗಲಿದೆ. ನೂತನ ಯೋಜನೆ ಯಾವಾಗ ಅನುಷ್ಠಾನಕ್ಕೆ ಬರುತ್ತದೆ ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲದ ಕಾರಣ, ಗ್ರಾಮ ಪಂಚಾಯತಿಗಳು ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ಯಾವುದೇ ಕಾಮಗಾರಿ ನಡೆಸಲು ಸಾಧ್ಯವಾಗುತ್ತಿಲ್ಲ.

ಕೇಂದ್ರ ಸರ್ಕಾರವು 2026–27ನೇ ಸಾಲಿನಲ್ಲಿ ನರೇಗಾಗೆ ₹30,000 ಕೋಟಿ ಮತ್ತು ವಿಬಿ ಜಿರಾಮ್‌ಜಿ ಯೋಜನೆಗೆ ₹95,000 ಕೋಟಿ ಅನುದಾನ ಹಂಚಿಕೆ ಮಾಡಿದೆ. 2025–26ನೇ ಸಾಲಿನಲ್ಲಿ ಎಲ್ಲ ರಾಜ್ಯಗಳಿಗೆ ಕೇಂದ್ರ ಸರ್ಕಾರವು ಒಟ್ಟು ₹24,625 ಕೋಟಿ ಅನುದಾನ ಬಾಕಿ ಉಳಿಸಿಕೊಂಡಿದೆ. ಇಷ್ಟು ದೊಡ್ಡ ಮೊತ್ತದ ಅನುದಾನ ಬಾಕಿಯಾಗಿದೆ ಎಂದು ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವ ಕಮಲೇಶ್ ಪಾಸ್ವಾನ್ ರಾಜ್ಯಸಭೆಯಲ್ಲಿ ಒಪ್ಪಿಕೊಂಡಿದ್ದಾರೆ. ▶7



ಇನ್ನೂ ಆರಂಭವಾಗದ ಚರ್ಚೆ

ವಿಬಿ ಜಿರಾಮ್‌ಜಿ ಯೋಜನೆಯ ನಿಯಮಗಳನ್ನು ರೂಪಿಸಲು ರಾಜ್ಯ ಸರ್ಕಾರಗಳ ಜತೆ ಚರ್ಚೆ ನಡೆಸಬೇಕಿದೆ ಎಂದು ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವ ಕಮಲೇಶ್ ಪಾಸ್ವಾನ್ ರಾಜ್ಯಸಭೆಗೆ ಇದೇ ಮಾರ್ಚ್ 27ರಂದು ಮಾಹಿತಿ ನೀಡಿದ್ದರು. ಆದರೆ ಚರ್ಚೆಯ ವಿಚಾರದಲ್ಲಿ ರಾಜ್ಯ ಸರ್ಕಾರಕ್ಕೆ ಕೇಂದ್ರ ಕೃಷಿ ಸಚಿವಾಲಯದಿಂದ ಯಾವುದೇ ಆಹ್ವಾನ ಬಂದಿಲ್ಲ ಎಂದು ಮೂಲಗಳು ತಿಳಿಸಿವೆ. ಪ್ರಧಾನಿ ನರೇಂದ್ರ ಮೋದಿ ಅವರ ಮಹತ್ವಾಕಾಂಕ್ಷಿ 'ವಿಕಸಿತ ಭಾರತ@2047' ಗುರಿಗೆ ಅನುಗುಣವಾಗಿ ವಿಬಿ ಜಿರಾಮ್‌ಜಿಯ ನಿಯಮಗಳನ್ನು ರೂಪಿಸಬೇಕಿದೆ ಎಂದು ಕೇಂದ್ರ ಸಚಿವಾಲಯವು ಹಲವು ಬಾರಿ ಹೇಳಿದೆ. ಆದರೆ ಈ ಪ್ರಕ್ರಿಯೆಗಳೇ ಆರಂಭವಾಗದಿರುವ ಕಾರಣ, ನೂತನ ಯೋಜನೆಯ ಅನುಷ್ಠಾನ ಇನ್ನಷ್ಟು ವಿಳಂಬವಾಗುವ ಅಪಾಯವಿದೆ.

ಕೇಂದ್ರದ ಕತ್ತರಿ: ಪ್ರಿಯಾಂಕ್

'ನರೇಗಾಗೆ ತೆರೆಬಿದ್ದಿದೆ. ವಿಬಿ ಜಿರಾಮ್‌ಜಿ ಆರಂಭವಾಗಬೇಕಿತ್ತಲ್ಲವೇ? ಆದರೆ ಇನ್ನೂ ನಿಯಮಗಳು ರಚನೆಯಾಗಿಲ್ಲ. ರಾಜ್ಯಗಳಿಗೆ ಅನುದಾನ ಹಂಚಿಕೆಯಾಗಿಲ್ಲ. ಬೆಳೆ ಕೊಯ್ಲಿನ ಅವಧಿ ಮುಗಿದು ಏಪ್ರಿಲ್ ಮೊದಲ ವಾರದಲ್ಲಿ ಕೂಲಿಗೆ ಬೇಡಿಕೆ ಹೆಚ್ಚಾಗುತ್ತದೆ. ಇಂತಹ ಸಂದರ್ಭದಲ್ಲೇ ಉದ್ಯೋಗ ಖಾತರಿಗೆ ಕೇಂದ್ರದಿಂದ ಕತ್ತರಿ ಬಿದ್ದಿದೆ. ಗ್ರಾಮೀಣ ಪ್ರದೇಶದಲ್ಲಿ ಕಾಮಗಾರಿಗಳು ಸ್ಥಗಿತವಾಗಿವೆ. ಕೆಲಸ ಇಲ್ಲದೆ ಜನರು ಗುಳೆ ಹೋಗುವ ಸ್ಥಿತಿ ಇದೆ. ವಿಬಿ ಜಿರಾಮ್‌ಜಿಯಿಂದ ಗ್ರಾಮೀಣ ಪ್ರದೇಶದ ಆರ್ಥಿಕತೆ ಪರಿವರ್ತನೆ ಆಗಲಿದೆ ಎಂದು ಬಿಜೆಪಿ ಹೇಳಿಕೊಂಡಿತ್ತು. ಯಾವ ರೀತಿ ಪರಿವರ್ತನೆ ಆಗುತ್ತಿದೆ ಎಂಬುದು ಕಾಣುತ್ತಿದೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಮಾಹಿತಿ ನೀಡದೇ ಕಂಪನಿಗಳಿಂದ ಕ್ರಮ • ಗ್ರಾಹಕರ ಪರದಾಟ

ಆತಂಕಕ್ಕೆ ದೂಡಿದ ಎಲ್‌ಪಿಜಿ ಸಂಪರ್ಕ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಬ್ಬರ ಹೆಸರಿನಲ್ಲೇ ಒಂದಕ್ಕಿಂತ ಹೆಚ್ಚು ಅಡುಗೆ ಅನಿಲ (ಎಲ್‌ಪಿಜಿ) ಸಂಪರ್ಕಗಳು ಇದ್ದರೆ, ಎಲ್ಲ ಸಂಪರ್ಕಗಳನ್ನೂ ತೈಲ ಕಂಪನಿಗಳು ಏಕಾಏಕಿ ರದ್ದುಪಡಿಸುತ್ತಿವೆ. ಈ ಬಗ್ಗೆ ಮಾಹಿತಿ ಇರದ ಗ್ರಾಹಕರು ಈಗ ಎಲ್‌ಪಿಜಿ ಸಿಲಿಂಡರ್ ಪಡೆಯಲು ಪರದಾಡುವಂತಾಗಿದೆ.

ಈ ಮೊದಲು ಒಬ್ಬ ವ್ಯಕ್ತಿಯು ಸರ್ಕಾರಿ ಸ್ವಾಮ್ಯದ ಎಚ್‌ಪಿಸಿಎಲ್, ಬಿಪಿಸಿಎಲ್ ಮತ್ತು ಐಒಸಿಎಲ್ ಸೇರಿ ಮೂರೂ ಕಂಪನಿಗಳ ಎಲ್‌ಪಿಜಿ ಸಂಪರ್ಕ ಪಡೆದುಕೊಳ್ಳಬಹುದಿತ್ತು. ಅಷ್ಟೂ ಸಂಪರ್ಕಗಳಿಂದ ಸಿಲಿಂಡರ್ ಪಡೆಯಬಹುದಿತ್ತು. ಎಲ್‌ಪಿಜಿ ಸಂಪರ್ಕ ಸಂಖ್ಯೆಗೆ ಕೆವೈಸಿ ಹಾಗೂ ಪ್ಯಾನ್ ಸಂಖ್ಯೆ ಜೋಡಣೆ ಮಾಡುವಂತೆ ತೈಲ ಕಂಪನಿಗಳು ಸೂಚಿಸಿದ್ದವು. ಆ ಬಳಿಕ ಎರಡು ಸಂಪರ್ಕ ಹೊಂದಿದ್ದವರಲ್ಲಿ ಒಂದು ಸಂಪರ್ಕ ಸ್ಥಗಿತವಾಗಿತ್ತು.

ಕೆಲವರು ಎರಡು ಸಂಪರ್ಕ ಹೊಂದಿದ್ದರೂ ಒಂದನ್ನು ಮಾತ್ರ ನಿರಂತರವಾಗಿ ಬಳಸುತ್ತಿದ್ದರು. ಮತ್ತೊಂದು ಸಂಪರ್ಕದ ಇತ್ತಾದರೂ ಸಿಲಿಂಡರ್ ಬುಕ್ ಮಾಡದೇ ಇದ್ದುದರಿಂದ ನಿಷ್ಕ್ರಿಯವಾಗಿತ್ತು. ಹೀಗೆ ಎರಡು ಸಂಪರ್ಕ ಇದ್ದವರು ಈಗ ಬುಕ್ ಮಾಡಲು ಹೋದಾಗ, ಎರಡೂ ಸಂಪರ್ಕಗಳು ಸ್ಥಗಿತಗೊಂಡಿರುವುದು ಗೊತ್ತಾಗಿದೆ.

ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದಿಂದ ಎಲ್‌ಪಿಜಿ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಎಲ್‌ಪಿಜಿ ಸಿಲಿಂಡರ್ ಪೂರೈಸುವಲ್ಲಿನ ತಮ್ಮ ಮೇಲಿನ ಒತ್ತಡ ಕಡಿಮೆ ಮಾಡಿಕೊಳ್ಳಲು ಕಂಪನಿಗಳು ಮುಂದಾಗಿವೆ. ಕೊಳವೆ ಜಾಲದ ಮೂಲಕ ಮನೆಗೆ ನೈಸರ್ಗಿಕ ಅನಿಲ (ಪಿಎನ್‌ಜಿ) ಸಂಪರ್ಕ ಹೊಂದಿರುವವರ ಎಲ್‌ಪಿಜಿ ಸಂಪರ್ಕ ರದ್ದುಪಡಿಸಿದ್ದಂತೆಯೇ, ಒಂದಕ್ಕಿಂತ ಹೆಚ್ಚು ಎಲ್‌ಪಿಜಿ ಸಂಪರ್ಕ ಹೊಂದಿರುವವರಿಗೂ ಸ್ಥಗಿತದ ಕ್ರಮವನ್ನು ವಿಸ್ತರಿಸಿವೆ. ▶7



ಪರಿಹಾರವೇನು?

- ಎರಡು ಭಿನ್ನ ಕಂಪನಿಗಳಲ್ಲಿ ಪ್ರತ್ಯೇಕ ಎಲ್‌ಪಿಜಿ ಸಂಪರ್ಕ ಹೊಂದಿರುವ ಗ್ರಾಹಕರು ತಕ್ಷಣವೇ 'ನಿಮ್ಮ ಗ್ರಾಹಕರನ್ನು ತಿಳಿದುಕೊಳ್ಳಿ–ಕೆವೈಸಿ' ದಾಖಲೆಗಳನ್ನು ಸಲ್ಲಿಸಿ, ಸಂಪರ್ಕವನ್ನು ಖಚಿತಪಡಿಸಿಕೊಳ್ಳಬೇಕು
- ಒಂದು ಕಂಪನಿಯ ಸಂಪರ್ಕ ರದ್ದಾಗಿರುವ ಬಗ್ಗೆ ಸಂಬಂಧಪಟ್ಟ ಏಜೆನ್ಸಿಯಿಂದ ದೃಢೀಕರಣ ಪತ್ರ ಪಡೆದುಕೊಂಡು, ಇನ್ನೊಂದು ಕಂಪನಿಯ ಏಜೆನ್ಸಿಗೆ ಸಲ್ಲಿಸಬೇಕು. ಇದರಿಂದ ಒಂದು ಸಂಪರ್ಕವನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ
- ಈಗಾಗಲೇ ಎರಡು ಸಂಪರ್ಕ ರದ್ದಾಗಿರುವವರು, ಆ ಬಗ್ಗೆ ತಮ್ಮ ಏಜೆನ್ಸಿಗಳಲ್ಲಿ ದೂರು ದಾಖಲಿಸಬೇಕು. ಅಗತ್ಯ ದಾಖಲೆಗಳನ್ನು ಸಲ್ಲಿಸಿ, ಒಂದು ಸಂಪರ್ಕವನ್ನು ಚಾಲ್ತಿ ಮಾಡಿಸಿಕೊಳ್ಳಬಹುದು
- ಒಂದು ಕಂಪನಿಯ ಸಿಲಿಂಡರ್‌ಗಳು ಹಾಗೂ ರೆಗ್ಯುಲೇಟರ್‌ಗಳನ್ನು ಏಜೆನ್ಸಿಗೆ ವಾಪಸ್ ಮಾಡಿರುವ ಬಗ್ಗೆ ಸರಂಡರ್ ಸರ್ಟಿಫಿಕೇಟ್ ಪಡೆದು, ತಮಗೆ ಬೇಕಾದ ಏಜೆನ್ಸಿಗೆ ಸಲ್ಲಿಸಿದರೆ ಸ್ಥಗಿತಗೊಂಡ ಸಂಪರ್ಕ ಪುನರ್ ಸ್ಥಾಪಿಸಿಕೊಳ್ಳಬಹುದು
- ಆಧಾರ್ ಫೇಸ್ ಆರ್‌ಡಿ ಆ್ಯಪ್ ಮೂಲಕವೂ ಗ್ರಾಹಕರು ವಿವರ ಸಲ್ಲಿಸಬಹುದು. 1800 2333 555 ಸಹಾಯವಾಣಿಗೆ ಕರೆ ಮಾಡಿ ಹೆಚ್ಚಿನ ಮಾಹಿತಿ ಪಡೆದುಕೊಳ್ಳಬಹುದು

ಚಿನಕುರುಳಿ — ಪ್ರಕಾಶ್ ಶೆಟ್ಟಿ



ಪೈಲಟ್‌ಗಾಗಿ ಮುಂದುವರಿದ ಶೋಧ

ಟೆಹರಾನ್ ಮೇಲೆ ಇಸ್ರೇಲ್ ಸೇನೆ ಭಾರಿ ವೈಮಾನಿಕ ದಾಳಿ

ಟೆಹರಾನ್ (ಎಪಿ/ ಎಎಫ್‌ಪಿ): ಇರಾನ್ ಸೇನೆ ಹೊಡೆದುರುಳಿಸಿದ ಅಮೆರಿಕದ ಯುದ್ಧ ವಿಮಾನದ ಪೈಲಟ್‌ನ ಪತ್ತೆಗಾಗಿ ಅಮೆರಿಕ ಮತ್ತು ಇರಾನ್ ಸೇನೆಗಳು ಶನಿವಾರ ಶೋಧ ನಡೆಸಿವೆ. ಮತ್ತೊಂದೆಡೆ, ಇಸ್ರೇಲ್ ಸೇನೆಯು ಟೆಹರಾನ್ ಮೇಲೆ ಭಾರಿ ವೈಮಾನಿಕ ದಾಳಿ ಮುಂದುವರಿಸಿದೆ.

ಅಮೆರಿಕದ ಎಫ್–15 ವಿಮಾನವನ್ನು ಹೊಡೆದುರುಳಿಸಿದ್ದಾಗಿ ಇರಾನ್ ಶುಕ್ರವಾರ ಹೇಳಿತ್ತು. ವಿಮಾನದಲ್ಲಿದ್ದ ಇಬ್ಬರು ಪೈಲಟ್‌ಗಳು ಕೆಳಕ್ಕೆ ಜಿಗಿದಿದ್ದರು. ಅಮೆರಿಕ ಸೇನೆಯ ವಿಶೇಷ ಕಮಾಂಡೊಗಳು ಒಬ್ಬ ಪೈಲಟ್‌ಅನ್ನು ರಕ್ಷಿಸಿರುವುದಾಗಿ ಅಮೆರಿಕದ ಮಾಧ್ಯಮಗಳು ವರದಿ ಮಾಡಿವೆ. ಮತ್ತೊಬ್ಬ ಪೈಲಟ್ ಇನ್ನೂ ಪತ್ತೆಯಾಗಿಲ್ಲ. ಯುದ್ಧ ಆರಂಭವಾದ ಬಳಿಕ ಇರಾನ್‌ನ ವಾಯುಪ್ರದೇಶದಲ್ಲಿ ಅಮೆರಿಕವು ತನ್ನ ವಿಮಾನವನ್ನು ಕಳೆದುಕೊಂಡದ್ದು ಇದೇ ಮೊದಲು. ಈ ಘಟನೆಯು ಸಂಘರ್ಷಕ್ಕೆ ಹೊಸ ತಿರುವು ನೀಡಬಹುದು ಎಂದು ವಿಶ್ಲೇಷಿಸಲಾಗಿದೆ. ▶8

48 ಗಂಟೆಗಳಷ್ಟೇ ಬಾಕಿ: ಟ್ರಂಪ್



'ಹೊರ್ಮುಜ್ ಜಲಸಂಧಿ ಮುಕ್ತಗೊಳಿಸಲು ಇರಾನ್‌ಗೆ ನೀಡಿದ್ದ ಗಡುವು ಕೊನೆಗೊಳ್ಳಲು 48 ಗಂಟೆಗಳು ಉಳಿದಿವೆ' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

'ಗಡುವು ಮುಗಿಯುತ್ತಾ ಬಂದಿದೆ. ಹೊರ್ಮುಜ್ ತೆರೆಯಲು ಅಥವಾ ಒಪ್ಪಂದ ಮಾಡಿಕೊಳ್ಳಲು ನಾವು 10 ದಿನಗಳ ಗಡುವು ನೀಡಿದ್ದನ್ನು ನೆನಪಿಡಿ. ಇಲ್ಲದಿದ್ದರೆ ವಿನಾಶ ಖಚಿತ' ಎಂದು ಮಾರ್ಚ್ 26ರಂದು ತಾವು ನೀಡಿದ್ದ 10 ದಿನಗಳ ಗಡುವನ್ನು ಉಲ್ಲೇಖಿಸಿ, ಟ್ರಂಪ್ ಅವರು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.

ದಿನದ ಬೆಳವಣಿಗೆ

- ಹೊರ್ಮುಜ್ ಜಲಸಂಧಿ ದಾಟಲು ಯತ್ನಿಸಿದ ಇಸ್ರೇಲ್ ಜತೆ ನಂಟು ಹೊಂದಿರುವ ಹಡಗಿನ ಮೇಲೆ ಡ್ರೋನ್ ದಾಳಿ ನಡೆಸಿರುವುದಾಗಿ ಇರಾನ್ ಹೇಳಿದೆ
- ಯುದ್ಧ ಆರಂಭವಾದಾಗಿನಿಂದ ತಮ್ಮ ದೇಶದ 30 ವಿಶ್ವವಿದ್ಯಾಲಯಗಳನ್ನು ಗುರಿಯಾಗಿಸಲಾಗಿದೆ ಎಂದು ಇರಾನ್‌ನ ವಿಜ್ಞಾನ ಸಚಿವ ಹೊಸೇನ್ ಸರಫ್ ತಿಳಿಸಿದ್ದಾರೆ
- ಯುದ್ಧ ಕೊನೆಗೊಳಿಸಲು ತನ್ನ ಮಧ್ಯಸ್ಥಿಕೆಯಲ್ಲಿ ನಡೆಯುತ್ತಿರುವ ಮಾತುಕತೆ ಮುರಿದುಬಿದ್ದಿದೆ ಎಂಬ ಮಾಧ್ಯಮ ವರದಿಗಳನ್ನು ಪಾಕಿಸ್ತಾನ ಅಲ್ಲಗಳೆದಿದೆ
- ಅಮೆರಿಕ ಮೂಲದ ಮಾಹಿತಿ ತಂತ್ರಜ್ಞಾನ ಕಂಪನಿ ಒರಾಕಲ್‌ನ ದುಬೈ ಕಚೇರಿಯ ಮೇಲೆ ಇರಾನ್ ಡ್ರೋನ್ ದಾಳಿ ನಡೆಸಿದ್ದು, ಕಟ್ಟಡಕ್ಕೆ ಹಾನಿಯಾಗಿದೆ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮಿಂಚು, ಗುಡುಗು ಸಹಿತ ಮಳೆ ಬೀಳಲಿದೆ.

ಗೂಂಡಾ ಕಾಯ್ದೆಯಡಿ ರೌಡಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೌಡಿ ವಿನಯಕುಮಾರ (30) ಎಂಬಾತನನ್ನು ಗೂಂಡಾ ಕಾಯ್ದೆ ಅಡಿ ಮಹಾಲಕ್ಷ್ಮಿಲೇಔಟ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಈತ ಮಹಾಲಕ್ಷ್ಮಿಲೇಔಟ್, ನಂದಿನಿ ಲೇಔಟ್, ಪೀಣ್ಯ, ವೈಯ್ಯಾಲಿಕಾವಲ್, ಎಸ್.ಆರ್.ನಗರ, ವಿಲ್ಸನ್ ಗಾರ್ಡನ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ರೌಡಿ ಚಟುವಟಿಕೆಗಳಲ್ಲಿ ತೊಡಗಿದ್ದ. ಈತನ ವಿರುದ್ಧ ಕೊಲೆ, ಕೊಲೆ ಯತ್ನ, ಸುಲಿಗೆ, ದರೋಡೆ, ದೊಂಬಿ, ಹಲ್ಲೆ ಸೇರಿ ಇತರೆ ಅಪರಾಧ ಪ್ರಕರಣ ದಾಖಲಾಗಿದ್ದವು. ವಿನಯ್‌ಕುಮಾರ್ ವಿರುದ್ಧ 2010ರಿಂದ 2025ರವರೆಗೆ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಒಟ್ಟು 29 ಪ್ರಕರಣಗಳು ದಾಖಲಾಗಿದ್ದವು.

'ಮಹಾಲಕ್ಷ್ಮಿಲೇಔಟ್ ಠಾಣಾ ವ್ಯಾಪ್ತಿಯಲ್ಲಿ ಕಳೆದ ವರ್ಷ ನಡೆದಿದ್ದ ಕೊಲೆಯತ್ನ ಪ್ರಕರಣದಲ್ಲಿ ಈ ರೌಡಿಯನ್ನು ಬಂಧಿಸಲಾಗಿತ್ತು. ಜಾಮೀನಿನ ಮೇಲೆ ಹೊರ ಬಂದು ನ್ಯಾಯಾಲಯದ ಷರತ್ತುಗಳನ್ನು ಉಲ್ಲಂಘನೆ ಮಾಡುತ್ತಿದ್ದ. ಅಲ್ಲದೇ ನ್ಯಾಯಾಲಯದಲ್ಲಿ ವಿಚಾರಣೆಗೂ ಹಾಜರಾಗದೇ ತಲೆಮರೆಸಿಕೊಂಡಿದ್ದ. ಈತನ ಚಟುವಟಿಕೆಯಿಂದ ಜನರು ಆತಂಕಕ್ಕೆ ಒಳಗಾಗಿದ್ದರು. ಇದೀಗ ಗೂಂಡಾ ಕಾಯ್ದೆ ಅಡಿ ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.



ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ನಗರದ ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿರುವ 88ನೇ ಶ್ರೀರಾಮನವಮಿ ಸಂಗೀತೋತ್ಸವದಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕ ಸಂದೀಪ್ ನಾರಾಯಣ್ ಶನಿವಾರ ಗಾಯನ ಪ್ರಸ್ತುತಪಡಿಸಿದರು ಪ್ರಜಾವಾಣಿ ಚಿತ್ರ

ಐಪಿಎಲ್: ಮೊಬೈಲ್ ಕದ್ದ ಮತ್ತಷ್ಟು ಮಂದಿ ಸೆರೆ

ಬಂಧಿತರ ಸಂಖ್ಯೆ 13ಕ್ಕೆ ಏರಿಕೆ ● ಕಬ್ಬನ್‌ಪಾರ್ಕ್ ಠಾಣೆ ಪೊಲೀಸರ ಕಾರ್ಯಾಚರಣೆ ● ಒಟ್ಟು 75 ಮೊಬೈಲ್ ಫೋನ್‌ಗಳ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್.ಸಿ.ಬಿ) ಮತ್ತು ಸನ್‌ರೈಸರ್ಸ್ ಹೈದರಾಬಾದ್ (ಎಸ್.ಆರ್.ಎಚ್) ತಂಡಗಳ ನಡುವೆ ಇಲ್ಲಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಾರ್ಚ್ 28ರಂದು ನಡೆದಿದ್ದ ಐಪಿಎಲ್ ಪಂದ್ಯದ ವೇಳೆ, ಪ್ರೇಕ್ಷಕರ ಮೊಬೈಲ್ ಕಳ್ಳತನ ಮಾಡಿದ್ದ ಮತ್ತಷ್ಟು ಆರೋಪಿಗಳನ್ನು ಕಬ್ಬನ್‌ಪಾರ್ಕ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಸೋಹಾನ್ ಕುಮಾರ್ (20), ಸಂಜಿತ್ ಕುಮಾರ್ (24), ಈಶಾಲ್ ಕುಮಾರ್ (23) ಹಾಗೂ ಒಂಬತ್ತು ಬಾಲಕರು ಸೇರಿ 13 ಮಂದಿಯನ್ನು ಶನಿವಾರ ನಡೆದ ಕಾರ್ಯಾಚರಣೆಯಲ್ಲಿ ಬಂಧಿಸಲಾಗಿದೆ. ಆರೋಪಿಗಳಿಂದ ಒಟ್ಟು 75 ಮೊಬೈಲ್ ಫೋನ್ ಜಪ್ತಿ ಮಾಡಲಾಗಿದೆ ಎಂದು ಕೇಂದ್ರ ವಿಭಾಗದ ಡಿಸಿಪಿ ಅಕ್ಷಯ್ ಎಂ. ಹಾಕೆ ತಿಳಿಸಿದರು.



ಸಂಜಿತ್ ಕುಮಾರ್



ಸೋಹಾನ್ ಕುಮಾರ್

ಮಾರ್ಚ್ 31ರಂದು ಜಾರ್ಖಂಡ್‌ನ ಶುಭಂ ಕುಮಾರ್ (26) ಹಾಗೂ ಮೂವರು ಬಾಲಕರನ್ನು ಬಂಧಿಸಿ 21 ಮೊಬೈಲ್ ಜಪ್ತಿ ಮಾಡಲಾಗಿತ್ತು. ಈ ಪ್ರಕರಣದಲ್ಲಿ ಬಂಧಿತರ ಸಂಖ್ಯೆ 13ಕ್ಕೆ ಏರಿಕೆಯಾಗಿದೆ.

'ಆರೋಪಿಗಳು ಜಾರ್ಖಂಡ್ ಸೇರಿದಂತೆ ವಿವಿಧ ರಾಜ್ಯದವರು. ಕೆಲಸಕ್ಕೆಂದು ಬೆಂಗಳೂರಿಗೆ ಬಂದಿದ್ದರು. ಬಾಲಕರಿಗೆ ಐಪಿಎಲ್ ಟಿಕೆಟ್ ಕೊಟ್ಟು ಕ್ರೀಡಾಂಗಣಕ್ಕೆ ಕಳುಹಿಸಿ ಮೊಬೈಲ್ ಕಳ್ಳತನ ಮಾಡಿಸಲಾಗಿತ್ತು. ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಆಧರಿಸಿ ಆರೋಪಿಗಳನ್ನು ಪತ್ತೆ ಹಚ್ಚಿ ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

'ಮಾರ್ಚ್ 28ರಂದು ಆರ್‌ಸಿಬಿ ಹಾಗೂ ಎಸ್‌ಆರ್‌ಎಚ್ ತಂಡಗಳ ನಡುವೆ ಐಪಿಎಲ್ ಟೂರ್ನಿಯ ಉದ್ಘಾಟನಾ ಪಂದ್ಯವು ನಗರದಲ್ಲಿ ನಡೆದಿತ್ತು. ಪಂದ್ಯದ ಮೊದಲ ಇನಿಂಗ್ಸ್ ಮುಕ್ತಾಯವಾದ ಮೇಲೆ ಹಲವು ಪ್ರೇಕ್ಷಕರು ನೀರು ಹಾಗೂ ಆಹಾರ ಪದಾರ್ಥಗಳನ್ನು ತರಲು ಹೋಗಿದ್ದರು. ಆ ಸಂದರ್ಭವನ್ನೇ ಬಳಸಿಕೊಂಡು ನೂಕುನುಗ್ಗಲಿನಲ್ಲಿ ಕಳ್ಳರು ಕೃತ್ಯ ಎಸಗಿದ್ದರು. ಇನ್ನು ಪಂದ್ಯ ಮುಕ್ತಾಯವಾದ ಮೇಲೂ ಪ್ರೇಕ್ಷಕರು ಹೊರಕ್ಕೆ ಹೋಗುವ ಸಂದರ್ಭದಲ್ಲೂ ಮೊಬೈಲ್‌ಗಳ ಕಳ್ಳತನ ನಡೆದಿತ್ತು. ಮೆಟ್ರೊ ನಿಲ್ದಾಣಗಳಲ್ಲೂ ಕಳ್ಳರು ಕೃತ್ಯ ಎಸಗಿದ್ದರು' ಎಂದು ಮೂಲಗಳು ತಿಳಿಸಿವೆ.

ಆರ್‌ಸಿಬಿ ಹಾಗೂ ಸಿಎಸ್‌ಕೆ ನಡುವೆ ಭಾನುವಾರ ಮತ್ತೊಂದು ಪಂದ್ಯ ನಡೆಯಲ್ಲಿದ್ದು, ಭದ್ರತೆ ಹೆಚ್ಚಿಸಲಾಗಿದೆ. ಕ್ರೀಡಾಂಗಣದಲ್ಲಿ ಅನುಮಾನಾಸ್ಪದ ವ್ಯಕ್ತಿಗಳು ಕಂಡುಬಂದರೆ ಭದ್ರತಾ ಸಿಬ್ಬಂದಿಗೆ ಮಾಹಿತಿ ನೀಡಬಹುದು. ವಶಕ್ಕೆ ಪಡೆದು ಪೊಲೀಸರು ವಿಚಾರಣೆ ನಡೆಸಲಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಕೇಂದ್ರ ವಿಭಾಗದ ಡಿಸಿಪಿ ಅಕ್ಷಯ್ ಎಂ. ಹಾಕೆ ಅವರ ಮಾರ್ಗದರ್ಶನದಲ್ಲಿ ಎಸಿಪಿ ಪ್ರಿಯದರ್ಶಿನಿ ಈಶ್ವರ ಸಾಣಿಕೊಪ್ಪ ನೇತೃತ್ವದಲ್ಲಿ ಕಬ್ಬನ್‌ಪಾರ್ಕ್ ಠಾಣೆಯ ಇನ್‌ಸ್ಪೆಕ್ಟರ್ ಕೆ.ಎಸ್.ದೇವೇಂದ್ರಪ್ಪ ತಂಡ ಪ್ರಕರಣ ಭೇದಿಸುವಲ್ಲಿ ಯಶಸ್ವಿಯಾಗಿದೆ.

ಭಾನುವಾರ ಪಂದ್ಯ: ವಾಹನಗಳ ನಿಲುಗಡೆ ನಿಷೇಧ

ಭಾನುವಾರ ಐಪಿಎಲ್ ಪಂದ್ಯ ನಡೆಯುತ್ತಿರುವ ಹಿನ್ನೆಲೆಯಲ್ಲಿ ಕ್ರೀಡಾಂಗಣದ ಸುತ್ತಮುತ್ತಲ ರಸ್ತೆಗಳು, ಜಂಕ್ಷನ್‌ಗಳಲ್ಲಿ ವಾಹನ ನಿಲುಗಡೆ ನಿಷೇಧ ಮಾಡಲಾಗಿದೆ.

- ಕ್ವೀನ್ಸ್ ರಸ್ತೆಯ ಎರಡೂ ಬದಿಯಲ್ಲಿ ಹಾಗೂ ಬಾಳೇಕುಂದ್ರಿ ವೃತ್ತದಿಂದ ಕ್ವೀನ್ಸ್ ವೃತ್ತದವರೆಗೆ. ಕ್ವೀನ್ಸ್ ವೃತ್ತದಿಂದ ಸಿ.ಟಿ.ಒ ಜಂಕ್ಷನ್ ವರೆಗೆ
- ಎಂ.ಜಿ ರಸ್ತೆಯಲ್ಲಿ ಅನಿಲ್ ಕುಂಬ್ಳೆ ವೃತ್ತದಿಂದ ಕ್ವೀನ್ಸ್ ವೃತ್ತದವರೆಗೆ ಮತ್ತು ಕ್ವೀನ್ಸ್ ರಸ್ತೆಯಿಂದ ಅನಿಲ್ ಕುಂಬ್ಳೆ ಜಂಕ್ಷನ್‌ವರೆಗೆ ರಸ್ತೆಯ ಎರಡೂ ಕಡೆ
- ಲಿಂಕ್ ರಸ್ತೆ- ಎಂ.ಜಿ ರಸ್ತೆಯಿಂದ ಕಬ್ಬನ್ ರಸ್ತೆವರೆಗೆ
- ರಾಜಭವನ ರಸ್ತೆ, ಟಿ.ಚೌಡಯ್ಯ ರಸ್ತೆ ಮತ್ತು ರೇಸ್ ಕೋರ್ಸ್ ರಸ್ತೆ
- ಸೆಂಟ್ರಲ್ ಸ್ಟ್ರೀಟ್ ರಸ್ತೆಯಲ್ಲಿ ರಸ್ತೆಯ ಎರಡೂ ಕಡೆ
- ಕಬ್ಬನ್ ರಸ್ತೆಯಲ್ಲಿ, ಸಿ.ಟಿ.ಒ ವೃತ್ತದಿಂದ ಡಿಕನ್ಸನ್ ರಸ್ತೆ ಜಂಕ್ಷನ್‌ವರೆಗೆ ರಸ್ತೆಯ ಎರಡೂ ಕಡೆ. ಕಬ್ಬನ್ ರಸ್ತೆಯಲ್ಲಿ ಕಾಮರಾಜ ರಸ್ತೆ ಜಂಕ್ಷನ್‌ನಿಂದ ಡಿಕನ್ಸನ್ ರಸ್ತೆ ಜಂಕ್ಷನ್‌ವರೆಗೆ ಬಿಎಂಟಿಸಿ ಬಸ್‌ಗಳನ್ನು ಹೊರತುಪಡಿಸಿ, ಇತರೆ ಎಲ್ಲಾ ತರಹದ ವಾಹನಗಳ ನಿಲುಗಡೆ ನಿಷೇಧಿಸಲಾಗಿದೆ
- ಸೇಂಟ್ ಮಾರ್ಕ್ಸ್ ರಸ್ತೆಯಲ್ಲಿ, ಕ್ಯಾಶ್ ಫಾರ್ಮಸಿ ಜಂಕ್ಷನ್‌ನಿಂದ ಅನಿಲ್ ಕುಂಬ್ಳೆ ವೃತ್ತದವರೆಗೆ
- ಮ್ಯೂಸಿಯಂ ರಸ್ತೆಯಲ್ಲಿ, ಎಂ.ಜಿ ರಸ್ತೆಯಿಂದ ಸೇಂಟ್ ಮಾರ್ಕ್ಸ್ ರಸ್ತೆವರೆಗೆ ಹಾಗೂ ಆಶೀರ್ವಾದಂ ವೃತ್ತದವರೆಗೆ
- ಕಸ್ತೂರಬಾ ರಸ್ತೆಯಲ್ಲಿ, ಕ್ವೀನ್ಸ್ ವೃತ್ತದಿಂದ ಹಡ್ಸನ್ ವೃತ್ತದ ವರೆಗೆ ಹಾಗೂ ಮಲ್ಯ ಆಸ್ಪತ್ರೆ ರಸ್ತೆಯಲ್ಲಿ ಸಿದ್ದಲಿಂಗಯ್ಯ ವೃತ್ತದಿಂದ ಆರ್‌ಆರ್‌ಎಂಆರ್ ವೃತ್ತದವರೆಗೆ
- ಕಬ್ಬನ್‌ಪಾರ್ಕ್ ಒಳಭಾಗದ ಕಿಂಗ್ ರಸ್ತೆ, ಪ್ರೆಸ್‌ಕ್ಲಬ್ ಮುಂಭಾಗ, ಬಾಲಭವನ ಮುಂಭಾಗ, ಫೌಂಟೇನ್ ರಸ್ತೆ
- ಲ್ಯಾವೆಲ್ಲೆ ರಸ್ತೆಯಲ್ಲಿ ಕ್ವೀನ್ಸ್ ವೃತ್ತದಿಂದ ವಿಠಲ್‌ಮಲ್ಯ ರಸ್ತೆ ಜಂಕ್ಷನ್‌ವರೆಗೆ
- ವಿಠಲ್ ಮಲ್ಯ ರಸ್ತೆ, ಸಿದ್ದಲಿಂಗಯ್ಯ ವೃತ್ತದಿಂದ ಸೇಂಟ್ ಮಾರ್ಕ್ಸ್ ರಸ್ತೆಯ ಬಿಷಪ್ ಕಾಟನ್ ಬಾಲಕಿಯರ ಶಾಲೆಯವರೆಗೆ

'ಟಿಕೆಟ್ ಇದ್ದವರಷ್ಟೇ ಕ್ರೀಡಾಂಗಣದತ್ತ ಬನ್ನಿ'

ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರ್‌ಸಿಬಿ ಹಾಗೂ ಸಿಎಸ್‌ಕೆ ತಂಡಗಳ ನಡುವೆ ಭಾನುವಾರ ಐಪಿಎಲ್ ಪಂದ್ಯ ನಡೆಯಲಿದ್ದು, ಬಂದೋಬಸ್ತ್ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಹೇಳಿದರು.

'ಐಪಿಎಲ್ ಟಿಕೆಟ್ ಇಲ್ಲದವರು ಕ್ರೀಡಾಂಗಣದ ಬಳಿಗೆ ಬರುವುದು ಬೇಡ. ಕ್ರೀಡಾಂಗಣದ ಸುತ್ತಮುತ್ತ ಸುಮ್ಮನೇ ಓಡಾಟ ನಡೆಸುವವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು. ಯಾವುದೇ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ಕ್ರಮ ತೆಗೆದು ಕೊಳ್ಳಲಾಗುವುದು' ಎಂದು ಮಾಹಿತಿ ನೀಡಿದರು.

'ಐಪಿಎಲ್ ಪಂದ್ಯ ವೀಕ್ಷಣೆಗೆ ಬರುವವರು 'ನಮ್ಮ ಮೆಟ್ರೊ', ಬಿಎಂಟಿಸಿ ಬಸ್ ಸೇರಿದಂತೆ ಸಾರ್ವಜನಿಕರ ಸಾರಿಗೆ ಬಳಸಿದರೆ ಸಂಚಾರ ದಟ್ಟಣೆ ಆಗುವುದಿಲ್ಲ. ಕಳೆದ ಪಂದ್ಯದ ವೇಳೆ ಹಲವರ ಮೊಬೈಲ್ ಫೋನ್‌ಗಳ ಕಳ್ಳತನ ನಡೆದಿತ್ತು. ಕೃತ್ಯ ಎಸಗಿದವರು ಹೊರ ರಾಜ್ಯದವರು. ಪ್ರೇಕ್ಷಕರು ತಮ್ಮ ಮೊಬೈಲ್ ಸೇರಿದಂತೆ ಇನ್ನಿತರ ವಸ್ತುಗಳ ಬಗ್ಗೆ ನಿಗಾ ವಹಿಸಬೇಕು' ಎಂದು ಮನವಿ ಮಾಡಿದರು.



ಸೀಮಾಂತ್ ಕುಮಾರ್ ಸಿಂಗ್

ಬಿಎಂಟಿಸಿ ಬಸ್‌ಗಳ ವ್ಯವಸ್ಥೆ

ಐಪಿಎಲ್ ಪಂದ್ಯ ವೀಕ್ಷಿಸಲು ಬರುವ ಪ್ರೇಕ್ಷಕರ ಅನುಕೂಲಕ್ಕೆ ಬಿಎಂಟಿಸಿ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ. ಪಂದ್ಯ ಮುಕ್ತಾಯವಾದ ಮೇಲೆ ಸಂಚರಿಸಲು, ಕೆಲವು ಮಾರ್ಗಗಳಲ್ಲಿ ಬಿಎಂಟಿಸಿ ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ.

ಎಂ.ಚಿನ್ನಸ್ವಾಮಿ ಕ್ರೀಡಾಂಗಣದಿಂದ ಕಾಡುಗೋಡಿ ಬಸ್ ನಿಲ್ದಾಣ, ಎಚ್‌ಎಎಲ್ ರಸ್ತೆ, ಸರ್ಜಾಪುರ, ಎಲೆಕ್ಟ್ರಾನಿಕ್ ಸಿಟಿ (ಹೊಸೂರು ರಸ್ತೆ), ಬನ್ನೇರುಘಟ್ಟ ನ್ಯಾಷನಲ್ ಪಾರ್ಕ್, ಜನಪ್ರಿಯ ಟೌನ್‌ಶಿಪ್ (ಮಾಗಡಿ ರಸ್ತೆ), ಆರ್.ಕೆ ಹೆಗಡೆ ನಗರ, ಯಲಹಂಕ (ನಾಗವಾರ-ಟ್ಯಾನರಿ ರಸ್ತೆ), ಹೊಸಕೋಟೆ, ಬನಶಂಕರಿಗೆ ಬಸ್ ಸಂಚರಿಸಲಿವೆ ಎಂದು ಪೊಲೀಸರು ಹೇಳಿದರು.

ಅಪಘಾತ: ಬ್ಯಾಂಕ್ ಉದ್ಯೋಗಿ ಸಾವು

ಬೆಂಗಳೂರು: ಚಿಕ್ಕಜಾಲ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಸರ್ವೀಸ್ ರಸ್ತೆಯಲ್ಲಿ ಕಾರು ಹಾಗೂ ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಬ್ಯಾಂಕ್ ಉದ್ಯೋಗಿ ಮೃತಪಟ್ಟಿದ್ದಾರೆ.

ಹೂಡಿಯ ತಿಗಳರಪಾಳ್ಯ ನಿವಾಸಿ ಪ್ರಶಾಂತ್ (31) ಮೃತಪಟ್ಟ ಬೈಕ್ ಸವಾರ. ಅವರು ಖಾಸಗಿ ಬ್ಯಾಂಕ್‌ನಲ್ಲಿ ಕೆಲಸ ಮಾಡುತ್ತಿದ್ದರು.

ಪ್ರಶಾಂತ್ ಅವರು ಸರ್ವೀಸ್ ರಸ್ತೆಯಲ್ಲಿ ಬೈಕ್‌ನಲ್ಲಿ ಬರುತ್ತಿದ್ದರು. ಶುಕ್ರವಾರ ರಾತ್ರಿ 11.45ರ ಸುಮಾರಿಗೆ ಏರ್‌ಪೋರ್ಟ್ ಟೋಲ್ ಬಳಿ ಸರ್ವೀಸ್ ರಸ್ತೆಯಿಂದ ಮುಖ್ಯರಸ್ತೆಗೆ ಸಾಗುವಾಗ ಬೈಕ್‌ಗೆ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದಿದೆ. ಗಂಭೀರ ಗಾಯಗೊಂಡ ಪ್ರಶಾಂತ್ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಚಿಕ್ಕಜಾಲ ಸಂಚಾರ ಠಾಣೆ ಪೊಲೀಸರು ಸ್ಥಳಕ್ಕೆ ಧಾವಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಜೆ.ಸಿ. ನಗರ, ವರ್ತೂರು ಪೊಲೀಸ್ ಠಾಣೆಯಲ್ಲಿ ಪ್ರಕರಣಗಳು ದಾಖಲು

ಪ್ರತ್ಯೇಕ ಗಲಾಟೆ ಪ್ರಕರಣ: ಇಬ್ಬರ ಕೊಲೆ

ಬೆಂಗಳೂರು: ಜೆ.ಸಿ ನಗರ ಹಾಗೂ ವರ್ತೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಎರಡು ಪ್ರತ್ಯೇಕ ಗಲಾಟೆ ಪ್ರಕರಣಗಳಲ್ಲಿ ಇಬ್ಬರನ್ನು ದುಷ್ಕರ್ಮಿಗಳು ಕೊಲೆ ಮಾಡಿದ್ದಾರೆ.

ಪ್ರೀತಿಸುತ್ತಿದ್ದ ಹುಡುಗಿ ಬಗ್ಗೆ ಕೀಳಾಗಿ ಮಾತನಾಡಿದ್ದಕ್ಕೆ ವ್ಯಕ್ತಿಯೊಬ್ಬರನ್ನು ಜೆ.ಸಿ ನಗರದ ಮುಖ್ಯರಸ್ತೆಯಲ್ಲಿ ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದೆ.

ವಿಜಯ್ ಅಲಿಯಾಸ್ 'ಲೇಔಟ್' (30) ಕೊಲೆಯಾದ ವ್ಯಕ್ತಿ. ಕೃತ್ಯ ಎಸಗಿದ ಆರೋಪದಡಿ ಮಠದಹಳ್ಳಿಯ ನಿವಾಸಿಗಳಾದ ಉದಯ್ ಕಿರಣ್, ವಿನೋದ್ ಕುಮಾರ್ ಎಂಬುವವರನ್ನು ಜೆ.ಸಿ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೊಲೆಯಾದ ವಿಜಯ್ ಅವರ ಸಂಬಂಧಿ ರಂಜಿತಾ ನೀಡಿದ ದೂರಿನ ಮೇಲೆ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.



ದಲಾ ರಾಮ್



ಉದಯ್



ವಿನೋದ್

'ವಿಪರೀತ ಮದ್ಯ ಸೇವಿಸಿದ್ದ ವಿಜಯ್ ಅವರು ಶುಕ್ರವಾರ ರಾತ್ರಿ 10ರ ಸುಮಾರಿಗೆ ಪತ್ನಿ ರಕ್ಷಿತಾ ಅವರನ್ನು ಚಾಮರಾಜ ಪೇಟೆಯಲ್ಲಿರುವ ಮನೆಗೆ ಕರೆದೊಯ್ಯಲು ಮುಂದಾಗಿದ್ದರು. ಪತ್ನಿ ಬರುವುದಿಲ್ಲ ಎಂದು ಹೇಳಿದಾಗ ವಿಜಯ್ ಕೋಪ ಮಾಡಿಕೊಂಡು ತೆರಳುತ್ತಿದ್ದರು. ಅದೇ ಮಾರ್ಗದಲ್ಲಿ ಮಠದಹಳ್ಳಿಯ ವಿನೋದ್ ಕುಮಾರ್ ಅವರು ಬೈಕ್‌ನಲ್ಲಿ ಬರುತ್ತಿದ್ದರು. ಆಗ ಇಬ್ಬರ ನಡುವೆ ವಾಗ್ವಾದ ನಡೆದು, ವಿನೋದ್ ಅವರ ಬೈಕ್ ಜಖಂಗೊಳಿಸಲಾಗಿತ್ತು. ಈ ವಿಷಯವನ್ನು ಆರೋಪಿ ವಿನೋದ್ ಕುಮಾರ್ ತನ್ನ ಸ್ನೇಹಿತ ಉದಯ್ ಕಿರಣ್‌ಗೆ ತಿಳಿಸಿದ್ದರು. ವಿಜಯ್ ಅವರನ್ನು ಪ್ರಶ್ನಿಸಲು ಅಂದೇ ಆರೋಪಿಗಳು ಬಂದಿದ್ದರು. ವಿಜಯ್ ಅವರು ಮನೆ ಒಳಗೆ ತೆರಳಿ ಬಾಗಿಲು ಹಾಕಿಕೊಂಡಿದ್ದರು. ಆಗ, ಆರೋಪಿಗಳು ಕೊಲೆ ಬೆದರಿಕೆ ಹಾಕಿ ತೆರಳಿದ್ದರು' ಎಂದು ಪೊಲೀಸರು ಹೇಳಿದರು.

ಶನಿವಾರ ಬೆಳಿಗ್ಗೆ 10ರ ಸುಮಾರಿಗೆ ವಿಜಯ್ ಅವರು ಉದಯ್ ಕಿರಣ್ ಪ್ರೀತಿಸುತ್ತಿದ್ದ ಯುವತಿಯ ಮನೆಯ ಎದುರು ತೆರಳಿ, ಕೀಳಾಗಿ ಮಾತನಾಡಿದ್ದರು. ಈ ವಿಷಯವನ್ನು ಆರೋಪಿಗಳಿಗೆ ಯುವತಿ ತಿಳಿಸಿದ್ದರು. ಜೆ.ಸಿ ನಗರ ಮುಖ್ಯರಸ್ತೆ ಜ್ಯೋತಿ ಬಾರ್ ಎದುರು ವಿಜಯ್ ಅವರು ಮಧ್ಯಾಹ್ನ 12 ಗಂಟೆ ಸುಮಾರಿಗೆ ನಿಂತಿದ್ದರು. ಆಗ ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದೆ.

ಕೊಲೆ ಮಾಡಿ ಆರೋಪಿಗಳು ಪರಾರಿ: ಬಳಗೆರೆ ಮುಖ್ಯರಸ್ತೆಯ ಸ್ಕಂದ ಎಲಿನಾ ಅಪಾರ್ಟ್‌ಮೆಂಟ್ ಎದುರಿನ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಶುಕ್ರವಾರ ಮಧ್ಯರಾತ್ರಿ ದುಷ್ಕರ್ಮಿಗಳ ತಂಡವು ರಾಜಸ್ಥಾನದ ದಲಾ ರಾಮ್ (30) ಅವರನ್ನು ಕೊಂದು ಪರಾರಿ ಯಾಗಿದೆ.

ದಲಾ ರಾಮ್ ಅವರ ಇಬ್ಬರು ಸಂಬಂಧಿಕರನ್ನು ವಶಕ್ಕೆ ಪಡೆಯಲಾಗಿದೆ. ವರ್ತೂರಿನಲ್ಲಿ ನೆಲಸಿದ್ದ ಸಂಬಂಧಿಕರ ಮನೆಗೆ ನಾಲ್ಕು ದಿನಗಳ ಹಿಂದೆ ದಲಾ ರಾಮ್ ಅವರು ಬಂದಿದ್ದರು. ಗಲಾಟೆಯಿಂದ ಬೇಸರ ಮಾಡಿಕೊಂಡು ದಲಾ ರಾಮ್ ಅವರು ಬಳಗೆರೆ ಮುಖ್ಯ ರಸ್ತೆಯ ಸ್ಕಂದ ಎಲಿನಾ ಅಪಾರ್ಟ್‌ಮೆಂಟ್ ಎದುರಿನ ರಸ್ತೆಯ ಪಾದಚಾರಿ ಮಾರ್ಗದಲ್ಲಿ ನಡೆದು ತೆರಳುತ್ತಿದ್ದರು. ಆಗ ಅವರನ್ನು ಅಡ್ಡಗಟ್ಟಿ ದುಷ್ಕರ್ಮಿಗಳು ಕೊಲೆ ಮಾಡಿ ಪರಾರಿಯಾಗಿದ್ದರು ಎಂದು ಪೊಲೀಸರು ಹೇಳಿದರು.

'ಸಾಹಿತ್ಯದ ಏಕಮುಖ ವ್ಯಾಖ್ಯಾನ ಅಪಾಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಹಿತಿಗಳು, ಲೇಖಕರು ಚರಿತ್ರೆ ಹಾಗೂ ಪ್ರಮುಖ ಘಟನಾವಳಿಗಳನ್ನು ಏಕಮುಖವಾಗಿ ವ್ಯಾಖ್ಯಾನಿಸುವುದು ಅಪಾಯಕಾರಿ' ಎಂದು ಭಾಷಾ ತಜ್ಞ ಕೆ.ವಿ.ನಾರಾಯಣ ಹೇಳಿದರು.

ಆಕೃತಿ ಪುಸ್ತಕ ಪ್ರಕಾಶನ ಬಸವನಗುಡಿಯ ನ್ಯಾಷನಲ್ ಕಾಲೇಜಿನ ಮಲ್ಟಿ ಮೀಡಿಯಾ ಹಾಲ್‌ನಲ್ಲಿ ಶನಿವಾರ ಆಯೋಜಿಸಿದ್ದ ಸಮಾರಂಭದಲ್ಲಿ ನೆಲ್ಲುಕುಂಟೆ ವೆಂಕಟೇಶ್ ಅವರ 'ಮಿಥಿಲೆಯ ಮಾವಿನ ಮರ' ಕವನಸಂಕಲನ ಜನಾರ್ಪಣೆಗೊಳಿಸಿ ಮಾತನಾಡಿದರು.

'ಲೇಖಕ ವೈಯಕ್ತಿಕ ಅನುಭವಕ್ಕಿಂತಲೂ ಲೋಕಾನುಭವ ಕಟ್ಟಿಕೊಡಬೇಕು. ಬಿಕ್ಕಟ್ಟು ಸಂದರ್ಭದಲ್ಲಿ ಕಾವ್ಯ ಸ್ಪಂದನೆ ಹೊಸದಾರಿ ಕಂಡುಕೊಳ್ಳಲು ಸಹಕಾರಿಯಾಗಲಿದೆ. ನೆಲ್ಲುಕುಂಟೆ ವೆಂಕಟೇಶ್ ಅವರ ಕಾವ್ಯವು ಕೆ.ಎಸ್. ನರಸಿಂಹಸ್ವಾಮಿ ಶಿಲಾಲತೆ ನೆನಪಿಸುವಂತಿದೆ. ಓದುಗರ ಜೊತೆ ಅನುಸಂಧಾನದ ಶಕ್ತಿ ಹೊಂದಿದೆ' ಎಂದರು.



ನೆಲ್ಲುಕುಂಟೆ ವೆಂಕಟೇಶ್ ಅವರ 'ಮಿಥಿಲೆಯ ಮಾವಿನ ಮರ' ಪುಸ್ತಕ ಜನಾರ್ಪಣೆ ಕಾರ್ಯಕ್ರಮದಲ್ಲಿ ವಿನಯಾ ಒಕ್ಕುಂದ, ಕೆ.ವಿ. ನಾರಾಯಣ, ಬಂಜಗೆರೆ ಜಯಪ್ರಕಾಶ್, ಕೆ.ಪಿ. ಸುರೇಶ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಕವಯತ್ರಿ ವಿನಯಾ ಒಕ್ಕುಂದ ಮಾತನಾಡಿ, 'ಹೊಸ ನಿರೂಪಣೆ ಶೈಲಿ, ವರ್ತಮಾನದ ತಲ್ಲಣಗಳಿಗೆ ವೆಂಕಟೇಶ್ ಅವರ ಕಾವ್ಯ ಸ್ಪಂದನಾಶೀಲವಾಗಿ ಹೊರಹೊಮ್ಮಿದೆ. ಸಮ ಸಮಾಜ, ಸಾಮರಸ್ಯದ ವಿಚಾರ, ತುಳಿತಕ್ಕೊಳಗಾದವರು, ತುಳಿದವರ ನಡುವಿನ ಸಂವೇದನೆ ರೂಪಕವನ್ನು ವಿಶಿಷ್ಟ ಭಾಷಿಕ ವಿನ್ಯಾಸದಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ. ಪ್ರಭುತ್ವದ ಹೆಸರಿನಲ್ಲಿ ನಡೆದಿರುವ ಯುದ್ಧದ ಅನಾಹುತಕಾರಿ ಸನ್ನಿವೇಶಗಳನ್ನು ಕಾವ್ಯ ತೆರೆದಿಡುತ್ತದೆ' ಎಂದರು.

'ಬುದ್ಧನ ಚಿಂತನೆ ಬಳಸಿಕೊಳ್ಳುತ್ತಲೇ ಪರಂಪರೆ ಹಾಗೂ ವರ್ತಮಾನವನ್ನು ವೆಂಕಟೇಶ್ ಅವರು ಸಮಾಜದ ಮುಂದೆ ಇಟ್ಟಿದ್ದಾರೆ' ಎಂದರು.

ಅನುವಾದಕ ಕೆ.ಪಿ.ಸುರೇಶ ಮಾತನಾಡಿ, 'ಹೊಸ ತಲೆಮಾರಿನವರು ಬರೆಯುವ ಸಾಹಿತ್ಯದ ಮೌಲ್ಯಮಾಪನ ಹೆಚ್ಚಾದರೆ ಇನ್ನಷ್ಟು ಸತ್ವಯುತ ಬರವಣಿಗೆ ಹೊರಬರಬಹುದು' ಎಂದರು.

ಲೇಖಕ ಬಂಜಗೆರೆ ಜಯಪ್ರಕಾಶ್ ಅಧ್ಯಕ್ಷತೆ ವಹಿಸಿದ್ದರು. ಹುಲಿಕುಂಟೆ ಮೂರ್ತಿ, ಎಸ್.ಕೆ.ಪ್ರೇಮಾವತಿ, ಯು.ಟಿ.ಫರ್ಜಾನ, ಕೆ.ಪಿ.ಲಕ್ಷ್ಮಣ್, ಎಸ್.ಪಿ.ಮಹೇಶ್ ಕವನ ವಾಚಿಸಿದರು.

ಪಾರ್ಟಿ ವೇಳೆ ಇರಿತ

ಬೆಂಗಳೂರು: ಕೋಣನಕುಂಟೆಯ ವಡ್ಡರಪಾಳ್ಯದಲ್ಲಿ ಪಾರ್ಟಿ ವೇಳೆ ಸ್ನೇಹಿತನಿಗೆ ಚೂರಿಯಿಂದ ಇರಿದು ಗಾಯಗೊಳಿಸಿದ್ದ ಆರೋಪಿ ಗಿರಿವರ್ಧನ್ ನನ್ನು ಪೊಲೀಸರು ಬಂಧಿಸಿದ್ದಾರೆ. ಹಲ್ಲೆಗೆ ಒಳಗಾದ ರಾಹುಲ್ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಏಪ್ರಿಲ್ 1ರಂದು ಗಿರಿವರ್ಧನ್ ನಿವಾಸದಲ್ಲಿ ರಾಹುಲ್, ದಿಲೀಪ್, ಸ್ಕಂದ, ಕಾರ್ತಿಕ್ ಪಾರ್ಟಿ ಮಾಡಿದ್ದರು.

ನಿಧನ ವಾರ್ತೆ

ಸರಸ್ವತಿ



ಬೆಂಗಳೂರು: ಪತ್ರಕರ್ತ ಟಿ.ಕೆ. ತ್ಯಾಗರಾಜ್ ಅವರ ಪತ್ನಿ ಬಿ.ಎಸ್. ಸರಸ್ವತಿ (65) ಶುಕ್ರವಾರ ನಿಧನರಾದರು. ವಕೀಲರಾಗಿದ್ದ ಅವರು ಅನಾರೋಗ್ಯದಿಂದ ಬಳಲುತ್ತಿದ್ದರು. ಅವರಿಗೆ ಪತಿ, ಪುತ್ರ ಡಾ. ಅಗ್ನಿ ತೇಜ್ ಇದ್ದಾರೆ. ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ಶನಿವಾರ ದೇಹ ದಾನ ಮಾಡಲಾಯಿತು ಎಂದು ಕುಟುಂಬಸ್ಥರು ತಿಳಿಸಿದರು.

800 ಎಕರೆ ಜಮೀನು ಕಬಳಿಕೆ: ಕೆಆರ್‌ಎಸ್ ಪಕ್ಷ ಆರೋಪ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ವಿಮಾನ ನಿಲ್ದಾಣಕ್ಕೆ ಹೊಂದಿಕೊಂಡಿರುವ ಅಕ್ಲೇನಹಳ್ಳಿ–ಮಲ್ಲೇನಹಳ್ಳಿ ಜೋಡಿ ಗ್ರಾಮಗಳಲ್ಲಿ ಸರ್ಕಾರಿ ಗೋಮಾಳ ಹಾಗೂ ಗ್ರಾಮಠಾಣಾ ಪ್ರದೇಶಗಳ ಒತ್ತುವರಿ ರಾಜ್ಯದ ಇತಿಹಾಸದಲ್ಲೇ ಅತಿದೊಡ್ಡ ಭೂ ಹಗರಣವಾಗಿದೆ ಎಂದು ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದ ಗೌರವಾಧ್ಯಕ್ಷ ರವಿಕೃಷ್ಣಾರೆಡ್ಡಿ ಆರೋಪಿಸಿದರು.

ತಾಲ್ಲೂಕಿನ ಯರ್ತಿಗಾನಹಳ್ಳಿ ಮೂಲಕ ಅಕ್ಲೇನಹಳ್ಳಿ–ಮಲ್ಲೇನಹಳ್ಳಿ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಪ್ರದೇಶದಲ್ಲಿ ಶನಿವಾರ ಕೆಆರ್‌ಎಸ್ ಪಕ್ಷ, ವಿವಿಧ ದಲಿತ ಸಂಘಟನೆಗಳು ಹಾಗೂ ಪ್ರಗತಿಪರ ಹೋರಾಟಗಾರರು ಹಮ್ಮಿಕೊಂಡಿದ್ದ 'ಒತ್ತುವರಿ ತೆರವು ಜಾಥಾ'ದಲ್ಲಿ ಮಾತನಾಡಿದರು.

ಬಡವರು, ದೀನ ದಲಿತರಿಗೆ ಸೇರಬೇಕಾದ ಅಂದಾಜು 800 ಎಕರೆ ಸರ್ಕಾರಿ ಭೂಮಿಯನ್ನು ಪ್ರಭಾವಿ ರಾಜಕೀಯ ಕುಟುಂಬಗಳು ಹಾಗೂ ಶ್ರೀಮಂತರು ಕಬಳಿಸಿರುವ ಗಂಭೀರ ಆರೋಪವಿದೆ. ಕೆರೆ, ಕಾಲುವೆ, ರಾಜಕಾಲುವೆ, ಗೋಮಾಳ ಮತ್ತು ಗ್ರಾಮಠಾಣಾ ಪ್ರದೇಶಗಳನ್ನು ಅತಿಕ್ರಮಿಸಿ ಮಣ್ಣು ತುಂಬಲಾಗಿದೆ ಎಂದು ದೂರಿದರು.

ಇನಾಂ ರದ್ದು ಕಾಯ್ದೆ ರಾಜ್ಯದ ಇತರ ಭಾಗಗಳಲ್ಲಿ ಜಾರಿಯಾಗಿದ್ದರೂ, ಈ ಗ್ರಾಮಗಳಿಗೆ ಮಾತ್ರ ಅನ್ವಯವಾಗದೇ ಇರುವುದರಿಂದ ಸಂಶಯಗಳು ಹೆಚ್ಚುತ್ತಿವೆ. ರೈತರ ಹೆಸರಿನಲ್ಲಿದ್ದ ದಾಖಲೆಗಳು ಕಚೇರಿಗಳಲ್ಲಿ ಕಾಣೆಯಾಗಿದ್ದು, ಖರಾಬು ಜಾಗಗಳಲ್ಲಿ ಗ್ರಾಮವನ್ನು ವ್ಯವಸ್ಥಿತವಾಗಿ ಸ್ಥಳಾಂತರ ಮಾಡಲಾಗಿದೆ ಎಂದು ಆಪಾದಿಸಿದರು.

ಜಾಥಾದಲ್ಲಿ ಭಾಗವಹಿಸಿದ ಹೋರಾಟಗಾರರು ಮತ್ತು ಸಾರ್ವಜನಿಕರು ಭಾರೀ ಸಂಖ್ಯೆಯಲ್ಲಿ ಸ್ಥಳಕ್ಕೆ ತೆರಳಿ, ಭೂಮಿಯ ಅಳತೆ ಪರಿಶೀಲನೆ ನಡೆಸಿ ಒತ್ತುವರಿ ತೆರವುಗೊಳಿಸುವ ಕಾರ್ಯವನ್ನು ಸಾಂಕೇತಿಕವಾಗಿ ನಡೆಸಿದರು. ದೇವನಹಳ್ಳಿ, ಹೊಸಕೋಟೆ, ದೊಡ್ಡಬಳ್ಳಾಪುರ, ನೆಲಮಂಗಲ, ಯಲಹಂಕ ಹಾಗೂ ಕೋಲಾರ ಭಾಗಗಳಿಂದ ಹೆಚ್ಚಿನ ಜನರು ಭಾಗವಹಿಸಿದ್ದರು.

ನಂತರ ಅಕ್ಲೇನಹಳ್ಳಿ–ಮಲ್ಲೇನಹಳ್ಳಿ ಗ್ರಾಮದ ಸರ್ಕಾರಿ ಶಾಲಾ ಆವರಣದಲ್ಲಿ ಸಭೆ ನಡೆಸಲಾಯಿತು.





272 ಅಕ್ರಮ ವಲಸಿಗರ ಗಡಿಪಾರು

ಬೆಂಗಳೂರು: ನಗರದಲ್ಲಿ ಅಕ್ರಮವಾಗಿ ನೆಲಸಿದ್ದ ಬಾಂಗ್ಲಾದೇಶದ 272 ಮಂದಿಯನ್ನು ಪತ್ತೆಹಚ್ಚಿ ಗಡಿಪಾರು ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಇದುವರೆಗೂ ನಡೆದ ಕಾರ್ಯಾಚರಣೆಯಲ್ಲಿ 178 ಪುರುಷರು, 94 ಮಹಿಳೆಯರ ಸಹಿತ ಒಟ್ಟು 272 ಜನ ಅಕ್ರಮ ವಲಸಿಗರನ್ನು ಗುರುತಿಸಿ ಗಡಿಪಾರು ಮಾಡಲಾಗಿದೆ. ತ್ರಿಪುರಾದ ಗಡಿಯವರೆಗೆ ಕರೆದೊಯ್ದು, ಭದ್ರತಾ ಪಡೆಯ ಸಹಕಾರದಲ್ಲಿ ಗಡಿ ದಾಟಿಸುವ ಕಾರ್ಯ ನಡೆಸಲಾಗಿದೆ ಎಂದು ತಿಳಿಸಿದರು.

ಬಾಂಗ್ಲಾ ಪ್ರಜೆಗಳನ್ನು ಅಕ್ರಮವಾಗಿ ಕರೆತರುತ್ತಿದ್ದ ಜಾಲದ ಇಬ್ಬರು ಮಧ್ಯವರ್ತಿಗಳನ್ನು ಬಂಧಿಸಲಾಗಿದೆ. ಅಕ್ರಮ ವಲಸಿಗರು ನಗರದ ಹೋಟೆಲ್, ಗ್ಯಾರೇಜ್, ಕಟ್ಟಡ ನಿರ್ಮಾಣದಂತಹ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದರು.

'ಹೊಸ ಯೋಚನೆಯಿಂದ ಉದ್ಯೋಗಾವಕಾಶ'

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಘಟಿಕೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಂದಿನ ಒಂದು ವರ್ಷದ ವೇಳೆಗೆ ವೃತ್ತಿಪರ ಮಾರುಕಟ್ಟೆಯಲ್ಲಿ ಶೇ 25ರಷ್ಟು ಉದ್ಯೋಗಗಳು ಕಡಿತವಾಗುವ ಅಪಾಯವಿದೆ. ಹೀಗಾಗಿ, ವಿಶ್ವವಿದ್ಯಾಲಯಗಳಿಂದ ಹೊರಬರುವ ವಿದ್ಯಾರ್ಥಿಗಳು ಹೊಸದಿಕ್ಕಿನಲ್ಲಿ ಯೋಚಿಸಬೇಕಾದ ಅನಿವಾರ್ಯವಿದೆ' ಎಂದು ರಕ್ಷಣಾ ತಂತ್ರಜ್ಞಾನ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ವಿದ್ಯುನ್ಮಾನ ಮತ್ತು ಸಂವಹನ ವಿಭಾಗದ ಮಹಾನಿರ್ದೇಶಕ ಬಿನಯ್‌ಕುಮಾರ್ ದಾಸ್ ಹೇಳಿದರು.

ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ 5ನೇ ಘಟಿಕೋತ್ಸವ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಅವರು ಮಾತನಾಡಿದರು.

'ತಂತ್ರಜ್ಞಾನ ಪ್ರತಿದಿನವೂ ಬದಲಾಗುತ್ತಿರುವ ಕಾರಣ ಸಾಂಪ್ರದಾಯಿಕ ರೀತಿಯ ಯೋಚನೆ ಮತ್ತು ಉದ್ಯೋಗಗಳಿಗೆ ಸ್ಥಾನ ಇಲ್ಲದಾಗುತ್ತಿದೆ. ರಕ್ಷಣಾ ಕ್ಷೇತ್ರದಲ್ಲಿ ಭಾರತವು ಹೊಸ ಮೈಲುಗಲ್ಲುಗಳನ್ನು ಸ್ಥಾಪಿಸುತ್ತಿದ್ದು, ಇಡೀ ಜಗತ್ತು ನಮ್ಮನ್ನು ನೋಡುತ್ತಿರುವ ರೀತಿ ಬದಲಾಗಿದೆ. ಅಂತಹದೊಂದು ದೊಡ್ಡ ಅವಕಾಶ ನಮ್ಮೆದುರು ಇದ್ದು, ಅದನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು' ಎಂದರು.

'ಈಗ ಯುದ್ಧದ ವ್ಯಾಖ್ಯಾನ ಬದಲಾಗಿದ್ದು, ಸೇನಾ ಕಾರ್ಯಾಚರಣೆಯ ರೀತಿಯೂ ಬದಲಾಗಿದೆ. ಕ್ವಾಂಟಂ ಭೌತವಿಜ್ಞಾನ, ಕೃತಕ ಬುದ್ಧಿಮತ್ತೆ, ಡ್ರೋನ್ ತಂತ್ರಜ್ಞಾನಗಳು ಮಹತ್ವದ ಪಾತ್ರ ವಹಿಸುತ್ತಿವೆ. ಈ ಎಲ್ಲ ತಂತ್ರಜ್ಞಾನಗಳನ್ನು ಕರಗತ ಮಾಡಿಕೊಂಡರಷ್ಟೇ ದೇಶವು ಅಭಿವೃದ್ಧಿಯ ಹಾದಿಯಲ್ಲಿ ಸಾಗಲು ಸಾಧ್ಯ' ಎಂದು ತಿಳಿಸಿದರು.

'ನಮ್ಮ ಜ್ಞಾನ ಮತ್ತು ಕೌಶಲಗಳನ್ನು ಸದಾ ಒರೆಗೆ ಹಚ್ಚಿ ನವೀಕರಿಸಿಕೊಳ್ಳುತ್ತಿರಬೇಕು. ಇಂತಹ ಕಲಿಕೆಗಳು ನಮ್ಮ ಮತ್ತು ದೇಶದ ಅಗತ್ಯಗಳನ್ನು ಪೂರೈಸಲು ನೆರವಾಗುತ್ತವೆ. ವಿದ್ಯಾರ್ಥಿಗಳು ಈ ದಿಸೆಯಲ್ಲಿ ಯೋಚಿಸಬೇಕು' ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೇಳಿದರು.

ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದ ಅವರು, 'ಕೃತಕ ಬುದ್ಧಿಮತ್ತೆ, ಜೈವಿಕ ತಂತ್ರಜ್ಞಾನ, ದತ್ತಾಂಶ ವಿಜ್ಞಾನ, ನವೀಕರಿಸಬಹುದಾದ ಇಂಧನ ಶಕ್ತಿ, ಸೈಬರ್ ಭದ್ರತೆಯಲ್ಲಿ ಪ್ರತಿದಿನವೂ ಹೊಸ ಅವಕಾಶಗಳು ತೆರೆದುಕೊಳ್ಳುತ್ತಿವೆ. ಆ ಅವಕಾಶಗಳನ್ನು ಬಾಚಿಕೊಳ್ಳಬೇಕು ಎಂದರೆ ನಿಮ್ಮ ಕಲಿಕೆ ನಿರಂತರವಾಗಿ ಇರಬೇಕು' ಎಂದು ತಿಳಿಸಿದರು.

ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಿ.ರಮೇಶ್, ಕುಲಸಚಿವ ನವೀನ್ ಜೋಸ್ ಅವರು ಘಟಿಕೋತ್ಸವದಲ್ಲಿ ಉಪಸ್ಥಿತರಿದ್ದರು.



ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಬಿ.ಕೆ.ವೆಂಕಟೇಶ್ ಪ್ರಸಾದ್, ಅರ್ಜುನ್ ಜನ್ಯ, ಟಿ.ಕೆ.ನಾರಾಯಣಪ್ಪ, ಕೆ.ಗೋವಿಂದರಾಜು, ಮೋಹನ್ ಆಳ್ವ ಮತ್ತು ಬಿ.ಎಂ.ಫಾರೂಕ್ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಯಿತು –ಪ್ರಜಾವಾಣಿ ಚಿತ್ರ

ಚಿನ್ನದ ಪದಕ ಪ್ರದಾನ

ಘಟಿಕೋತ್ಸವದಲ್ಲಿ 64 ಚಿನ್ನದ ಪದಕ ಸೇರಿ 71 ವಿದ್ಯಾರ್ಥಿಗಳಿಗೆ ರ‍್ಯಾಂಕ್, 23 ವಿದ್ಯಾರ್ಥಿಗಳಿಗೆ ಪಿ.ಎಚ್‌ಡಿ, 7,484 ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಪದವಿ, 29,880 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಕೆಎಸ್‌ಸಿಎ ಅಧ್ಯಕ್ಷ ಬಿ.ಕೆ.ವೆಂಕಟೇಶ್ ಪ್ರಸಾದ್, ಏಷ್ಯನ್ ಬ್ಯಾಸ್ಕೆಟ್‌ಬಾಲ್ ಒಕ್ಕೂಟದ ಅಧ್ಯಕ್ಷ ಕೆ.ಗೋವಿಂದರಾಜ್, ಶಿಕ್ಷಣ ತಜ್ಞ ಟಿ.ಕೆ.ನಾರಾಯಣಪ್ಪ, ಉದ್ಯಮಿ ಬಿ.ಎಂ. ಫಾರೂಕ್, ಶಿಕ್ಷಣ ತಜ್ಞ ಮೋಹನ್ ಆಳ್ವ ಮತ್ತು ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು.



ಮೂರು ಚಿನ್ನದ ಪದಕ ಪಡೆದ ದಿವ್ಯಶ್ರೀ ಎಸ್. ಹಾಗೂ ಅಭಿಷೇಕ್ ಶ್ರೀರಾಮ್, ನಾಲ್ಕು ಚಿನ್ನದ ಪದಕ ಪಡೆದ ಸ್ನೇಹಾ ಟಿ. ಪರಸ್ಪರ ಅಭಿನಂದಿಸಿದರು –ಪ್ರಜಾವಾಣಿ ಚಿತ್ರ



ಮಾಲ್ಡಾ: ಅಮಾಯಕರಿಗೆ ಹಿಂಸೆ-ಮಮತಾ

ನಿಜವಾದ ಅಪರಾಧಿಗಳು ತಪ್ಪಿಸಿಕೊಂಡಿದ್ದಾರೆ ಚುನಾವಣಾ ರ‍್ಯಾಲಿಯಲ್ಲಿ ಟಿಎಂಸಿ ಅಧ್ಯಕ್ಷೆ ಆಕ್ರೋಶ

ಮಾಲ್ಡಾ/ಕೋಲ್ಕತ್ತ (ಪಿಟಿಐ): 'ಮಾಲ್ಡಾ ಜಿಲ್ಲೆಯ ಮೋತಬಾರಿಯಲ್ಲಿ ನ್ಯಾಯಾಂಗ ಅಧಿಕಾರಿಗಳನ್ನು ಕೂಡಿಹಾಕಿದ್ದ ಪ್ರಕರಣದ ನಿಜವಾದ ಅಪರಾಧಿಗಳು ಈಗಾಗಲೇ ಪರಾರಿಯಾಗಿದ್ದಾರೆ. ಆದರೆ ಎನ್‌ಐಎ ಸ್ಥಳೀಯ ಅಮಾಯಕ ಜನರನ್ನು ಬಂಧಿಸಿ ಕಿರುಕುಳ ನೀಡುತ್ತಿದೆ' ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಶನಿವಾರ ಆರೋಪಿಸಿದರು.

ಮಾಲ್ಡಾದ ಮಾಣಿಕ್‌ಚಕ್‌ನಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, 'ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ಬಾಕಿ ಇರುವ ಪ್ರಕರಣಗಳ ಪರಿಶೀಲನೆಗೆ ನ್ಯಾಯಾಂಗ ಅಧಿಕಾರಿಗಳನ್ನು ಸಂಪರ್ಕಿಸಬೇಡಿ, ಬದಲಿಗೆ ಹೆಸರುಗಳನ್ನು ಪಟ್ಟಿಯಲ್ಲಿ ಮರು ಸೇರಿಸಲು ನ್ಯಾಯಮಂಡಳಿಗಳ ಮುಂದೆ ಅರ್ಜಿಗಳನ್ನು ಸಲ್ಲಿಸಿ' ಎಂದು ಅವರು ಒತ್ತಾಯಿಸಿದರು.

'ನ್ಯಾಯಾಂಗ ಅಧಿಕಾರಿಗಳನ್ನು ಘೇರಾವ್ ಮಾಡಿದ ಎರಡು ಕೋಮುವಾದಿ ಪಕ್ಷಗಳ ಸದಸ್ಯರು ತಪ್ಪಿಸಿಕೊಂಡಿದ್ದಾರೆ. ಆದರೆ ಎನ್‌ಐಎ ಅಧಿಕಾರಿಗಳು ಸ್ಥಳೀಯ ಯುವಕರಿಗೆ ಹಿಂಸೆ ನೀಡುತ್ತಿದ್ದಾರೆ. ತನಿಖೆ ಹೆಸರಿನಲ್ಲಿ ಸುಮಾರು 50 ಅಮಾಯಕರನ್ನು ಅವರು ಬಂಧಿಸಿದ್ದಾರೆ' ಎಂದು ಬ್ಯಾನರ್ಜಿ ಅವರು ಐಎಸ್‌ಎಫ್ ಮತ್ತು ಎಐಎಂಐಎಂ ಪಕ್ಷಗಳನ್ನು ಉಲ್ಲೇಖಿಸಿ ಹೇಳಿದರು.

'ಲ್ಯಾಂಡ್ ಜಿಹಾದ್' ತಡೆಯುತ್ತೇವೆ: ಸಮಿಕ್

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ 'ಲವ್ ಜಿಹಾದ್' ಮತ್ತು 'ಲ್ಯಾಂಡ್ ಜಿಹಾದ್' ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷ ಸಮಿಕ್ ಭಟ್ಟಾಚಾರ್ಯ ಹೇಳಿದರು.

ಪಿಟಿಐಗೆ ಸಂದರ್ಶನ ನೀಡಿರುವ ಅವರು, 'ನನ್ನನ್ನು ಕೋಮುವಾದಿ ಎಂದು ಬ್ರ್ಯಾಂಡ್ ಮಾಡಿದರೂ ಚಿಂತೆಯಿಲ್ಲ, ಅಧಿಕಾರಕ್ಕೆ ಬಂದರೆ ಇವುಗಳ ವಿರುದ್ಧ ಕ್ರಮ ಜರುಗಿಸುತ್ತೇವೆ. ಅದು ನಮ್ಮ ಕರ್ತವ್ಯ ಮತ್ತು ಜವಾಬ್ದಾರಿ' ಎಂದು ಪ್ರತಿಪಾದಿಸಿದರು.

'ಲವ್ ಜಿಹಾದ್' ಹೆಸರಿನಲ್ಲಿ ಹಿಂದೂ ಯುವತಿಯರನ್ನು ಮತಾಂತರಿಸಲಾಗುತ್ತಿದೆ ಎಂದ ಅವರು, 'ಲ್ಯಾಂಡ್ ಜಿಹಾದ್' ಹೆಸರಿನಲ್ಲಿ ಬಾಂಗ್ಲಾದೇಶಿಯರು ಇಲ್ಲಿನ ಬುಡಕಟ್ಟು ಯುವತಿಯರನ್ನು ವಿವಾಹವಾಗಿ ಅವರ ಜಮೀನು ಕಬಳಿಸುತ್ತಿದ್ದಾರೆ ಎಂದು ಆರೋಪಿಸಿದರು.

ಪ್ರಚೋದನೆಗಳಿಗೆ ಬಲಿಯಾಗಬೇಡಿ: 'ಯಾವುದೇ ಪ್ರಚೋದನೆಗಳಿಗೆ ಬಲಿಯಾಗಬೇಡಿ. ಬಿಜೆಪಿ ಹಿಂಸಾಚಾರವನ್ನು ಪ್ರಚೋದಿಸಲು ಯತ್ನಿಸುತ್ತದೆ, ಕೇಂದ್ರ ಸಂಸ್ಥೆಗಳನ್ನು ಬಳಸಿಕೊಳ್ಳಲು ಮುಂದಾಗುತ್ತದೆ. ಹೀಗಾಗಿ ಎಚ್ಚರದಿಂದ ಮುನ್ನಡೆಯಿರಿ' ಎಂದು ಅವರು ಕಿವಿಮಾತು ಹೇಳಿದರು.

ಮಾಲ್ಡಾ ಜಿಲ್ಲೆಯ ಮೋತಬಾರಿಯಲ್ಲಿ ಬಿಡಿಒ ಕಚೇರಿಯೊಳಗೆ ಏಳು ನ್ಯಾಯಾಂಗದ ಅಧಿಕಾರಿಗಳನ್ನು ಕೂಡಿಹಾಕಿದ್ದ ಘಟನೆ ಬುಧವಾರ ನಡೆದಿತ್ತು. ಈ ಪ್ರಕರಣದಲ್ಲಿ ನಿಷ್ಕ್ರಿಯತೆ ತೋರಿದ ಪಶ್ಚಿಮ ಬಂಗಾಳ ಸರ್ಕಾರವನ್ನು ಸುಪ್ರೀಂ ಕೋರ್ಟ್ ಗುರುವಾರ ತೀವ್ರ ತರಾಟೆಗೆ ತೆಗೆದುಕೊಂಡಿತ್ತು.

ಅಭಿಷೇಕ್ ಟೀಕೆ: 'ಬಿಜೆಪಿಯ ಡಬಲ್ ಎಂಜಿನ್‌ನಲ್ಲಿ ಒಂದು ಎಂಜಿನ್ ಪ್ರಜಾಪ್ರಭುತ್ವ ಸಂಸ್ಥೆಗಳನ್ನು ದುರುಪಯೋಗ ಪಡಿಸಿಕೊಂಡು ಚಲಿಸುತ್ತಿದ್ದರೆ, ಇನ್ನೊಂದು ಎಂಜಿನ್ ಕೋಮು ಸಂಘರ್ಷ ಹುಟ್ಟುಹಾಕಲು ಎಐಎಂಐಎಂ, ಐಎಸ್‌ಎಫ್, ಎಜೆಯುಪಿ ರೀತಿಯ ಸ್ಥಳೀಯ ಏಜೆಂಟ್‌ಗಳನ್ನು ನೇಮಿಸಿಕೊಂಡು ಚಲಿಸುತ್ತಿದೆ' ಎಂದು ಟಿಎಂಸಿ ಸಂಸದ ಅಭಿಷೇಕ್ ಬ್ಯಾನರ್ಜಿ ಟೀಕಿಸಿದ್ದಾರೆ.

ಒಲಿಂಪಿಕ್ ಬಿಡ್‌ನ ಹೊಣೆ-ಪೇಸ್: '2036ರ ಒಲಿಂಪಿಕ್ ಕ್ರೀಡಾಕೂಟಕ್ಕಾಗಿ ಭಾರತದ ಬಿಡ್‌ಗೆ ತಯಾರಿ ನಡೆಸುವ ಜವಾಬ್ದಾರಿಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ನನಗೆ ನೀಡಿದ್ದಾರೆ. ಇದು ಸಾರ್ವಜನಿಕ ಜೀವನದಲ್ಲಿ ನನಗೆ ದೊರೆತ ಅತ್ಯಂತ ಮಹತ್ವದ ಪಾತ್ರ' ಎಂದು ಟೆನಿಸ್ ತಾರೆ ಲಿಯಾಂಡರ್ ಪೇಸ್ ಸುದ್ದಿಗಾರರಿಗೆ ತಿಳಿಸಿದರು.

ನಾಲ್ವರು ಪೊಲೀಸ್ ಅಧಿಕಾರಿಗಳ ಅಮಾನತು: ತೀವ್ರ ಪೈಪೋಟಿಯಿಂದ ಕೂಡಿರುವ ಭವಾನಿಪುರ ಕ್ಷೇತ್ರದಲ್ಲಿ ಬಿಜೆಪಿ ನಾಯಕ ಸುವೇಂದು ಅಧಿಕಾರಿ ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ವಿಫಲರಾಗಿದ್ದಾರೆ ಎಂದು ಆರೋಪಿಸಿ ಚುನಾವಣಾ ಆಯೋಗವು ಕೋಲ್ಕತ್ತದ ನಾಲ್ವರು ಪೊಲೀಸ್ ಅಧಿಕಾರಿಗಳನ್ನು ಶನಿವಾರ ಅಮಾನತುಗೊಳಿಸಿದೆ. ಅಲ್ಲದೆ ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆ ಆದೇಶಿಸಿದೆ.



ಮಾಲ್ಡಾದಲ್ಲಿ ಶನಿವಾರ ನಡೆದ ಟಿಎಂಸಿ ಚುನಾವಣಾ ರ‍್ಯಾಲಿಯಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಕಲಾವಿದರೊಂದಿಗೆ ಕಾಣಿಸಿಕೊಂಡರು ಪಿಟಿಐ ಚಿತ್ರ

ಪಾನಿಹಾಟಿ: ಅತ್ಯಾಚಾರ ಸಂತ್ರಸ್ತೆಯ ತಾಯಿ ಬಿಜೆಪಿ ಅಭ್ಯರ್ಥಿ

ಪಾನಿಹಾಟಿ (ಪಶ್ಚಿಮ ಬಂಗಾಳ) (ಪಿಟಿಐ): ಕೋಲ್ಕತ್ತದಲ್ಲಿನ ಆರ್.ಜಿ. ಕರ್ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ 20 ತಿಂಗಳ ಹಿಂದೆ ಸಾಮೂಹಿಕ ಅತ್ಯಾಚಾರದಿಂದ ಕೊಲೆಯಾದ ವೈದ್ಯ ವಿದ್ಯಾರ್ಥಿನಿಯ ತಾಯಿಯನ್ನು ಬಿಜೆಪಿ ಇಲ್ಲಿನ ಪಾನಿಹಾಟಿ ವಿಧಾನಸಭಾ ಕ್ಷೇತ್ರದಿಂದ ಕಣಕ್ಕಿಳಿಸಿದೆ.

ಮೃತ ಸಂತ್ರಸ್ತೆಗೆ ನ್ಯಾಯ ದೊರಕಿಸಲು ಒಂದೂವರೆ ವರ್ಷದಿಂದ ನಡೆಯುತ್ತಿದ್ದ ಹೋರಾಟ ಈ ಮೂಲಕ ರಾಜಕೀಯ ರಂಗ ಪ್ರವೇಶಿಸಿದೆ. ಟಿಎಂಸಿಯು ತನ್ನ ಹಿರಿಯ ಶಾಸಕ ನಿರ್ಮಲ್ ಘೋಷ್ ಅವರ ಮಗ ತೀರ್ಥಂಕರ ಘೋಷ್ ಅವರಿಗೆ ಟಿಕೆಟ್ ನೀಡಿದೆ. ಬಿಜೆಪಿಯು ಸಂತ್ರಸ್ತೆಯ ತಾಯಿ ರತ್ನಾ ದೇವನಾಥ್ ಅವರನ್ನು ಕಣಕ್ಕಿಳಿಸಿದೆ.


'ನಾನು ಜನರಿಗೆ ಸೇವೆ ಸಲ್ಲಿಸಲು ಸಾಧ್ಯವಾದರೆ, ನನ್ನ ಮಗಳಿಗೆ ಖುಷಿಯಾಗುತ್ತದೆ. ಪಶ್ಚಿಮ ಬಂಗಾಳದಾದ್ಯಂತ ಕಮಲ ಅರಳಬೇಕು ಮತ್ತು ಟಿಎಂಸಿಯನ್ನು ಬೇರು ಸಹಿತ ಕಿತ್ತೊಗೆಯಬೇಕು ಎಂಬುದು ನನ್ನ ಬಯಕೆ' ಎಂದು ರತ್ನಾ ದೇವನಾಥ್ ಪ್ರತಿಕ್ರಿಯಿಸಿದ್ದಾರೆ.

ಸುದ್ದಿ 2 ನಿಮಿಷ

ಬಿಜೆಪಿಗೆ ಹೀನಾಯ ಸ್ಥಿತಿ ಬರಬಾರದಿತ್ತು: ಮುಖ್ಯಮಂತ್ರಿ

ಬಾಗಲಕೋಟೆ: 'ಉಚ್ಚಾಟನೆ ಮಾಡಿದ್ದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಪ್ರಚಾರಕ್ಕೆ ಕರೆದುತರುವ ಹೀನಾಯ ಸ್ಥಿತಿ ಬಿಜೆಪಿಗೆ ಬರಬಾರದಿತ್ತು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪಕ್ಷದಿಂದ ಉಚ್ಚಾಟನೆ ಮಾಡಿದ್ದಾರೆ. ಅವರನ್ನೇ ಪ್ರಚಾರಕ್ಕೆ ಕರೆಯುತ್ತಿದ್ದಾರೆ ಎಂದರೆ ಇವರಿಗೆ ನೀತಿ, ನಿಯಮ ಇದೆಯೇನ್ರಿ' ಎಂದು ಪ್ರಶ್ನಿಸಿದರು.



'ಯತ್ನಾಳ ಇವತ್ತಿಗೂ ಯಡಿಯೂರಪ್ಪ, ವಿಜಯೇಂದ್ರ ಅವರನ್ನು ಬೈಯುತ್ತಾರೆ. ಪಕ್ಷದ ಅಧ್ಯಕ್ಷರ ಬೈಯುವವರನ್ನು ಕರೆಯುವುದಾ? ಬೇಕಿದ್ದರೆ ಯತ್ನಾಳರನ್ನು ಪಕ್ಷಕ್ಕೆ ಸೇರಿಸಿಕೊಳ್ಳಲಿ' ಎಂದು ಚುಚ್ಚಿದರು.

ಮುಂದಿನ ಸಿ.ಎಂ ನಾನೇ ಎಂಬ ಯತ್ನಾಳ ಹೇಳಿಕೆಗೆ ಅವರು, 'ಪಾಪ ಅವರು ಮುಖ್ಯಮಂತ್ರಿ ಆಗಲ್ಲ ಅಲ್ವಾ? ಅದಕ್ಕೆ ಹೇಳಿಕೊಳ್ಳುತ್ತಾರೆ. ಯತ್ನಾಳಗೆ ಕಾಮನ್ ಸೆನ್ಸ್ ಇದೆಯಾ' ಎಂದು ಪ್ರಶ್ನಿಸಿದರು.

ಸಿದ್ದರಾಮಯ್ಯ ಭಿಕ್ಷುಕ ರಾಮಯ್ಯ: ಆರ್.ಅಶೋಕ

ಬಾಗಲಕೋಟೆ: 'ಸಿದ್ದರಾಮಯ್ಯ ಹಿಂದುಳಿದವರ ಅಭಿವೃದ್ಧಿಯ ಹರಿಕಾರ ಅಲ್ಲ, ಮಜಾವಾದಿ ರಾಮಯ್ಯ, ಪೇಪರ್ ರಾಮಯ್ಯ, ಚೀಲದ ರಾಮಯ್ಯ, ಭಿಕ್ಷುಕ ರಾಮಯ್ಯ' ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ ತೀವ್ರವಾಗ್ದಾಳಿ ನಡೆಸಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, '2022–23ರಲ್ಲಿ ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಅವರು ಮಿಗತೆ ಬಜೆಟ್ ಮಂಡಿಸಿದ್ದರು. ₹47 ಸಾವಿರ ಕೋಟಿ ಸಾಲ ಮಾಡಿದ್ದ ಅವರು, ₹84 ಸಾವಿರ ಕೋಟಿ ಅಭಿವೃದ್ಧಿಗೆ ನೀಡಿದ್ದರು. ಆದರೆ, ಸಿದ್ದರಾಮಯ್ಯ 1.32 ಲಕ್ಷ ಕೋಟಿ ಸಾಲ ಮಾಡಿ, ಅಭಿವೃದ್ಧಿಗೆ ₹82 ಸಾವಿರ ಕೋಟಿ ನೀಡಿದ್ದಾರೆ. ಇವರು ಮಜಾವಾದಿ ರಾಮಯ್ಯ ಎಂದು ಟೀಕಿಸಿದರು.

'ಪ್ರಧಾನಿ ಮೋದಿ ಅಕ್ಕಿ ಕೊಡುತ್ತಾರೆ. ಇವರು ಬರೀ ಚೀಲ ನೀಡುವ ಚೀಲರಾಮಯ್ಯ. ಅನ್ನಭಾಗ್ಯ, ಗೃಹಲಕ್ಷ್ಮಿ ಸೇರಿದಂತೆ ವಿವಿಧ ₹75 ಸಾವಿರ ಕೋಟಿ ಬಿಲ್ ಬಾಕಿ ಇದೆ. ಇದನ್ನು ಬಜೆಟ್‌ನಲ್ಲಿ ತೋರಿಸಿದ್ದರೆ ಪಾಪರ್ ಗಿರಾಕಿ ಎಂಬುದು ಗೊತ್ತಾಗುತ್ತಿತ್ತು. ಇವರು ಪೇಪರ್ ರಾಮಯ್ಯ' ಎಂದು ವಾಗ್ದಾಳಿ ನಡೆಸಿದರು.

'ಬಿಜೆಪಿ ಸರ್ಕಾರವಿದ್ದಾಗ ಪ್ರತಿ ವ್ಯಕ್ತಿ ಮೇಲೆ ₹13 ಸಾವಿರ ಸಾಲವಿತ್ತು. ಈಗ ಪ್ರತಿ ವ್ಯಕ್ತಿ ಮೇಲೆ ₹1.20 ಲಕ್ಷ ಸಾಲವಿದೆ. ಸರಾಸರಿ ಪ್ರತಿ ವರ್ಷ ₹82 ಸಾವಿರ ಕೋಟಿ ಸಾಲ ತೆಗೆದುಕೊಂಡಿದ್ದು, ಪ್ರತಿ ಗಂಟೆಗೆ ₹9.5 ಕೋಟಿಯಾಗುತ್ತದೆ. ಇವರೊಬ್ಬ ಭಿಕ್ಷುಕ ರಾಮಯ್ಯ' ಎಂದು ಟೀಕಿಸಿದರು.



ದಾವಣಗೆರೆಯ ಜಿಲ್ಲಾ ಛಲವಾದಿ ಸಮಾಜದ ಭವನದಲ್ಲಿ ನಡೆದ ಸಂವಾದ ಸಭೆಯನ್ನು ಜಿ.ಪರಮೇಶ್ವರ, ಎಚ್.ಸಿ.ಮಹದೇವಪ್ಪ ಉದ್ಘಾಟಿಸಿದರು

ಚುನಾವಣಾ ಸ್ಪರ್ಧೆಯಲ್ಲಿಲ್ಲ ಅಣ್ಣಾಮಲೈ

ಚೆನ್ನೈ (ಪಿಟಿಐ): 'ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ನಾನು ಸ್ಪರ್ಧಿಸುತ್ತಿಲ್ಲ. ಯಾವುದೇ ಕ್ಷೇತ್ರದಿಂದಲೂ ನಾನು ಸ್ಪರ್ಧಿಸಲ್ಲ ಎಂದು ಪಕ್ಷದ ಹಿರಿಯರಿಗೆ ಮೊದಲೇ ತಿಳಿಸಿದ್ದೆ' ಎಂದು ಬಿಜೆಪಿ ರಾಜ್ಯ ಘಟಕದ ಮಾಜಿ ಅಧ್ಯಕ್ಷ ಕೆ. ಅಣ್ಣಾಮಲೈ ಅವರು ಶನಿವಾರ ಇಲ್ಲಿ ತಿಳಿಸಿದರು.

ಕೇರಳದಲ್ಲಿ ಬಿಜೆಪಿ ಅಭ್ಯರ್ಥಿಗಳ ಪರ ಪ್ರಚಾರ ನಡೆಸುತ್ತಿದ್ದ ಅಣ್ಣಾಮಲೈ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಲಿಕ್ಕಾಗಿಯೇ ಚೆನ್ನೈಗೆ ವಾಪಾಸ್ಸಾಗಿದ್ದು, ತಮ್ಮನ್ನು ಭೇಟಿಯಾದ ಪತ್ರಕರ್ತರಿಗೆ ಈ ವಿಷಯ ಸ್ಪಷ್ಟಪಡಿಸಿದರು.

'ನನ್ನ ಮನವಿಯಂತೆಯೇ ಪಕ್ಷವು ನನ್ನನ್ನು ಅಭ್ಯರ್ಥಿಯನ್ನಾಗಿ ಮಾಡಿಲ್ಲ. ಎನ್‌ಡಿಎ ಅಭ್ಯರ್ಥಿಗಳ ಪರ ಪ್ರಚಾರ ಮಾಡಲು ನೇಮಿಸಿದೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

'ಏಪ್ರಿಲ್ 7ರವರೆಗೂ ಕೇರಳ, ಪುದುಚೆರಿಯಲ್ಲಿ ಪಕ್ಷದ ಅಭ್ಯರ್ಥಿಗಳ ಪರ ಮತಯಾಚಿಸುವೆ. ನಂತರ ತಮಿಳುನಾಡಿನ ಎಲ್ಲೆಡೆ ಸಂಚರಿಸಿ ಎನ್‌ಡಿಎ ಪರ ಚುನಾವಣಾ ಪ್ರಚಾರ ನಡೆಸುವೆ. ಪಕ್ಷ ನನಗೆ ನೀಡಿರುವ ಜವಾಬ್ದಾರಿಯಿದು. ಅದನ್ನು ನಿಭಾಯಿಸುತ್ತಿರುವೆ' ಎಂದು ಹೇಳಿದರು.

ಕೇರಳ ಪ್ರಚಾರ ರ‍್ಯಾಲಿಯಲ್ಲಿ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಟೀಕೆ

'ಎಲ್‌ಡಿಎಫ್‌ನಲ್ಲಿ ಎಡಪಂಥೀಯವಾದ ಉಳಿದಿಲ್ಲ'

ಇಡುಕ್ಕಿ/ಆಲಪ್ಪುಳ/ತಿರುವಳ್ಳ (ಪಿಟಿಐ): 'ಎಲ್‌ಡಿಎಫ್ ಎಂದರೆ, ಲೆಫ್ಟ್ ಡೆಮಾಕ್ರಟಿಕ್ ಫ್ರಂಟ್. ಆದರೆ, ಇದೀಗ ಎಲ್‌ಡಿಎಫ್‌ನಲ್ಲಿ ಎಡಪಂಥೀಯವಾದ ಎಂಬುದೇನೂ ಉಳಿದಿಲ್ಲ' ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಶನಿವಾರ ವಾಗ್ದಾಳಿ ನಡೆಸಿದರು.

ಕೇರಳದ ವಿವಿಧೆಡೆ ಪ್ರಚಾರ ಸಭೆಗಳನ್ನು ನಡೆಸಿದ ಅವರು, 'ಚುನಾವಣೆ ನಂತರವಂತೂ ಏನೂ ಉಳಿಯುವುದಿಲ್ಲ. ಎಲ್‌ಡಿಎಫ್‌ನೊಳಗೆ ಕಾಣದ ಕೈಗಳಿವೆ. ಆ ಕೈಗಳು ಕೋಮುವಾದಿಯಾದವು, ಸಂವಿಧಾನವನ್ನು ಒಪ್ಪಲ್ಲ, ಜನರನ್ನು ವಿಭಜಿಸಿ ಜನರ ಮಧ್ಯೆ ದ್ವೇಷ ತುಂಬುತ್ತಿವೆ. ಬಿಜೆಪಿ, ಆರ್‌ಎಸ್‌ಎಸ್ ಮತ್ತು ಸಿಪಿಎಂನ ಸಂಪರ್ಕವನ್ನು ರಾಜ್ಯದ ಜನರು ನೋಡುತ್ತಿದ್ದಾರೆ' ಎಂದು ಹೇಳಿದರು.

'ಯುಡಿಎಫ್ ಮತ್ತು ಎಲ್‌ಡಿಎಫ್ ಹಲವು ವರ್ಷಗಳಿಂದಲೂ ವಿರೋಧಿಗಳು. ಅವರು ನಮ್ಮ ವಿರೋಧಿಯಾಗಿದ್ದರೂ ಈ ಹಿಂದೆ ಎಲ್‌ಡಿಎಫ್ ಎಡಪಂಥೀಯವಾದಿ ಚಿಂತನೆಗಳಿಂದ ಕೂಡಿತ್ತು. ಆದರೆ, ಈಗ ಬಿಜೆಪಿಯಂತೆ ಕಾರ್ಪೊರೇಟ್ ಪಕ್ಷವಾಗಿದೆ' ಎಂದು ದೂರಿದರು.

'ಎಲ್‌ಡಿಎಫ್‌ನಲ್ಲಿ ಎರಡು ವಿಧದ ನಾಯಕರಿದ್ದಾರೆ. ಒಂದು ವಿಧದ ನಾಯಕರಿಗೆ ಅಧಿಕಾರ ಬೇಕು. ಇದಕ್ಕಾಗಿ ಬಿಜೆಪಿ ಮತ್ತು ಆರ್‌ಎಸ್‌ಎಸ್‌ನಿಂದ ಸಹಕಾರ ಪಡೆದುಕೊಳ್ಳುವುದಕ್ಕೂ ತಲೆ ಕೆಡಿಸಿಕೊಳ್ಳುವುದಿಲ್ಲ. ಇನ್ನೊಂದು ವಿಧದ ನಾಯಕರು ಕಠಿಣ ಪರಿಶ್ರಮಿಗಳು. ವರ್ಷಾನುಗಟ್ಟಲೆಯಿಂದ ಪಕ್ಷಕ್ಕಾಗಿ ದುಡಿದು, ಈಗ 'ಮೋಸಹೋದ' ಭಾವದಲ್ಲಿದ್ದಾರೆ. ಪಕ್ಷ ಹೋಗುತ್ತಿರುವ ದಿಕ್ಕಿನ ಬಗ್ಗೆ ಬೇಸರಗೊಂಡಿದ್ದಾರೆ' ಎಂದರು.

'ಇವರು ನಿಜವಾಗಿ ಎಡರಂಗವೇ ಆಗಿದ್ದರೆ, ರಾಜ್ಯದಲ್ಲಿ ದುಡಿಯುವ ಕಾರ್ಮಿಕರು ಸಂಕಷ್ಟ ಅನುಭವಿಸುತ್ತಿರಲಿಲ್ಲ. ಸಾವಿರಾರು ಕುಟುಂಬಗಳಿಗೆ ಭೂಮಿಯ ಹಕ್ಕನ್ನೂ ನಿರಾಕರಿಸಲಾಗಿದೆ. ಎಲ್‌ಡಿಎಫ್‌ನೊಂದಿಗೆ ನಂಟು ಹೊಂದಿಲ್ಲದ ಯುವಕರನ್ನು ಉದ್ಯೋಗಕ್ಕಾಗಿ ಒತ್ತಾಯಪೂರ್ವಕವಾಗಿ ಬೇರೆ ದೇಶಗಳಿಗೆ ದೂಡಲಾಗುತ್ತಿದೆ' ಎಂದು ಆರೋಪಿಸಿದರು.



ತಿರುವಳ್ಳದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕ್ರಿಸ್ತನ ವಿಗ್ರಹವನ್ನು ನೀಡಲಾಯಿತು ಪಿಟಿಐ ಚಿತ್ರ

'ಮೋದಿ, ಪಿಣರಾಯಿ ಒಂದೇ'

5–6 ಸಂಸದೆಯರು ಸಂಸತ್ತಿನಲ್ಲಿ ಎದ್ದು ನಿಂತರೆ, 'ನನ್ನ ಮೇಲೆ ದಾಳಿ ನಡೆಸುವ ಯತ್ನವಿದು' ಎಂದು ಮೋದಿ ಹೇಳುತ್ತಾರೆ. ಕೆಲವು ಕಾಂಗ್ರೆಸ್ ಕಾರ್ಯಕರ್ತರು ಪಿಣರಾಯಿ ಅವರಿಗೆ ಕಪ್ಪು ಬಾವುಟ ತೋರಿಸಿದ್ದಕ್ಕಾಗಿ ಸಾಯುವಂತೆ ಅವರನ್ನು ಹೊಡೆಯಲಾಗಿದೆ. 'ಇವರು ತನ್ನನ್ನು ಕೊಲ್ಲಲೆಂದೇ ಬಂದಿದ್ದಾರೆ' ಎಂದು ಪಿಣರಾಯಿ ಅವರು ದಾಳಿ ನಡೆಸುತ್ತಾರೆ. ಅಧಿಕಾರದ ಮದ ಏರಿರುವುದಕ್ಕೆ ಈ ಇಬ್ಬರೂ ಉದಾಹರಣೆಗಳು ಎಂದು ರಾಹುಲ್ ಹೇಳಿದರು.

'ಕಾಂಗ್ರೆಸ್‌ನಿಂದ ಪ್ರಚೋದನಕಾರಿ ಹೇಳಿಕೆ'

'ಪಶ್ಚಿಮ ಏಷ್ಯಾದ ದೇಶಗಳೊಂದಿಗೆ ಭಾರತದ ಸಂಬಂಧ ಹಾಳು ಮಾಡುವುದಕ್ಕಾಗಿ ಮತ್ತು ರಾಜಕೀಯವಾಗಿ ನನಗೆ ಹಾನಿ ಮಾಡಲು ಕಾಂಗ್ರೆಸ್ 'ಪ್ರಚೋದನಕಾರಿ' ಹೇಳಿಕೆಗಳನ್ನು ನೀಡುತ್ತಿದೆ. ಅವರಿಗೆ ಚುನಾವಣೆ ಗೆಲ್ಲುವುದರ ಬಗ್ಗೆ ಮಾತ್ರವೇ ಚಿಂತೆ' ಎಂದು ನರೇಂದ್ರ ಮೋದಿ ಆರೋಪಿಸಿದರು.

ತಿರುವಳ್ಳದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.

'ಚುನಾವಣೆಗಳು ಬರುತ್ತವೆ; ಹೋಗುತ್ತವೆ. ಆದರೆ, ಪಶ್ಚಿಮ ಏಷ್ಯಾದ ದೇಶಗಳಲ್ಲಿನ ಭಾರತೀಯರು ವಿಶೇಷವಾಗಿ ಕೇರಳದವರ ಸುರಕ್ಷತೆಯು ನನ್ನ ಆದ್ಯತೆ. ಅಲ್ಲಿಂದ ಎಲ್ಲರನ್ನೂ ಸುರಕ್ಷಿತವಾಗಿ ವಾಪಸು ಕರೆತರಲು ನಾವು ಯತ್ನಿಸುತ್ತಿದ್ದೇವೆ. ಇದು ಕಾಂಗ್ರೆಸ್‌ಗೆ ಬೇಡವಾಗಿದೆ. ಆ ಪಕ್ಷವು ಜನರಲ್ಲಿ ಅನಾವಶ್ಯಕ ಭಯ ಹುಟ್ಟಿಸುತ್ತಿದೆ' ಎಂದರು.

'ಲೋಕಸಭಾ ಕ್ಷೇತ್ರಗಳು ಕಡಿತಗೊಳ್ಳವು'

ಕೇರಳ, ತಮಿಳುನಾಡು, ಕರ್ನಾಟಕ, ಆಂಧ್ರ ಪ್ರದೇಶ, ಗೋವಾ, ತೆಲಂಗಾಣ ರಾಜ್ಯಗಳು ಜನಸಂಖ್ಯೆ ನಿಯಂತ್ರಣದಲ್ಲಿ ಉತ್ತಮ ಕೆಲಸ ಮಾಡಿವೆ. ಜನಸಂಖ್ಯೆ ನಿಯಂತ್ರಣವನ್ನು ಅತ್ಯುತ್ತಮವಾಗಿ ಕೈಗೊಂಡಿರುವುದಕ್ಕಾಗಿಯೇ ದಕ್ಷಿಣದ ಈ ರಾಜ್ಯಗಳ ಲೋಕಸಭಾ ಕ್ಷೇತ್ರಗಳ ಸಂಖ್ಯೆ ಕಡಿತಗೊಳ್ಳಲಿದೆ ಎನ್ನುವ ವದಂತಿಯನ್ನು ಹಬ್ಬಿಸಲಾಗುತ್ತಿದೆ. ಇದು ಸಂಪೂರ್ಣ ಸುಳ್ಳು. ಕ್ಷೇತ್ರಗಳ ಸಂಖ್ಯೆ ಕಡಿತಗೊಳ್ಳದಂತೆ ಸಂಸತ್ತು ಕ್ರಮ ಕೈಗೊಳ್ಳಲಿದೆ

ನರೇಂದ್ರ ಮೋದಿ, ಪ್ರಧಾನಿ

'ಪರಿಶಿಷ್ಟರನ್ನು ಛಿದ್ರಗೊಳಿಸಿದ ಬಿಜೆಪಿ'

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ನಮ್ಮ (ಪರಿಶಿಷ್ಟ ಜಾತಿ/ಪಂಗಡ) ಮೀಸಲಾತಿ ಶಕ್ತಿ ಶೇ 24.1ರಷ್ಟು ಇತ್ತು. ಪಿತೂರಿ ಮಾಡಿ ಒಡೆದು, ಅದನ್ನು 6 + 6 + 5 (17) ಕ್ಕೆ ಇಳಿಸಿದ್ದಾರೆ. ಇದು ಆಗಬಾರದಿತ್ತು. ಬಿಜೆಪಿಯವರು ಪರಿಶಿಷ್ಟ ಜಾತಿಯನ್ನು ಒಡೆದು ಛಿದ್ರಛಿದ್ರ ಮಾಡಿದ್ದಾರೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ಇಲ್ಲಿ ಆರೋಪಿಸಿದರು.

ನಗರದ ಛಲವಾದಿ ಸಮಾಜ ಭವನದಲ್ಲಿ ನಡೆದ ಛಲವಾದಿ ಸಮುದಾಯದ ಜಿಲ್ಲಾ ಮಟ್ಟದ ಸಂವಾದ ಸಭೆಯಲ್ಲಿ ಅವರು ಮಾತನಾಡಿದರು.

'ಮುಂದಿನ ದಿನಗಳಲ್ಲಿ ಹೇಗೆ ಬದುಕಬೇಕು ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಛಲವಾದಿ ಸಮುದಾಯದವರು ಒಗ್ಗಟ್ಟಾಗಿರಬೇಕು. ಯಾರು ಏನೇ ಹೇಳಿದರೂ ಕೇಳಬಾರದು. ಅಂಬೇಡ್ಕರ್ ಅವರಿಗೆ ಅವಮಾನ ಮಾಡಿದರೆ ಸಹಿಸುತ್ತೀರಾ?' ಎಂದು ಪ್ರಶ್ನಿಸಿದರು.

'ಮಧ್ಯ ಕರ್ನಾಟಕದಲ್ಲಿರುವ ಸಮುದಾಯದ ಮುಖಂಡರು ನಾಯಕತ್ವ ತೆಗೆದುಕೊಳ್ಳಬೇಕು. ನೀವು ಯಾರಿಗೂ ಅಡಿಯಾಳಲ್ಲ. ಸಮುದಾಯಕ್ಕೆ ನಮ್ಮ ಸಹಕಾರ ಸದಾ ಇರುತ್ತದೆ' ಎಂದು ಭರವಸೆ ನೀಡಿದರು.

ಶಾಸಕರು, ಸಚಿವರಷ್ಟೇ ಉದ್ಧಾರವಾದರೆ ಸಾಲದು, ಗುಡಿಸಲಿನಲ್ಲಿರುವ ಬಡವನೂ ಅಭಿವೃದ್ಧಿ ಹೊಂದಬೇಕು. ಸಮುದಾಯದ ಸ್ವಾಭಿಮಾನಕ್ಕಾಗಿ ನಾವು (ಸಚಿವರು) ಯಾವ ತ್ಯಾಗಕ್ಕೆ ಬೇಕಾದರೂ ಸಿದ್ಧರಿದ್ದೇವೆ' ಎಂದು ಹೇಳಿದರು.

'ಪರಿಶಿಷ್ಟ ಜಾತಿಯವರು ಬದಲಾಗಿದ್ದರೆ, ಅವರ ಬದುಕು ಸುಧಾರಣೆಯಾಗಿದ್ದರೆ ಅದು ಕಾಂಗ್ರೆಸ್‌ನಿಂದ ಎಂಬುದನ್ನು ಮರೆಯಬಾರದು. ಬಿಜೆಪಿಯವರು ಈಗ ನಾಟಕ ಮಾಡಲು ಬಂದಿದ್ದಾರೆ' ಎಂದು ದೂರಿದರು.

ಪುದುಚೆರಿಗೆ ರಾಜ್ಯದ ಸ್ಥಾನಮಾನ: ವಿಜಯ್

ಪುದುಚೆರಿ (ಪಿಟಿಐ): 'ಪುದುಚೆರಿಗೆ ರಾಜ್ಯದ ಸ್ಥಾನಮಾನ ಪಡೆಯಲು ಪ್ರಾಮಾಣಿಕ ಪ್ರಯತ್ನ ನಡೆಸುವೆ' ಎಂದು ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಅಧ್ಯಕ್ಷ, ಚಿತ್ರನಟ ವಿಜಯ್ ಅವರು ಶನಿವಾರ ಇಲ್ಲಿ ಹೇಳಿದರು.



ಪ್ರಚಾರ ರ‍್ಯಾಲಿಯಲ್ಲಿ ಸೀಟಿ ಹೊಡೆದ ವಿಜಯ್

'ಎರಡು ದಶಕದ ಹಿಂದೆಯೇ ಸುಷ್ಮಾ ಸ್ವರಾಜ್ ನೇತೃತ್ವದ ಸಮಿತಿಯು ರಾಜ್ಯದ ಸ್ಥಾನಮಾನಕ್ಕೆ ಶಿಫಾರಸು ಮಾಡಿದ್ದರೂ, ಇಲ್ಲಿನ ರಾಜಕೀಯ ಪಕ್ಷಗಳ ನಿರ್ಲಕ್ಷ್ಯದಿಂದ ಪುದುಚೆರಿ ರಾಜ್ಯವಾಗಿಲ್ಲ' ಎಂದು ಇಲ್ಲಿ ನಡೆದ ಚುನಾವಣಾ ರ‍್ಯಾಲಿಯಲ್ಲಿ ದೂರಿದರು.

'ಆಡಳಿತಾರೂಢ ಬಿಜೆಪಿ ಮೈತ್ರಿಕೂಟ ಶಕ್ತಿಹೀನವಾಗಿದ್ದರೆ, ವಿರೋಧ ಪಕ್ಷಗಳಾದ ಡಿಎಂಕೆ–ಕಾಂಗ್ರೆಸ್ ಗೊಂದಲದಲ್ಲಿವೆ. ಆಡಳಿತ ಮತ್ತು ವಿರೋಧ ಪಕ್ಷಗಳು ಪುದುಚೆರಿ ಜನರ ಆಕಾಂಕ್ಷೆಗಳನ್ನು ವಿಫಲಗೊಳಿಸಿವೆ' ಎಂದು ವಾಗ್ದಾಳಿ ನಡೆಸಿದರು.

'ತಮಿಳುನಾಡಿನಲ್ಲೂ ಡಿಎಂಕೆ–ಕಾಂಗ್ರೆಸ್ ಮೈತ್ರಿ ಗೊಂದಲಮಯವಾಗಿದೆ. ಪುದುಚೆರಿಯಲ್ಲೂ ಇದು ಪುನರಾವರ್ತನೆ ಆಗಿದೆ. ರಾಜ್ಯದಲ್ಲಿ ಇನ್ನೊಂದು ಮೈತ್ರಿ ಇದೆ. ಎನ್‌ಆರ್ ಕಾಂಗ್ರೆಸ್ (ಎಐಎನ್‌ಆರ್‌ಸಿ) ಮತ್ತು ಬಿಜೆಪಿಯ ಒಕ್ಕೂಟ. ಅದು ಒಂದುಗೂಡಿದ ಮೈತ್ರಿ ಅಲ್ಲ. ಒಟ್ಟಿಗೆ ಉಳಿಯಲು ಸಾಧ್ಯವಾಗದ ಶಕ್ತಿಹೀನ ಮೈತ್ರಿಕೂಟ' ಎಂದು ಲೇವಡಿ ಮಾಡಿದರು.

ಮೀನುಗಾರರ ರಕ್ಷಣೆಯಲ್ಲಿ ವಿಫಲ: ಸ್ಟಾಲಿನ್

ನಾಗರಕೊಯಿಲ್ (ಪಿಟಿಐ): ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ತಮಿಳುನಾಡಿನ ಮೀನುಗಾರರನ್ನು ರಕ್ಷಿಸುವಲ್ಲಿ ವಿಫಲವಾಗಿದೆ ಎಂದು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಶನಿವಾರ ಅಸಮಾಧಾನ ವ್ಯಕ್ತಪಡಿಸಿದರು.

ವಿದೇಶಾಂಗ ನೀತಿ ನಿರ್ವಹಣೆಯಲ್ಲೂ ವಿಫಲವಾಗಿದ್ದು, ನೆರೆಯ ಸಣ್ಣ ರಾಷ್ಟ್ರಗಳಲ್ಲಿಯೂ ಭಾರತದ ಯಾವುದೇ ಪ್ರಭಾವ ಇಲ್ಲದ ಪರಿಸ್ಥಿತಿಯನ್ನು ಪ್ರಧಾನಿ ನರೇಂದ್ರ ಮೋದಿ ಸೃಷ್ಟಿಸಿದ್ದಾರೆ ಎಂದು ಚುನಾವಣಾ ರ‍್ಯಾಲಿಯಲ್ಲಿ ದೂರಿದರು.

ಕೇಂದ್ರ ಸರ್ಕಾರವು ಜಾರಿಗೆ ತರಲು ಹೊರಟಿರುವ 'ವಿದೇಶಿ ದೇಣಿಗೆ (ನಿಯಂತ್ರಣ) ತಿದ್ದುಪಡಿ ಮಸೂದೆ'ಯು ಕಠಿಣವಾದುದು. ಅಲ್ಪಸಂಖ್ಯಾತರು, ಅದರಲ್ಲೂ ವಿಶೇಷವಾಗಿ ಕ್ರೈಸ್ತ ಧರ್ಮೀಯ ಸಂಘಟನೆಗಳನ್ನು ಗುರಿಯಾಗಿಸಿಕೊಂಡು ಈ ಮಸೂದೆಯನ್ನು ರೂಪಿಸಿದ್ದು, ಅದನ್ನು ಕೈಬಿಡಬೇಕು ಎಂದು ಒತ್ತಾಯಿಸಿದರು. ತಿದ್ದುಪಡಿ ಮಸೂದೆಯು ಸಂವಿಧಾನದತ್ತವಾಗಿ ಒದಗಿಸಲಾದ ಹಕ್ಕುಗಳನ್ನು ಕಸಿದುಕೊಳ್ಳುವಂತಿದೆ ಎಂದರು.

ದೆಹಲಿ ತಂಡ ಸೋಲಿಸಿ–ಉದಯನಿಧಿ

ಶಿವಗಂಗಾ ವರದಿ: ರಾಜ್ಯದ ಅಗತ್ಯ ಮತ್ತು ಅಭಿವೃದ್ಧಿಗೆ ಪ್ರತಿಕೂಲವಾಗುವ ದೆಹಲಿಯ ತಂಡವನ್ನು ಸೋಲಿಸಿ ಎಂದು ತಮಿಳುನಾಡು ಉಪ ಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ಅವರು ಮತದಾರರಿಗೆ ಮನವಿ ಮಾಡಿದರು.

ಜಿಲ್ಲೆಯ ಸಿಂಗಂಪುನಾರಿಯಲ್ಲಿ ಡಿಎಂಕೆ ಅಭ್ಯರ್ಥಿ, ಸಹಕಾರ ಸಚಿವ ಕೆ.ಆರ್. ದೊಡ್ಡಕೆರುಪ್ಪನ್ ಪರ ಮತಯಾಚಿಸಿದ ಡಿಸಿಎಂ, 'ಸಂಘಿಗಳಿಗೆ ತಮಿಳುನಾಡಿನಲ್ಲಿ ಸ್ಥಳವಿಲ್ಲ ಎಂಬುದನ್ನು ಈ ಚುನಾವಣೆಯಲ್ಲಿ ತೋರಿಸಬೇಕು' ಎಂದು ಹೇಳಿದರು.

ಎರಡೂ ಕಡೆ ಗೆಲ್ಲುತ್ತೇವೆ: ಡಿಕೆಶಿ

ಬೆಂಗಳೂರು: 'ಕಳೆದ ಚುನಾವಣೆಯಲ್ಲಿ ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬಂದ ಮತಕ್ಕಿಂತ ಈ ಬಾರಿಯ ಉಪ ಚುನಾವಣೆಯಲ್ಲಿ ಹೆಚ್ಚು ಮತ ಬೀಳಲಿದೆ. ನಮ್ಮ ಅಭ್ಯರ್ಥಿಗಳು ಗೆಲ್ಲಲಿದ್ದಾರೆ' ಎಂದು ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಪ್ರಚಾರ ಮಾಡಿದ್ದೇನೆ. ನಮ್ಮ ಕಾರ್ಯಕರ್ತರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಪ್ರತಿ ಮನೆ ಮನೆಗೆ ಹೋಗಿ ಗ್ಯಾರಂಟಿ ಯೋಜನೆ ಬಗ್ಗೆ ಮನವರಿಕೆ ಮಾಡುತ್ತಿದ್ದಾರೆ. ಗ್ಯಾರಂಟಿ ಫಲಾನುಭವಿಗಳಲ್ಲಿ ಕಳೆದ ಬಾರಿ ಬಿಜೆಪಿಗೆ ಮತ ಹಾಕಿರುವವರೂ ಕೂಡ ಈ ಬಾರಿ ಕಾಂಗ್ರೆಸ್ ಗೆ ಮತ ಹಾಕುವುದಾಗಿ ತಿಳಿಸಿದ್ದಾರೆ. ಬೆಲೆ ಏರಿಕೆ ಆಗುತ್ತಿರುವ ಪರಿಸ್ಥಿತಿಯಲ್ಲಿ ಗ್ಯಾರಂಟಿ ಯೋಜನೆ ಎಷ್ಟು ನೆರವಾಗುತ್ತಿವೆ ಎಂದು ಸ್ಮರಿಸುತ್ತಿದ್ದಾರೆ. ಇವುಗಳನ್ನು ಉಳಿಸಿಕೊಳ್ಳಲು ಜನ ತೀರ್ಮಾನಿಸಿದ್ದಾರೆ' ಎಂದರು.

ಕೇರಳ ಚುನಾವಣಾ ಪ್ರಚಾರಕ್ಕೆ ತೆರಳುತ್ತಿರುವ ಬಗ್ಗೆ ಕೇಳಿದಾಗ, 'ಎರಡು ದಿನ ಪ್ರವಾಸ ಮಾಡಬೇಕಾಗಿದ್ದು, ಅಲ್ಲಿ ಪ್ರವಾಸ ಮಾಡಿ ಬಂದ ಬಳಿಕ ದಾವಣಗೆರೆ ಅಥವಾ ಬಾಗಲಕೋಟೆಗೆ ಮತ್ತೆ ತೆರಳುತ್ತೇನೆ' ಎಂದರು.

ಮುಂದಿನ ಸಿ.ಎಂ ಎಂದು ಸುಳ್ಳು ಪ್ರಚಾರ: ಮಾಜಿ ಶಾಸಕ ರಾಜುಗೌಡ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ಸಿದ್ದರಾಮಯ್ಯ ನಂತರ ನೀವೇ ಮುಂದಿನ ಮುಖ್ಯಮಂತ್ರಿ ಎಂದು ಸಿದ್ದರಾಮಯ್ಯ ಅವರಿಂದ ಹೇಳಿಸಿ. ಅದು ಬಿಟ್ಟು ಸತೀಶ ಜಾರಕಿಹೊಳಿ ಮುಂದಿನ ಮುಖ್ಯಮಂತ್ರಿಯಾಗುತ್ತಾರೆ ಮತ ನೀಡಿ ಎಂದು ಯಾಕೆ ಸುಳ್ಳು ಹೇಳಿಸುತ್ತಿದ್ದೀರಿ' ಎಂದು ಮಾಜಿ ಶಾಸಕ ರಾಜುಗೌಡ ಪ್ರಶ್ನಿಸಿದರು.



ರಾಜುಗೌಡ

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಚಿವ ಸತೀಶ ಜಾರಕಿಹೊಳಿ ಮುಂದಿನ ಮುಖ್ಯಮಂತ್ರಿ. ಕಾಂಗ್ರೆಸ್ಸಿಗೆ ಮತ ಹಾಕಿ ಎಂದು ಅವರ ಬೆಂಬಲಿಗರು ಕೇಳುತ್ತಿದ್ದಾರೆ' ಎಂದು ಆರೋಪಿಸಿದರು.

'ಸಿದ್ದರಾಮಯ್ಯ ನೀವೇ ಮುಖ್ಯಮಂತ್ರಿ ಎಂದು ಹೇಳಿದರೆ ನಾವೂ ಖುಷಿ ಪಡುತ್ತೇವೆ. ನಮ್ಮನ್ನು ಪಕ್ಷದಿಂದ ಹೊರ ಹಾಕಿದರೂ ಚಿಂತೆಯಿಲ್ಲ. ನಿಮಗೆ ಮತ ಹಾಕಿ ಎಂದು ಹೇಳುತ್ತೇವೆ' ಎಂದರು.

'ಒಳಮೀಸಲಾತಿ ಪ್ರಮಾಣ ತಗ್ಗಿಸಿದಾಗ ಜಾರಕಿಹೊಳಿ ಏಕೆ ಮಾತನಾಡಲಿಲ್ಲ. ರಾಜಣ್ಣ ಅವರನ್ನು ಸಂಪುಟದಿಂದ ಬಿಟ್ಟಾಗ, ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಹಗರಣ ಆದಾಗ ಏಕೆ ಮಾತನಾಡಲಿಲ್ಲ' ಎಂದರು.

'ಬಿಜೆಪಿ ಸರ್ಕಾರ ಹೆಚ್ಚಿಸಿದ್ದ ಮೀಸಲಾತಿಯನ್ನು ಉಳಿಸಿಕೊಳ್ಳದ ಕಾಂಗ್ರೆಸ್ಸಿಗರಿಗೆ ಪಾಠ ಕಲಿಸಬೇಕು' ಎಂದರು.

ಸೌಜನ್ಯಕ್ಕೂ ಪ್ರಚಾರಕ್ಕೆ ಕರೆದಿಲ್ಲ: ಜಬ್ಬಾರ್



ಜಬ್ಬಾರ್

ದಾವಣಗೆರೆ: 'ದಾವಣಗೆರೆ ದಕ್ಷಿಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್, ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಸಂಸದೆ ಪ್ರಭಾ ಮಲ್ಲಿಕಾರ್ಜುನ ಅವರು ಸೌಜನ್ಯಕ್ಕೂ ನನ್ನನ್ನು ಪ್ರಚಾರಕ್ಕೆ ಕರೆದಿಲ್ಲ' ಎಂದು ವಿಧಾನ ಪರಿಷತ್ ಸದಸ್ಯ, ಕಾಂಗ್ರೆಸ್‌ನ ಅಬ್ದುಲ್ ಜಬ್ಬಾರ್ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಆದರೂ, ಪ್ರಚಾರ ಮಾಡುತ್ತಿದ್ದೇನೆ. ಆರೋಗ್ಯ ಸರಿ ಇಲ್ಲದ್ದರಿಂದ ಬಹಿರಂಗ ಪ್ರಚಾರಕ್ಕೆ ಹೋಗುತ್ತಿಲ್ಲ. ಮತದಾರರ ವಿಶ್ವಾಸ ಗಳಿಸುವ ಪ್ರಯತ್ನ ಮಾಡುತ್ತಿದ್ದೇನೆ. ಕೆಲವರು ನನ್ನ ಅಪಪ್ರಚಾರ ಮಾಡುತ್ತಿದ್ದಾರೆ. ಹೈಕಮಾಂಡ್ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ' ಎಂದು ಶನಿವಾರ ಬೇಸರ ವ್ಯಕ್ತಪಡಿಸಿದರು.

'ಕೆಲಸವಿಲ್ಲದ ಸಚಿವ' ಆರೋಪಕ್ಕೆ ಕೇಂದ್ರ ಸಚಿವ ವಿ.ಸೋಮಣ್ಣ ತಿರುಗೇಟು

'ಸಿದ್ದರಾಮಯ್ಯ ಅವರಷ್ಟು ಸೋಮಾರಿ ನಾನಲ್ಲ'

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಷ್ಟು ಪ್ರವೀಣ, ಸೋಮಾರಿ ನಾನಲ್ಲ. ತಕ್ಕಮಟ್ಟಿಗೆ ಬುದ್ಧಿ ಇದ್ದು, ಕೆಲಸ ಮಾಡಿದ್ದೇನೆ. ಅನುಮಾನವಿದ್ದರೆ ಒಂದೆರಡು ಗಂಟೆ ದೆಹಲಿಯ ನನ್ನ ಕಚೇರಿಗೆ ಭೇಟಿ ನೀಡಲಿ' ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿರುಗೇಟು ನೀಡಿದರು.

'ಕೆಲಸವಿಲ್ಲದ ಸಚಿವ' ಎಂಬ ಮುಖ್ಯಮಂತ್ರಿ ಆರೋಪಕ್ಕೆ ಶನಿವಾರ ಪ್ರತಿಕ್ರಿಯಿಸಿದ ಅವರು, , ರಾಜ್ಯಕ್ಕೆ ತಂದಿರುವ ಅನುದಾನ, ಮಾಡಿದ ಕೆಲಸಗಳ ಬಗ್ಗೆ ವಿವರಣೆ ನೀಡಿದರು. 'ಕುಕ್ಕೆಸುಬ್ರಹ್ಮಣ್ಯ ಸಮೀಪದ ರೈಲ್ವೆ ಹಳಿಯ ಸುರಂಗವನ್ನಾದರೂ ಒಮ್ಮೆ ವೀಕ್ಷಿಸಿ' ಎಂದು ಸವಾಲು ಹಾಕಿದರು.

'ಸಿದ್ದರಾಮಯ್ಯ ಹಾಗೂ ನಾನು ಒಂದೇ ಗರಡಿಯಲ್ಲಿ ಬೆಳೆದವರು. ಒಟ್ಟಿಗೆ ಸಚಿವರಾಗಿ ಕೆಲಸ ಮಾಡಿದ್ದೇವೆ. ಅವರ ಇತ್ತೀಚಿನ ನಡವಳಿಕೆಗಳು ಬೇಸರ ತರಿಸುತ್ತಿವೆ. ದೇಶದಲ್ಲಿ ಆಗಿರುವ ತಾಂತ್ರಿಕ ಬದಲಾವಣೆಗಳು ಅವರಿಗೆ ಅರ್ಥವಾಗಿಲ್ಲ. ಈಗ ಅವರು ಕೇವಲ ನಿದ್ದೆ ಮಾಡುತ್ತಿದ್ದಾರೆ' ಎಂದು ವ್ಯಂಗ್ಯವಾಡಿದರು.

'ರೈಲ್ವೆ ಸಚಿವನಾದ ಬಳಿಕ ದಕ್ಷಿಣ ಭಾರತದಲ್ಲಿ 18 ಹೊಸ ರೈಲು ಸಂಚಾರ ಆರಂಭಿಸಲಾಗಿದೆ. 62 ನಿಲ್ದಾಣಗಳಲ್ಲಿ ರೈಲು ನಿಲುಗಡೆಗೆ ವ್ಯವಸ್ಥೆ ಮಾಡಿದ್ದೇನೆ. 24 ರೈಲುಗಳ ಸಂಚಾರ ಮತ್ತೊಂದು ಸ್ಥಳಕ್ಕೆ ವಿಸ್ತರಣೆಯಾಗಿವೆ. ಭದ್ರಾವತಿ–ಚಿಕ್ಕಜಾಜೂರು ರೈಲ್ವೆ ಮಾರ್ಗಕ್ಕೆ ಸಮೀಕ್ಷೆ ನಡೆಸಿ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲಾಗುತ್ತಿದೆ. ಚಿಕ್ಕಜಾಜೂರು–ಬಳ್ಳಾರಿ ಜೋಡಿ ರೈಲು ಮಾರ್ಗ ನಿರ್ಮಾಣ ಶೀಘ್ರ ಆರಂಭವಾಗಲಿದೆ' ಎಂದು ಮಾಹಿತಿ ನೀಡಿದರು.

'ನನೆಗುದಿಗೆ ಬಿದ್ದಿದ್ದ 11 ರೈಲ್ವೆ ಯೋಜನೆಗಳಿಗೆ ₹ 58,000 ಕೋಟಿ ಅನುದಾನ ನೀಡಲಾಗಿದೆ. ರಾಜ್ಯದ 61 ರೈಲು ನಿಲ್ದಾಣಗಳನ್ನು ₹1,900 ಕೋಟಿ ವೆಚ್ಚದಲ್ಲಿ ಮೇಲ್ದರ್ಜೆಗೆ ಏರಿಸಲಾಗಿದೆ. 11 ವರ್ಷದಲ್ಲಿ 1,657 ಕಿ.ಮೀ ರೈಲು ಮಾರ್ಗ ನಿರ್ಮಿಸಲಾಗಿದೆ. ರೈಲು ಮಾರ್ಗಗಳ ವಿದ್ಯುದೀಕರಣ ಶೇ 97 ರಷ್ಟು ಪೂರ್ಣಗೊಂಡಿದೆ. ಇನ್ನೊಬ್ಬರ ಬಗ್ಗೆ ಟೀಕೆ ಮಾಡುವಾಗ ಹಗುರವಾಗಿ ಮಾತನಾಡಬೇಡಿ' ಎಂದು ಎಚ್ಚರಿಸಿದರು.



ವೀರಶೈವ ಲಿಂಗಾಯತ ಸಮಾಜದ ಪ್ರಮುಖರ ಸಭೆಯಲ್ಲಿ ಕೇಂದ್ರ ಸಚಿವ ವಿ ಸೋಮಣ್ಣ ಮಾತನಾಡಿದರು

'ವರ್ಷದಲ್ಲಿ ಚಿತ್ರದುರ್ಗಕ್ಕೆ ನೇರ ರೈಲು'

'ತುಮಕೂರು–ಚಿತ್ರದುರ್ಗ–ದಾವಣಗೆರೆ ನೇರ ರೈಲು ಮಾರ್ಗದ ಕಾಮಗಾರಿ ನಡೆದಿದೆ. 2027ರ ಮಾರ್ಚ್ ವೇಳೆಗೆ ದಾವಣಗೆರೆ– ಚಿತ್ರದುರ್ಗ ನಡುವೆ ರೈಲು ಸಂಚರಿಸಲಿದೆ' ಎಂದು ಸಚಿವ ವಿ.ಸೋಮಣ್ಣ ತಿಳಿಸಿದರು.

'ದಾವಣಗೆರೆ ಜಿಲ್ಲೆ ವ್ಯಾಪ್ತಿಯಲ್ಲಿ ಹಳಿ ಅಳವಡಿಕೆ ಕಾಮಗಾರಿ ಅಂತಿಮ ಹಂತಕ್ಕೆ ಬಂದಿದೆ. ಚಿತ್ರದುರ್ಗ ತಾಲ್ಲೂಕಿನ ಕೆಲವೆಡೆ ಕೊಂಚ ವಿಳಂಬವಾಗುತ್ತಿದೆ. ಹಂತಹಂತವಾಗಿ ಕಾಮಗಾರಿ ಮುಗಿಸಿ ತುಮಕೂರಿನವರೆಗೆ ರೈಲು ಸಂಚಾರಕ್ಕೆ ಮುಕ್ತಗೊಳಿಸಲಾಗುವುದು' ಎಂದರು.

ಸಮಸ್ಯೆ ತಪ್ಪಿಸಿದ ಮೋದಿ -ಎಚ್‌ಡಿಕೆ

ದಾವಣಗೆರೆ: 'ಮಧ್ಯಪ್ರಾಚ್ಯದಲ್ಲಿನ ಸ್ಥಿತಿಯಿಂದ ಉದ್ಭವಿಸಿರುವ ಎಲ್‌ಪಿಜಿ ಕೊರತೆಯಿಂದ ಆಟೊ ಚಾಲಕರು, ಮಾಲೀಕರಿಗೆ ಸಮಸ್ಯೆ ಆಗಿರುವುದು ನಿಜ. ಆದರೆ, ಪ್ರಧಾನಿ ಮೋದಿ ಬೇರೆ ದೇಶಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದು, ದೊಡ್ಡಮಟ್ಟದ ಸಮಸ್ಯೆ ತಪ್ಪಿಸಿದ್ದಾರೆ' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಶನಿವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಯುದ್ಧದ ವಿಚಾರಕ್ಕೆ ಸಂಬಂಧಿಸಿದಂತೆ ಎನ್‌ಡಿಎ ನೇತೃತ್ವದ ಸರ್ಕಾರದ ವಿರುದ್ಧ ವಾಗ್ದಾಳಿ ಮಾಡುತ್ತಿರುವ ಕಾಂಗ್ರೆಸ್‌ನವರು ತಾವೇ ಅಧಿಕಾರದಲ್ಲಿ ಇದ್ದಿದ್ದರೆ ಏನು ಮಾಡುತ್ತಿದ್ದರು ಎಂಬುದನ್ನು ಹೇಳಲಿ' ಎಂದರು.

'ಶಾಸಕರಿಗೆ ಐಪಿಎಲ್ ಪಂದ್ಯಗಳ ಟಿಕೆಟ್‌ಗೆ ಬೇಡಿಕೆ ಕುರಿತು ಸರ್ಕಾರ ನಗೆಪಾಟಲಿಗೀಡಾಗಿದೆ. ಐಪಿಎಲ್ ಟಿಕೆಟ್ ಬಗ್ಗೆಯೇ ಸದನದಲ್ಲಿ ಚರ್ಚೆ ಮಾಡಿದ್ದಾರೆ. ಕಿಂಚಿತ್ತಾದರೂ ಮರ್ಯಾದೆ ಇದೆಯಾ?' ಎಂದು ಪ್ರಶ್ನಿಸಿದರು.

‘324 ಗ್ರಾಮಗಳಲ್ಲಿ ನೀರಿನ ಸಮಸ್ಯೆ’

76 ಗ್ರಾಮಗಳಿಗೆ ಟ್ಯಾಂಕರ್ ಮೂಲಕ ಪೂರೈಕೆ

• ತಾಲ್ಲೂಕುಗಳಲ್ಲಿ ಕ್ಷಿಪ್ರ ಕಾರ್ಯಪಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 20 ಜಿಲ್ಲೆಗಳ 60 ತಾಲ್ಲೂಕುಗಳಲ್ಲಿರುವ 324 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದೆ. ಈ ಪೈಕಿ, 76 ಗ್ರಾಮಗಳಿಗೆ ಟ್ಯಾಂಕರ್‌ಗಳ ಮೂಲಕ ಹಾಗೂ 248 ಗ್ರಾಮಗಳಿಗೆ 280 ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆಗೆ ಪಡೆದು ಕುಡಿಯುವ ನೀರು ಪೂರೈಸಲಾಗುತ್ತಿದೆ.

ಈ ಮಾಹಿತಿ ನೀಡಿರುವ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ, ‘ಗ್ರಾಮೀಣ ಪ್ರದೇಶಗಳ ಜನರಿಗೆ ಬೇಸಿಗೆಯಲ್ಲಿ ಕುಡಿಯುವ ನೀರು ಪೂರೈಸುವ ಉದ್ದೇಶದಿಂದ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಪ್ರತಿ 2ನೇ ಹಾಗೂ 4ನೇ ಸೋಮವಾರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಸಭೆ ನಡೆಸುತ್ತಿದ್ದಾರೆ’ ಎಂದು ಹೇಳಿದ್ದಾರೆ.

‘ಕುಡಿಯುವ ನೀರಿನ ಅಭಾವ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿರ್ವಹಿಸಲು ಎಲ್ಲ ಜಿಲ್ಲಾ ಪಂಚಾಯಿತಿಗಳಲ್ಲಿ ದಿನದ 24 ಗಂಟೆಯೂ ಕಾರ್ಯನಿರ್ವಹಿಸುವ ನಿಯಂತ್ರಣ ಕೊಠಡಿ ತೆರೆಯಲಾಗಿದೆ. ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ ಕ್ಷಿಪ್ರ ಕಾರ್ಯಪಡೆ ರಚಿಸಿ ಪರಿಸ್ಥಿತಿಯನ್ನು ನಿರ್ವಹಿಸಲಾಗುತ್ತಿದೆ’ ಎಂದಿದ್ದಾರೆ.

‘ತುರ್ತು ಕಾಮಗಾರಿಗಳನ್ನು ನಿರ್ವಹಿಸಲು ಜಿಲ್ಲೆಗಳಿಗೆ ಈಗಾಗಲೇ ₹60 ಕೋಟಿ ಹಂಚಿಕೆ ಮಾಡಲಾಗಿದೆ. ಅಲ್ಲದೆ, ಕಾಮಗಾರಿಗಳ ಬಾಕಿ ಬಿಲ್ ಪಾವತಿಗೆ ಹೆಚ್ಚುವರಿಯಾಗಿ ₹48 ಕೋಟಿ, ಶುದ್ಧ ಕುಡಿಯುವ ನೀರಿನ ಘಟಕಗಳ ದುರಸ್ತಿಗೆ ₹14.50 ಕೋಟಿ ಹಂಚಿಕೆ ಮಾಡಲಾಗಿದೆ’ ಎಂದು ಹೇಳಿದ್ದಾರೆ.

‘ಬೇಸಿಗೆ ಅವಧಿಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಸೇರಿದಂತೆ ತಾಲ್ಲೂಕು ಹಾಗೂ ಗ್ರಾಮ ಪಂಚಾಯತಿ ಮಟ್ಟದಲ್ಲಿ ಅಧಿಕಾರಿಗಳು ನಿರಂತರವಾಗಿ ನಿಗಾ ಇಟ್ಟಿದ್ದಾರೆ. ಪರಿಶೀಲನಾ ಸಭೆಗಳನ್ನೂ ನಡೆಸುತ್ತಿದ್ದಾರೆ’ ಎಂದು ತಿಳಿಸಿದ್ದಾರೆ.

‘ಗ್ರಾಮಗಳು ಹಾಗೂ ಜನವಸತಿ ಪ್ರದೇಶಗಳಲ್ಲಿನ ಎಲ್ಲ ಕುಡಿಯುವ ನೀರಿನ ಮೂಲಗಳ ಗುಣಮಟ್ಟದ ಪರೀಕ್ಷೆಯನ್ನು ಕ್ಷೇತ್ರ ಪ್ರಯೋಗ ಉಪಕರಣಗಳ ಮೂಲಕ ನಡೆಸಲಾಗುತ್ತಿದೆ. ನೀರಿನ ಮಾದರಿಯು ಅನುಮತಿಸಬಹುದಾದ ಮಿತಿಗಿಂತ ಹೆಚ್ಚಾಗಿರುವುದು ಕಂಡುಬಂದ ಪ್ರಕರಣಗಳಲ್ಲಿ ನೀರಿನ ಮಾದರಿಗಳನ್ನು ಹತ್ತಿರದ ಪ್ರಯೋಗಾಲಯಗಳಲ್ಲಿ ಮರುಪರೀಕ್ಷೆಗೆ ಒಳಪಡಿಸಿ ಗುಣಮಟ್ಟ ಖಚಿತಪಡಿಸಿಕೊಂಡು ಕಲುಷಿತ ನೀರಿಗೆ ಪರ್ಯಾಯವಾಗಿ ಇತರೆ ಮೂಲಗಳಿಂದ ಕುಡಿಯುವ ನೀರು ಪೂರೈಸಲು ಕ್ರಮ ಕೈಗೊಳ್ಳಲಾಗುತ್ತಿದೆ’ ಎಂದೂ ವಿವರಿಸಿದ್ದಾರೆ.



ಗ್ರಾಮೀಣ ಪ್ರದೇಶದ ಜನರಿಗೆ ಬೇಸಿಗೆಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಈಗಾಗಲೇ ತುರ್ತು ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ
ಪ್ರಿಯಾಂಕ್ ಖರ್ಗೆ
ಗ್ರಾಮೀಣಾಭಿವೃದ್ಧಿ ಸಚಿವ

ರಾಜ್ಯದ ಚಿತ್ರಣ	
ಜಿಲ್ಲೆ	31
ಗ್ರಾಮ	26,676
ಜನವಸತಿ ಪ್ರದೇಶ	57,883
ಮನೆಗಳು	1,01,30,798
ಸದ್ಯ ಕುಡಿಯುವ ನೀರಿನ ಸಮಸ್ಯೆ	
ಜಿಲ್ಲೆ	20
ತಾಲ್ಲೂಕು	60
ಗ್ರಾಮ	324

ಲಂಚ: ಕಂದಾಯ ನಿರೀಕ್ಷಕ ಸೆರೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ತಾಲ್ಲೂಕಿನ ನಾಗನೂರು ಗ್ರಾಮದಲ್ಲಿ ಜಮೀನು ಹದ್ದುಬಸ್ತಿಗೆ ವೈದ್ಯರೊಬ್ಬರಿಂದ ₹50,000 ಲಂಚ ಪಡೆಯುತ್ತಿದ್ದ ಕಂದಾಯ ನಿರೀಕ್ಷಕ ಚಂದ್ರಪ್ಪ ಶನಿವಾರ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಲೋಕಾಯುಕ್ತ ಪೊಲೀಸರು ಲಂಚದ ರೂಪದ ಹಣವನ್ನು ಜಪ್ತಿ ಮಾಡಿದ್ದಾರೆ. ವೈದ್ಯ ಡಾ.ಉಮೇಶ್ ಹಿರೇಮಠ ಅವರು ನಾಗನೂರು ಗ್ರಾಮದ ಸರ್ವೆ ನಂಬರ್ 158ರಲ್ಲಿ ಜಮೀನು ಹೊಂದಿದ್ದರು. ದಾವಣಗೆರೆ- ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದಿಂದ (ಧೂಡಾ) ಏಕನಿವೇಶನಕ್ಕೆ ಅನುಮೋದನೆ ಪಡೆದ ಬಳಿಕ ಪಕ್ಕದ ಜಮೀನಿನವರು ತಕರಾರು ವ್ಯಕ್ತಪಡಿಸಿದ್ದರು. ಹೀಗಾಗಿ, ಉಮೇಶ್ ಹದ್ದುಬಸ್ತಿಗೆ ತಾಲ್ಲೂಕು ಕಚೇರಿಗೆ ಅರ್ಜಿ ಸಲ್ಲಿಸಿದ್ದರು.



ಚಂದ್ರಪ್ಪ

ಮಾರ್ಚ್ 18ರಂದು ವೈದ್ಯರ ಖಾಸಗಿ ಆಸ್ಪತ್ರೆಗೆ ತೆರಳಿದ ಕಂದಾಯ ನಿರೀಕ್ಷಕ, ಹದ್ದುಬಸ್ತು ಮಾಡಿ ‘ಧೂಡಾ’ಗೆ ವರದಿ ನೀಡಲು ₹50,000 ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಡಾ.ಉಮೇಶ್ ಈ ಬಗ್ಗೆ ದೂರು ಸಲ್ಲಿಸಿದ್ದರು. ತಾಲ್ಲೂಕು ಕಚೇರಿಯಲ್ಲಿ ಡಿವೈಎಸ್‌ಪಿ ಕಲಾವತಿ ನೇತೃತ್ವದ ತಂಡ ದಾಳಿ ನಡೆಸಿತು.

‘ಅಸಂಘಟಿತ ಬ್ರಾಹ್ಮಣರಿಗೆ ಸೌಲಭ್ಯ ವಿಸ್ತರಿಸಿ’

ಮಂಗಳೂರು: ಬ್ರಾಹ್ಮಣ ಸಮುದಾಯದ ಆರ್ಥಿಕವಾಗಿ ಹಿಂದುಳಿದವರಿಗೆ ಜಾರಿಗೆ ತಂದಿರುವ ವಿವಿಧ ಯೋಜನೆಗಳ ಪೈಕಿ ಆರೋಗ್ಯ ಮತ್ತು ವಿದ್ಯಾರ್ಥಿ ವೇತನವನ್ನು ಅಸಂಘಟಿತ ವಲಯದ ಸಮುದಾಯದಲ್ಲಿನ ಕಾರ್ಮಿಕರಿಗೂ ವಿಸ್ತರಿಸಬೇಕು ಎಂದು ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಸರ್ಕಾರಕ್ಕೆ ಕೋರಿದೆ.

ಪತ್ರಿಕಾಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಮಂಡಳಿಯ ಅಧ್ಯಕ್ಷ ಪಿ.ಎಂ.ಮಹಾಂತೇಶ್, ‘ಕಳೆದ ಸೆಪ್ಟೆಂಬರ್‌ನಲ್ಲಿ ಯೋಜನೆ ಜಾರಿಗೆ ಬಂದಿದ್ದು, ಮಾಹಿತಿಯ ಕೊರತೆಯಿಂದ ಹಲವರಿಗೆ ಪ್ರಯೋಜನ ಪಡೆದುಕೊಳ್ಳಲು ಆಗುತ್ತಿಲ್ಲ’ ಎಂದರು.

‘ಸ್ವ ಉದ್ಯೋಗ ಉದ್ಯೋಗ ಯೋಜನೆಯಲ್ಲಿ 1,333 ಅರ್ಜಿ ಬಂದಿವೆ. 800 ಮಂದಿಗೆ ತಲಾ ₹2 ಲಕ್ಷ ಸಾಲ ವಿತರಿಸಲಾಗಿದೆ’ ಎಂದು ಇದೇ ವೇಳೆ ಮಾಹಿತಿ ನೀಡಿದರು.

ಬದುಕು ನುಂಗಿದ ಕರಿದೂಳು



ಕೊಪ್ಪಳ ತಾಲ್ಲೂಕಿನ ಹಿರೇಬಗನಾಳ ಗ್ರಾಮದ ಸಮೀಪದಲ್ಲಿ ಒಂದೆಡೆ ಮಹಿಳೆಯರು ಕೃಷಿ ಕೆಲಸದಲ್ಲಿ ತೊಡಗಿದ್ದರೆ ಅವರ ಹಿಂದಿನ ಕಾರ್ಖಾನೆಗಳಿಂದ ಹೊರಬರುತ್ತಿದ್ದ ಕಪ್ಪು ದೂಳು ಪ್ರಜಾವಾಣಿ ಚಿತ್ರಗಳು: ಭರತ್ ಕಂದಕೂರ

ಒಂದನೇ ಪುಟದಿಂದ...

ಬದುಕಿನ ಇಳಿಸಂಜೆಯಲ್ಲಿರುವ ಇದೇ ಗ್ರಾಮದ ಹಂಪಮ್ಮ ಎನ್ನುವ ಅಜ್ಜಿಗೆ ಮೂರು ಜನ ಮಕ್ಕಳು. ಹತ್ತು ವರ್ಷದ ಮೊಮ್ಮಗನಿಗೆ ಹೃದಯದಲ್ಲಿ ರಂಧ್ರವಿದೆ. ಮಗನಿಗೆ ಸದಾ ಮೂಗಿನಲ್ಲಿ ರಕ್ತ ಸೋರುತ್ತಿದ್ದು ಮನೆಗೆ ಆಸರೆಯಾಗಿರುವ ಮಗ ಮೇಲಿಂದ ಮೇಲೆ ಆಸ್ಪತ್ರೆಗೆ ಅಲೆದಾಡುವಂತಾಗಿದೆ. ದೂಳಿನ ಕಾರಣಕ್ಕಾಗಿ ಸೊಸೆ ಗಂಡನ ಮನೆಗೆ ಬರಲು ಒಪ್ಪುತ್ತಿಲ್ಲ.

‘ನಿಮ್ಮೂರಿನಲ್ಲಿ ದೂಳು ಹೆಚ್ಚು, ಅಲ್ಲಿ ಬದುಕುವುದಾದರೂ ಹೇಗೆ ಎಂದು ಸೊಸೆ ಪ್ರಶ್ನಿಸುತ್ತಾಳೆ. ಬೇರೆ ಊರಿನಲ್ಲಿ ಮನೆ ಮಾಡಿ, ನಿಮ್ಮ ಜೊತೆ ಬರುತ್ತೇನೆ ಎನ್ನುತ್ತಾಳೆ. ಮಗ, ಮೊಮ್ಮಗನಿಗೆ ಕಾಡಿರುವ ಅನಾರೋಗ್ಯಕ್ಕೆ ವೈದ್ಯರ ಬಳಿ ಚಿಕಿತ್ಸೆ ಕೊಡಿಸಿದರೆ ಆ ಊರು ಬಿಟ್ಟು ಬೇರೆ ಕಡೆ ಹೋಗಿ’ ಎನ್ನುತ್ತಾರೆ ಎಂದು ಹಂಪಮ್ಮ ಹೇಳಿದರು. ನಮಗಿರುವ ದೊಡ್ಡ ಆಸ್ತಿಯೆಂದರೆ ಮನೆಯಷ್ಟೇ. ಅದನ್ನೇ ಬಿಟ್ಟು ಹೋದರೆ ರಸ್ತೆಯಲ್ಲಿ ಬದುಕಬೇಕಾಗುತ್ತದೆ. ಅದಕ್ಕಾಗಿ ಇರುವಷ್ಟು ದಿನ ದೂಳಿನ ನಡುವೆ ಬದುಕುವುದು ಅನಿವಾರ್ಯವಾಗಿದೆ’ ಎಂದು ಅವರು ಕಣ್ಣೀರು ಹಾಕಿದರು.

ವ್ಯಾಪಕ ಅನಾರೋಗ್ಯ ತಾಂಡವವಾಡುತ್ತಿರುವ ಹಿರೇಬಗನಾಳ ಗ್ರಾಮದಲ್ಲಿ ಇತ್ತೀಚೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಜನರ ಆರೋಗ್ಯ ತಪಾಸಣೆ ಮಾಡಲಾಗಿದೆ. ಗ್ರಾಮದಲ್ಲಿರುವ 2,300 ಜನಸಂಖ್ಯೆಯಲ್ಲಿ ಐದು ವರ್ಷದ ಒಳಗಿನ 208 ಮಕ್ಕಳಿದ್ದಾರೆ. ಒಟ್ಟು ಜನಸಂಖ್ಯೆಯಲ್ಲಿ ಉಸಿರಾಟ ಸಂಬಂಧಿ ಕಾಯಿಲೆಯಿಂದ 124, ಚರ್ಮರೋಗದಿಂದ 49, ಒಬ್ಬರಲ್ಲಿ ಗರ್ಭಕಂಠ, ಮತ್ತೊಬ್ಬರಲ್ಲಿ ಬಾಯಿ ಕ್ಯಾನ್ಸರ್, 25 ಜನರಲ್ಲಿ ಕ್ಷಯ ಪತ್ತೆಯಾಗಿದೆ. 42 ಮಂದಿಯಲ್ಲಿ ದೃಷ್ಟಿದೋಷವಿದೆ. ‘ಆರೋಗ್ಯ ಇಲಾಖೆ ಮಾಡಿದ ಪ್ರಾಥಮಿಕ ತಪಾಸಣೆಯಲ್ಲಿಯೇ ಇಷ್ಟೊಂದು ಜನರಲ್ಲಿ ಕಾಯಿಲೆ ಇರುವುದು ಗೊತ್ತಾಗಿದೆ. ಇನ್ನಷ್ಟು ವಿವರವಾಗಿ ಪರೀಕ್ಷೆ ಮಾಡಿದರೆ ಗ್ರಾಮದ ಮತ್ತಷ್ಟು ಜನರಲ್ಲಿ ಗಂಭೀರ ಕಾಯಿಲೆಗಳಿರುವುದು ಗೊತ್ತಾಗುತ್ತದೆ’ ಎಂದು ಕಾರ್ಖಾನೆಗಳ ವಿರುದ್ಧ ಹೋರಾಟ ಮಾಡುತ್ತಿರುವ ರೈತ ಮಹೇಶ ಹೇಳುತ್ತಾರೆ.

ಇದು ಹಿರೇಬಗನಾಳ ಗ್ರಾಮದ ಸಮಸ್ಯೆಯಷ್ಟೇ ಅಲ್ಲ. ಕೊಪ್ಪಳ ತಾಲ್ಲೂಕಿನ ಕಿಡದಾಳ, ಬಸಾಪುರ, ಗಿಣಿಗೇರಿ, ಅಲ್ಲಾನಗರ, ಕಾಸನಕಂಡಿ, ಚಿಕ್ಕಬಗನಾಳ, ಲಾಚನಕೇರಿ, ಕುಣಿಕೇರಿ, ಕುಣಿಕೇರಿ ತಾಂಡಾ, ಹಾಲವರ್ತಿ ಹೀಗೆ ಅನೇಕ ಗ್ರಾಮಗಳು ಮಾಲಿನ್ಯಕ್ಕೆ ನಲುಗಿವೆ. ಕೃಷಿ, ನೆಲ, ಜಲದ ಮೇಲಷ್ಟೇ ಅಲ್ಲದೆ ಕೌಟುಂಬಿಕ ಸಂಬಂಧಗಳನ್ನು, ಯುವಕರ ಮದುವೆಯ ಆಕಾಂಕ್ಷೆಯನ್ನು ಕಿತ್ತುಕೊಂಡಿವೆ.

ಕೊಪ್ಪಳ ತಾಲ್ಲೂಕಿನಲ್ಲಿ ವ್ಯಾಪಿಸಿರುವ 202ಕ್ಕೂ ಹೆಚ್ಚು ಸಣ್ಣ, ಮಧ್ಯಮ ಮತ್ತು ಬೃಹತ್ ಕಾರ್ಖಾನೆಗಳು ತಂದೊಡ್ಡಿರುವ ಆವಾಂತರ. ಅದರಲ್ಲಿಯೂ 20ಕ್ಕೂ ಹೆಚ್ಚು ಇರುವ ಐರನ್ ಮತ್ತು ಸ್ಪಾಂಜ್ ತಯಾರಿಕೆಯ ಕಾರ್ಖಾನೆಗಳ ಮಾಲಿನ್ಯದಿಂದ 22ಕ್ಕೂ ಹೆಚ್ಚು ಗ್ರಾಮಗಳಲ್ಲಿ ಜನರ ಆರೋಗ್ಯ ಹದಗೆಟ್ಟಿದೆ. ಕೃಷಿ ಹಾಗೂ ಜಲಮಾಲಿನ್ಯವಾಗಿದೆ. ಕಾರ್ಖಾನೆಗಳು ಬಳಕೆ ಮಾಡಿದ ನೀರನ್ನು ಸಂಸ್ಕರಿಸದೆ ನೇರವಾಗಿ ತುಂಗಭದ್ರಾ ನದಿಗೆ ಹರಿಸುತ್ತವೆ ಎನ್ನುವುದು ಗುಟ್ಟಾಗಿ ಉಳಿದಿಲ್ಲ.

‘ವಯಸ್ಸಿಗೆ ಬಂದ ಗಂಡು ಮಕ್ಕಳ ಮದುವೆ ಮಾಡಲು ಕನ್ಯೆ ಹುಡುಕಲು ಬೇರೆ ಊರಿಗೆ ಹೋದರೆ ದೂಳಿರುವ ನಿಮ್ಮೂರಿನ ಜೊತೆ ಹೇಗೆ ಬೀಗತನ ಮಾಡಬೇಕೆಂದು ಪ್ರಶ್ನಿಸುತ್ತಾರೆ’ ಎಂದು ಹಿರೇಬಗನಾಳ ಗ್ರಾಮದ ಶಂಕ್ರಮ್ಮ ನೊಂದುಕೊಂಡರು. ಇದೇ ಗ್ರಾಮದಲ್ಲಿ ಕಾರ್ಖಾನೆಯೊಂದರ ಸಮೀಪದಲ್ಲಿಯೇ ಸರ್ಕಾರಿ ಶಾಲೆಯಿದ್ದು ಮಕ್ಕಳು ತರಗತಿಗೆ ಬಂದವರೇ ಕಪ್ಪುಕಣಗಳಿಂದ ಕೊಳಕಾಗುವ ತಾವು ಕೂರಬೇಕಾದ ಜಾಗ, ಟೇಬಲ್ ನಿತ್ಯ ಸ್ವಚ್ಛಗೊಳಿಸಿಕೊಳ್ಳಬೇಕಿದೆ.

ಹಗಲಿನಲ್ಲಿ ಅಲ್ಪ ಪ್ರಮಾಣದಲ್ಲಿ ಕಪ್ಪುಕಣಗಳನ್ನು ಹೊರಬಿಡುವ ಸ್ಪಾಂಜ್ ಮತ್ತು ಐರನ್ ತಯಾರಿಕೆಯ ಕಾರ್ಖಾನೆಗಳು ಸೂರ್ಯಾಸ್ತವಾಗುತ್ತಿದ್ದಂತೆಯೇ ಯಥೇಚ್ಛವಾಗಿ ದೂಳು ಬಿಡಲು ಆರಂಭಿಸುತ್ತವೆ. ಹಗಲಿನಲ್ಲಿಯೇ ಅನೇಕ ಬಾರಿ ದೊಡ್ಡಪ್ರಮಾಣದಲ್ಲಿ ದೂಳು ಹೊರಬಿಟ್ಟರೆ, ಸುತ್ತಲಿನ ಗ್ರಾಮಸ್ಥರು ತಕರಾರು ತೆಗೆಯುತ್ತಾರೆ. ಆದ್ದರಿಂದ ಕತ್ತಲಾಗುತ್ತಿದ್ದಂತೆಯೇ ದೂಳಿನ ಪ್ರಮಾಣವೂ ಹೆಚ್ಚಾಗುತ್ತದೆ ಎಂದು ಗ್ರಾಮಸ್ಥರು ಆರೋಪಿಸುತ್ತಾರೆ. ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಸೂಚನೆಯಂತೆ ಬೆಂಗಳೂರು ಪ್ರಾದೇಶಿಕ ಕಚೇರಿ ಅಧಿಕಾರಿಗಳು 2024ರಲ್ಲಿ ಸ್ಥಳ ಪರಿಶೀಲಿಸಿ ನೀಡಿದ ವರದಿಯಲ್ಲಿಯೂ ಈ ಅಂಶದ ಉಲ್ಲೇಖವಿದೆ.

ರಾತ್ರಿ ಹೊತ್ತೇ ಯಾಕೆ ಮಾಲಿನ್ಯ ಹೆಚ್ಚು ಎಂದು ಕುಣಿಕೇರಿ, ಕುಣಿಕೇರಿ ತಾಂಡಾ ಹಾಗೂ ಅಲ್ಲಾನಗರ ಗ್ರಾಮಗಳ ಜನರನ್ನು ಪ್ರಶ್ನಿಸಿದರೆ ಬಹುತೇಕ ಕಾರ್ಖಾನೆಗಳು ತಮ್ಮಲ್ಲಿನ ಕಪ್ಪು ದೂಳು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಸ್ಥಾಯಿವಿದ್ಯುತ್ತಿನ ಅವಕ್ಷೇಪಕ (ಇಎಸ್‌ಪಿ, Electrostatic Precipitators) ಮೊರೆ ಹೋಗುತ್ತವೆ. ಕಬ್ಬಿಣ, ಉಕ್ಕು ಹಾಗೂ ಇತರೆ ಕಚ್ಚಾ ವಸ್ತುಗಳಿಂದ ಬರುವ ಕಪ್ಪು ದೂಳನ್ನು ಇಎಸ್‌ಪಿ ಸಾಧನ ತಡೆದು ಕಪ್ಪು ಕಚ್ಚಾವಸ್ತು ಸ್ಥಳದಲ್ಲಿಯೇ ಸಂಗ್ರಹವಾಗುವಂತೆ ಮಾಡುತ್ತದೆ. ಪರಿಸರಕ್ಕೆ ಹಾನಿ ಉಂಟು ಮಾಡುವ ದೂಳಿನ ಕಣಗಳನ್ನು ತನ್ನಲ್ಲಿಯೇ ಹಿಡಿದಿಟ್ಟುಕೊಂಡು ಬಳಿಕ ಟಿಪ್ಪರ್‌ಗಳ ಮೂಲಕ ಬೇರೆಡೆ ಸಾಗಿಸಲಾಗುತ್ತದೆ. ಈ ಯಂತ್ರ ಬಳಕೆ ಮಾಡಿದರೆ ವಿದ್ಯುತ್ ಶುಲ್ಕ ಹಾಗೂ ಯಂತ್ರದ ನಿರ್ವಹಣಾ ವೆಚ್ಚ ಎರಡೂ ಹೆಚ್ಚಾಗುತ್ತದೆ. ಆದ್ದರಿಂದ ಹಗಲು ಹೊತ್ತಿನಲ್ಲಿ ಯಂತ್ರವನ್ನು ಆನ್ ಮಾಡಿ, ರಾತ್ರಿ ಹೊತ್ತಿನಲ್ಲಿ ಆಫ್ ಮಾಡುತ್ತಾರೆ’ ಎಂದು ಗ್ರಾಮಸ್ಥರು ಆರೋಪಿಸುತ್ತಾರೆ.

ಕೃಷಿಗೂ ಕುತ್ತು

ಹಿರೇಬಗನಾಳ ಗ್ರಾಮದ ಯುವಕ ಗವಿಸಿದ್ದಪ್ಪ ಪುಟಗಿ ಅವರಿಗೆ ಐದು ವರ್ಷದ ಮಗಳಿದ್ದು ತಮ್ಮೂರಿನಲ್ಲಿ ಇದ್ದಷ್ಟು ದಿನ ಕೆಮ್ಮು, ಕಫ, ಉಸಿರಾಟದ ತೊಂದರೆ ಕಾಡಿದೆ. ವರ್ಷದಲ್ಲಿ ಮೂರ್ನಾಲ್ಕು ಬಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸುವುದು ಅವರಿಗೆ ತಪ್ಪಿಲ್ಲ. ಗ್ರಾಮದಲ್ಲಿರುವ ನಾಲ್ಕೂವರೆ ಎಕರೆ ಜಮೀನಿನ ಕೃಷಿ ಭೂಮಿ ಬಿಟ್ಟರೆ ಬದುಕಿಗೆ ಬೇರೆ ಆಸರೆಯಿಲ್ಲ. 72 ವರ್ಷದ ಅವರ ತಂದೆಗೆ ಶ್ವಾಸಕೋಶದ ಸೋಂಕು ತಗುಲಿ ಕ್ಷಯ ಕಾಡುತ್ತಿದೆ. ವಯಸ್ಸಾಗಿರುವ ಅಪ್ಪ, ಬಾಳಿಬದುಕಬೇಕಾದ ಮಗಳ ಭವಿಷ್ಯದ ಜೊತೆಗೆ ದೂಳಿನಲ್ಲಿಯೇ ಹೊಟ್ಟೆಹೊರೆಯಲು ಊರಿನಲ್ಲಿ ಕೃಷಿ ಮಾಡಬೇಕಾದ ಅನಿವಾರ್ಯತೆ ಗವಿಸಿದ್ದಪ್ಪ ಅವರದ್ದು. ಆದ್ದರಿಂದ ಆರೋಗ್ಯದ ದೃಷ್ಟಿಯಿಂದ ಮಗಳನ್ನು ಅಜ್ಜಿಯ ಊರು ಅಳವಂಡಿ ಗ್ರಾಮದಲ್ಲಿ ಇರಿಸಿ ಓದಿಸುತ್ತಿದ್ದಾರೆ. ಮಾಲಿನ್ಯದ ದುಷ್ಪರಿಣಾಮ ನೇರವಾಗಿ ಅವರ ಕುಟುಂಬಕ್ಕೆ ಆಗಿರುವುದರಿಂದ ನಿರಂತರವಾಗಿ ಕಾರ್ಖಾನೆಗಳ ವಿರುದ್ಧ ಧ್ವನಿ ಎತ್ತಿ ಹೋರಾಟಗಳನ್ನು ಮಾಡುತ್ತಲೇ ಇದ್ದಾರೆ.

ಕಾರ್ಖಾನೆಗಳ ಮಾಲಿನ್ಯ ಕೇವಲ ಜನರ ಬದುಕಷ್ಟೇ ಅಲ್ಲ, ಅಲ್ಲಲ್ಲಿ ತುಂಡು ಭೂಮಿ ಉಳಿಸಿಕೊಂಡ ರೈತರನ್ನೂ ಸಂಕಷ್ಟಕ್ಕೆ ಒಳಗಾಗುವಂತೆ ಮಾಡಿದೆ. ಫಲವತ್ತಾದ ಕೆಂಪುಮಣ್ಣಿನ ಭೂಮಿಯಿರುವ ಮಾಲಿನ್ಯಬಾಧಿತ ಗ್ರಾಮಗಳಲ್ಲಿ ಕಬ್ಬು, ಮೆಕ್ಕೆಜೋಳ, ಶೇಂಗಾ, ತೊಗರಿ, ಮಾವು, ಹತ್ತಿ ಬೆಳೆಯಲಾಗುತ್ತಿದೆ.

> ಬಲ್ಡೋಟ ಗ್ರೂಪ್ ಆಧುನಿಕ ತಂತ್ರಜ್ಞಾನ ಮತ್ತು ಪರಿಣಾಮಕಾರಿ ಪರಿಸರ ಸ್ನೇಹಿ ಕೈಗಾರಿಕೆ ರೂಪಿಸಿದೆ. ಎಲ್ಲಾ ಪ್ರಕ್ರಿಯೆಗಳೂ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಸಂಬಂಧಿತ ಸಂಸ್ಥೆಗಳ ಮಾನದಂಡ ಮತ್ತು ಮಾರ್ಗಸೂಚಿಯಂತೆ ಕಟ್ಟುನಿಟ್ಟಾಗಿ ನಡೆಯಲಿವೆ.
> **ಮಹೇಶ ಮಾನಕರೆ,** ಹಿರಿಯ ವ್ಯವಸ್ಥಾಪಕ, ಬ್ರ್ಯಾಂಡಿಂಗ್ ವಿಭಾಗ, ಬಲ್ಡೋಟ ಗ್ರೂಪ್

> ಕೊಪ್ಪಳ ತಾಲ್ಲೂಕಿನ ಗ್ರಾಮಗಳ ಸುತ್ತಲೂ ಕಾರ್ಖಾನೆಗಳಿಂದ ಆಗಿರುವ ಮಾಲಿನ್ಯದ ಕುರಿತು ವರದಿಯೂ ಸಿದ್ಧಗೊಂಡಿದ್ದು, ತಪ್ಪಿತಸ್ಥ ಕಾರ್ಖಾನೆಗಳಿಗೆ ನೋಟಿಸ್ ನೀಡುತ್ತೇವೆ. ತಪ್ಪನ್ನು ಸರಿಪಡಿಸಿಕೊಳ್ಳದಿದ್ದರೆ ಮುಚ್ಚಲು ಆದೇಶಿಸುತ್ತೇವೆ.
> **ಪಿ.ಎಂ. ನರೇಂದ್ರಸ್ವಾಮಿ,** ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ

> ಮಾಲಿನ್ಯ ಉಂಟು ಮಾಡುತ್ತಿರುವ ಕಾರ್ಖಾನೆಗಳಿಗೆ ಮಾಲಿನ್ಯ ನಿಯಂತ್ರಣ ಮಂಡಳಿಯ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಲಾಗಿದೆ. ಐದು ಕಾರ್ಖಾನೆಗಳಿಗೆ ಈಗಾಗಲೇ ನೋಟಿಸ್ ನೀಡಲಾಗಿದ್ದು ಅವುಗಳ ಬಗ್ಗೆ ಮಂಡಳಿ ತನ್ನ ಸಭೆಯಲ್ಲಿ ಮುಂದಿನ ಕ್ರಮ ಕೈಗೊಳ್ಳಲಿದೆ.
> **ಡಾ. ಸುರೇಶ ಇಟ್ನಾಳ,** ಕೊಪ್ಪಳ ಜಿಲ್ಲಾಧಿಕಾರಿ

> ಮೂರು ದಶಕಗಳ ಹಿಂದೆ ರೈತರು ಕೈಗಾರಿಕೆಗಳಿಗೆ ಭೂಮಿ ನೀಡಿದ್ದಾರೆ. ಈಗ ಮಾಲಿನ್ಯ ಮಾಡುವ ಕಾರ್ಖಾನೆಗಳು ಬೇಡವೆನ್ನುತ್ತಿದ್ದಾರೆ. ಬಾಧಿತ ಗ್ರಾಮಗಳಲ್ಲಿರುವ ಗಂಭೀರ ಸಮಸ್ಯೆ ಅರಿತುಕೊಂಡಿದ್ದೇನೆ. ಸರ್ಕಾರದ ಮೇಲೆ ಒತ್ತಡ ಹೇರಿ ಜನರ ಹಿತಕಾಯಲು ಆದ್ಯತೆ ನೀಡುತ್ತೇನೆ.
> **ರಾಘವೇಂದ್ರ ಹಿಟ್ನಾಳ,** ಕೊಪ್ಪಳ ಕ್ಷೇತ್ರದ ಶಾಸಕ

> ಮಾಲಿನ್ಯ ಹೆಚ್ಚು ಇರುವ ಪ್ರದೇಶಗಳಲ್ಲಿ ಜನರ ಆರೋಗ್ಯದ ದೃಷ್ಟಿಯಿಂದ ಮನೆಯ ಸುತ್ತಲಿನ ಪ್ರದೇಶದಲ್ಲಿ ದೂಳು ಇದ್ದರೆ ಆಗಾಗ ನೀರು ಹಾಕಿ ಸ್ವಚ್ಛಗೊಳಿಸಬೇಕು. ದೈನಂದಿನ ಅಗತ್ಯಬಳಕೆ ವಸ್ತುಗಳ ಮೇಲೆ ದೂಳು ಬೀಳದಂತೆ ಬಟ್ಟೆಯಿಂದ ಮುಚ್ಚಬೇಕು, ಮಕ್ಕಳು ಹಾಗೂ ಹಿರಿಯರು ದೂಳಿನಿಂದ ದೂರ ಇರಬೇಕು.
> **ಡಾ. ಲಿಂಗರಾಜು ಟಿ.,** ಡಿಎಚ್‌ಒ, ಕೊಪ್ಪಳ

ಫಸಲಿನ ಮೇಲೂ ದೂಳಿನ ಕಪ್ಪುಕಣಗಳು ಅಂಟಿಕೊಳ್ಳುವುದರಿಂದ ಈ ಗ್ರಾಮಗಳಲ್ಲಿ ಬರುವ ಫಸಲಿಗೆ ಮಾರುಕಟ್ಟೆಯಲ್ಲಿ ಕಡಿಮೆ ಬೆಲೆ. ಮಾವಿನ ಮರಗಳಲ್ಲಿ ವಸಂತ ಮಾಸದಲ್ಲಿ ಸಮೃದ್ಧವಾಗಿ ಹೂಗಳು ಅರಳಿ, ಕಾಯಿಬಿಡುವ ಕಾಲದಲ್ಲಿಯೂ ಮರಗಳಲ್ಲಿ ಎಲೆಗಳಷ್ಟೇ ಕಾಣಿಸುತ್ತಿವೆ. ಅವುಗಳ ಮೇಲೂ ಕಪ್ಪುಕಣಗಳ ದೂಳು ಆವರಿಸಿವೆ.

ಹಾಲವರ್ತಿ ಗ್ರಾಮದಿಂದ ಹಿರೇಬಗನಾಳಕ್ಕೆ ತೆರಳುವಾಗ ಹತ್ತಿ ಬಿತ್ತನೆಯಲ್ಲಿ ತೊಡಗಿದ್ದ ರೈತ ಮಹಿಳೆಯರಾದ ಹಾಲಮ್ಮ, ಸವಿತಾ, ಪಾರ್ವತಿ, ‘ಕಾರ್ಖಾನೆಗಳ ಸುತ್ತಲಿನ ಊರುಗಳಲ್ಲಿ ಕಬ್ಬು, ಮೆಕ್ಕೆಜೋಳ ಕಟಾವಿಗೆ ಹೋಗುವಾಗ ಸುರಕ್ಷತೆಗಾಗಿ ಒಳಗಡೆ ಮೂರ್ನಾಲ್ಕು ಬಟ್ಟೆ ಧರಿಸಿ ಮೇಲೆ ಪ್ಲಾಸ್ಟಿಕ್ ಚೀಲ ಹಾಕಿಕೊಳ್ಳುತ್ತೇವೆ. ಒಮ್ಮೆ ಹೊಲದೊಳಗೆ ಹೋಗಿ ಹೊರಗೆ ಬರುವಷ್ಟರಲ್ಲಿ ತಲೆಯಿಂದ ಕಾಲಿನ ತನಕ ಬೆಳೆಗಳಿಗೆ ಅಂಟಿಕೊಂಡ ಕಪ್ಪುದೂಳು ನಮ್ಮ ದೇಹಕ್ಕೂ ಅಂಟಿಕೊಳ್ಳುತ್ತದೆ. ಬೆಳೆಗಳ ನಡುವೆ ಹೋಗಿ ಹೊರಬಂದು ಉಗುಳುವ ಉಗುಳು ಕೂಡ ಕಪ್ಪಾಗಿರುತ್ತದೆ’ ಎಂದು ಗಂಭೀರ ಪರಿಸ್ಥಿತಿ ಬಿಚ್ಚಿಟ್ಟರು.

1997ರ ತನಕ ರಾಯಚೂರು ಜಿಲ್ಲೆಯ ಭಾಗವಾಗಿದ್ದ ಕೊಪ್ಪಳದಲ್ಲಿ ಆಗ ಅಭಿವೃದ್ಧಿ ಅಷ್ಟಕ್ಕಷ್ಟೇ ಇತ್ತು. ನೂತನ ಜಿಲ್ಲೆಯಾದ ಬಳಿಕ ಕೈಗಾರಿಕೆಗಳು ವ್ಯಾಪಕವಾಗಿ ಬಂದರೆ ಸ್ಥಳೀಯರಿಗೆ ಉದ್ಯೋಗ ಅವಕಾಶ ಲಭಿಸುತ್ತವೆ ಎನ್ನುವ ಕಾರಣಕ್ಕಾಗಿ ಕಾರ್ಖಾನೆಗಳಿಗೆ ಭೂಮಿ ನೀಡಿದರು. ಫಲವತ್ತಾದ ಭೂಮಿ ಒಂದೆಡೆಯಾದರೆ, ಸಮೀಪದಲ್ಲಿಯೇ ಯಥೇಚ್ಛವಾಗಿ ಸಿಗುವ ತುಂಗಭದ್ರಾ ನೀರಿನ ಸೌಲಭ್ಯ ಕಾರ್ಖಾನೆಗಳನ್ನೂ ಆಕರ್ಷಿಸಿದವು. ಮೂರು ದಶಕಗಳಿಂದ ಹಂತಹಂತವಾಗಿ ನೆಲೆಯೂರಿದ ಕಾರ್ಖಾನೆಗಳು ಹಲವು ವರ್ಷಗಳಿಂದ ಮಾಡುತ್ತಿರುವ ನೆಲ, ಜಲ ಮತ್ತು ವಾಯುಮಾಲಿನ್ಯ ಜನರ ಬದುಕನ್ನು ಸಂಕಷ್ಟಕ್ಕೆ ದೂಡಿದೆ. ಇಷ್ಟು ವರ್ಷಗಳ ಕಾಲ ಕಾರ್ಖಾನೆಗಳ ಸುತ್ತಲಿನ ಹಳ್ಳಿಗಳಿಗೆ ಸೀಮಿತವಾಗಿದ್ದ ಸ್ಪಾಂಜ್ ಮತ್ತು ಐರನ್ ಕಾರ್ಖಾನೆಗಳ ಕಪ್ಪುಕಣಗಳ ದೂಳು ಈಗ 10 ಕಿ.ಮೀ.ದೂರದಲ್ಲಿರುವ ಜಿಲ್ಲಾ ಕೇಂದ್ರದ ಕೊಪ್ಪಳ ಹಾಗೂ ಭಾಗ್ಯನಗರದ ನಿವಾಸಿಗಳಿಗೂ ತಟ್ಟುತ್ತಿದೆ.

ಈಗ ಯಾಕೆ ಹೋರಾಟ ಗಂಭೀರ?

ಈಗಾಗಲೇ ಪರಿಸ್ಥಿತಿ ಇಷ್ಟೊಂದು ಹದಗೆಟ್ಟಿರುವ ಸಂಕಟದ ನಡುವೆಯೂ ಜಿಲ್ಲಾ ಕೇಂದ್ರದ ಸಮೀಪದಲ್ಲಿ ಬಲ್ಡೋಟ (ಬಿಎಸ್‌ಪಿಎಲ್) ಕಂಪನಿ ಈಗಾಗಲೇ ಇರುವ ತನ್ನ ಉಕ್ಕಿನ ಕಾರ್ಖಾನೆಯನ್ನು 1034 ಎಕರೆ ಪ್ರದೇಶದಲ್ಲಿ ವಿಸ್ತರಣೆಗೆ ಮುಂದಾಗಿದೆ. ಜಿಲ್ಲಾಡಳಿತ ಭವನದಿಂದ ಕೆಲವೇ ಮೀಟರ್‌ಗಳಷ್ಟು ದೂರವಿರುವ ಬಲ್ಡೋಟ ಕಂಪನಿ ಕಾರ್ಖಾನೆ ವಿಸ್ತರಣೆಗಾಗಿ ನೆಲಸಮತಟ್ಟು ಮಾಡಿಕೊಳ್ಳುವುದು, ಆಂತರಿಕ ಸೌಲಭ್ಯಗಳನ್ನು ಕಲ್ಪಿಸುತ್ತಿದೆ. ಒಂದು ವೇಳೆ ವಿಸ್ತರಣೆಯಾದರೆ ದೂಳು ಕೊಪ್ಪಳ ಮತ್ತು ಭಾಗ್ಯನಗರದ ಒಂದೂವರೆ ಲಕ್ಷ ಜನರ ಬದುಕು ನರಕ ಮಾಡುತ್ತದೆ, ಯಾವುದೇ ಕಾರಣಕ್ಕೂ ವಿಸ್ತರಣೆಗೆ ಅವಕಾಶ ಕೊಡಬಾರದು ಎಂದು ಕೊಪ್ಪಳ ಜಿಲ್ಲಾ ಬಚಾವೊ ಆಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣಾ ಜಂಟಿ ಕ್ರಿಯಾ ವೇದಿಕೆ 150ಕ್ಕೂ ಹೆಚ್ಚು ದಿನಗಳಿಂದ ಅನಿರ್ದಿಷ್ಟ ಧರಣಿ ನಡೆಸುತ್ತಿದೆ.

ಬಲ್ಡೋಟ ಕಳೆದ ವರ್ಷ ನಡೆದ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ₹54 ಸಾವಿರ ಕೋಟಿ ಹೂಡಿಕೆ ಮಾಡಿ 10.5 ದಶಲಕ್ಷ ಟನ್ ಉಕ್ಕು ಉತ್ಪಾದನೆ ಮಾಡುವುದಾಗಿ ಹೇಳಿದ್ದು ರಾಜ್ಯ ಸರ್ಕಾರದ ಜೊತೆ ಒಪ್ಪಂದ ಮಾಡಿಕೊಂಡಿದೆ. ಈ ಕಂಪನಿ ಮಾತ್ರವಲ್ಲದೆ ಕಿರ್ಲೋಸ್ಕರ್ ಫೆರಸ್ ಲಿಮಿಟೆಡ್ ₹3 ಸಾವಿರ ಕೋಟಿ, ಸೆರೆನಾಟಿಕಾ ರಿನಿವಬಲ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ₹43,975 ಕೋಟಿ ಸೇರಿದಂತೆ ವಿವಿಧ ಕಂಪನಿಗಳು ಹೂಡಿಕೆ ಮಾಡಿ ಕಾರ್ಖಾನೆಗಳ ವಿಸ್ತರಣೆಗೆ ಮುಂದಾಗಿವೆ. ಇದಕ್ಕಾಗಿ ಈಗ ಹೋರಾಟ ಗಂಭೀರ ಸ್ವರೂಪ ಪಡೆದುಕೊಂಡಿದೆ. ‘ನಾವು ಕೈಗಾರಿಕೆಗಳ ವಿರೋಧಿಗಳಲ್ಲ, ಆದರೆ, ನಮಗೆ ಮಾಲಿನ್ಯಕಾರಕ ಘಟಕಗಳು ಬೇಡ, ಬೇಕಾದರೆ ಸೋಲಾರ್ ಅಥವಾ ಸಾಫ್ಟ್‌ವೇರ್ ಕಂಪನಿಗಳು ಆರಂಭವಾಗಲಿ’ ಎಂದು ಹೋರಾಟಗಾರರು ಹೇಳುತ್ತಾರೆ.

ಮಾಲಿನ್ಯದ ಕಾರಣಕ್ಕಾಗಿ ಕಾರ್ಖಾನೆಗಳ ವಿಸ್ತರಣೆಗೆ ವಿರೋಧ ಒಂದೆಡೆ ನಡೆಯುತ್ತಿದ್ದರೆ, ಬಲ್ಡೋಟ ಕಂಪನಿಗಾಗಿ ಭೂಮಿ ಕಳೆದುಕೊಂಡ ಕೆಲವು ರೈತರು ಕೂಡ ಅನಿರ್ದಿಷ್ಟ ಧರಣಿ ನಡೆಸುತ್ತಿದ್ದಾರೆ. ‘20 ವರ್ಷಗಳ ಹಿಂದೆ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಮೂಲಕ ರಾಜ್ಯ ಸರ್ಕಾರ ಬಲವಂತವಾಗಿ ನಮ್ಮ ಜಮೀನು ಕಿತ್ತುಕೊಂಡಿದೆ. ಎರಡು ದಶಕಗಳಾದರೂ ಕಾರ್ಖಾನೆ ಪೂರ್ಣಪ್ರಮಾಣದಲ್ಲಿ ಆರಂಭಿಸಿಲ್ಲ, ನಮಗೆ ಉದ್ಯೋಗವೂ ಸಿಕ್ಕಿಲ್ಲ. ಕಾರ್ಖಾನೆಯಲ್ಲಿ ನೌಕರಿ ಕೊಡಬೇಕು. ಇಲ್ಲವಾದರೆ ನಮಗೆ ಸರ್ಕಾರಿ ನೌಕರಿ ಕೊಡಬೇಕು’ ಎಂದು ಹೋರಾಟದ ನೇತೃತ್ವ ವಹಿಸಿರುವ ಹನುಮಂತಪ್ಪ ಕೌದಿ ಆಗ್ರಹಿಸುತ್ತಾರೆ.

ಕೊಪ್ಪಳ ತಾಲ್ಲೂಕಿನ ಸುತ್ತಲಿರುವ ಬಹುತೇಕ ಕಾರ್ಖಾನೆಗಳು ಆರಂಭದಲ್ಲಿಯೇ ಸಾವಿರಾರು ಎಕರೆ ಭೂಮಿಯನ್ನು ಸರ್ಕಾರದ ಮೂಲಕ ಖರೀದಿಸಿದ್ದರೂ ಕೆಲವು ಪ್ರದೇಶದಲ್ಲಷ್ಟೇ ಕಾರ್ಖಾನೆ ಆರಂಭಿಸಿ ಸುತ್ತಲೂ ಕಾಂಪೌಂಡ್ ನಿರ್ಮಿಸಿಕೊಂಡಿವೆ. ಆ ಜಾಗದಲ್ಲಿ ಈಗ ವಿಸ್ತರಣೆ ಮಾಡುತ್ತಿರುವುದು ಜನರ ಆಕ್ರೋಶಕ್ಕೆ ಕಾರಣವಾಗಿದೆ. ಕಾರ್ಖಾನೆಗಳಿಗೆ ಭೂಮಿ ಕೊಡುವ ವಿಚಾರದಲ್ಲಿ ಬಾಧಿತ ಗ್ರಾಮಗಳ ಜನರ ನಡುವಿನ ಒಡಕು ಕೂಡ ಕಂಪನಿಗಳಿಗೆ ಹಾಗೂ ಭೂಮಿ ಕೊಡಿಸುವ ದಲ್ಲಾಳಿಗಳಿಗೆ ಲಾಭ ತಂದುಕೊಟ್ಟಿದೆ ಎಂದು ಬಾಧಿತ ಗ್ರಾಮಗಳ ಜನ ನೊಂದು ಹೇಳುತ್ತಾರೆ.

ಒಟ್ಟಾರೆ ಜಿಲ್ಲೆಯ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಬುನಾದಿಯಾಗಬೇಕಿದ್ದ ಉಕ್ಕಿನ ಕಾರ್ಖಾನೆಗಳು ಜನಸಾಮಾನ್ಯರ ಬದುಕಿನಲ್ಲಿ ತಲ್ಲಣವನ್ನು ಸೃಷ್ಟಿಸಿದೆ. ಸಾಮಾನ್ಯ ಬದುಕಿಗಾಗಿ ಶ್ರೀಸಾಮಾನ್ಯರು 150ಕ್ಕೂ ಹೆಚ್ಚು ದಿನಗಳಿಂದ ನಡೆಸುತ್ತಿರುವ ಹೋರಾಟಕ್ಕೆ ಸರ್ಕಾರ ಇನ್ನಾದರೂ ಸ್ಪಂದಿಸುವುದೇ ಕಾದುನೋಡಬೇಕು.

ಹೋರಾಟಗಾರರ ಬೇಡಿಕೆಗಳು ಏನು?

- ಕೊಪ್ಪಳದ ಭೂಮಿಯ ಧಾರಣ ಸಾಮರ್ಥ್ಯ ಸಂಪೂರ್ಣ ಕಡಿಮೆಯಾಗಿದ್ದು ಯಾವುದೇ ಹೊಸ ಕಾರ್ಖಾನೆಗಳು ವಿಸ್ತರಣೆಯಾಗಬಾರದು.
- ಬಲ್ಡೋಟ ಆವರಣದಲ್ಲಿರುವ ಬಸಾಪುರ ಕೆರೆ ಸಾರ್ವಜನಿಕರಿಗೆ ಮುಕ್ತವಾಗಿರಿಸಬೇಕು.
- ತುಂಗಭದ್ರಾ ನದಿಗೆ ಕಾರ್ಖಾನೆಗಳ ನೀರು ಯಥೇಚ್ಛವಾಗಿ ಹರಿಸಲಾಗುತ್ತಿದ್ದು, ಇದನ್ನು ತಡೆಯಬೇಕು.
- ಭಾರತೀಯ ವೈದ್ಯಕೀಯ ಸಂಸ್ಥೆ ವತಿಯಿಂದ ಕಾರ್ಖಾನೆಗಳ ಮಾಲಿನ್ಯದಿಂದ ಬಾಧಿತವಾದ 22 ಗ್ರಾಮಗಳ ಜನರ ಆರೋಗ್ಯ ಸರ್ವೆ ನಡೆಸಬೇಕು. ಅನಾರೋಗ್ಯಪೀಡಿತರಾದ ಜನರ ಚಿಕಿತ್ಸಾ ಖರ್ಚು ರಾಜ್ಯ ಸರ್ಕಾರವೇ ಭರಿಸಬೇಕು.
- ಬಾಧಿತ ಪ್ರದೇಶಕ್ಕೆ ಮುಖ್ಯಮಂತ್ರಿ, ಆರೋಗ್ಯ ಸಚಿವರು, ಕೈಗಾರಿಕಾ, ಕೃಷಿ ಮತ್ತು ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರು ಭೇಟಿ ನೀಡಬೇಕು.



ಕಾರ್ಖಾನೆಗಳ ಮಾಲಿನ್ಯ ಹಾಗೂ ವಿಸ್ತರಣೆ ವಿರೋಧಿಸಿ ಕೊಪ್ಪಳದಲ್ಲಿ 150ಕ್ಕೂ ಹೆಚ್ಚು ದಿನಗಳಿಂದ ನಡೆದಿರುವ ಅನಿರ್ದಿಷ್ಟ ಧರಣಿ

❖

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 5-4-2001

- **ಗಿರಿಜನರ ಅಭಿವೃದ್ಧಿಗೆ ಕಾಲಮಿತಿ ಕಾರ್ಯಕ್ರಮ: ಕೃಷ್ಣ**

ಮೈಸೂರು, ಏ.4– ನಾಗರಹೊಳೆ ಮತ್ತು ಬಂಡೀಪುರ ಅರಣ್ಯ ಪ್ರದೇಶದ 154 ಗಿರಿಜನ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸುವುದೂ ಸೇರಿದಂತೆ ಗಿರಿಜನರ ಅಭಿವೃದ್ಧಿಗೆ ಕೆಲವು ನಿರ್ದಿಷ್ಟ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಹೆಗ್ಗಡದೇವನ ಕೋಟೆ ತಾಲೂಕು ಹೊಸಹಳ್ಳಿ ಗಿರಿಜನ ಹಾಡಿಯಲ್ಲಿ ಇಂದು ಸೇರಿದ್ದ ಎಸ್.ಎಂ.ಕೃಷ್ಣ ನೇತೃತ್ವದ ‘ಮಿನಿ ಸಂಪುಟ ಸಭೆ’ ನಿರ್ಧರಿಸಿತು.

ಗಿರಿಜನರ ಸಮಸ್ಯೆಗಳ ಪರಿಹಾರಕ್ಕೆಂದೇ ವಿವೇಕ ಗಿರಿಜನ ಶೈಕ್ಷಣಿಕ ಕೇಂದ್ರದಲ್ಲಿ ಮೂರು ಗಂಟೆ ಸಭೆ ನಡೆಯಿತು.

75 ವರ್ಷಗಳ ಹಿಂದೆ

ಗುರುವಾರ, 5-4-1951

- **ಈ ವರ್ಷ 64 ಲಕ್ಷ ಟನ್ ಆಹಾರ ಕೊರತೆ ನಿರೀಕ್ಷೆ**

ನವದೆಹಲಿ, ಏ.4– 1951ರಲ್ಲಿ ಸರ್ಕಾರದ ಆಹಾರದ ದಾಸ್ತಾನಿನಿಂದ ವಿವಿಧ ಪ್ರಾಂತ್ಯಗಳಿಗೆ 90 ಲಕ್ಷ ಟನ್ ಆಹಾರ ಧಾನ್ಯ ಒದಗಿಸಬೇಕಾಗುವ ನಿರೀಕ್ಷೆಯಿದೆ ಯೆಂದೂ, 35 ಲಕ್ಷ ಟನ್ ಆಹಾರ ಶೇಖರಣೆ ಆಗುವಂತಿರುವುದರಿಂದ 55 ಲಕ್ಷ ಟನ್‌ಗಳಷ್ಟು ಖೋತಾ ಬರುವುದೆಂದೂ, ಪಾರ್ಲಿಮೆಂಟಿನಲ್ಲಿ ಆಹಾರ ಸಚಿವ ಶ್ರೀ ಕೆ.ಎಂ ಮುನ್ಷಿಯವರು ಶ್ರೀ ಜಿ.ಪಿ ಶ್ರೀ ವಾಸ್ತವಾರ ಪ್ರಶ್ನೆಗೆ ಲಿಖಿತವಾಗಿ ತಿಳಿಸಿದರು.

ಇದಲ್ಲದೆ ವರ್ಷಾಂತ್ಯದಲ್ಲಿ ಸರ್ಕಾರದ ದಾಸ್ತಾನಿಗೆ 9 ಲಕ್ಷ ಟನ್ ಆಹಾರವನ್ನು ಸೇರಿಸಬೇಕಾಗುವುದೆಂದೂ ಅವರು ಹೇಳಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

05 ಏಪ್ರಿಲ್ 2026 ಭಾನುವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ತೃತೀಯ ಗಂ. 12-00 ನಕ್ಷತ್ರ: ವಿಶಾಖ ಗಂ. 24-08 ಯೋಗ: ವಜ್ರ ಗಂ. 14-44 ಕರಣ: ವಿಷ್ಟಿ ಗಂ 12-00 ಮೀನ ಮಾಸದ 22 ನೇ ದಿನ. ಮಳೆ ನಕ್ಷತ್ರ: ರೇವತಿ 2 ನೇ ಪಾದ. ರಾಹುಕಾಲ: ಸಾಯಂಕಾಲ 04-30 - 06-00, ಸೂರ್ಯೋದಯ: 06-28 ಸೂರ್ಯಾಸ್ತ: 06-39, ಮುಸ್ಲಿಂ ದಿನಾಂಕ: 16 ಶವ್ವಾಲ್, ದಿನ ವಿಶೇಷ: ಸ್ವಾಮಿ ಲೀಲಾ ಷಾ ಅವರ ಜನ್ಮಜಯಂತಿ (ಸಿಂಧಿ), ಈಸ್ಟರ್ ಭಾನುವಾರ, ಅದೃಷ್ಟ ಸಂಖ್ಯೆ: 4, 7

ಮೇಷ: ಹಿಂದೆ ನಡೆದುಹೋದಂತಹ ದುರ್ಘಟನೆಗಳನ್ನು ಮರೆತು ಭವಿಷ್ಯ ದತ್ತ ಗಮನ ಹರಿಸುವುದು ಉತ್ತಮ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ. ಹಾಸ್ಯ ಕಲಾಕಾರರಿಗೆ ಬೇಡಿಕೆ ಹೆಚ್ಚುವುದು.

ವೃಷಭ: ವಂಶ ಪಾರಂಪರ್ಯವಾಗಿ ಬಂದ ಉದ್ಯೋಗದಲ್ಲಿ ಈಗ ಹೆಚ್ಚಿನ ಏಳಿಗೆ ಇದೆ. ಆದಾಯ ಹಂತಹಂತವಾಗಿ ಅಭಿವೃದ್ಧಿದಾಯಕವಾಗಿದ್ದು, ಧನ ಸಂಗ್ರಹಕ್ಕೆ ಸಾಧಕವಾಗಲಿದೆ. ಮಂಗಳ ಕಾರ್ಯಗಳನ್ನು ನಡೆಸಿ ಕೊಡಲು ಒಪ್ಪುವಿರಿ.

ಮಿಥುನ: ಆರಕ್ಷಕರು ಮತ್ತು ರಾಜಕಾರಣಿಗಳು ನಿಮ್ಮಿಂದಲೇ ತಪ್ಪುಗಳು ನಡೆಯುವ ಸಂಭವವು ಹೆಚ್ಚಿರುವುದರಿಂದ ಜಾಗರೂಕತೆ ವಹಿಸಬೇಕಾಗು ತ್ತದೆ. ಕಮಿಷನ್ ಏಜೆಂಟ್‌ಗಳಿಗೆ ಇಂದು ಅಧಿಕ ಆದಾಯ.

ಕರ್ಕಾಟಕ: ಸಹೋದರರ ಸಲಹೆಯನ್ನು ಪಡೆದು ನಿಮ್ಮ ಹಳೆಯ ಯೋಜನೆ ಗಳಿಗೆ ಮರುಜೀವ ಕೊಡಲು ನಿಶ್ಚಯಿಸಬಹುದು. ಕಬ್ಬಿಣ ಅಥವಾ ಗ್ಲಾಸ್‌ಗಳಿಂದ ಗಾಯಗಳಾಗುವ ಲಕ್ಷಣಗಳಿರುವುದರಿಂದ ಜಾಗ್ರತೆ ಇರಲಿ.

ಸಿಂಹ: ಎಲ್ಲ ದಾರಿಗಳೂ ಸುಗಮ ಎನಿಸಿ ಎಲ್ಲ ಕಷ್ಟಗಳೂ ನಿವಾರಣೆಯಾಗಲಿವೆ. ರಾಜಕೀಯದವರಿಗೆ ನಿರೀಕ್ಷಿತ ಕಾರ್ಯ ಸಾಧನೆ ತೃಪ್ತಿ ತರುತ್ತದೆ. ಮಾನಸಿಕ ಸ್ಥಿತಿ ಏರುಪೇರಾದ ಸಮಯದಲ್ಲಿ ಹಿರಿಯರ ಸಲಹೆ ಸಮಾಧಾನ ತರುತ್ತದೆ.

ಕನ್ಯಾ: ಜೀವನದಲ್ಲಿನ ಸಮಸ್ಯೆಗಳು ಮತ್ತು ದುಃಖಗಳೆರಡೂ ತನ್ನ ಇರುವಿಕೆ ಯನ್ನು ತಿಳಿಸಲಿವೆ. ಸಮಸ್ಯೆ ಹೆಚ್ಚುವುದಕ್ಕೆ ಮುಂಚೆ ಜಾಣ್ಮೆಯಿಂದ ಪರಿಹಾರದ ಮಾರ್ಗವನ್ನು ಕಂಡುಕೊಳ್ಳಿ. ಈ ದಿನ ನಿಮ್ಮ ಆರೋಗ್ಯವು ಸುಧಾರಿಸುವುದು.

ತುಲಾ: ವಿವಾಹ ವಿಷಯಗಳಲ್ಲಿ ಮಗಳ ಅಭಿಪ್ರಾಯ ಪಡೆದು ಮುಂದುವರಿ ಯುವುದು ಉತ್ತಮ. ಭೂ ಸಂಬಂಧದ ವ್ಯವಹಾರದಲ್ಲಿ ನಿಮ್ಮ ಅನಿಸಿಕೆಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದಲ್ಲಿ ವ್ಯವಹಾರಗಳು ಕೈಗೂಡಲಿವೆ.

ವೃಶ್ಚಿಕ: ಸ್ನೇಹಿತರಲ್ಲಿ ಅಥವಾ ಸಂಬಂಧಿಕರಲ್ಲಿ ಅವರ ವೈಯಕ್ತಿಕ ವಿಚಾರವನ್ನು ಅನಗತ್ಯವಾಗಿ ಮಾತನಾಡುವುದಕ್ಕಿಂತ ಮೌನವಾಗಿ ಇರುವುದು ಲೇಸು. ತೆಂಗು ಬೆಳೆಗಾರರಿಗೆ ಉತ್ತಮ ಬೆಳೆಯ ಜೊತೆಗೆ ಹೆಚ್ಚಿನ ಲಾಭವೂ ಇರುವುದು.

ಧನು: ನಿಮ್ಮ ಜವಾಬ್ದಾರಿಯಿಂದ ನಡೆಯುತ್ತಿರುವ ಸಂಘ ಸಂಸ್ಥೆಯ ಸಭೆಯಲ್ಲಿ ಭಿನ್ನಾಭಿಪ್ರಾಯ ಬರಬಹುದು. ಅವರನ್ನು ಸಮಾಧಾನದಿಂದ ಎದುರಿಸುವುದು ನಿಮ್ಮ ಬುದ್ಧಿವಂತಿಕೆಯ ಗುಣ. ರೈತರಿಗೆ ಕೆಲಸ ಕಾರ್ಯಗಳಿಗೆ ತಡೆ ಬರಬಹುದು.

ಮಕರ: ನಿಮ್ಮಿಂದ ನಡೆಯದೇ ಇರುವ ತಪ್ಪುಗಳ ಅಪವಾದವನ್ನು ಹೊರ ಬೇಕಾಗಬಹುದು. ನಿಮ್ಮ ಪ್ರಯತ್ನಗಳು ಫಲಕಾರಿಯಾಗಿ ಆರ್ಥಿಕಾನುಕೂಲ ಉಂಟಾಗುವುದು. ಸಿಹಿ ತಿಂಡಿಗಳ ತಯಾರಕರಿಗೆ ಬೇಡಿಕೆ ಹೆಚ್ಚುವುದು.

ಕುಂಭ: ಗೆಳೆಯನ ಅನಿರೀಕ್ಷಿತ ಆಗಮನ ಸಮಯವನ್ನು ವ್ಯರ್ಥ ಮಾಡಿಸಿದರೂ ಮನಸ್ಸಿಗೆ ಸಂತೋಷ ಉಂಟಾಗುವುದು. ಕೆಲಸವು ವಿಳಂಬವಾಗಿ ನೆರವೇರು ವುದು. ಸಮಸ್ಯೆಗೆ ಧೈರ್ಯವೇ ಪರಿಹಾರ ಎಂಬುವುದನ್ನು ಮರೆಯದಿರಿ.

ಮೀನ: ಇಂದು ನಿಮ್ಮ ನಿಯಮವನ್ನು ಬದಿಗಿಟ್ಟು ಸಮಯಕ್ಕೆ ಸರಿಯಾಗಿ ವರ್ತಿಸುವ ಅನಿವಾರ್ಯ ಎದುರಾಗುವುದು. ಕಾಲು ನೋವು ಅಥವಾ ಬೆನ್ನು ನೋವು ಕಾಣಿಸಿಕೊಳ್ಳಬಹುದು, ಯೋಗಾಭ್ಯಾಸದಿಂದ ಸರಿಪಡಿಸಿಕೊಳ್ಳಿರಿ.

ಪದಬಂಧ 6364


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಆಮೇಲೂ ಏರಿದ ಮತ್ತು (3)
3.ಈ ಪರಿ ತಪ್ಪಿಸಿಕೊಳ್ಳುವಿಕೆ (3)
5.ಸಂಕಟದಿಂದ ಕಟ್ಟಿರುವ ತೆರಿಗೆ (2)
6.ಜಟಕಾ ಬಂಡಿ ಎನಿಸಿರುವ ಜೀವನ (3)
7.ರಿಕಾಪುವನ್ನು ಕದ್ದಿರುವ ಶತೃ (2)
9.ಹಳ್ಳಿಯಲ್ಲಿದ್ದು ತಿರುಗಿ ಹೀಗೆ ನಿಂದಿಸು! (2)
11.ಆನಂದಲ್ಲಿ ಕೊನೆಗೊಳ್ಳುವಂಥದ್ದು (3)
13.ಹತ್ತಿರ ಸುಳಿಯುತ್ತಿರುವ ಆಕಳು (2)
14.ಮಲಗುವಾಗ ಚಾರ ಕಾಣಿಸಿದನಲ್ಲಾ (3)
15.ನರನು ನೋಡಿದ ಶಹರು (3)

ಮೇಲಿಂದ ಕೆಳಕ್ಕೆ

1.ಸಡಿಲವಾದುದು ಇಲ್ಲಿದೆ (3)
2.ವಿಸ್ತಾರವಾದ ಜಾಗವಿಲ್ಲಿ ಉಲ್ಟಾ ಕಾಣುತಿದೆ (3)
3.ತಪರಾಕಿನ ನಂತರ ಈ ಹೊಗಳಿಕೆ! (3)
4.ದುರಸ್ತಿಯನ್ನು ಹೀಗೆನ್ನಿ (3)
5.ವರ್ತುಲಾಕಾರವಾಗಿ ಸುತ್ತಿ ಸುತ್ತಿ ಬರುವ ಗಾಳಿ (5)
8.ಈ ರೀತಿ ಮಾತಿನಲ್ಲಿ ನಯವಾಗಿ ಉಬ್ಬಿಸು (5)
10.ದೊಡ್ಡ ನೌಕೆಯಿದು (3)
11.ಶ್ರೀ ಕೃಷ್ಣನ ಸ್ನೇಹಿತ (3)
12.ತನಯ ಈ ರೀತಿ ಮಗ್ನ ! (3)
13.ಅರಳೆ ಹಿಡಿದವನ ಸಮೀಪ! (3)



6363ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪ್ರತಿಧ್ವನಿ 3.ಆಸರೆ 5.ತಲೆಬರಹ 7.ನಕ್ಷತ್ರ 9.ಕುಠಾರ 11.ಸಂತಸ 13.ವಿಮಾನಯಾನ 15.ವಂತಿಗೆ 16 ಸುರಚಾಪ

ಮೇಲಿಂದ ಕೆಳಕ್ಕೆ: 1.ಪ್ರಯೋಜನ 2.ನಿರುತ 4.ಸನಿಹ 6.ಬರ್ಬರ 8.ಕ್ಷಯ 9.ಕುಲೀನ 10.ಪ್ಲುತ 12.ಸಮಾರೋಪ 13.ವಿನಂತಿ 14.ನಪಾಸು

ಸುಡೊಕು 6747

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	8			5		9		
1	9		6		4			3
	5			7			2	4
5		8	9					
	1					7	5	2
4		7					8	
2		5		9			3	
	6		3		5	2		7
3	7	9		6			4	

6746 ಸುಡೊಕು

6	2	4	5	3	9	7	1	8
8	9	5	6	7	1	2	4	3
1	3	7	2	4	8	5	9	6
3	4	1	8	2	5	9	6	7
2	8	6	3	9	7	1	5	4
7	5	9	4	1	6	8	3	2
5	1	3	7	6	2	4	8	9
4	7	8	9	5	3	6	2	1
9	6	2	1	8	4	3	7	5

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಚಿಟಿಕೆ ಸುದ್ದಿ

ಎಚ್‌ಎಸ್‌ಆರ್‌ಪಿ ಅಳವಡಿಕೆ ಕಡ್ಡಾಯ: ಸ್ಪಷ್ಟನೆ




ಬೆಂಗಳೂರು: ಹಳೆ ವಾಹನಗಳಿಗೆ ಅತಿ ಸುರಕ್ಷಿತ ನೋಂದಣಿ ಫಲಕಗಳನ್ನು (ಎಚ್‌ಎಸ್‌ಆರ್‌ಪಿ) ಕಡ್ಡಾಯವಾಗಿ ಅಳವಡಿಸಬೇಕು ಎಂಬ ನಿಯಮದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಸಾರಿಗೆ ಇಲಾಖೆ ಸ್ಪಷ್ಟಪಡಿಸಿದೆ.

ಎಚ್‌ಎಸ್‌ಆರ್‌ಪಿ ಅಳವಡಿಸದ ವಾಹನಗಳ ಮೇಲೆ ಕ್ರಮ ಕೈಗೊಳ್ಳಬಾರದು ಎಂದು 2024ರಲ್ಲಿ ಹೈಕೋರ್ಟ್ ಆದೇಶದಲ್ಲಿ ತಿಳಿಸಿರುವುದನ್ನೇ ತಪ್ಪು ಅರ್ಥ ಮಾಡಿಕೊಂಡು ಕಡ್ಡಾಯವಲ್ಲ ಎಂದು ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿದೆ. 2019ರ ಏಪ್ರಿಲ್ 1ಕ್ಕಿಂತ ಮುಂಚಿನ ವಾಹನಗಳಿಗೆ ಕಡ್ಡಾಯವಾಗಿ ಎಚ್‌ಎಸ್‌ಆರ್‌ಪಿ ಅಳವಡಿಸಿಕೊಳ್ಳಲೇಬೇಕು ಎಂದು ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಈ ಅಧಿಸೂಚನೆಗೆ ಯಾವುದೇ ತಡೆಯಾಜ್ಞೆ ಇಲ್ಲ ಎಂದು ಹೆಚ್ಚುವರಿ ಸಾರಿಗೆ ಆಯುಕ್ತ ಸಿ. ಮಲ್ಲಿಕಾರ್ಜುನ ತಿಳಿಸಿದ್ದಾರೆ.

ಎಚ್‌ಎಸ್‌ಆರ್‌ಪಿ ಅಳವಡಿಸದ ವಾಹನಗಳ ಮೇಲೆ ಸದ್ಯಕ್ಕೆ ಕಾನೂನು ಕ್ರಮ ಕೈಗೊಳ್ಳುವುದಿಲ್ಲ. ಆದರೆ, ಕೇಂದ್ರ, ರಾಜ್ಯ ಸರ್ಕಾರಗಳ ಅಧಿಸೂಚನೆ, ಸುಪ್ರೀಂಕೋರ್ಟ್‌ನ ಆದೇಶದಂತೆ ಎಚ್‌ಎಸ್‌ಆರ್‌ಪಿ ಕಡ್ಡಾಯವಾಗಿ ಅಳವಡಿಸಬೇಕಾಗುತ್ತದೆ ಎಂದು ಹೇಳಿದ್ದಾರೆ.

ಬೊಮ್ಮಾಯಿ ಸೇರಿ ಮೂವರಿಗೆ ಗೌರವ ಡಾಕ್ಟರೇಟ್


ಬಸವರಾಜ ಬೊಮ್ಮಾಯಿ


ಸತೀಶ ಕುಲಕರ್ಣಿ


ಸದಾಶಿವ ಸ್ವಾಮೀಜಿ

ಹಾವೇರಿ: ಹಾವೇರಿ ವಿಶ್ವವಿದ್ಯಾಲಯದ ಮೊದಲ ಘಟಿಕೋತ್ಸವ ಏ.6ರಂದು ಬೆಳಿಗ್ಗೆ 11ಕ್ಕೆ ಇಲ್ಲಿನ ಜಿ.ಎಚ್.ಕಾಲೇಜಿನ ಸಭಾಭವನದಲ್ಲಿ ನಡೆಯಲಿದ್ದು, ಸಂಸದ ಬಸವರಾಜ ಬೊಮ್ಮಾಯಿ ಸೇರಿದಂತೆ ಮೂವರಿಗೆ ಗೌರವ ಡಾಕ್ಟರೇಟ್ ಗೌರವ ನೀಡಲು ಆಡಳಿತ ಮಂಡಳಿ ತೀರ್ಮಾನಿಸಿದೆ.

‘ಸಾಮಾಜಿಕ ಸೇವೆ ಪರಿಗಣಿಸಿ ಸಂಸದ ಬಸವರಾಜ ಬೊಮ್ಮಾಯಿ, ಶೈಕ್ಷಣಿಕ ಸೇವೆ ಪರಿಗಣಿಸಿ ಹುಕ್ಕೇರಿ ಮಠದ ಸದಾಶಿವ ಸ್ವಾಮೀಜಿ, ಸಾಹಿತ್ಯ ಸೇವೆ ಪರಿಗಣಿಸಿ ಕವಿ ಸತೀಶ ಕುಲಕರ್ಣಿ ಅವರಿಗೆ ಗೌರವ ಡಾಕ್ಟರೇಟ್ ನೀಡಲಾಗುತ್ತಿದೆ’ ಎಂದು ಕುಲಪತಿ ಪ್ರೊ. ಸುರೇಶ ಜಂಗಮಶೆಟ್ಟಿ ತಿಳಿಸಿದ್ದಾರೆ.

‘ರಾಜ್ಯಪಾಲರು ಗೌರವ ಡಾಕ್ಟರೇಟ್ ಪ್ರದಾನ ಮಾಡಲಿದ್ದಾರೆ. ಎಂಟು ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಪ್ರದಾನ ಮಾಡಲಾಗುತ್ತಿದೆ’ ಎಂದು ಹೇಳಿದ್ದಾರೆ.

ಮಹಿಳೆ ಪತ್ತೆಗೆ ಎಎನ್‌ಎಫ್ ಬಳಕೆ

ಮಡಿಕೇರಿ: ತಾಲ್ಲೂಕಿನ ತಡಿಯಂಡಮೋಳ್ ಬೆಟ್ಟಕ್ಕೆ ಚಾರಣಕ್ಕೆ ತೆರಳಿ ಕಾಡಿನಲ್ಲಿ ನಾಪತ್ತೆಯಾಗಿರುವ ಕೇರಳದ ಕೊಯಿಕ್ಕೋಡ್‌ನ ಶರಣ್ಯ (35) ಅವರ ಸುಳಿವು 2ನೇ ದಿನವಾದ ಶನಿವಾರವೂ ಸಿಕ್ಕಿಲ್ಲ.

‘ಶೋಧ ಕಾರ್ಯಕ್ಕೆ ನಕ್ಸಲ್ ನಿಗ್ರಹ ದಳ (ಎಎನ್‌ಎಫ್) ಬಳಸಲಾಗಿದೆ. ಅರಣ್ಯ ಇಲಾಖೆ ಸಿಬ್ಬಂದಿ, ಪೊಲೀಸರು, ಸ್ಥಳೀಯರೂ ಶೋಧಕಾರ್ಯದಲ್ಲಿ ತೊಡಗಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.





ಬೆಂಗಳೂರಿನ ಅರಮನೆ ಮೈದಾನದಲ್ಲಿ ‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಶನಿವಾರ ಆಯೋಜಿಸಿದ್ದ ‘ಎಡ್ಯುವರ್ಸ್’ ಶೈಕ್ಷಣಿಕ ಮೇಳದಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಮಾತನಾಡಿದರು (ಎಡ ಚಿತ್ರ) ಮೇಳದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು ಮತ್ತು ಪೋಷಕರು ಪ್ರಜಾವಾಣಿ ಚಿತ್ರ

ವೃತ್ತಿಶಿಕ್ಷಣಕ್ಕೆ ಮಧ್ಯವರ್ತಿ ಮುಕ್ತ ಪ್ರವೇಶ

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಪ್ರಸನ್ನ

ಎಡ್ಯುವರ್ಸ್™ ಪ್ರೀಮಿಯರ್ ಎಜುಕೇಶನ್ ಎಕ್ಸ್‌ಪೋ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಹಾಗೂ ಸೀಟು ಹಂಚಿಕೆ ಪ್ರಕ್ರಿಯೆಗಳಲ್ಲಿ ಮಧ್ಯವರ್ತಿಗಳಿಗೆ ಅವಕಾಶವೇ ಇಲ್ಲ. ವಿದ್ಯಾರ್ಥಿಗಳು ಪಡೆದ ಅಂಕಗಳಿಗೆ ಅನುಗುಣವಾಗಿ ಕಾಲೇಜುಗಳು ಸಿಗುತ್ತವೆ’ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದರು.

ಕರ್ನಾಟಕದ ಅತ್ಯಂತ ವಿಶ್ವಾಸಾರ್ಹ ಪತ್ರಿಕೆಗಳಾದ ‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ ಸಹಯೋಗದಲ್ಲಿ ಅರಮನೆ ಮೈದಾನದಲ್ಲಿ ಆಯೋಜಿಸಿರುವ ಎರಡು ದಿನಗಳ ಅತಿ ದೊಡ್ಡ ಶೈಕ್ಷಣಿಕ ಮೇಳ ‘ಎಡ್ಯುವರ್ಸ್’ ಉದ್ಘಾಟಿಸಿ ಅವರು ಮಾತನಾಡಿದರು.

ಎಂಜಿನಿಯರಿಂಗ್, ವೈದ್ಯಕೀಯ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶದ ವೇಳೆ ಕೆಲ ಮಧ್ಯವರ್ತಿಗಳು ವಿದ್ಯಾರ್ಥಿಗಳು ಹಾಗೂ ಅವರ ಪೋಷಕರನ್ನು ನಂಬಿಸಿ, ಸೀಟು ಕೊಡಿಸುವುದಾಗಿ ಹಣ ಪಡೆದು ವಂಚಿಸುತ್ತಿದ್ದರು. ಸೀಟ್ ಬ್ಲಾಕಿಂಗ್‌ನಂತಹ ಕೃತ್ಯಗಳ ಮೂಲಕ ಖಾಸಗಿ ಕಾಲೇಜುಗಳಿಗೆ ಅನುಕೂಲ ಮಾಡಿಕೊಡುತ್ತಿದ್ದರು. ಅಂತಹ ವಂಚನೆ ಪ್ರಕರಣಗಳ ವಿರುದ್ಧ ಪ್ರಾಧಿಕಾರ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ. ಹಲವು ಸುಧಾರಣಾ ಕ್ರಮಗಳು, ತಂತ್ರಜ್ಞಾನದ ಪರಿಣಾಮಕಾರಿ ಬಳಕೆಯಿಂದ ಪರೀಕ್ಷೆ ಹಾಗೂ ಸೀಟು ಹಂಚಿಕೆ ಸಂಪೂರ್ಣ ಪಾರದರ್ಶಕವಾಗಿದೆ. ಅಡ್ಡ ದಾರಿಯಲ್ಲಿ ಹೋಗಿ ಯಾರೂ ಮೋಸ ಹೋಗಬಾರದು ಎಂದು ಕಿವಿಮಾತು ಹೇಳಿದರು.

ಮುಖಚರ್ಯೆ ಆಧಾರಿತ ತಪಾಸಣೆ ವ್ಯವಸ್ಥೆ ಅಳವಡಿಕೆಯಿಂದ ನಕಲಿ ವಿದ್ಯಾರ್ಥಿಗಳ ಹಾವಳಿಗೂ ಕಡಿವಾಣ ಬಿದ್ದಿದೆ. ಸಿಇಟಿ ನಡೆದ ದಿನವೇ ಎಲ್ಲ ವಿದ್ಯಾರ್ಥಿಗಳ ಒಎಂಆರ್ ಶೀಟ್‌ಗಳನ್ನು ಪ್ರಾಧಿಕಾರದ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಲಾಗುತ್ತಿದೆ. ಕೀ ಉತ್ತರಗಳನ್ನು ಪ್ರಕಟಿಸಲಾಗುತ್ತಿದೆ. ಅರ್ಹತಾ ಪಟ್ಟಿಯಲ್ಲಿ ವ್ಯತ್ಯಾಸವಾಗಿದ್ದರೆ ಒಎಂಆರ್ ಶೀಟ್‌ಗಳನ್ನು ತಾಳೆ ಮಾಡಬಹುದು. ಸೀಟು ಹಂಚಿಕೆಯಲ್ಲೂ ಪರಿಶೀಲನೆಗೆ ಅವಕಾಶ ಇರುತ್ತದೆ ಎಂದು ಹೇಳಿದರು.

ಒಂದೇ ಪ್ರವೇಶ ಪರೀಕ್ಷೆಯ ಮೂಲಕ ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳಿಗೆ ಪ್ರತ್ಯೇಕ ರ‍್ಯಾಂಕ್ ಪಟ್ಟಿ ಸಿದ್ಧಪಡಿಸಲಾಗುತ್ತದೆ. ಈ ಪದ್ಧತಿ ದೇಶದ ಇತರೆ ರಾಜ್ಯಗಳಲ್ಲಿ ಇಲ್ಲ. ಪಿಯು ಪರೀಕ್ಷೆಯ ಶೇ 50 ಹಾಗೂ ಸಿಇಟಿಯ ಶೇ 50 ಅಂಕಗಳನ್ನು ಪರಿಗಣಿಸಲಾಗುತ್ತದೆ. ಒಂದು ವಿಷಯದಲ್ಲಿ ಕಡಿಮೆ ಅಂಕ ಬಂದರೂ ಆ ವಿಷಯ ಹೊರತುಪಡಿಸಿ ಸಿದ್ಧಪಡಿಸುವ ಇತರೆ ಕೋರ್ಸ್‌ಗಳ ಅರ್ಹತಾ ಪಟ್ಟಿಯಲ್ಲಿ ಸ್ಥಾನ ಪಡೆಯಬಹುದು. ದ್ವಿತೀಯ ಪಿಯು ಎರಡು ಪರೀಕ್ಷೆಯನ್ನು ಬಳಸಿಕೊಳ್ಳಬಹುದು. ಹಾಗಾಗಿ, ವಿದ್ಯಾರ್ಥಿಗಳು ಆತಂಕ ಪಡುವ ಅಗತ್ಯವಿಲ್ಲ ಎಂದರು.

ದಿ ಪ್ರಿಂಟರ್ಸ್ (ಮೈಸೂರು) ಪ್ರೈ.ಲಿ ಜಂಟಿ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ತಿಲಕ್‌ಕುಮಾರ್, ಸಿಎಒ ಕಿರಣ್ ಸುಂದರ್‌ರಾಜ್, ಡೆಕ್ಕನ್ ಹೆರಾಲ್ಡ್ ಕಾರ್ಯನಿರ್ವಾಹಕ ಸಂಪಾದಕ ಕೆ.ವಿ. ಸುಬ್ರಹ್ಮಣ್ಯ, ‘ಡಾ.ಬ್ರೋ’ ಖ್ಯಾತಿಯ ಗಗನ್ ಶ್ರೀನಿವಾಸ್ ಉಪಸ್ಥಿತರಿದ್ದರು.

ಸ್ಪರ್ಧಾ ಪರೀಕ್ಷೆಗೆ ‘ಪ್ರಜಾವಾಣಿ’ಯೇ ಆಕರ

‘ಸ್ಪರ್ಧಾ ಪರೀಕ್ಷೆಗಳಿಗೆ ಸಿದ್ಧತೆ ನಡೆಸುವ ಕರ್ನಾಟಕದ ವಿದ್ಯಾರ್ಥಿಗಳ ಸಾಮಾನ್ಯ ಜ್ಞಾನ ವೃದ್ಧಿಗೆ ‘ಪ್ರಜಾವಾಣಿ’ಯೇ ಪ್ರಮುಖ ಆಕರ. ಸ್ಪರ್ಧಾ ಪರೀಕ್ಷೆಗಳಲ್ಲಿ ಯಶಸ್ಸು ಕಂಡ ಯಾರನ್ನೇ ಕೇಳಿದರೂ ಈ ಮಾತು ಹೇಳುತ್ತಾರೆ’ ಎಂದು ಪ್ರಸನ್ನ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

‘ನಿತ್ಯವೂ ದಿನ ಪತ್ರಿಕೆ ಓದುವ ಅಭ್ಯಾಸ ಮಾಡಿಕೊಂಡರೆ ಸಾಮಾನ್ಯ ಜ್ಞಾನ ಹೆಚ್ಚಾಗುತ್ತದೆ. ಸ್ಪರ್ಧಾ ಪರೀಕ್ಷೆಗಳಲ್ಲಿ ಯಶಸ್ಸು ಖಂಡಿತಾ ಸಿಗುತ್ತದೆ’ ಎಂದರು.

‘ಪ್ರಜಾವಾಣಿಯಲ್ಲಿ ಬಂದರಷ್ಟೆ ಸತ್ಯ’

‘ಚಾಟ್ ಜಿಪಿಟಿ ಸೇರಿದಂತೆ ಎಐ ತಂತ್ರಜ್ಞಾನ ನೀಡುವ ಮಾಹಿತಿಯ ವಿಶ್ವಾಸಾರ್ಹತೆ ಇನ್ನೂ ಖಚಿತವಾಗಿಲ್ಲ. ಇಂತಹ ತಾಂತ್ರಿಕ ಭರಾಟೆಯಲ್ಲೂ ‘ಪ್ರಜಾವಾಣಿ’ಯಲ್ಲಿ ಬಂದ ನಂತರವೇ ಒಂದು ಸುದ್ದಿ ಸತ್ಯ ಎಂದು ಜನರು ನಂಬುತ್ತಾರೆ’ ಎಂದು ರೇವಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಜೆ.ಬಿ.ಸಿಂಹ ಹೇಳಿದರು.

‘ಶಿಕ್ಷಣ ಸಂಸ್ಥೆಗಳೂ ಇಂತಹ ವಿಶ್ವಾಸಾರ್ಹತೆ ಉಳಿಸಿಕೊಂಡಾಗ ವಿದ್ಯಾರ್ಥಿಗಳು ಪ್ರವೇಶ ಪಡೆಯಲು ಬಯಸುತ್ತಾರೆ’ ಎಂದರು.

ಹಿಂದಿಗೆ ಗ್ರೇಡ್– ರಾಜ್ಯಪಾಲರ ಹಸ್ತಕ್ಷೇಪ ಬೇಡ: ಕರವೇ

ಪ್ರಜಾವಾಣಿ ವಾರ್ತೆ


ನಾರಾಯಣ ಗೌಡ

ಬೆಂಗಳೂರು: ‘ಹಿಂದಿ ಭಾಷೆಗೆ ಗ್ರೇಡ್ ನೀಡುವ ಸರ್ಕಾರದ ನಿರ್ಧಾರವನ್ನು ಮರುಪರಿಶೀಲಿಸುವಂತೆ ರಾಜ್ಯಪಾಲರು ಹೇಳಿರುವುದು ಒಕ್ಕೂಟ ವ್ಯವಸ್ಥೆಯನ್ನು ಅಣಕಿಸುವಂತೆ ಇದೆ. ಅವರ ಪತ್ರ ಹಸ್ತಕ್ಷೇಪ ಸರಿಯಲ್ಲ’ ಎಂದು ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯ ಘಟಕದ ಅಧ್ಯಕ್ಷ ಟಿ.ಎ.ನಾರಾಯಣಗೌಡ ಹೇಳಿದ್ದಾರೆ.

‘ರಾಜ್ಯಪಾಲರು ಸರ್ಕಾರದ ಪದನಿಮಿತ್ತ ಮುಖ್ಯಸ್ಥರು. ಅವರು ಜನರಿಂದ ನೇರವಾಗಿ ಆಯ್ಕೆಯಾದ ಜನಪ್ರತಿನಿಧಿಯಲ್ಲ. ಒಂದು ಸರ್ಕಾರ ಬಹುಮತದೊಂದಿಗೆ ಸದೃಢವಾಗಿ ಕಾರ್ಯ ನಿರ್ವಹಿಸುತ್ತಿರುವಾಗ ದೈನಂದಿನ ಆಡಳಿತದಲ್ಲಿ ಮೂಗು ತೂರಿಸಲು ಅವರಿಗೆ ಯಾವುದೇ ನೈತಿಕ ಅಧಿಕಾರವಿಲ್ಲ, ಅದು ಸಾಂವಿಧಾನಿಕ ಹೊಣೆಗಾರಿಕೆ ಅಲ್ಲ’ ಎಂದು ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ಟೀಕಿಸಿದ್ದಾರೆ.

‘ರಾಜ್ಯದ ಶಿಕ್ಷಣ ವ್ಯವಸ್ಥೆಯಲ್ಲಿ ಕಾಲಕಾಲಕ್ಕೆ ಬದಲಾವಣೆ ಮಾಡುವ ಸಂವಿಧಾನಬದ್ಧ ಹಕ್ಕು ರಾಜ್ಯ ಸರ್ಕಾರಕ್ಕಿದೆ. ಸರ್ಕಾರ ಈಗ ಗ್ರೇಡ್ ವ್ಯವಸ್ಥೆ ಜಾರಿಗೆ ತರುತ್ತಿರುವುದಕ್ಕೆ ಸಾಕಷ್ಟು ಕಾರಣಗಳಿವೆ. ‘ಬೆಂಗಳೂರು ಸ್ಥಳೀಯ ಭಾಷೆಗಳ ಸಂರಕ್ಷಣಾ ಸಂಘ’ದವರ ಮನವಿಗೆ, ರಾಜ್ಯಪಾಲರು ತುರ್ತಾಗಿ ಪ್ರತಿಕ್ರಿಯಿಸಿದ್ದಾರೆ. ಬೆಂಗಳೂರಿನಲ್ಲಿ ಇಂಥದ್ದೊಂದು ಸಂಘ ಇದೆ ಎಂಬುದೇ ನಮಗೆ ತಿಳಿದಿರಲಿಲ್ಲ’ ಎಂದಿದ್ದಾರೆ.

‘ಉತ್ತರದ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ತ್ರಿಭಾಷಾ ನೀತಿ ಅನ್ವಯ ಕನ್ನಡವನ್ನು ಮೂರನೇ ಭಾಷೆಯನ್ನಾಗಿ ಅಲ್ಲಿನ ಮಕ್ಕಳಿಗೆ ಕಲಿಸಲು ಹೇಳಿ. ನೀವು ಹಿಂದಿ ಸಾಮ್ರಾಜ್ಯಶಾಹಿಯ ಲಾಬಿಯ ಪರವಾಗಿ ಮಾತನಾಡುತ್ತಿದ್ದೀರಿ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರೇ ಪ್ರಭುಗಳು. ಇನ್ಯಾರೋ ಇಲ್ಲಿ ರಾಜರಂತೆ ಮೆರೆಯುವುದು ಸಾಧ್ಯವಿಲ್ಲ. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ನೀವು ಬರೆದಿರುವ ಪತ್ರವನ್ನು ಕೂಡಲೇ ಹಿಂದಕ್ಕೆ ಪಡೆಯಿರಿ’ ಎಂದು ಅವರು ರಾಜ್ಯಪಾಲರನ್ನು ಒತ್ತಾಯಿಸಿದ್ದಾರೆ.

ಶಶಿ ತರೂರ್ ಕಾರು ಚಾಲಕ, ಭದ್ರತಾ ಸಿಬ್ಬಂದಿ ಮೇಲೆ ಹಲ್ಲೆ

ಮಲಪ್ಪುರ (ಪಿಟಿಐ): ಕಾಂಗ್ರೆಸ್ ಸಂಸದ ಶಶಿ ತರೂರ್ ಅವರ ಭದ್ರತಾ ಸಿಬ್ಬಂದಿ ಹಾಗೂ ಕಾರು ಚಾಲಕನ ಮೇಲೆ ಐದು ಮಂದಿಯ ಗುಂಪೊಂದು ಹಲ್ಲೆ ನಡೆಸಿರುವ ಘಟನೆ ಕೇರಳದ ವಂಡೂರಿನಲ್ಲಿ ಶುಕ್ರವಾರ ಸಂಜೆ ನಡೆದಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಒಬ್ಬ ಆರೋಪಿಯನ್ನು ಬಂಧಿಸಲಾಗಿದೆ. ಉಳಿದ ನಾಲ್ವರ ಗುರುತು ಪತ್ತೆಯಾಗಿದ್ದು, ಅವರಿಗಾಗಿ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ಶನಿವಾರ ತಿಳಿಸಿದರು.

ಕಾಂಗ್ರೆಸ್ ನಾಯಕ ಎ.ಪಿ ಅನಿಲ್‌ಕುಮಾರ್ ಪರವಾಗಿ ಪ್ರಚಾರ ಮಾಡಲು ತರೂರ್ ಅವರು ಹೊರಟಿದ್ದ ವೇಳೆ ವಂಡೂರಿನ ಚೆಲ್ಲಿತೋಡ್‌ನಲ್ಲಿ ಘಟನೆ ನಡೆದಿದೆ. ತರೂರ್ ಅವರ ಭದ್ರತಾ ಸಿಬ್ಬಂದಿ ನೀಡಿದ ದೂರಿನ ಮೇರೆಗೆ ಎಫ್‌ಐಆರ್ ದಾಖಲಿಸಲಾಗಿದೆ ಎಂದರು. ಈ ಬಗ್ಗೆ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ತರೂರ್ ‘ಘಟನೆಯಲ್ಲಿ ನನಗೆ ಯಾವುದೇ ತೊಂದರೆಯಾಗಿಲ್ಲ. ನಮ್ಮ ಸಿಬ್ಬಂದಿ ಮೇಲಿನ ದಾಳಿ ಕುರಿತು ಕಳವಳಗೊಂಡಿದ್ದೇನೆ. ಯಾವುದೇ ಕಾರ್ಯಕ್ರಮಗಳಿಗೂ ತೊಂದರೆಯಾಗಿಲ್ಲ’ ಎಂದಿದ್ದಾರೆ.

ಮಹಾರಾಷ್ಟ್ರ ಎಸ್‌ಐಆರ್: ವಿಬಿಎ ಮುಖ್ಯಸ್ಥ ಪ್ರಕಾಶ್ ಅಂಬೇಡ್ಕರ್ ಆರೋಪ

‘2.9ಕೋಟಿ ಮತದಾರರಿಗೆ ಕೊಕ್’


ಪ್ರಕಾಶ್ ಅಂಬೇಡ್ಕರ್

ಮುಂಬೈ (ಪಿಟಿಐ): ‘ಮಹಾರಾಷ್ಟ್ರದ ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವೇಳೆ 2.9 ಕೋಟಿ ಹೆಸರನ್ನು ಪಟ್ಟಿಯಿಂದ ತೆಗೆದು ಹಾಕಬಹುದು’ ಎಂದು ವಂಚಿತ ಬಹುಜನ ಅಘಾಡಿ (ಬಿವಿಎ) ಪಕ್ಷದ ನಾಯಕ ಪ್ರಕಾಶ್ ಅಂಬೇಡ್ಕರ್ ಆತಂಕ ವ್ಯಕ್ತಪಡಿಸಿದ್ದಾರೆ.

‘ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಮತದಾರರ ಹೆಸರನ್ನು ಅಳಿಸಿಹಾಕಿದರೆ, ಮುಂಬರುವ ಚುನಾವಣೆಗಳಲ್ಲಿ ನೇರ ಪರಿಣಾಮ ಬೀರಲಿದೆ’ ಎಂದು ಹೇಳಿದ್ದಾರೆ.

‘ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ವಾರ್ಡ್‌ನಲ್ಲಿರುವ ಸಂತ್ರಸ್ತ ಕುಟುಂಬಗಳನ್ನು ಒಂದುಗೂಡಿಸಿ, ಮಾಧ್ಯಮಗಳ ಮುಂದೆ ಪ್ರಸ್ತುತಪಡಿಸಿದ್ದರೆ ಸರ್ಕಾರದ ಸುಳ್ಳು ಬಯಲಾಗುತ್ತಿತ್ತು. ಚುನಾವಣಾ ಆಯೋಗವು ವಂಚನೆ ಮಾಡುತ್ತಿದೆ ಎಂದು ಸಾಬೀತುಪಡಿಸಬಹುದಿತ್ತು’ ಎಂದು ತಿಳಿಸಿದ್ದಾರೆ.

ಚುನಾವಣಾ ಆಯೋಗದ ಕಾರ್ಯವೈಖರಿ ಕುರಿತಂತೆ ಸಾಮಾಜಿಕ ಜಾಲತಾಣದಲ್ಲಿ ಗಂಭೀರ ಪ್ರಶ್ನೆಗಳನ್ನು ಎತ್ತಿದ್ದಾರೆ.

‘ಮತದಾರರ ಪಟ್ಟಿ ಪರಿಷ್ಕರಣೆಯ ಪ್ರಕ್ರಿಯೆಯಲ್ಲಿ ನಡೆಯುತ್ತಿರುವ ಅಕ್ರಮವು ದೊಡ್ಡ ಸಂಖ್ಯೆಯ ಮತದಾರರನ್ನು ಹೊರಗಿಡುವುದಕ್ಕೆ ಕಾರಣವಾಗುವ ಅಪಾಯವಿದೆ’ ಎಂದು ದೂರಿದ್ದಾರೆ.

ನಕಲಿ ಮತದಾರರು ಹಾಗೂ ಮೃತಪಟ್ಟವರ ಹೆಸರನ್ನು ತೆಗೆದುಹಾಕುವ ನಿಟ್ಟಿನಲ್ಲಿ ಚುನಾವಣಾ ಆಯೋಗವು ದೇಶದಾದ್ಯಂತ ಎಸ್‌ಐಆರ್ ಪ್ರಕ್ರಿಯೆ ನಡೆಸುತ್ತಿದೆ. ನಿರ್ದಿಷ್ಟ ಸಿದ್ಧಾಂತ, ಗುಂಪು ಹೊಂದಿದ ವ್ಯಕ್ತಿಗಳ ಹೆಸರನ್ನು ಮಾತ್ರ ಪಟ್ಟಿಯಿಂದ ಕೈ ಬಿಡಲಾಗುತ್ತಿದೆ ಎಂದು ಪ್ರತಿಪಕ್ಷಗಳು ವಿರೋಧ ವ್ಯಕ್ತಪಡಿಸಿವೆ.

ಎಸ್‌ಐಆರ್‌ಗೆ ಪಂಜಾಬ್ ಸಜ್ಜು: ಸಿಇಒ

ಚಂಡೀಗಢ (ಪಿಟಿಐ): ‘ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ (ಎಸ್‌ಐಆರ್)ಗಾಗಿ ಪಂಜಾಬ್ ಸಿದ್ಧವಾಗಿದೆ. ಆಯೋಗದ ದಿನಾಂಕ ನಿಗದಿಗೂ ಮುನ್ನವೇ ಪೂರ್ವ ಸಿದ್ಧತಾ ಪ್ರಕ್ರಿಯೆಗಳು ಪ್ರಗತಿಯಲ್ಲಿವೆ’ ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿ ತಿಳಿಸಿದ್ದಾರೆ.

‘ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಸಮಗ್ರ ಎಸ್‌ಐಆರ್‌ನ ಮ್ಯಾಪಿಂಗ್ ಪ್ರಕ್ರಿಯೆಯನ್ನು ಆರಂಭಿಸಲಾಗಿದೆ’ ಎಂದು ಪಂಜಾಬ್‌ನ ಮುಖ್ಯ ಚುನಾವಣಾ ಅಧಿಕಾರಿ ಅನಿಂದಿತಾ ಮಿತ್ರಾ ತಿಳಿಸಿದ್ದಾರೆ.

ಏಪ್ರಿಲ್ 4ರವರೆಗೆ ಲಭ್ಯವಾದ ಅಂಕಿಅಂಶಗಳ ಪ್ರಕಾರ, ‘ಶೇಕಡ 74.27ರಷ್ಟು ಮತದಾರರ ಮ್ಯಾಪಿಂಗ್ ಪೂರ್ಣಗೊಳಿಸಲಾಗಿದೆ. ರಾಜ್ಯದ 2.14 ಕೋಟಿ ಮತದಾರರ ಪೈಕಿ 1.59 ಕೋಟಿ ಮತದಾರರನ್ನು ಮ್ಯಾಪಿಂಗ್ ಮಾಡಲಾಗಿದೆ’ ಎಂದು ತಿಳಿಸಿದ್ದಾರೆ.

‘ಬಿಜೆಪಿಯವರು ಕ್ಷಮೆ ಕೇಳಲಿ’

ಪ್ರಜಾವಾಣಿ ವಾರ್ತೆ


ಶಿವಕುಮಾರ್

ಸಿಲಿಂಡರ್ ಅಭಾವ

ಬೆಂಗಳೂರು: ‘ರಾಜ್ಯದಲ್ಲಿ ಎಲ್‌ಪಿಜಿ ಅಭಾವದಿಂದ ಆಟೊ ಚಾಲಕರಿಗೆ ತೊಂದರೆಯಾಗುತ್ತಿದ್ದು, ಸಂಚಾರ ವ್ಯವಸ್ಥೆಯ ಮೇಲೆ ಪರಿಣಾಮ ಉಂಟಾಗುತ್ತಿದೆ. ಅಲ್ಲದೆ, ಹೋಟೆಲ್ ಉದ್ಯಮ ಕೂಡಾ ಸಮಸ್ಯೆ ಎದುರಿಸುತ್ತಿದೆ. ಕೇಂದ್ರ ಸರ್ಕಾರ ಈ ಬಗ್ಗೆ ಗಮನಹರಿಸಬೇಕು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಗ್ರಹಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ಎಲ್‌ಪಿಜಿ ಪೂರೈಕೆ ಅಧಿಕಾರ ರಾಜ್ಯ ಸರ್ಕಾರದ ಕೈಯಲ್ಲಿಲ್ಲ. ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ಕೇಂದ್ರ ಸರ್ಕಾರ ಸರಿಯಾಗಿ ಮುಂಜಾಗ್ರತೆ, ನೀತಿ ರೂಪಿಸುವ ವಿಚಾರದಲ್ಲಿ ವಿಫಲವಾಗಿದೆ. ಈ ಕುರಿತು ಬಿಜೆಪಿಯವರು ಈವರೆಗೂ ಯಾಕೆ ಮಾತನಾಡುತ್ತಿಲ್ಲ. ನಮ್ಮಿಂದ ತೊಂದರೆಯಾಗಿದೆ ಎಂದು ಒಪ್ಪಿಕೊಂಡು ಜನರ ಬಳಿ ಕ್ಷಮೆ ಕೋರಬೇಕು’ ಎಂದರು.

ಕೇಂದ್ರದ ಲೋಪದಿಂದಲೇ ಪರದಾಟ: ಸಚಿವ ಮುನಿಯಪ್ಪ


ಮುನಿಯಪ್ಪ

ಬಾಗಲಕೋಟೆ: ‘ಕೇಂದ್ರ ಸರ್ಕಾರದ ಮುಂದಾಲೋಚನೆ ಕೊರತೆಯಿಂದ ರಾಜ್ಯದ ಜನರು ಸಿಲಿಂಡರ್, ಸಿಎನ್‌ಜಿಗಾಗಿ ಪರದಾಡುವಂತಾಗಿದೆ’ ಎಂದು ಸಚಿವ ಕೆ.ಎಚ್.ಮುನಿಯಪ್ಪ ಶನಿವಾರ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ತಿಂಗಳ ಮೊದಲೇ ಈ ಬಗ್ಗೆ ಟ್ರಂಪ್ ಸೂಚನೆ ನೀಡಿದ್ದರು. ರಷ್ಯಾದಿಂದ ತರಿಸುವ ನಿರ್ಧಾರವನ್ನು ಮೊದಲೇ ತೆಗೆದುಕೊಳ್ಳಬೇಕಾಗಿತ್ತು. ಯುದ್ಧ ಪರಿಸ್ಥಿತಿ ನಿರ್ವಹಣೆಯಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ’ ಎಂದು ದೂರಿದರು.

ಆತಂಕಕ್ಕೆ ದೂಡಿದ ಎಲ್‌ಪಿಜಿ ಸಂಪರ್ಕ ಸ್ಥಗಿತ

ಒಂದನೇ ಪುಟದಿಂದ...

ಎರಡು ಭಿನ್ನ ಕಂಪನಿಗಳ ಸಂಪರ್ಕ ಹೊಂದಿರುವವರ ಎರಡೂ ಸಂಪರ್ಕಗಳು ರದ್ದಾಗಿರುವುದರಿಂದ ಗ್ರಾಹಕರಿಗೆ ಸಮಸ್ಯೆ ಎದುರಾಗಿದೆ. ಉದಾಹರಣೆಗೆ ಗ್ರಾಹಕರೊಬ್ಬರು ಎಚ್‌ಪಿಸಿಎಲ್ ಮತ್ತು ಬಿಪಿಸಿಎಲ್ ಎಲ್‌ಪಿಜಿ ಸಂಪರ್ಕ ಹೊಂದಿದ್ದರೆ, ಎರಡೂ ಕಂಪನಿಗಳು ತಮ್ಮಲ್ಲಿನ ಖಾತೆಯನ್ನು ಸ್ಥಗಿತಗೊಳಿಸುತ್ತಿವೆ. ಈ ಕ್ರಮಕ್ಕೂ ಮುನ್ನ ಕಂಪನಿಗಳು ಗ್ರಾಹಕರಿಗೆ ಯಾವುದೇ ಮಾಹಿತಿ ನೀಡುತ್ತಿಲ್ಲ, ಸಂಪರ್ಕ ಸ್ಥಗಿತದ ನಂತರವೂ ಮಾಹಿತಿ ರವಾನಿಸುತ್ತಿಲ್ಲ. ಇದರಿಂದ ಸಮಸ್ಯೆಗೆ ಸಿಲುಕುವಂತಾಗಿದೆ.

> ಎಲ್‌ಪಿಜಿ ಸಂಪರ್ಕ ಇರುವವರಿಗೆ ಕೆವೈಸಿ ಕಡ್ಡಾಯ. ಇದನ್ನು ನೀಡಬೇಕು. ಇಲ್ಲದಿದ್ದರೆ ಸಂಪರ್ಕವನ್ನು ತಡೆಯುವ ಇಲ್ಲವೇ ಸಹಾಯಧನ ರದ್ದುಪಡಿಸುವ ಸಾಧ್ಯತೆ ಇದೆ
> **ಮೆಹುಲ್ ಪಟೇಲ್,** ಕರ್ನಾಟಕ ಎಲ್‌ಪಿಜಿ ವಿತರಕರ ಸಂಘದ ಅಧ್ಯಕ್ಷ

> ಒಂದಕ್ಕಿಂತ ಹೆಚ್ಚು ಎಲ್‌ಪಿಜಿ ಸಂಪರ್ಕ ಸ್ಥಗಿತಗೊಳ್ಳುತ್ತಿರುವ ಬಗ್ಗೆ ದೂರುಗಳು ಬಂದಿವೆ. ಕಂಪನಿಗಳೇ ಇಂತಹ ಕ್ರಮ ತೆಗೆದುಕೊಂಡಿವೆ. ಗ್ರಾಹಕರು ಈ ಬಗ್ಗೆ ತಮ್ಮ ಏಜೆನ್ಸಿಗೆ ಮಾಹಿತಿ ಒದಗಿಸಿದರೆ, ಸಂಪರ್ಕ ಸಕ್ರಿಯಗೊಳ್ಳುತ್ತದೆ
> **ರಮ್ಯಾ, ಜಂಟಿ ನಿರ್ದೇಶಕಿ,** ಆಹಾರ ಇಲಾಖೆ



‘ಕಂಪನಿಗಳು ಆಧಾರ್ ಸರ್ವರ್ ಮಾಹಿತಿ ಆಧರಿಸಿ ನೇರವಾಗಿ ಸಂಪರ್ಕ ರದ್ದು ಮಾಡುವುದರಿಂದ ಗ್ರಾಹಕರಿಗೆ ತಿಳಿಯುವುದೇ ಇಲ್ಲ. ನಿತ್ಯ ಹಲವು ಗ್ರಾಹಕರು ನಮಗೂ ದೂರು ನೀಡುತ್ತಿದ್ದಾರೆ. ಎರಡು ಸಂಪರ್ಕ ಇರುವವರು, ಒಂದನ್ನು ಕುಟುಂಬದ ಇನ್ನೊಬ್ಬರ ಹೆಸರಿಗೆ ವರ್ಗಾಯಿಸಿಕೊಳ್ಳುವುದು ಈಗ ಸುಲಭವಲ್ಲ. ಕಚೇರಿಗೆ ತೆರಳಿ ಮಾಹಿತಿ ಪಡೆದು ಈಗಲೇ ಗೊಂದಲ ಬಗೆಹರಿಸಿಕೊಳ್ಳಬೇಕು’ ಎಂದು ಬೆಂಗಳೂರಿನ ಏಜೆನ್ಸಿಯೊಂದರ ವ್ಯವಸ್ಥಾಪಕರು ತಿಳಿಸಿದರು.

ರಾಜ್ಯದಲ್ಲಿ ಒಂದಕ್ಕಿಂತ ಹೆಚ್ಚು ಎಲ್‌ಪಿಜಿ ಸಂಪರ್ಕ ಹೊಂದಿರುವವರ ಸಂಖ್ಯೆ 2.75 ಲಕ್ಷದಷ್ಟಿದೆ ಎಂದು ಆಹಾರ ಇಲಾಖೆಯ ಮೂಲಗಳು ಹೇಳಿವೆ.

ವಯನಾಡ್: ಪುನರ್ವಸತಿಗೆ ₹5.38 ಕೋಟಿ ಸಂಗ್ರಹ

ಕಣ್ಣೂರು (ಕೇರಳ) (ಪಿಟಿಐ): ‘ವಯನಾಡ್‌ನಲ್ಲಿ ಪುನರ್ವಸತಿ ಕಲ್ಪಿಸಲು ಕಾಂಗ್ರೆಸ್ ಖಾತೆಗೆ ಸುಮಾರು ₹5.38 ಕೋಟಿ ಬಂದಿದೆ. ಅದನ್ನು ಭೂಕುಸಿತದಲ್ಲಿ ಮನೆ ಕಳೆದುಕೊಂಡವರಿಗೆ ವಸತಿ ಒದಗಿಸಲು ಜಮೀನು ಖರೀದಿಗೆ ಬಳಸಲಾಗಿದೆ’ ಎಂದು ಕೇರಳ ಕಾಂಗ್ರೆಸ್ ಅಧ್ಯಕ್ಷ ಸನ್ನಿ ಜೋಸೆಫ್ ಅವರು ಶನಿವಾರ ತಿಳಿಸಿದರು.

‘ಯುವ ಕಾಂಗ್ರೆಸ್ ಕೂಡ ಸುಮಾರು ₹1.05 ಕೋಟಿ ಸಂಗ್ರಹಿಸಿದೆ. ಸಂಗ್ರಹಿಸಿದ ಹಣ ಕಡಿಮೆಯಾಗಿ ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯ ಸ್ವಂತ ಖಾತೆಯಿಂದ ಹೆಚ್ಚುವರಿಯಾಗಿ ₹97 ಲಕ್ಷವನ್ನು ಖರ್ಚು ಮಾಡಿದೆ’ ಎಂದು ಹೇಳಿದರು.

ಗಣತಿ ವಿನಾಯಿತಿಗೆ ಉಪನ್ಯಾಸಕರ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನಗಣತಿ ಕಾರ್ಯದಿಂದ ವಿನಾಯಿತಿ ನೀಡುವಂತೆ ಪದವಿಪೂರ್ವ ಉಪನ್ಯಾಸಕರು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ.

ಶಾಲಾ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆದಿರುವ ಪದವಿಪೂರ್ವ ಉಪನ್ಯಾಸಕರ ಸಂಘದ ಅಧ್ಯಕ್ಷ ಎ.ಎಚ್.ನಿಂಗೇಗೌಡ, ಜನಗಣತಿಗೆ ಸಾವಿರಾರು ಉಪನ್ಯಾಸಕರನ್ನು ನಿಯೋಜಿಸಲಾಗಿದೆ. ಮಾರ್ಚ್ ತಿಂಗಳಲ್ಲೇ ಮುಖ್ಯ ತರಬೇತುದಾರರಿಗೆ ತರಬೇತಿ ಪೂರ್ಣಗೊಂಡಿದೆ. ಗಣತಿ ಕಾರ್ಯ ನಡೆಸುವವರಿಗೆ ಮೂರು ಹಂತಗಳಲ್ಲಿ ತರಬೇತಿ ನೀಡಲು ಕ್ರಮ ಕೈಗೊಳ್ಳಲಾಗಿದೆ. ಜನಗಣತಿ ಕಾರ್ಯ ಏ.16ರಿಂದ ಮೇ 16ರವರೆಗೆ ನಡೆಯಲಿದ್ದು, ಅಧಿಕೃತ ಜನಗಣತಿ ಫೆ.2027ರಿಂದ ಪ್ರಾರಂಭವಾಗಲಿದೆ. ಆದರೆ, ದ್ವಿತೀಯ ಪಿಯುಗೆ ಮೂರು ಪರೀಕ್ಷೆಗಳು, ಮೌಲ್ಯಮಾಪನ, ಪರಿಹಾರ ಬೋಧನೆ, ಸಿಇಟಿ ಸೇರಿದಂತೆ ಹಲವು ಕೆಲಸಗಳನ್ನು ನಿರ್ವಹಿಸಬೇಕಿರುವ ಕಾರಣ ಜನಗಣತಿ ಕೆಲಸದಿಂದ ವಿನಾಯಿತಿ ನೀಡಬೇಕು ಎಂದಿದ್ದಾರೆ. ವಾರ್ಷಿಕ ಪರೀಕ್ಷೆಗಳ ಕಾರಣದಿಂದ ತಾತ್ಕಾಲಿಕವಾಗಿ ಸ್ಥಗಿತಗೊಂಡಿದ್ದ ತರಗತಿಗಳನ್ನು ಏ.1ರಿಂದ ಪುನರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ. ಈ ವೇಳೆ ಗಣತಿ ಕಾರ್ಯದಲ್ಲಿ ನಿಯೋಜನೆಗೊಂಡ ಉಪನ್ಯಾಸಕರಿಗೆ ತೊಂದರೆಯಾಗಲಿದೆ ಎಂದು ವಿವರಿಸಿದ್ದಾರೆ.

ಉದ್ಯೋಗ ಖಾತರಿ ಮೇಲೆ ತೂಗುಗತ್ತಿ

ಒಂದನೇ ಪುಟದಿಂದ...

‘ಏಪ್ರಿಲ್ 1ರಿಂದ ನೂತನ ಹಣಕಾಸು ವರ್ಷ ಆರಂಭವಾಗುತ್ತದೆ. ನರೇಗಾಗಾಗಿ ಕೇಂದ್ರವು ತೆಗೆದಿರಿಸಿರುವ ₹30,000 ಕೋಟಿಯಲ್ಲಿ ₹24,625 ಕೋಟಿಯಷ್ಟು ಬಾಕಿಯನ್ನು ಬಿಡುಗಡೆ ಮಾಡಿದರೆ, ಈ ವರ್ಷದಲ್ಲಿ ನರೇಗಾ ಅಡಿ ಕಾಮಗಾರಿ ನಡೆಸಲು ಅನುದಾನವೇ ಉಳಿಯುವುದಿಲ್ಲ. 2026–27ನೇ ಸಾಲಿಗೆ, ನರೇಗಾ ಅಡಿ ಮತ್ತು ವಿಬಿ ಜಿರಾಮ್‌ಜಿ ಅಡಿಯಲ್ಲಿ ಕರ್ನಾಟಕವೂ ಸೇರಿ ಯಾವ ರಾಜ್ಯಕ್ಕೂ ಅನುದಾನ ಹಂಚಿಕೆ ಆಗಿಲ್ಲ. ಹೀಗಾಗಿ ರಾಜ್ಯ ಸರ್ಕಾರವೂ ಅನುದಾನ ಮೀಸಲಿಡಲು ತಾಂತ್ರಿಕ ತೊಂದರೆ ಎದುರಾಗಿದೆ. ಅನುದಾನವೇ ಇಲ್ಲದೆ ಉದ್ಯೋಗ ಖಾತರಿ ಒದಗಿಸಲು ಸಾಧ್ಯವಾಗುತ್ತಿಲ್ಲ’ ಎಂದು ಗ್ರಾಮೀಣಾಭಿವೃದ್ಧಿ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.


‘2025–26ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಕರ್ನಾಟಕಕ್ಕೆ ₹301.04 ಕೋಟಿ ಕೂಲಿ ಮೊತ್ತ, ₹834.68 ಕೋಟಿ ಸಾಮಗ್ರಿ ವೆಚ್ಚ ಮತ್ತು ₹29.44 ಕೋಟಿ ಆಡಳಿತ ವೆಚ್ಚ ಸೇರಿ ಒಟ್ಟು ₹1,165.16 ಕೋಟಿ ಬಾಕಿ ಉಳಿಸಿಕೊಂಡಿದೆ. ವಿಬಿ ಜಿರಾಮ್‌ಜಿ ಅಡಿಯಲ್ಲಿ ಪೂರ್ವ ಅನುಮೋದಿತ ಕಾಮಗಾರಿಗಳಿಗಷ್ಟೇ ಕೇಂದ್ರವು ಹಣ ನೀಡಲಿದೆ. ಕೇಂದ್ರದಿಂದ ನಿಯಮ ರಚನೆಯಾಗದೆ, ಕಾಮಗಾರಿಗಳಿಗೆ ಅನುಮೋದನೆ ಸಿಗದೆ ಜನರಿಗೆ ಉದ್ಯೋಗ ನೀಡುವುದು ಹೇಗೆ’ ಎಂಬುದು ಅವರ ಪ್ರಶ್ನೆ.

‘ಅತ್ತ ನರೇಗಾ ಯೋಜನೆಗೆ ಹಣ ಹಂಚಿಕೆ ಮಾಡಿಲ್ಲ. ಹೀಗಾಗಿ ಆ ಯೋಜನೆಯನ್ನು ಮುಂದುವರೆಸಲು ಆಗುತ್ತಿಲ್ಲ. ಇತ್ತ ನಿಯಮ ರಚನೆಯಾಗದೇ ಇರುವುದರಿಂದ, ವಿಬಿ ಜಿರಾಮ್‌ಜಿ ಅಡಿಯಲ್ಲಿ ಯಾವ ಕಾಮಗಾರಿಗಳನ್ನು ನಡೆಸಬೇಕು, ಫಲಾನುಭವಿಗಳನ್ನು ಹೇಗೆ ಆಯ್ಕೆ ಮಾಡಬೇಕು, ಎಷ್ಟು ಮಾನವ ದಿನಗಳ ಉದ್ಯೋಗಗಳನ್ನು ಸೃಷ್ಟಿಸಬೇಕು ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲ. ಹೀಗಿದ್ದೂ ಕಾಮಗಾರಿ ನಡೆಸಿದರೆ ರಾಜ್ಯ ಸರ್ಕಾರವೇ ಸಂಪೂರ್ಣ ವೆಚ್ಚ ಭರಿಸಬೇಕಾಗುತ್ತದೆ. ಉದ್ಯೋಗ ಖಾತರಿ ಯೋಜನೆಯು ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿದೆ’ ಎಂದು ಅವರು ವಿವರಿಸಿದರು.

ಮುಂಗಡ ಕಾಯ್ದಿರಿಸಲಾಗದೇ ಸಂಕಷ್ಟಕ್ಕೆ ಸಿಲುಕಿದ ಪ್ರಯಾಣಿಕರು

ರೈಲು: ವಿಶೇಷವೂ ಇಲ್ಲ, ಸಾಮಾನ್ಯವೂ ಇಲ್ಲ

• ಬಾಲಕೃಷ್ಣ ಪಿ.ಎಚ್.



ಬೆಂಗಳೂರು: ನೈರುತ್ಯ ರೈಲ್ವೆಯಲ್ಲಿ ಹದಿನಾರು ವಿಶೇಷ ರೈಲುಗಳನ್ನು ಕಾಯಂಗೊಳಿಸಿ ಸಾಮಾನ್ಯ ರೈಲುಗಳನ್ನಾಗಿ ಪರಿವರ್ತನೆ ಮಾಡಿದ್ದರೂ ಯಶವಂತಪುರ–ಹೊಸೂರು ರೈಲು ಹೊರತುಪಡಿಸಿ ಉಳಿದವುಗಳು ಸಂಚರಿಸುತ್ತಿಲ್ಲ. ಇದರಿಂದ ಪ್ರಯಾಣಿಕರಿಗೆ ತೊಂದರೆ ಉಂಟಾಗಿದೆ.

ವಿಶೇಷ ರೈಲುಗಳನ್ನು ಎರಡು ಸಂದರ್ಭದಲ್ಲಿ ಓಡಿಸಲಾಗುತ್ತದೆ. ಅದರಲ್ಲಿ ಹಬ್ಬಗಳು ಬಂದಾಗ ಜನದಟ್ಟಣೆಯನ್ನು ಕಡಿಮೆ ಮಾಡಲು ಕೆಲವು ಟ್ರಿಪ್‌ಗಳಷ್ಟೇ ವಿಶೇಷ ರೈಲುಗಳಿರುತ್ತವೆ. ಈ ಸಾಂದರ್ಭಿಕ ವಿಶೇಷ ರೈಲುಗಳನ್ನು ಕಾಯಂಗೊಳಿಸಲು ಆಗುವುದಿಲ್ಲ. ಯಾವುದಾದರೂ ಪ್ರದೇಶಕ್ಕೆ ನಿತ್ಯ ಬೇಡಿಕೆ ಇದ್ದಾಗ, ಎಷ್ಟು ಪ್ರಯಾಣಿಕರು ಸಂಚರಿಸಬಹುದು ಎಂಬುದನ್ನು ನೋಡುವುದಕ್ಕಾಗಿ ಮೂರು ತಿಂಗಳು ಅಥವಾ ಆರು ತಿಂಗಳು ವಿಶೇಷ ರೈಲುಗಳನ್ನು ಓಡಿಸಲಾಗುತ್ತದೆ. ನಿರೀಕ್ಷೆಯಷ್ಟು ಪ್ರಯಾಣಿಕರ ಸಂಚಾರ ಇದ್ದಾಗ ಈ ರೈಲುಗಳನ್ನು ಕಾಯಂಗೊಳಿಸಲಾಗುತ್ತದೆ. ಪ್ರಯಾಣಿಕರ ಪ್ರಮಾಣ ಕಡಿಮೆ ಇದ್ದರೆ ರದ್ದುಗೊಳಿಸಲಾಗುತ್ತದೆ.

ಆದರೆ, ಆರು ವರ್ಷಗಳಿಂದ ವಿಶೇಷ ರೈಲುಗಳು ಸಂಚರಿಸುತ್ತಿದ್ದರೂ ಪರಿವರ್ತನೆ ಮಾಡಿರಲಿಲ್ಲ. ಮೂರು ಅಥವಾ ಆರು ತಿಂಗಳ ಅವಧಿ ಮುಗಿದ ಕೂಡಲೇ ಮತ್ತೆ ಅವಧಿ ವಿಸ್ತರಿಸುತ್ತಾ ಬರಲಾಗುತ್ತಿತ್ತು. ಈ ಬಗ್ಗೆ ‘ಪ್ರಜಾವಾಣಿ’ ಬೆಳಕು ಚೆಲ್ಲಿದ ಮೇಲೆ ಹಲವು ರೈಲುಗಳನ್ನು ಸಾಮಾನ್ಯ ರೈಲುಗಳನ್ನಾಗಿ ಮಾಡಲು ನೈರುತ್ಯ ರೈಲ್ವೆ ಕ್ರಮ ಕೈಗೊಂಡಿತ್ತು. ರೈಲ್ವೆ ಮಂಡಳಿಯು ಅದಕ್ಕೆ ಒಪ್ಪಿಗೆ ನೀಡಿ ಆದೇಶ ಹೊರಡಿಸಿತ್ತು.

ಇದರಿಂದಾಗಿ ಮಾರ್ಚ್ 31ಕ್ಕೆ ಹಲವು ವಿಶೇಷ ರೈಲುಗಳ ಅವಧಿಯನ್ನು ಮುಕ್ತಾಯಗೊಳಿಸಲಾಗಿದೆ. ಆದರೆ, ಏಪ್ರಿಲ್ 1 ರಿಂದ ಮುಂಗಡ ಕಾಯ್ದಿರಿಸಲು ಹೋದರೆ ವಿಶೇಷ ರೈಲುಗಳು ಅಥವಾ ಸಾಮಾನ್ಯ ರೈಲು ಯಾವುದೂ ಆನ್‌ಲೈನ್‌ಗಳಲ್ಲಿ ಕಾಣುತ್ತಿಲ್ಲ. ಕೆಲವಷ್ಟೇ ಇನ್ನೂ ವಿಶೇಷ ರೈಲುಗಳಾಗಿಯೇ ಉಳಿದಿವೆ.

‘ತಮಿಳುನಾಡಿನಲ್ಲಿ ಚುನಾವಣೆ ಇರುವುದರಿಂದ ಯಶವಂತಪುರ ಹೊಸೂರು ವಿಶೇಷ ರೈಲು ಸಾಮಾನ್ಯ ರೈಲಾಗಿ ಸಂಚರಿಸುತ್ತಿದೆ. ಮೈಸೂರು–ಅಜ್ಮೇರ್ ವಿಶೇಷ ರೈಲು ಪರಿವರ್ತನೆಗೊಂಡಿಲ್ಲದಿದ್ದರೂ ವಿಶೇಷ ರೈಲಾಗಿ ಸಂಚರಿಸುತ್ತಿದೆ. ಬೆಂಗಳೂರು ಕಂಟೋನ್ಮೆಂಟ್– ಕಲಬುರಗಿ ರೈಲು ಸಹಿತ ವಿವಿಧ ರೈಲುಗಳಿಲ್ಲದೇ ಸಮಸ್ಯೆಯಾಗಿದೆ’ ಎಂದ ರೈಲ್ವೆ ಹೋರಾಟಗಾರ ಕೆ.ಎನ್. ಕೃಷ್ಣಪ್ರಸಾದ್ ತಿಳಿಸಿದರು.

‘ಸಾಮಾನ್ಯ ರೈಲುಗಳಿಗಿಂತ ವಿಶೇಷ ರೈಲುಗಳಲ್ಲಿ ಟಿಕೆಟ್ ದರ ಶೇ 30ರಷ್ಟು ಹೆಚ್ಚಿರುತ್ತದೆ. ಅದಕ್ಕಾಗಿ ವಿಶೇಷ ರೈಲುಗಳನ್ನೇ ಓಡಿಸಲು ರೈಲ್ವೆ ಅಧಿಕಾರಿಗಳಿಗೆ ಆಸಕ್ತಿ ಹೆಚ್ಚು. ಬೆಂಗಳೂರು– ಬೀದರ್, ಯಶವಂತಪುರ–ತಾಳಗುಪ್ಪ, ಬೆಂಗಳೂರು–ಚನ್ನಪಟ್ಟಣ, ಎಸ್‌ಎಂವಿಟಿ–ಮೈಸೂರು, ಯಶವಂತಪುರ–ಹಿಂದೂಪುರ, ಹುಬ್ಬಳ್ಳಿ–ಹೃಷಿಕೇಶ ಸಹಿತ ಹಲವು ರೈಲುಗಳನ್ನು ಆದೇಶದಲ್ಲಷ್ಟೇ ಸಾಮಾನ್ಯ ರೈಲು ಎಂದು ತೋರಿಸಲಾಗಿದೆ. ಅದಿನ್ನೂ ಜಾರಿಗೆ ಬಂದಿಲ್ಲ. ವಿಶೇಷ ರೈಲುಗಳೂ ಇಲ್ಲದಾಗಿವೆ’ ಎಂದು ರೈಲ್ವೆ ಪ್ರಯಾಣಿಕ ಎಂ. ಕರಿಬಸಪ್ಪ ಹೇಳಿದರು.

‘ಅಧಿಸೂಚನೆ ಆಗುತ್ತಿದೆ’

‘ವರ್ಷಗಳಿಂದ ಸಂಚರಿಸುತ್ತಿರುವ ವಿಶೇಷ ರೈಲುಗಳನ್ನು ಸಾಮಾನ್ಯ ರೈಲುಗಳನ್ನಾಗಿ ಪರಿವರ್ತನೆ ಮಾಡಲು ನಾವು ರೈಲ್ವೆ ಮಂಡಳಿಗೆ ಪತ್ರ ಬರೆದಿದ್ದೆವು. ಸಾಮಾನ್ಯ ರೈಲುಗಳನ್ನಾಗಿ ಮಾಡಿ ರೈಲ್ವೆ ಮಂಡಳಿಯು ನಿರ್ಧಾರ ಕೈಗೊಂಡಿದೆ. ಒಂದೊಂದೇ ರೈಲಿಗೆ ಸಂಬಂಧಿಸಿದಂತೆ ಅಧಿಸೂಚನೆ ಹೊರಡಿಸಲಾಗುತ್ತಿದೆ. ಸದ್ಯದಲ್ಲಿಯೇ ಈ ಪ್ರಕ್ರಿಯೆ ಪೂರ್ಣಗೊಳ್ಳಲಿದೆ’ ಎಂದು ನೈರುತ್ಯ ರೈಲ್ವೆ ಸಾರ್ವಜನಿಕ ಸಂಪರ್ಕ ಅಧಿಕಾರಿ ಮಂಜುನಾಥ್ ಕನಮರಡಿ ತಿಳಿಸಿದರು.

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹23500
ಎಸಿ	₹14150
ಆರ್‌ಪಿ	₹18100
ಆರ್‌ಸಿ	₹9825

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹455
	12 ಕ್ಕೆ	₹72
ಮೈಸೂರು:	100 ಕ್ಕೆ	₹460

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹500-718
ದ್ವಿತಳಿ (ಬಿ.ವಿ)	₹455-820

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹224
ಆರ್‌ಎಸ್‌ಎಸ್-5	₹218
ಗುಡ್ ಲಾಟ್	₹187

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1780 (1780)
ಸೋಯಾ (ರಿಫೈನ್ಡ್)	₹1590 (1590)
ಸೂರ್ಯಕಾಂತಿ (ರಿಫೈನ್ಡ್)	₹1720 (1720)
ಪಾಮೋಲಿನ್	₹1490 (1490)

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹800-1300
ಮಧ್ಯಮ	₹500-800
ಸಣ್ಣ	₹200-500

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ದಾವಣಗೆರೆ	₹11400-12800
ಹೊಸದುರ್ಗ	₹30800-30800
ತುಮಕೂರು	₹28500-31000

ಭಾರತದ ಮೀನುಗಾರರಿಗೆ ಅರ್ಮೇನಿಯಾ ನೆರವು

ನವದೆಹಲಿ (ಪಿಟಿಐ): ಇರಾನ್‌ನಲ್ಲಿ ಸಿಲುಕಿದ್ದ ಭಾರತದ ಮೀನುಗಾರರು ಅರ್ಮೇನಿಯಾ ಮೂಲಕ ತವರಿಗೆ ಮರಳಲಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ತಿಳಿಸಿದ್ದಾರೆ.

ಭಾರತದ ಮೀನುಗಾರರು ತವರಿಗೆ ಮರಳಲು ನೆರವು ನೀಡಿದ್ದಕ್ಕಾಗಿ ಜೈಶಂಕರ್ ಅವರು ಅರ್ಮೇನಿಯಾದ ವಿದೇಶಾಂಗ ಸಚಿವ ಅರಾರತ್ ಮಿರ್ಜಯಾನ್ ಅವರಿಗೆ ಧನ್ಯವಾದ ತಿಳಿಸಿದ್ದಾರೆ. ಭಾರತಕ್ಕೆ ಮರಳುತ್ತಿರುವ ಮೀನುಗಾರರ ತಂಡದಲ್ಲಿ ಎಷ್ಟು ಮಂದಿ ಇದ್ದಾರೆ ಎಂಬುದು ತಿಳಿದುಬಂದಿಲ್ಲ.

'ಭಾರತದ ಮೀನುಗಾರರಿಗೆ ಇರಾನ್‌ನಿಂದ ಅರ್ಮೇನಿಯಾ ಮೂಲಕ ಭಾರತಕ್ಕೆ ಮರಳಲು ಅನುಕೂಲ ಮಾಡಿಕೊಟ್ಟಿದ್ದಕ್ಕಾಗಿ ಅರ್ಮೇನಿಯಾ ಸರ್ಕಾರಕ್ಕೆ ಧನ್ಯವಾದಗಳು' ಎಂದು ಜೈಶಂಕರ್ ಅವರು ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ.

ಪಶ್ಚಿಮ ಏಷ್ಯಾ ಸಂಘರ್ಷ ಪ್ರಾರಂಭವಾದಾಗಿನಿಂದ 1,150ಕ್ಕೂ ಹೆಚ್ಚು ಭಾರತೀಯರು ತವರಿಗೆ ವಾಪಸಾಗಲು ಇರಾನ್ ಗಡಿ ದಾಟಿ ಅರ್ಮೇನಿಯಾ ಮತ್ತು ಅಜರ್‌ಬೈಜಾನ್‌ಗೆ ತೆರಳಿದ್ದಾರೆ.

ಬ್ಯಾಂಕ್ ಸಾಲ ನೀಡಿಕೆ ಹೆಚ್ಚಳ

ವಿವಿಧ ಬ್ಯಾಂಕ್‌ಗಳಿಂದ ಮಾರ್ಚ್ ತ್ರೈಮಾಸಿಕದ ವಹಿವಾಟಿನ ವಿವರ ಪ್ರಕಟ



ನವದೆಹಲಿ (ಪಿಟಿಐ): ಮಾರ್ಚ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ಐಡಿಬಿಐ, ಕೋಟಕ್ ಮಹೀಂದ್ರ ಹಾಗೂ ಎಯು ಸ್ಮಾಲ್ ಫೈನಾನ್ಸ್ ಬ್ಯಾಂಕ್‌ಗಳ ಸಾಲ ನೀಡಿಕೆ ಪ್ರಮಾಣವು ಠೇವಣಿ ಸಂಗ್ರಹ ಪ್ರಮಾಣಕ್ಕಿಂತ ಹೆಚ್ಚು ಆಗಿದೆ.

ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ನಿಯಂತ್ರಣದಲ್ಲಿ ಇರುವ ಐಡಿಬಿಐ ಬ್ಯಾಂಕ್, ಈ ತ್ರೈಮಾಸಿಕದಲ್ಲಿ ನೀಡಿರುವ ಸಾಲದ ಪ್ರಮಾಣವು ಶೇ 16ರಷ್ಟು ಬೆಳವಣಿಗೆ ಸಾಧಿಸಿದೆ. ಹಿಂದಿನ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಐಡಿಬಿಐ ಬ್ಯಾಂಕ್ ₹2.18 ಲಕ್ಷ ಕೋಟಿ ಸಾಲ ನೀಡಿದ್ದು, ಅದು ಈ ಬಾರಿಯ ಮಾರ್ಚ್ ತ್ರೈಮಾಸಿಕದಲ್ಲಿ ₹2.53 ಲಕ್ಷ ಕೋಟಿಗೆ ತಲುಪಿದೆ.

ಈ ಬಾರಿಯ ಮಾರ್ಚ್ ತ್ರೈಮಾಸಿಕದಲ್ಲಿ ಬ್ಯಾಂಕ್‌ನ ಠೇವಣಿ ಸಂಗ್ರಹ ಪ್ರಮಾಣವು ಹಿಂದಿನ ವರ್ಷದ ಮಾರ್ಚ್ ತ್ರೈಮಾಸಿಕಕ್ಕೆ ಹೋಲಿಕೆ ಮಾಡಿದರೆ ಶೇ 12ರಷ್ಟು ಬೆಳವಣಿಗೆ ಕಂಡಿದೆ.

ಕೋಟಕ್ ಮಹೀಂದ್ರ ಬ್ಯಾಂಕ್‌ನ ಸಾಲ ನೀಡಿಕೆ ಪ್ರಮಾಣವು ಶೇ 16.2ರಷ್ಟು ಹೆಚ್ಚಳ ಕಂಡಿದೆ. ಇದೇ ಅವಧಿಯಲ್ಲಿ ಠೇವಣಿ ಸಂಗ್ರಹ ಪ್ರಮಾಣವು ಶೇ 14.7ರಷ್ಟು ಜಾಸ್ತಿ ಆಗಿದೆ. ಹಿಂದಿನ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಬ್ಯಾಂಕ್ ₹4.26 ಲಕ್ಷ ಕೋಟಿ ಸಾಲ ನೀಡಿತ್ತು. ಇದು ಈ ಬಾರಿಯ ಮಾರ್ಚ್ ತ್ರೈಮಾಸಿಕದಲ್ಲಿ ₹4.95 ಲಕ್ಷ ಕೋಟಿಗೆ ತಲುಪಿದೆ.

ಎಯು ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ಸಾಲ ನೀಡಿಕೆ ಪ್ರಮಾಣವು ಮಾರ್ಚ್ ತ್ರೈಮಾಸಿಕದಲ್ಲಿ ಶೇ 25.1ರಷ್ಟು ಹೆಚ್ಚಳ ಕಂಡು, ₹1.36 ಲಕ್ಷ ಕೋಟಿಗೆ ತಲುಪಿದೆ. ಇದೇ ಅವಧಿಯಲ್ಲಿ ಠೇವಣಿ ಸಂಗ್ರಹ ಪ್ರಮಾಣವು ಶೇ 22.8ರಷ್ಟು ಹೆಚ್ಚಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಎಚ್‌ಡಿಎಫ್‌ಸಿ ಠೇವಣಿ ಸಂಗ್ರಹ ಏರಿಕೆ

ನವದೆಹಲಿ (ಪಿಟಿಐ): ದೇಶದ ಎರಡನೆಯ ಅತಿದೊಡ್ಡ ಬ್ಯಾಂಕ್ ಆಗಿರುವ ಎಚ್‌ಡಿಎಫ್‌ಸಿ ಬ್ಯಾಂಕ್‌ನ ಸಾಲ ನೀಡಿಕೆ ಪ್ರಮಾಣವು ಮಾರ್ಚ್ ತ್ರೈಮಾಸಿಕದಲ್ಲಿ ಶೇ 12ರಷ್ಟು ಹೆಚ್ಚಳ ಕಂಡಿದ್ದು ₹29.6 ಲಕ್ಷ ಕೋಟಿಗೆ ತಲುಪಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್ ಇದೇ ಅವಧಿಯಲ್ಲಿ ₹31.05 ಲಕ್ಷ ಕೋಟಿ ಠೇವಣಿ ಸಂಗ್ರಹಿಸಿದ್ದು, ಇದು ಶೇ 14.4ರಷ್ಟು ಹೆಚ್ಚಳವಾಗಿದೆ.

ವಾಷಿಂಗ್ಟನ್: ಮೇಯರ್ ಸ್ಪರ್ಧೆಯಲ್ಲಿ ರಿನಿ

ವಾಷಿಂಗ್ಟನ್ (ಪಿಟಿಐ): ವಾಷಿಂಗ್ಟನ್ ಡಿಸಿಯ ಮೇಯರ್ ಸ್ಥಾನದ ಪ್ರಾಥಮಿಕ ಚುನಾವಣೆಯ ಅಭ್ಯರ್ಥಿಯಾಗಿ ತಮಿಳುನಾಡು ಸಂಜಾತೆ ರಿನಿ ಸಂಪತ್ ಕಣದಲ್ಲಿದ್ದಾರೆ.

ಮೇಯರ್ ಸ್ಥಾನದ ಚುನಾವಣೆಯ ಸ್ಪರ್ಧೆಗೆ ನಾಮ ನಿರ್ದೇಶನಗೊಂಡ ದಕ್ಷಿಣ ಏಷ್ಯಾದ ಮೊದಲ ಅಭ್ಯರ್ಥಿ ಎಂಬ ಹೆಗ್ಗಳಿಕೆ ರಿನಿ ಅವರದ್ದಾಗಿದೆ.

ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿ ಆಗಲಿಚ್ಛಿಸಿರುವ ರಿನಿ ಸಂಪತ್ (31) ಸರ್ಕಾರಿ ಗುತ್ತಿಗೆದಾರರಾಗಿದ್ದಾರೆ. ಮೂಲಸೌಕರ್ಯ ಒದಗಿಸುವುದು ಹಾಗೂ ಹೊಸ ಡಿ.ಸಿ ನಿರ್ಮಾಣದ ಭರವಸೆಯನ್ನು ಮತದಾರರಿಗೆ ನೀಡುವ ಮೂಲಕ ಚುನಾವಣಾ ಪ್ರಚಾರ ಕೈಗೊಂಡಿದ್ದಾರೆ.

'ನಾನು ರಾಜಕಾರಣಿ ಅಲ್ಲ. ಯಾವುದೇ ವಿಶೇಷ ಹಿತಾಸಕ್ತಿ ಗುಂಪುಗಳಿಗೆ ಋಣಿಯಾಗಿಲ್ಲ. ನಗರ ಸೇವೆಗಳನ್ನು ಸರಿಪಡಿಸುವುದೇ ನನ್ನ ಆದ್ಯತೆಯಾಗಿದೆ' ಎಂದು ಚುನಾವಣಾ ಪ್ರಚಾರ ವೆಬ್‌ಸೈಟ್‌ನಲ್ಲಿ ಹೇಳಿಕೊಂಡಿದ್ದಾರೆ. ತಮಿಳುನಾಡಿನವರಾದ ರಿನಿ ಅವರು ದಶಕದಿಂದ ವಾಷಿಂಗ್ಟನ್‌ನ ನಿವಾಸಿ.

ಎಪ್‌ಸ್ಟೈನ್ ಸಂತ್ರಸ್ತೆಯರಿಗೆ ಪರಿಹಾರ

ನ್ಯೂಯಾರ್ಕ್ (ಎಪಿ): 'ಲೈಂಗಿಕ ಅಪರಾಧಿ ಜೆಫ್ರಿ ಎಪ್‌ಸ್ಟೈನ್‌ನಿಂದ ದೌರ್ಜನ್ಯಕ್ಕೆ ಒಳಗಾಗಿರುವ ಸಂತ್ರಸ್ತರಿಗಾಗಿ ಬ್ಯಾಂಕ್ ಆಫ್ ಅಮೆರಿಕದಲ್ಲಿ 7.25 ಕೋಟಿ ಡಾಲರ್ (ಸುಮಾರು ₹672 ಕೋಟಿ) ನಿಧಿ ಸ್ಥಾಪಿಸಲಾಗಿದೆ. ಈ ಹಣದಿಂದ 75 ಮಹಿಳೆಯರಿಗೆ ಪರಿಹಾರ ನೀಡಬಹುದು' ಎಂದು ಸಂತ್ರಸ್ತೆಯರ ಪರ ವಕೀಲರು ಹೇಳಿದ್ದಾರೆ.

75 ಮಹಿಳೆಯರಿಗೆ ಪರಿಹಾರ ನೀಡುವ ಪ್ರಸ್ತಾವಕ್ಕೆ ಜಿಲ್ಲಾ ನ್ಯಾಯಾಧೀಶ ಜೆಡ್ ಎಸ್. ರಾಕ್‌ಆಫ್ ಗುರುವಾರ ಒಪ್ಪಿಗೆ ನೀಡಿದರು. ಸಂತ್ರಸ್ತೆಯರಿಗೆ ಪರಿಹಾರ ನೀಡುವ ಕುರಿತ ಅಂತಿಮ ವಿಚಾರಣೆಯನ್ನು ಆಗಸ್ಟ್ 27ಕ್ಕೆ ಮುಂದೂಡಿದರು.

'ಎಪ್‌ಸ್ಟೈನ್‌ನಿಂದ ದೌರ್ಜನ್ಯಕ್ಕೆ ಒಳಗಾಗಿರುವ ಮಹಿಳೆಯರಿಗೆ ಪರಿಹಾರ ನೀಡಲಾಗುತ್ತಿದೆ ಮತ್ತು ಇದಕ್ಕಾಗಿ ಪರಿಹಾರ ನಿಧಿ ಸ್ಥಾಪಿಸಲಾಗಿದೆ ಎಂಬ ಬಗ್ಗೆ ಎಲ್ಲ ಮಾಧ್ಯಮಗಳಲ್ಲಿ ಪ್ರಕಟಣೆ ನೀಡಬೇಕು. ಈ ಮಾಧ್ಯಮಗಳ ಪಟ್ಟಿಯನ್ನು ಶುಕ್ರವಾರದ ಒಳಗೆ ನೀಡಬೇಕು. ಪರಿಹಾರವು ಎಲ್ಲ ಸಂತ್ರಸ್ತರಿಗೂ ಸಿಗುವಂತಾಗಬೇಕು. ಯಾರೂ ಬಿಟ್ಟು ಹೋಗಬಾರದು' ಎಂದು ನ್ಯಾಯಾಧೀಶರು ವಕೀಲರಿಗೆ ಸೂಚನೆ ನೀಡಿದರು.

ಬ್ಯಾಂಕ್ ವಿರುದ್ಧ ಯಾಕೆ ದಾವೆ: 'ಜೂನ್ 2008ರಿಂದ ಜುಲೈ 2019ರವರೆಗೆ (ಎಪ್‌ಸ್ಟೈನ್ ಬಂಧನವಾದ ವರ್ಷ) ಹುಡುಗಿಯರು ಮತ್ತು ಮಹಿಳೆಯರ ಮೇಲೆ ಎಪ್‌ಸ್ಟೈನ್ ದೌರ್ಜನ್ಯ ಎಸಗಿದ್ದ. ಮಾನವ ಕಳ್ಳಸಾಗಣೆಗಾಗಿ ಆತ ದೊಡ್ಡ ಮೊತ್ತದ ಹಣ ಬಳಸಿಕೊಂಡಿರುತ್ತಾನೆ. ಆತ ನಡೆಸಿದ ಹಣಕಾಸಿನ ವ್ಯವಹಾರದ ಕುರಿತು ಬ್ಯಾಂಕ್ ಯಾವುದೇ ಕ್ರಮ ಕೈಗೊಳ್ಳಲಿಲ್ಲ, ಶಂಕೆಯನ್ನೂ ವ್ಯಕ್ತಪಡಿಸಲಿಲ್ಲ. ಈ ಕಾರಣದಿಂದ ಈ ಬ್ಯಾಂಕ್‌ನಿಂದ ಪರಿಹಾರ ಪಡೆದುಕೊಳ್ಳಲಾಗುತ್ತಿದೆ' ಎಂದು ವಕೀಲರು ಮಾಹಿತಿ ನೀಡಿದರು.

'ಲೈಂಗಿಕ ಅಪರಾಧಿಗೆ ಸಹಕಾರ: ಯಾರಿಂದಲೂ ಪರಿಹಾರ ಪಡೆಯಿರಿ'

ಎಪ್‌ಸ್ಟೈನ್ ಎಷ್ಟು ಕ್ರೌರ್ಯ ನಡೆಸಿದ್ದಾನೆ ಎಂದರೆ, ಅದಕ್ಕೆ ಎಷ್ಟು ಪರಿಹಾರ ನೀಡಿದರೂ ಕಡಿಮೆಯೇ ಆಗುತ್ತದೆ. ಆದ್ದರಿಂದ ಆತನ ಈ ಕೃತ್ಯಕ್ಕೆ ಗೊತ್ತಿದ್ದೂ, ಗೊತ್ತಿಲ್ಲದೆಯೂ ಅಥವಾ ಉದ್ದೇಶಪೂರ್ವಕವಾಗಿಯೇ ಯಾರಾದರೂ ಸಹಕಾರ ನೀಡಿದ್ದರೆ, ಅವರೆಲ್ಲರ ಬಳಿಯಿಂದಲೂ ಸಂತ್ರಸ್ತೆಯರು ಪರಿಹಾರ ಪಡೆಯಬಹುದು

ನ್ಯಾಯಾಲಯ

'ದುಬಾರಿ ತೈಲ ಬೆಲೆಯಿಂದ ಹಣದುಬ್ಬರ ಏರಿಕೆ'

ಮುಂಬೈ (ಪಿಟಿಐ): ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರಲ್‌ಗೆ 100 ಡಾಲರ್‌ಗಿಂತ ಹೆಚ್ಚಿನ ಮಟ್ಟದಲ್ಲಿ ಉಳಿದರೆ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ.6ಕ್ಕಿಂತ ಹೆಚ್ಚಾಗುತ್ತದೆ, ಆರ್‌ಬಿಐ ರೆಪೊ ದರವನ್ನು ಹೆಚ್ಚು ಮಾಡಬೇಕಾದ ಸ್ಥಿತಿ ಎದುರಾಗಬಹುದು ಎಂದು ಬ್ರೋಕರೇಜ್ ಕಂಪನಿ ಎಚ್‌ಎಸ್‌ಬಿಸಿ ಹೇಳಿದೆ.

ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಶೇ 6ಕ್ಕಿಂತ ಕಡಿಮೆ ಮಟ್ಟದಲ್ಲಿ ಇರಿಸುವ ಹೊಣೆಯು ಆರ್‌ಬಿಐ ಮೇಲಿದೆ.

ತಮ್ಮ ಅಂದಾಜು ಲೆಕ್ಕಾಚಾರದ ಪ್ರಕಾರ ಕಚ್ಚಾ ತೈಲದ ಬೆಲೆಯು ಬ್ಯಾರಲ್‌ಗೆ 100 ಡಾಲರ್‌ಗಿಂತ ಕಡಿಮೆ ಇದ್ದಾಗ ಹಣದುಬ್ಬರ ಪ್ರಮಾಣವು ಶೇ 6ಕ್ಕಿಂತ ಕಡಿಮೆ ಮಟ್ಟದಲ್ಲಿ ಇರಲಿದೆ ಎಂದು ಎಚ್‌ಎಸ್‌ಬಿಸಿ ಕಂಪನಿಯ ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ.


ಸುದ್ದಿ 2 ನಿಮಿಷ

ಸುಕೋ ಬ್ಯಾಂಕ್: ₹2,448 ಕೋಟಿ ವಹಿವಾಟು, ಶೇ 15ರಷ್ಟು ಪ್ರಗತಿ

ಬಳ್ಳಾರಿ: 'ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ 2025-26ನೇ ಸಾಲಿನಲ್ಲಿ ₹2,448 ಕೋಟಿ ವಹಿವಾಟು ನಡೆಸಿ, ಶೇ 15.51ರಷ್ಟು ಪ್ರಗತಿ ಸಾಧಿಸಿದೆ' ಎಂದು ಬ್ಯಾಂಕಿನ ಅಧ್ಯಕ್ಷ ಮೋಹಿತ್ ಮಸ್ಕಿ ತಿಳಿಸಿದ್ದಾರೆ.

'ಷೇರುದಾರರಿಗೆ ಶೇ 8ರಷ್ಟು ಲಾಭಾಂಶ ನೀಡಲು ತೀರ್ಮಾನಿಸಿ, ಶಿಫಾರಸು ಮಾಡಲಾಗಿದೆ. ಬ್ಯಾಂಕ್ ಒಟ್ಟು ₹7 ಕೋಟಿ ಲಾಭ ಗಳಿಸಿದೆ. ತೆರಿಗೆ ಬಳಿಕ ₹6 ಕೋಟಿ ನಿವ್ವಳ ಲಾಭವಾಗಿದೆ' ಎಂದು ತಿಳಿಸಿದ್ದಾರೆ.

'ರಾಜ್ಯಾದ್ಯಂತ 29 ಶಾಖೆಗಳಿವೆ. ಹೊಸ ಶಾಖೆಗಳನ್ನು ಆರಂಭಿಸಲು ಪರವಾನಗಿ ಪಡೆಯಲಾಗಿದೆ' ಎಂದಿದ್ದಾರೆ.



'ಬ್ಯಾಂಕ್ ₹1,489 ಕೋಟಿ ಠೇವಣಿ ಹೊಂದಿದ್ದು, ₹959 ಕೋಟಿ ಸಾಲ ವಿತರಿಸಿದೆ. ಇದರಲ್ಲಿ ₹25 ಲಕ್ಷಕ್ಕಿಂತ ಕಡಿಮೆ ಮೊತ್ತದ ಕಿರು ಸಾಲಗಳ ಪ್ರಮಾಣ ₹563 ಕೋಟಿ (ಶೇ 58.75) ಆಗಿದೆ. ಎಂಎಸ್‌ಎಂಇ ವಲಯಕ್ಕೆ ಆದ್ಯತೆ ನೀಡಲಾಗುತ್ತಿದೆ. ಎನ್‌ಪಿಎ ಪ್ರಮಾಣ ಶೇ 5.8ರಷ್ಟಿದೆ' ಎಂದು ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

ಹೊರ್ಮುಜ್ ದಾಟಿದ ಎಲ್‌ಪಿಜಿ ಹೊತ್ತ ಹಡಗು

ನವದೆಹಲಿ (ಪಿಟಿಐ): 46,650 ಟನ್ ಎಲ್‌ಪಿಜಿ ಹೊತ್ತ ಭಾರತದ ಹಡಗೊಂದು ಹೊರ್ಮುಜ್ ಜಲಸಂಧಿಯನ್ನು ಸುರಕ್ಷಿತವಾಗಿ ದಾಟಿದೆ. ಇರಾನ್‌ನಿಂದ ಹೊರಟ ಇನ್ನೊಂದು ಹಡಗು ಮಂಗಳೂರು ಬಂದರನ್ನು ತಲುಪಿದೆ.

'ಎಲ್‌ಪಿಜಿ ಹೊತ್ತ ಗ್ರೀನ್ ಸಾನ್ವಿ ಹೆಸರಿನ ಹಡಗು ಜಲಸಂಧಿಯನ್ನು ಸುರಕ್ಷಿತವಾಗಿ ದಾಟಿದೆ. ಇದರಲ್ಲಿ 46,650 ಟನ್ ಎಲ್‌ಪಿಜಿ ಇದೆ, 25 ಮಂದಿ ಸಿಬ್ಬಂದಿ ಇದ್ದಾರೆ' ಎಂದು ಕೇಂದ್ರ ಸರ್ಕಾರದ ಪ್ರಕಟಣೆ ತಿಳಿಸಿದೆ. ಇದರಲ್ಲಿರುವ ಎಲ್‌ಪಿಜಿ ದೇಶದ ಅರ್ಧ ದಿನದ ಅಗತ್ಯವನ್ನು ಪೂರೈಸಲು ಸಾಕು.

ಪಶ್ಚಿಮ ಏಷ್ಯಾದಲ್ಲಿ ಯುದ್ಧ ಶುರುವಾದ ನಂತರದಲ್ಲಿ ಹೊರ್ಮುಜ್ ಜಲಸಂಧಿಯನ್ನು ಸುರಕ್ಷಿತವಾಗಿ ದಾಟಿರುವ ಭಾರತದ ಏಳನೆಯ ಹಡಗು ಗ್ರೀನ್ ಸಾನ್ವಿ. ಇತ್ತ, ಮಂಗಳೂರು ಬಂದರು ತಲುಪಿರುವ ಹಡಗೊಂದು ಎಲ್‌ಪಿಜಿ ವರ್ಗಾಯಿಸುವ ಕೆಲಸ ಮಾಡುತ್ತಿದೆ ಎಂದು ಕೇಂದ್ರ ಹೇಳಿದೆ.

'ಸೀಬರ್ಡ್ ಹೆಸರಿನ, ಇರಾನ್ ದೇಶದಿಂದ 44 ಸಾವಿರ ಟನ್ ಎಲ್‌ಪಿಜಿ ತಂದಿರುವ ಹಡಗು ಮಂಗಳೂರು ಬಂದರಿನಲ್ಲಿದೆ' ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಎಕ್ಸ್ ಮೂಲಕ ತಿಳಿಸಿದೆ.

ಇರಾನ್‌ನಿಂದ ಕಚ್ಚಾ ತೈಲ ಹಾಗೂ ಸಂಸ್ಕರಿತ ಇಂಧನ ಖರೀದಿಸಲು ಅಮೆರಿಕವು ತಾತ್ಕಾಲಿಕವಾಗಿ ನಿರ್ಬಂಧ ಸಡಿಲಿಸಿದ ನಂತರದಲ್ಲಿ ಭಾರತ ಈ ಖರೀದಿ ಮಾಡಿದೆ. ಈಗ ಭಾರತದ 17 ಹಡಗುಗಳು ಜಲಸಂಧಿಯ ಪಶ್ಚಿಮ ಭಾಗದಲ್ಲಿ ಸಿಲುಕಿಕೊಂಡಿವೆ.

ಪೈಲಟ್‌ಗಾಗಿ ಮುಂದುವರಿದ ಶೋಧ

ಒಂದನೇ ಪುಟದಿಂದ...

ಎಫ್–15 ಯುದ್ಧ ವಿಮಾನ ಪತನಗೊಂಡ ಘಟನೆ ಬಗ್ಗೆ ಅಮೆರಿಕ ಸೇನೆ ಅಧಿಕೃತ ಹೇಳಿಕೆ ನೀಡಿಲ್ಲ. ಆದರೆ 'ಈ ಬೆಳವಣಿಗೆ ಬಗ್ಗೆ ಅಧ್ಯಕ್ಷರಿಗೆ ಮಾಹಿತಿ ನೀಡಲಾಗಿದೆ' ಎಂದು ಶ್ವೇತಭವನದ ಮಾಧ್ಯಮ ಕಾರ್ಯದರ್ಶಿ ಕರೋಲಿನ್ ಲೆವಿಟ್ ಹೇಳಿದ್ದಾರೆ. 'ಎಫ್–15 ವಿಮಾನವನ್ನು ಕಳೆದುಕೊಂಡ ಘಟನೆಯು ಇರಾನ್ ಜತೆಗಿನ ಮಾತುಕತೆ ಮೇಲೆ ಯಾವುದೇ ಪರಿಣಾಮ ಬೀರದು' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಎನ್‌ಬಿಸಿಗೆ ತಿಳಿಸಿದ್ದಾರೆ.

ಇರಾನ್ ಸೇನೆಯು ಭೂಮಿಯಿಂದ ಆಗಸಕ್ಕೆ ಹಾರಿಸುವ ಕ್ಷಿಪಣಿ ಮೂಲಕ ವಿಮಾನವನ್ನು ಗುರಿಯಾಗಿಸಿರುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ನೈರುತ್ಯ ಇರಾನ್‌ನ ಕೊಹ್ಗಿಲುಯೆ ಮತ್ತು ಬೊಯೆರ್ ಅಹ್ಮದ್ ಪ್ರಾಂತ್ಯದಲ್ಲಿ ವಿಮಾನದ ಅವಶೇಷಗಳು ಪತ್ತೆಯಾಗಿವೆ.

ಪೈಲಟ್‌ನ ಪತ್ತೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡ ಅಮೆರಿಕದ ಹೆಲಿಕಾಪ್ಟರ್‌ಗಳತ್ತ ಇರಾನ್ ಪೊಲೀಸರು ಗುಂಡು ಹಾರಿಸಿದ ದೃಶ್ಯ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ.

'ಅಮೆರಿಕದ ಪೈಲಟ್‌ಅನ್ನು ಸೆರೆ ಹಿಡಿದು ಪೊಲೀಸ್ ಅಥವಾ ಸೇನಾ ಪಡೆಗಳಿಗೆ ಒಪ್ಪಿಸಿದರೆ, ಬಹುಮಾನ ದೊರೆಯಲಿದೆ' ಎಂದು ಇರಾನ್‌ನ ಸ್ಥಳೀಯ ಮಾಧ್ಯಮದ ನಿರೂಪಕರೊಬ್ಬರು ಪ್ರಕಟಿಸಿದ್ದಾರೆ.

ಇನ್ನೊಂದು ವಿಮಾನ ಗುರಿ: ಇರಾನ್ ರಕ್ಷಣಾ ಪಡೆಗಳ ದಾಳಿಗೆ ಸಿಲುಕಿ ಅಮೆರಿಕದ ಎ–10 ಯುದ್ಧ ವಿಮಾನ ಪರ್ಷಿಯನ್ ಕೊಲ್ಲಿಯಲ್ಲಿ ಪತನಗೊಂಡಿದೆ ಎಂದು ಇರಾನ್‌ನ ಸರ್ಕಾರಿ ಮಾಧ್ಯಮಗಳು ವರದಿ ಮಾಡಿವೆ.

'ವಿಮಾನ ಅಪಘಾತಕ್ಕೀಡಾಗಿದೆಯೇ ಅಥವಾ ಹೊಡೆದುರುಳಿಸಲ್ಪಟ್ಟಿದೆಯೇ ಎಂಬುದು ಸ್ಪಷ್ಟವಾಗಿಲ್ಲ' ಎಂದು ಅಮೆರಿಕದ ಅಧಿಕಾರಿಯೊಬ್ಬರು ಹೇಳಿದ್ದಾರೆ. ವಿಮಾನ ಎಲ್ಲಿ ಪತನಗೊಂಡಿದೆ ಮತ್ತು ಪೈಲಟ್‌ಅನ್ನು ರಕ್ಷಿಸಲಾಗಿದೆಯೇ ಎಂಬುದು ತಕ್ಷಣಕ್ಕೆ ತಿಳಿದುಬಂದಿಲ್ಲ.

ಹೊಸ ವಾಯು ರಕ್ಷಣಾ ವ್ಯವಸ್ಥೆ ಬಳಕೆ: ಅಮೆರಿಕದ ಯುದ್ಧ ವಿಮಾನವನ್ನು ಗುರಿಯಾಗಿಸಲು ಹೊಸ ವಾಯು ರಕ್ಷಣಾ ವ್ಯವಸ್ಥೆಯನ್ನು ಬಳಸಲಾಗಿದೆ ಎಂದು ಇರಾನ್‌ನ 'ಖಾತಮ್ ಅಲ್ ಅಂಬಿಯಾ' ಜಂಟಿ ಮಿಲಿಟರಿ ಕಮಾಂಡ್ ಶನಿವಾರ ತಿಳಿಸಿದೆ.

'ದೇಶವು ಖಂಡಿತವಾಗಿಯೂ ತನ್ನ ವಾಯುಪ್ರದೇಶದ ಮೇಲೆ ಸಂಪೂರ್ಣ ನಿಯಂತ್ರಣ ಸಾಧಿಸಲಿದೆ' ಎಂದು ಕಮಾಂಡ್‌ನ ವಕ್ತಾರರು ಹೇಳಿದ್ದಾರೆ.



ಅಮೆರಿಕ–ಇಸ್ರೇಲ್ ದಾಳಿಯಲ್ಲಿ ಟೆಹರಾನ್‌ನ ಶಾಹಿದ್ ಬೆಹೆಸ್ತಿ ವಿ.ವಿ. ಕಟ್ಟಡ ಹಾನಿಗೊಂಡಿರುವುದು —ಎಎಫ್‌ಪಿ ಚಿತ್ರ

ಹೊರ್ಮುಜ್: ಮತದಾನ ಮುಂದೂಡಿಕೆ

ದುಬೈ: ಹೊರ್ಮುಜ್ ಜಲಸಂಧಿಯನ್ನು ಜಾಗತಿಕ ಹಡಗುಗಳ ಸಂಚಾರಕ್ಕೆ ಮುಕ್ತಗೊಳಿಸುವ ಗುರಿ ಹೊಂದಿರುವ ನಿರ್ಣಯದ ಮೇಲಿನ ಮತದಾನವನ್ನು ಬಹರೇನ್ ಮುಂದೂಡಿದೆ. ಸೇನಾ ಶಕ್ತಿ ಬಳಸಿ ಹೊರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸುವ 'ಬಹರೇನ್ ಪ್ರಸ್ತಾವ'ವನ್ನು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಶನಿವಾರ ಮತಕ್ಕೆ ಹಾಕಲು ನಿರ್ಧರಿಸಲಾಗಿತ್ತು. ಆದರೆ ಚೀನಾ ಮತ್ತು ರಷ್ಯಾದ ಪ್ರಬಲ ವಿರೋಧದ ಕಾರಣ ಮತದಾನ ಮುಂದೂಡಲಾಗಿದೆ ಎಂದು ಮೂಲಗಳು ತಿಳಿಸಿವೆ.

23 ವರ್ಷಗಳಲ್ಲೇ ಮೊದಲು

ವಾಷಿಂಗ್ಟನ್: ಅಮೆರಿಕದ ಯುದ್ಧ ವಿಮಾನವನ್ನು ಶತ್ರು ರಾಷ್ಟ್ರದ ಸೇನೆಯು ಹೊಡೆದುರುಳಿಸಿದ ಘಟನೆ ನಡೆದಿರುವುದು 23 ವರ್ಷಗಳಲ್ಲಿ ಇದೇ ಮೊದಲು.

'2003ರ ಇರಾಕ್ ಮೇಲಿನ ಅಮೆರಿಕದ ಆಕ್ರಮಣದ ಸಮಯದಲ್ಲಿ ಕೊನೆಯ ಬಾರಿಗೆ ಅಮೆರಿಕದ ಯುದ್ಧ ವಿಮಾನವನ್ನು ಹೊಡೆದುರುಳಿಸಲಾಗಿತ್ತು. ಅಂದು ಎ–10 ಥಂಡರ್‌ಬೋಲ್ಟ್–1 ವಿಮಾನ ಪತನಗೊಂಡಿತ್ತು' ಎಂದು ಅಮೆರಿಕದ ಎಫ್–16 ಯುದ್ಧ ವಿಮಾನದ ಮಾಜಿ ಪೈಲಟ್, ವಾಯುಪಡೆಯ ನಿವೃತ್ತ ಬ್ರಿಗೇಡಿಯರ್ ಜನರಲ್ ಹ್ಯೂಸ್ಟನ್ ಕಾಂಟ್‌ವೆಲ್ ಹೇಳಿದ್ದಾರೆ.

'ಇರಾನ್‌ನ ವಾಯು ರಕ್ಷಣಾ ವ್ಯವಸ್ಥೆ ಸಂಪೂರ್ಣ ನಾಶವಾಗಿದೆ' ಎಂದು ಅಮೆರಿಕ ಮತ್ತು ಇಸ್ರೇಲ್ ಈಚೆಗೆ ಹೇಳಿದ್ದವು. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ದೇಶವನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ, 'ಇರಾನ್ ಸೇನೆ ಸಂಪೂರ್ಣ ನಾಶವಾಗಿದೆ. ಅಲ್ಲಿ ನಮ್ಮ ಕಾರ್ಯಾಚರಣೆಯನ್ನು ಬೇಗನೇ ಮುಗಿಸಲಿದ್ದೇವೆ' ಎಂದಿದ್ದರು. ಇದಾದ ಎರಡು ದಿನಗಳ ಬಳಿಕ ಅಮೆರಿಕ ತನ್ನ ವಿಮಾನ ಕಳೆದುಕೊಂಡಿದೆ.

ಕೈಗಾರಿಕಾ ತಾಣಗಳ ಗುರಿ

ಇಸ್ರೇಲ್–ಅಮೆರಿಕ ಹಾಗೂ ಇರಾನ್ ಸೇನೆಗಳು ಆರ್ಥಿಕ ಮತ್ತು ಕೈಗಾರಿಕಾ ತಾಣಗಳನ್ನು ಗುರಿಯಾಗಿಸಿ ದಾಳಿಗಳನ್ನು ಹೆಚ್ಚಿಸಿವೆ. ಇದರಿಂದ ಜಾಗತಿಕ ಇಂಧನ ಪೂರೈಕೆಗೆ ಇನ್ನಷ್ಟು ಅಡ್ಡಿ ಉಂಟಾಗುವ ಆತಂಕ ಎದುರಾಗಿದೆ.

ಅಮೆರಿಕ ಹಾಗೂ ಇಸ್ರೇಲ್ ಪಡೆಗಳು ಶನಿವಾರ ಪೆಟ್ರೋಕೆಮಿಕಲ್ ಘಟಕ, ಸಿಮೆಂಟ್ ಸ್ಥಾವರ, ಇರಾನ್-ಇರಾಕ್ ಗಡಿಯಲ್ಲಿರುವ ವ್ಯಾಪಾರ ಕೇಂದ್ರ ಮತ್ತು ಬುಶೇರ್ ಪರಮಾಣು ಸ್ಥಾವರಕ್ಕೆ ಸಮೀಪವಿರುವ ಪ್ರದೇಶವನ್ನು ಗುರಿಯಾಗಿಸಿವೆ.

ಬುಶೇರ್ ಪರಮಾಣು ಸ್ಥಾವರದ ಸಮೀಪದಲ್ಲಿ ನಡೆದ ದಾಳಿಯಲ್ಲಿ ಒಬ್ಬ ಭದ್ರತಾ ಸಿಬ್ಬಂದಿ ಮೃತಪಟ್ಟಿದ್ದಾರೆ. ಬುಶೇರ್ ಪರಮಾಣು ಸ್ಥಾವರವನ್ನು ರಷ್ಯಾದ ಕಂಪನಿ ನಿರ್ವಹಿಸುತ್ತಿದೆ. ಈ ದಾಳಿಯನ್ನು ರಷ್ಯಾ ಖಂಡಿಸಿದ್ದು, ಸ್ಥಾವರದಲ್ಲಿರುವ ತನ್ನ 198 ಸಿಬ್ಬಂದಿಯನ್ನು ಸ್ಥಳಾಂತರಿಸಿದೆ.

ಇರಾನ್ ಜೊತೆ ಪಾವತಿ ಸಮಸ್ಯೆ ಇಲ್ಲ: ಕೇಂದ್ರ

ನವದೆಹಲಿ (ಪಿಟಿಐ): ಕಚ್ಚಾ ತೈಲವನ್ನು ಇರಾನ್‌ನಿಂದ ಆಮದು ಮಾಡಿಕೊಳ್ಳಲು ಆ ದೇಶಕ್ಕೆ ಹಣ ಪಾವತಿಸುವ ವಿಚಾರದಲ್ಲಿ ಯಾವುದೇ ಸಮಸ್ಯೆ ಆಗಿಲ್ಲ, ದೇಶದ ತೈಲ ಸಂಸ್ಕರಣಾ ಘಟಕಗಳು ಅಲ್ಲಿಂದ ಕಚ್ಚಾ ತೈಲ ಆಮದನ್ನು ಮುಂದುವರಿಸಿವೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಇರಾನ್ ಮಾತ್ರವೇ ಅಲ್ಲದೆ ವಿಶ್ವದ ಹಲವು ದೇಶಗಳಿಂದ ಕಚ್ಚಾ ತೈಲ ಆಮದು ಮುಂದುವರಿದಿದೆ ಎಂದು ಕೇಂದ್ರ ಸ್ಪಷ್ಟಪಡಿಸಿದೆ. ಇರಾನ್‌ನ ಕಚ್ಚಾ ತೈಲವನ್ನು ಹೊತ್ತು ಭಾರತದ ಕಡೆ ಬರುತ್ತಿದ್ದ ಹಡಗೊಂದು ಮಧ್ಯದಲ್ಲಿಯೇ ಮಾರ್ಗ ಬದಲಿಸಿ ಚೀನಾ ಕಡೆಗೆ ಸಾಗಿದೆ ಎಂಬ ವರದಿಗಳು ವಾಸ್ತವವನ್ನು ಹೇಳುತ್ತಿಲ್ಲ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಎಕ್ಸ್ ಮೂಲಕ ತಿಳಿಸಿದೆ.

ಹಡಗುಗಳು ಮಧ್ಯದಲ್ಲೇ ಪಥ ಬದಲಿಸುವುದು ವ್ಯಾಪಾರ ವಹಿವಾಟಿನ ದೃಷ್ಟಿಯಿಂದ ಹೊಸದೇನೂ ಅಲ್ಲ ಎಂಬುದನ್ನು ಗುರುತಿಸುವ ಕೆಲಸವನ್ನು ಈ ವರದಿಗಳು ಮಾಡಿಲ್ಲ ಎಂದು ಸಚಿವಾಲಯ ಹೇಳಿದೆ.

ಇರಾನ್‌ನಿಂದ ಹೊರಟ ಹಡಗು ಗುಜರಾತ್‌ನ ವಾದಿನಾರ್‌ಗೆ ಬರಬೇಕಿತ್ತು. ಆದರೆ ಪಾವತಿ ವಿಚಾರದಲ್ಲಿನ ಸಮಸ್ಯೆಗಳ ಕಾರಣದಿಂದಾಗಿ ಅದು ಪಥ ಬದಲಿಸಿ ಚೀನಾ ಕಡೆ ಸಾಗಿದೆ ಎಂದು ವರದಿಗಳು ಹೇಳಿದ್ದವು. 'ಇರಾನ್‌ನಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುವ ವಿಚಾರದಲ್ಲಿ, ಹಣದ ಪಾವತಿಗೆ ಸಂಬಂಧಿಸಿದಂತೆ ಯಾವುದೇ ಅಡ್ಡಿ ಇಲ್ಲ' ಎಂದು ಸಚಿವಾಲಯವು ಹೇಳಿದೆ.

ಭಾರತವು 40ಕ್ಕೂ ಹೆಚ್ಚು ದೇಶಗಳಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುತ್ತಿದೆ ಎಂದು ಸಚಿವಾಲಯ ತಿಳಿಸಿದೆ.

ಐಪಿಎಲ್: ಟಿಕೆಟ್‌ಗೆ ಶಾಸಕರ ಆಪ್ತರ ಕ್ಯೂ!

ಒಂದನೇ ಪುಟದಿಂದ...

ಸಾರ್ವಜನಿಕರು ದುಡ್ಡು ಕೊಟ್ಟರೂ ಐಪಿಎಲ್ ಟಿಕೆಟ್ ಪಡೆಯಲು ಹರಸಾಹಸ ಪಡುತ್ತಿದ್ದರೆ, ಇತ್ತ ಜನ ಪ್ರತಿನಿಧಿಗಳು ಐಪಿಎಲ್ ಕ್ರಿಕೆಟ್ ಪಂದ್ಯದ ಟಿಕೆಟ್ ಉಚಿತವಾಗಿ ಪಡೆದು, ನಿರಾಯಾಸವಾಗಿ ಕ್ರಿಕೆಟ್ ಪಂದ್ಯ ವೀಕ್ಷಿಸಲು ಮುಂದಾಗಿದ್ದಾರೆ. ಆದರೆ, ಬಿಜೆಪಿ ಶಾಸಕರಾದ ಎಸ್. ಸುರೇಶ್ ಕುಮಾರ್ ಹಾಗೂ ಎಲ್.ಎ. ರವಿ ಸುಬ್ರಮಣ್ಯ ಅವರು ಸಭಾಧ್ಯಕ್ಷರಿಗೆ ಪತ್ರ ಬರೆದು ತಮಗೆ ಉಚಿತ ಟಿಕೆಟ್ ಬೇಡ ಎಂದು ತಿಳಿಸಿದ್ದಾರೆ.

ಬಹುತೇಕ ಎಲ್ಲ ಶಾಸಕರ ಆಪ್ತ ಸಹಾಯಕರು ಸಭಾಧ್ಯಕ್ಷರ ಕಚೇರಿಗೆ ಬಂದು ಟಿಕೆಟ್ ಪಡೆದುಕೊಂಡು ಹೋಗಿದ್ದಾರೆ.

ಕಳೆದ ವರ್ಷ ಐಪಿಎಲ್ ಟ್ರೋಫಿ ಗೆದ್ದಿದ್ದ ಆರ್‌ಸಿಬಿ ಸಂಭ್ರಮಾಚರಣೆ ಸಂದರ್ಭದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಉಂಟಾದ ಕಾಲ್ತುಳಿತಕ್ಕೆ 11 ಮಂದಿ ಬಲಿಯಾಗಿದ್ದರು. ಬಳಿಕ ಭದ್ರತೆ ದೃಷ್ಟಿಯಿಂದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯ ಆಯೋಜಿಸಲು ರಾಜ್ಯ ಸರ್ಕಾರ ಅನುಮತಿ ನೀಡಿರಲಿಲ್ಲ. ಎಲ್ಲ ಸುರಕ್ಷತಾ ಕ್ರಮ, ಭದ್ರತೆ ಪಾಲಿಸುವುದಾಗಿ ಕೆಎಸ್‌ಸಿಎ ಭರವಸೆ ನೀಡಿದ ಬಳಿಕ ಐಪಿಎಲ್ ಪಂದ್ಯಗಳ ಆಯೋಜನೆಗೆ ಸರ್ಕಾರ ಅನುಮತಿ ನೀಡಿತ್ತು. ಇದೀಗ ಶಾಸಕರು ಐಪಿಎಲ್ ಪಂದ್ಯದ ಉಚಿತ ಟಿಕೆಟ್‌ಗೆ ದುಂಬಾಲು ಬಿದ್ದು ಗಿಟ್ಟಿಸಿಕೊಂಡಿದ್ದಾರೆ.

ಐಪಿಎಲ್ ಕ್ರಿಕೆಟ್ ಪಂದ್ಯಗಳ ಟಿಕೆಟ್ ನೀಡುವಂತೆ ಇತ್ತೀಚೆಗೆ ನಡೆದ ವಿಧಾನಸಭಾ ಅಧಿವೇಶನದಲ್ಲಿ ಶಾಸಕರು ಆಗ್ರಹಿಸಿದ್ದರು. ಕಾಂಗ್ರೆಸ್‌ನ ವಿಜಯಾನಂದ ಕಾಶಪ್ಪನವರ್, ಶಾಸಕರ ಕುಟುಂಬಕ್ಕೆ ಐದು ಟಿಕೆಟ್ ನೀಡಬೇಕೆಂದು ಆಗ್ರಹಿಸಿದ್ದರು. 'ಶಾಸಕರಿಗೆ ಗೌರವ ಇಲ್ಲವೇ? ಒಂದು ಟಿಕೆಟ್ ಕೊಡುತ್ತಾರೆ. ಮನೆಯವರನ್ನೆಲ್ಲ ಕರೆದುಕೊಂಡು ಹೋಗುವುದು ಹೇಗೆ. ಒಂದು ಟಿಕೆಟ್‌ಗೆ ₹5 ಸಾವಿರದಿಂದ ₹20 ಸಾವಿರ ವೆಚ್ಚವಾಗುತ್ತದೆ. ಜನಸಾಮಾನ್ಯರ ಜೊತೆ ನಾವೂ ಟಿಕೆಟ್‌ಗಾಗಿ ಸರದಿ ಸಾಲಿನಲ್ಲಿ ನಿಲ್ಲಬೇಕೇ' ಎಂದು ಪ್ರಶ್ನಿಸಿದ್ದರು. ಅದಕ್ಕೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಮತ್ತು ಇತರ ಕೆಲವು ಶಾಸಕರೂ ದನಿಗೂಡಿಸಿದ್ದರು.

ಶಾಸಕರು ತಮ್ಮ ಕುಟುಂಬಕ್ಕೆ ಐಪಿಎಲ್ ಉಚಿತ ಟಿಕೆಟ್‌ಗಾಗಿ ಸದನದಲ್ಲಿ ಆಗ್ರಹಿಸಿರುವುದು ಸಾರ್ವಜನಿಕ ವಲಯದಲ್ಲಿ ಸಾಕಷ್ಟು ಟೀಕೆಗೆ ಗುರಿಯಾಗಿತ್ತು. ಈ ಮಧ್ಯೆ, ಬಿಜೆಪಿ ಶಾಸಕರಾದ ಎಸ್. ಸುರೇಶ್ ಕುಮಾರ್, ಸಂಸದ ತೇಜಸ್ವಿ ಸೂರ್ಯ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ. ವೈ. ವಿಜಯೇಂದ್ರ ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ಮಾಜಿ ಸಂಸದ, ಕಾಂಗ್ರೆಸ್‌ನ ಡಿ.ಕೆ. ಸುರೇಶ್ ಕೂಡ ಐಪಿಎಲ್ ಪಂದ್ಯದ ಉಚಿತ ಟಿಕೆಟ್ ಕೇಳಿರುವ ಶಾಸಕರ ನಡೆಗೆ ಆಕ್ಷೇಪ ವ್ಯಕ್ತಪಡಿಸಿದ್ದರು. ಆದರೆ, ಈ ಯಾವ ವಿಷಯದ ಬಗ್ಗೆಯೂ ತಲೆಕೆಡಿಸಿಕೊಳ್ಳದ ಶಾಸಕರು, ತಮ್ಮ ಆಪ್ತ ಸಹಾಯಕರ ಮೂಲಕ ಉಚಿತ ಟಿಕೆಟ್ ಪಡೆದುಕೊಂಡಿರುವುದು ಚರ್ಚೆಗೆ ಗ್ರಾಸವಾಗಿದೆ.

ಡಿವಿಎಸ್ ಅಸಮಾಧಾನ

'ಐಪಿಎಲ್ ಕ್ರಿಕೆಟ್ ಪಂದ್ಯದ ಟಿಕೆಟ್‌ಗೆ ಭಿಕ್ಷೆ ಬೇಡುತ್ತಾರಲ್ಲ,ಇವರಿಗೆ ನಾಚಿಕೆಯಾಗಬೇಕು' ಎಂದು ಮಾಜಿ ಕೇಂದ್ರ ಸಚಿವ ಡಿ.ವಿ. ಸದಾನಂದ ಗೌಡ ಅಸಮಾಧಾನ ವ್ಯಕ್ತಪಡಿಸಿದರು.

ಶಾಸಕರ ಆಪ್ತ ಸಹಾಯಕರು ಟಿಕೆಟ್‌ಗಾಗಿ ಸರದಿ ಸಾಲಿನಲ್ಲಿ ನಿಂತ ವಿಚಾರದ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಆರ್‌ಸಿಬಿ ವಿಜಯೋತ್ಸವದ ವೇಳೆ ಕಾಲ್ತುಳಿತದಲ್ಲಿ 11 ಜನ ಬಲಿಯಾಗಿದ್ದ ಬಗ್ಗೆ ಸದನದಲ್ಲಿ ಚರ್ಚೆಯಾಗಿದ್ದರೆ ಗೌರವ ಇರುತಿತ್ತು. ಆದರೆ, ನೂರಾರು ಕೋಟಿ ಸುರಿದು ಶಾಸಕರಾದವರು ಐಪಿಎಲ್ ಟಿಕೆಟ್‌ಗೆ ಭಿಕ್ಷೆ ಬೇಡುತ್ತಾರಲ್ಲ, ನಾಚಿಕೆ ಆಗುವುದಿಲ್ಲವೇ?. ಯಾವುದೇ ಜನಪ್ರತಿನಿಧಿಗಳು ಹೀಗೆ ಮಾಡಬಾರದು. ಕ್ಷೇತ್ರಕ್ಕೆ ಸಹಕಾರ ಬೇಕು ಎಂದು ಭಿಕ್ಷೆ ಬೇಡಿ' ಎಂದು ಆಕ್ರೋಶ ಹೊರಹಾಕಿದರು.

ಔಷಧ ವಲಯದ ರಫ್ತು ಶೇ 5ರಷ್ಟು ಏರಿಕೆ



ಹೈದರಾಬಾದ್ (ಪಿಟಿಐ): 2025-26ನೆಯ ಹಣಕಾಸು ವರ್ಷದಲ್ಲಿ ಫೆಬ್ರುವರಿ ತಿಂಗಳವರೆಗೆ ಭಾರತದ ಔಷಧ ಉದ್ಯಮದ ರಫ್ತು ಮೊತ್ತವು ₹2.59 ಲಕ್ಷ ಕೋಟಿ (28 ಬಿಲಿಯನ್ ಡಾಲರ್) ಆಗಿದೆ ಎಂದು ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಫ್ತು ಮೊತ್ತವು ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಒಟ್ಟು ಶೇ 5ರಷ್ಟು ಬೆಳವಣಿಗೆ ಸಾಧಿಸಿದೆ ಎಂದು ಕೇಂದ್ರ ಔಷಧ ರಫ್ತು ಉತ್ತೇಜನ ಮಂಡಳಿಯ ಮಹಾನಿರ್ದೇಶಕ ಕೆ. ರಾಜಾ ಭಾನು ತಿಳಿಸಿದ್ದಾರೆ.

ದೇಶದ ಔಷಧ ಉದ್ಯಮದ ಗಾತ್ರ ಈಗ ಅಂದಾಜು ₹5.56 ಲಕ್ಷ ಕೋಟಿಯಷ್ಟು ಇದೆ. ಇದು 2030ರ ವೇಳೆಗೆ ದುಪ್ಪಟ್ಟಾಗುವ ನಿರೀಕ್ಷೆ ಇದೆ ಎಂದು ಅವರು ಹೇಳಿದ್ದಾರೆ.

'ಜಾಗತಿಕ ಮಟ್ಟದಲ್ಲಿ ಹಲವು ಸವಾಲುಗಳು ಇದ್ದರೂ ಔಷಧ ವಲಯದ ರಫ್ತು ಬೆಳವಣಿಗೆ ದಾಖಲಿಸಿದೆ' ಎಂದು ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.

ಅಡಿಕೆ ಧಾರಣೆ

ಮಂಗಳೂರು		ಹಳತು	20000-34500	ಇಡಿ	52409-55699
ಕೋಕ	25000-34500	**ಭದ್ರಾವತಿ**		ಗೊರಬಲು	26000-38711
ಹೊಸತು	30000-49000	ಸಿಪ್ಪೆಗೋಟು	11000-12500	ಇತರ	28500-28500
ಹಳತು	36000-55500	ಇತರೆ	24800-24800	ರಾಶಿ	42000- 55811
ಪುತ್ತೂರು		**ತೀರ್ಥಹಳ್ಳಿ**		ಸರಕು	60029-88100
ಹೊಸತು	26000-49000	ಬೆಟ್ಟೆ	54119-63799	ಸಿಪ್ಪೆಗೋಟು	14000-14000

ಮುಂಬೈ ಧಾರಣೆ (ಶೇಂಗಾ)

04-04-2026	
ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9700-9800
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1790 (1790)
ಒಂದು ವಾರದ ಡೆಲಿವರಿ	1785 (1785)
ಪಾಮ್ ವಾರದ ಡೆಲಿವರಿ	1488 (1488)
ಸೂರ್ಯಕಾಂತಿ ಎಣ್ಣೆ ಕಚ್ಚಾ	1600 (1600)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,48,200 (1,58,000)
ಬೆಳ್ಳಿ ಕೆ.ಜಿಗೆ	2,34,500 (2,34,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಜಯದ ಓಟದತ್ತ ಬೆಂಗಳೂರು ನೋಟ

ಏಳು ದಿನಗಳ ಬಿಡುವಿನ ನಂತರ ಕಣಕ್ಕಿಳಿಯಲಿದೆ ಆರ್‌ಸಿಬಿ; ಚೆನ್ನೈಗೆ ಸಿಕ್ಕಿದ್ದು ಒಂದೇ ದಿನ!

• ಗಿರೀಶ ದೊಡ್ಡಮನಿ



ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ವಿರಾಟ್ ಕೊಹ್ಲಿ ಅಭ್ಯಾಸ ನಡೆಸಿದರು ಚಿತ್ರ: ರಂಜು ಪಿ

ಬೆಂಗಳೂರು: 'ಹಾಲಿ ಚಾಂಪಿಯನ್' ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟಗಾರರು ಕಳೆದ ಒಂದು ವಾರದಿಂದ ಚಿನ್ನಸ್ವಾಮಿ ಕ್ರೀಡಾಂಗಣ ಮತ್ತು ನಗರದ ಹೊರವಲಯ ದಲ್ಲಿರುವ ಕ್ರಿಕೆಟ್ ಮೈದಾನದಲ್ಲಿ ಅಭ್ಯಾಸ ಮಾಡುವುದರಲ್ಲಿ ಮಗ್ನರಾಗಿದ್ದರು. ಬಿಡುವಿನ ಬೇಸರ ಕಳೆಯಲು ತಾವು ತಂಗಿದ್ದ ಹೋಟೆಲ್‌ನ ಈಜುಕೊಳದಲ್ಲಿ ಮುಳುಗೆದ್ದರು. ಜಿಮ್ನಾಷಿಯಂನಲ್ಲಿ ಕಸರತ್ತು ಮಾಡಿದರು.

ಆದರೆ ಇದೇ ಅವಧಿಯಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಎರಡು ಪಂದ್ಯಗಳಲ್ಲಿ ಸೋತಿತು. ಶುಕ್ರವಾರ ರಾತ್ರಿ ತನ್ನ ತವರು ಚೆಪಾಕ್‌ನಲ್ಲಿ ಋತುರಾಜ್ ಗಾಯಕವಾಡ ಪಡೆ ಪಂಜಾಬ್ ಕಿಂಗ್ಸ್ ವಿರುದ್ಧ ಪರಾಭವಗೊಂಡಿತ್ತು. ಶನಿವಾರ ಮಧ್ಯಾಹ್ನ ಬೆಂಗಳೂರಿಗೆ ಆಗಮಿಸಿದೆ. ಭಾನುವಾರ ಚಿನ್ನಸ್ವಾಮಿ ಕ್ರೀಡಾಂಗಣ ದಲ್ಲಿ ಆರ್‌ಸಿಬಿ ತಂಡವನ್ನು ಎದುರಿಸಲಿದೆ.

ಈ ವೇಳಾಪಟ್ಟಿ ಒಂದು ರೀತಿಯಲ್ಲಿ ಇಬ್ಬರಿಗೂ ವಿಭಿನ್ನ ಸವಾಲು ಒಡ್ಡಿರುವುದಂತೂ ನಿಜ. ಏಕೆಂದರೆ ಮಾರ್ಚ್ 28ರಂದು ಆರ್‌ಸಿಬಿಯು ತನ್ನ ಮೊದಲ ಪಂದ್ಯ ಆಡಿತ್ತು. ಅದರಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡದ ಎದುರು ಗೆದ್ದಿತ್ತು. ಅದರ ನಂತರ ದೀರ್ಘ ಬಿಡುವು ಸಿಕ್ಕಿತು. ಆದರೆ ಚೆನ್ನೈ ತಂಡಕ್ಕೆ ಎರಡು ಮತ್ತು ಮೂರನೇ ಪಂದ್ಯದ ನಡುವೆ ಸಿಕ್ಕಿದ್ದು ಒಂದು ದಿನದ ಬಿಡುವು ಮಾತ್ರ. ಆರ್‌ಸಿಬಿಗೆ ಈ ದೀರ್ಘ ಅವಧಿಯಲ್ಲಿ ಲಯ ಕಾಪಾಡಿಕೊಳ್ಳುವ ಸವಾಲಾದರೆ, ಚೆನ್ನೈಗೆ ವಿಶ್ರಾಂತಿಗೆ ಸಮಯಾವಕಾಶ ಸಿಗದ ಒತ್ತಡ ಕಾಡಬಹುದು.

'ಮೊದಲ ಪಂದ್ಯ ಮುಗಿದ ಮರುದಿನ ಪೂರ್ತಿ ವಿಶ್ರಾಂತಿ ಪಡೆದೆವು. ಅದರ ನಂತರ ಬಹಳ ಕಠಿಣ ಅಭ್ಯಾಸ ನಡೆಸಿದೆವು. ಪಂದ್ಯಗಳಲ್ಲಿ ಎದುರಾಗಬಹುದಾದ ಒತ್ತಡದ ಸನ್ನಿವೇಶಗಳ ಮಾದರಿಗಳನ್ನು ಸೃಷ್ಟಿಸಿದ ನಮ್ಮ ನೆರವು ಸಿಬ್ಬಂದಿ ಬಹಳ ಉತ್ತಮವಾದ ಅಭ್ಯಾಸಕ್ಕೆ ಅವಕಾಶ ಮಾಡಿಕೊಟ್ಟರು. ಥೇಟ್ ಪಂದ್ಯವಾಡಿದಂತಹ ಭಾವನೆ ಮೂಡಿಸಿದ ಅಭ್ಯಾಸದ ಸಂದರ್ಭಗಳು ಅವು. ಐದು ಅಥವಾ ಏಳು ದಿನ ಬಿಡುವು ಎಂಬುದರ ಬಗ್ಗೆ ನಾವು ಯೋಚನೆ ಮಾಡಲಿಲ್ಲ' ಎಂದು ಆರ್‌ಸಿಬಿ ಉಪನಾಯಕ ಜಿತೇಶ್ ಶರ್ಮಾ ಶನಿವಾರದ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಮೊದಲ ಪಂದ್ಯದಲ್ಲಿ ಆರ್‌ಸಿಬಿ ಆಲ್‌ರೌಂಡ್ ಆಟವಾಡಿತ್ತು. ವೇಗಿ ಜೇಕಬ್ ಡಫಿ ಅವರ 'ಪವರ್ ಪ್ಲೇ' ಅವಧಿಯ ಪರಿಣಾಮಕಾರಿ ದಾಳಿಯು ರಂಗೇರಿತ್ತು. ರೊಮೆರಿಯೊ ಶೆಫರ್ಡ್, ಹೊಸ ಹುಡುಗ ಅಭಿನಂದನ್ ಸಿಂಗ್ ಮತ್ತು ಅನುಭವಿ ಭುವನೇಶ್ವರ್ ಕುಮಾರ್ ಅವರು ತವರಿನಂಗಳದ ಲಾಭ ಪಡೆದಿದ್ದರು.

ಅಭಿಮಾನಿಗಳ ಕಣ್ಮಣಿ ವಿರಾಟ್ ಕೊಹ್ಲಿ, 'ಸ್ಥಳೀಯ ಹೀರೊ' ದೇವದತ್ತ ಪಡಿಕ್ಕಲ್ ಹಾಗೂ ನಾಯಕ ರಜತ್ ಪಾಟೀದಾರ್ ಅವರ ಬ್ಯಾಟಿಂಗ್ ಬಲದಿಂದ ತಂಡವು, 202 ರನ್‌ಗಳ ಗುರಿಯನ್ನು ಮುಟ್ಟಿದಾಗ ಇನಿಂಗ್ಸ್‌ನಲ್ಲಿ ಇನ್ನೂ 26 ಎಸೆತಗಳು ಬಾಕಿಯಿದ್ದವು. ಫಿಲ್ ಸಾಲ್ಟ್ ಮತ್ತು ಜಿತೇಶ್ ಅವರು ಮಾತ್ರ ಹೆಚ್ಚು ರನ್ ಗಳಿಸಿರಲಿಲ್ಲ.

ಬಲಾಬಲ (35 ಪಂದ್ಯ)

ಆರ್‌ಸಿಬಿ ಜಯ	13
ಚೆನ್ನೈ ಗೆಲುವು	21
ಫಲಿತಾಂಶವಿಲ್ಲ	1



ಸಿಎಸ್‌ಕೆ ತಂಡದ ನಾಯಕ ಋತುರಾಜ್ ಪಿಟಿಐ ಚಿತ್ರ

ಆದರೆ ಚೆನ್ನೈ ತಂಡದ ಪರಿಸ್ಥಿತಿ ಎಂದಿನಂತಿಲ್ಲ. ಐದು ಬಾರಿ ಪ್ರಶಸ್ತಿ ಗೆದ್ದ ತಂಡದ ರೀತಿಯಲ್ಲಿ ಆಡುತ್ತಿಲ್ಲ. ಋತುರಾಜ್ ಬಳಗವು ಮೊದಲ ಪಂದ್ಯದಲ್ಲಿ ಅಲ್ಪಮೊತ್ತಕ್ಕೆ ಕುಸಿದಿತ್ತು. ಆದರೆ, ಎರಡನೇ ಪಂದ್ಯದಲ್ಲಿ 18 ವರ್ಷದ ಆಯುಷ್ ಮ್ಹಾತ್ರೆ, ಸರ್ಫರಾಜ್ ಖಾನ್ ಮತ್ತು ಶಿವಂ ದುಬೆ ಅವರ ಅಮೋಘ ಬ್ಯಾಟಿಂಗ್ ಬಲದಿಂದ 'ದ್ವಿಶತಕ'ದ ಮೊತ್ತ ಗಳಿಸಿತ್ತು. ಆದರೆ ಸಂಜು ಸ್ಯಾಮ್ಸನ್ ಅವರು ಎರಡೂ ಪಂದ್ಯಗಳಲ್ಲಿ ವಿಫಲರಾಗಿದ್ದಾರೆ.

ಬೌಲರ್ ಮ್ಯಾಟ್ ಹೆನ್ರಿ ಎರಡು ವಿಕೆಟ್ ಗಳಿಸಿ ದರೂ ರನ್ ಕೊಡುವುದರಲ್ಲಿ ಧಾರಾಳಿಯಾದರು. ಖಲೀಲ್ ಅಹಮದ್, ಸ್ಪಿನ್ನರ್ ರಾಹುಲ್ ಚಾಹರ್ ಅವರು ವಿಕೆಟ್ ಗಳಿಸಲಿಲ್ಲ. ಪ್ರಮುಖ ಜೊತೆಯಾಟಗಳನ್ನು ಮುರಿಯುವಲ್ಲಿ ಬೌಲರ್‌ಗಳು ಚಾಣಾಕ್ಷತನ ತೋರಲಿಲ್ಲ. ಋತುರಾಜ್ ನಾಯಕತ್ವದಲ್ಲಿ ಅನುಭವದ ಕೊರತೆ ಎದ್ದುಕಂಡಿತು. ಅಲ್ಲದೇ ಮಹೇಂದ್ರಸಿಂಗ್ ಧೋನಿ ಅವರ ಗೈರುಹಾಜರಿ ಕೂಡ ಕಾಡಿತ್ತು.

ಇಂದಿನ ಪಂದ್ಯ

ಸನ್‌ರೈಸರ್ಸ್ ಹೈದರಾಬಾದ್ V/s ಲಖನೌ ಸೂಪರ್ ಜೈಂಟ್ಸ್
ಹೈದರಾಬಾದ್, ಮಧ್ಯಾಹ್ನ: 3.30

ರಾಯಲ್ ಚಾಲೆಂಜರ್ಸ್ ಬೆಂಗಳೂರು V/s ಚೆನ್ನೈ ಸೂಪರ್ ಕಿಂಗ್ಸ್
ಬೆಂಗಳೂರು, ರಾತ್ರಿ: 7.30

ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊಹಾಟ್‌ಸ್ಟಾರ್

ರಿಜ್ವಿ ಆಟಕ್ಕೆ ಮುಂಬೈ ನಿರುತ್ತರ

ನವದೆಹಲಿ (ಪಿಟಿಐ): ಒಳ್ಳೆಯ ಲಯದಲ್ಲಿರುವ ಇಂಪ್ಯಾಕ್ಟ್ ಸಬ್‌ಸ್ಟಿಟ್ಯೂಟ್ ಸಮೀರ್ ರಿಜ್ವಿ ಮತ್ತೊಮ್ಮೆ ಆಕ್ರಮಣಕಾರಿ ಇನಿಂಗ್ಸ್ ಆಡಿ 51 ಎಸೆತಗಳಲ್ಲಿ 90 ರನ್ ಸಿಡಿಸಿದರು. ಅವರ ಅಮೋಘ ಆಟದ ನೆರವಿನಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡ ಶನಿವಾರ ನಡೆದ ಐಪಿಎಲ್ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡವನ್ನು ಆರು ವಿಕೆಟ್‌ಗಳಿಂದ ಸೋಲಿಸಿತು.

ಗೆಲುವಿಗೆ 163 ರನ್‌ಗಳ ಗುರಿ ಎದುರಿಸಿದ ಡೆಲ್ಲಿ ತಂಡ 7 ರನ್‌ಗಳಾಗುವಷ್ಟರಲ್ಲಿ ಅನುಭವಿ ಕೆ.ಎಲ್.ರಾಹುಲ್ (1) ಮತ್ತು ನಿತೀಶ್ ರಾಣಾ (0) ಅವರನ್ನು ಕಳೆದುಕೊಂಡಿತ್ತು. ಈ ವೇಳೆ ಎರಡು ಉಪಯುಕ್ತ ಜೊತೆಯಾಟಗಳಲ್ಲಿ ಭಾಗಿಯಾದ 22 ವರ್ಷ ವಯಸ್ಸಿನ ರಿಜ್ವಿ ಮುಂಬೈ ದಾಳಿಯನ್ನು ನುಚ್ಚುನೂರು ಮಾಡಿದರು.

ಪಥುಮ್ ನಿಸಾಂಕ (44 ರನ್, 30ಎಸೆತ) ಜೊತೆ ಮೂರನೇ ವಿಕೆಟ್‌ಗೆ 66 ರನ್ ಸೇರಿಸಿ ಚೇತರಿಕೆ ನೀಡಿದರು. ನಂತರ ಡೇವಿಡ್ ಮಿಲ್ಲರ್ (ಔಟಾಗದೇ 17) ಜೊತೆಗೂಡಿ ನಾಲ್ಕನೇ ವಿಕೆಟ್‌ಗೆ 78 ರನ್ ಸೇರಿಸಿ ತಂಡವನ್ನು ಗೆಲುವಿನ ಹಾದಿಯತ್ತ ಮುನ್ನಡೆಸಿದರು. ಅವರು ನಿರ್ಗಮಿಸಿದಾಗ ತಂಡದ ಗೆಲುವಿಗೆ 12 ರನ್‌ಗಳಷ್ಟೇ ಬೇಕಿದ್ದವು.

ಡೆಲ್ಲಿ ತಂಡ 4 ವಿಕೆಟ್‌ಗೆ 164 ರನ್ ಹೊಡೆದಾಗ ಇನ್ನೂ 11 ಎಸೆತಗಳು ಉಳಿದಿದ್ದವು. ಇದಕ್ಕೆ ಮೊದಲು ಮುಂಬೈ ಇಂಡಿಯನ್ಸ್ 6 ವಿಕೆಟ್‌ಗೆ 162 ರನ್‌ಗಳ ಸಾಧಾರಣ ಮೊತ್ತ ಗಳಿಸಿತ್ತು.

ಈ ಹಿಂದಿನ ಪಂದ್ಯದಲ್ಲಿ ಅವರು ಇಂಪ್ಯಾಕ್ಟ್ ಸಬ್ ಆಗಿ ಲಖನೌ ಸೂಪರ್ ಜೈಂಟ್ಸ್ ವಿರುದ್ಧ 47 ಎಸೆತಗಳಲ್ಲಿ ಅಜೇಯ 70 ರನ್ ಗಳಿಸಿದ್ದರು.

ಪೆಟ್ಟು ನೀಡಿದ ಮುಕೇಶ್: ಅಸ್ವಸ್ಥರಾದ ಹಾರ್ದಿಕ್ ಪಾಂಡ್ಯ ಬದಲು ಸೂರ್ಯಕುಮಾರ್ ಯಾದವ್ ಮುಂಬೈ ತಂಡವನ್ನು ಮುನ್ನಡೆಸಿದ್ದರು. ಬ್ಯಾಟಿಂಗಿಗೆ ಕಳುಹಿಸಲ್ಪಟ್ಟ ಮುಂಬೈ ತಂಡ ನಿಯಮಿತವಾಗಿ ವಿಕೆಟ್‌ಗಳನ್ನು ಕಳೆದುಕೊಂಡಿತು. ಮಧ್ಯಮ ವೇಗದ ಬೌಲರ್ ಮುಕೇಶ್ ಕುಮಾರ್ ತಮ್ಮ ಎರಡನೇ ಓವರಿನಲ್ಲೇ ಆರಂಭ ಆಟಗಾರ ರಿಯಾನ್ ರಿಕೆಲ್ಟನ್ ಮತ್ತು ಭಾರತ ತಂಡದ ಆಟಗಾರ ತಿಲಕ್ ವರ್ಮಾ ಅವರ ವಿಕೆಟ್‌ಗಳನ್ನು ಪಡೆದರು. ವರ್ಮಾ ಅವರನ್ನು ತಮ್ಮದೇ ಬೌಲಿಂಗ್‌ನಲ್ಲಿ ಕ್ಯಾಚ್ ಮಾಡಿದರು.

ರೋಹಿತ್ ಶರ್ಮಾ (36, 26ಎ) ಮತ್ತು ಸೂರ್ಯಕುಮಾರ್ ಮೂರನೇ ವಿಕೆಟ್‌ಗೆ 53 ರನ್ ಸೇರಿಸಿ ಕುಸಿತ ತಪ್ಪಿಸಿದರೂ ರನ್ ಗಳಿಕೆ ನಿರೀಕ್ಷಿತ ಮಟ್ಟದಲ್ಲಿ ಏರಲಿಲ್ಲ. ಸೂರ್ಯ ಅವರು ಕೊನೆಯಲ್ಲಿ ವೇಗ ಹೆಚ್ಚಿಸಿ 36 ಎಸೆತಗಳಲ್ಲಿ 51 ರನ್ (4x3, 6x2) ಬಾರಿಸಿದರು.



ಸಮೀರ್ ರಿಜ್ವಿ ಬ್ಯಾಟಿಂಗ್ ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಮುಂಬೈ ಇಂಡಿಯನ್ಸ್: 6 ವಿಕೆಟ್‌ಗೆ 162 (20 ಓವರುಗಳಲ್ಲಿ)

ರಿಕೆಲ್ಟನ್ ಸಿ ಪಟೇಲ್ ಬಿ ಮುಕೇಶ್ 9 (11ಎ, 4x2)
ರೋಹಿತ್ ಸಿ ರಾಣಾ ಬಿ ಪಟೇಲ್ 35 (26ಎ, 4x5, 6x1)
ತಿಲಕ್ ವರ್ಮಾ ಸಿ ಮತ್ತು ಬಿ ಮುಕೇಶ್ 0 (2ಎ)
ಸೂರ್ಯ ಎಲ್‌ಬಿಡಬ್ಲ್ಯು ಬಿ ಎನ್‌ಗಿಡಿ 51 (36ಎ, 4x3, 6x2)
ರುದರ್‌ಫೋರ್ಡ್ ಸಿ ಮುಕೇಶ್ ಬಿ ವಿಪ್ರಜ್ 5 (7ಎ, 4x1)
ನಮನ್ ಸಿ ಸ್ಟಬ್ಸ್ ಬಿ ನಟರಾಜನ್ 28 (21ಎ, 4x2, 6x1)
ಸ್ಯಾಂಟ್ನರ್ ಔಟಾಗದೇ 18 (13ಎ, 4x2)
ಕಾರ್ಬಿನ್ ಬಾಷ್ ಔಟಾಗದೇ 11 (4ಎ, 4x2)
ಇತರೆ: 5 (ಲೆಗ್‌ಬೈ 1, ವೈಡ್ 4)
ವಿಕೆಟ್ ಪತನ: 1–18 (ರಿಯಾನ್ ರಿಕೆಲ್ಟನ್, 2.3), 2–18 (ತಿಲಕ್ ವರ್ಮಾ, 2.5), 3–71 (ರೋಹಿತ್ ಶರ್ಮಾ, 9.3), 4–85 (ಶೆರ್ಫೇನ್ ರುದರ್‌ಫೋರ್ಡ್, 11.5), 5–122 (ಸೂರ್ಯಕುಮಾರ್ ಯಾದವ್, 15.3), 6–146 (ನಮನ್ ಧೀರ್, 18.4).
ಬೌಲಿಂಗ್: ಮುಕೇಶ್ ಕುಮಾರ್ 3–0–26–2; ಲುಂಗಿ ಎನ್‌ಗಿಡಿ 4–0–34–1; ಅಕ್ಷರ್ ಪಟೇಲ್ 4–0–22–1; ವಿಪ್ರಜ್ ನಿಗಮ್ 3–0–24–1; ಕುಲದೀಪ್ ಯಾದವ್ 3–0–31–0; ಟಿ.ನಟರಾಜನ್ 3–0–24–1.

ಡೆಲ್ಲಿ ಕ್ಯಾಪಿಟಲ್ಸ್: 4 ವಿಕೆಟ್‌ಗೆ 164 (18.1 ಓವರುಗಳಲ್ಲಿ)

ರಾಹುಲ್ ಸಿ ರಿಕೆಲ್ಟನ್ ಬಿ ಚಾಹರ್ 1 (3ಎ)
ನಿಸಾಂಕ ಸಿ ಮಾರ್ಕಂಡೆ ಬಿ ಸ್ಯಾಂಟ್ನರ್ 44 (30ಎ, 4x6, 6x1)
ನಿತೀಶ್ ರಾಣಾ ರನ್‌ಔಟ್ (ಬೂಮ್ರಾ) 0 (3ಎ)
ರಿಜ್ವಿ ಸಿ ತಿಲಕ್ ವರ್ಮಾ ಬಿ ಬಾಷ್ 90 (51ಎ, 4x7, 6x7)
ಮಿಲ್ಲರ್ ಔಟಾಗದೇ 21 (18ಎ, 4x4)
ಸ್ಟಬ್ಸ್ ಔಟಾಗದೇ 3 (4ಎ)
ಇತರೆ: 5 (ಲೆಗ್‌ಬೈ 1, ವೈಡ್ 4)
ವಿಕೆಟ್ ಪತನ: 1–2 (ರಾಹುಲ್, 0.4), 2–7 (ನಿತೀಶ್ ರಾಣಾ, 1.4) 3–73 (ಪಥುಮ್ ನಿಸಾಂಕ, 9.5), 4–151 (ಸಮೀರ್ ರಿಜ್ವಿ, 16.2)
ಬೌಲಿಂಗ್: ದೀಪಕ್ ಚಾಹರ್ 3–0–20–1; ಜಸ್‌ಪ್ರೀತ್ ಬೂಮ್ರಾ 4–0–21–0; ಮಿಚೆಲ್ ಸ್ಯಾಂಟರ್ 3–0–22–1; ಶಾರ್ದೂಲ್ ಠಾಕೂರ್ 3–0–41–0; ಮಯಂಕ್ ಮಾರ್ಕಂಡೆ 2–0–20–0; ಕಾರ್ಬಿನ್ ಬಾಷ್ 3.1–0–39–1
ಪಂದ್ಯದ ಆಟಗಾರ: ಸಮೀರ್ ರಿಜ್ವಿ

ರಾಜಸ್ಥಾನ ರಾಯಲ್ಸ್‌ಗೆ ರೋಚಕ ಜಯ

ಅಹಮದಾಬಾದ್ (ಪಿಟಿಐ): ಧ್ರುವ ಜುರೇಲ್ ಅವರ ಸೊಗಸಾದ ಬ್ಯಾಟಿಂಗ್ ಹಾಗೂ ರವಿ ಬಿಷ್ಣೋಯಿ ಅವರ ಸ್ಪಿನ್ ಮೋಡಿಯ ಬಲದಿಂದ ರಾಜಸ್ಥಾನ ರಾಯಲ್ಸ್ ತಂಡವು ಶನಿವಾರ ಇಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ 6 ರನ್‌ಗಳಿಂದ ಗುಜರಾತ್ ಟೈಟನ್ಸ್ ತಂಡದ ವಿರುದ್ಧ ರೋಚಕ ಜಯ ಸಾಧಿಸಿತು.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ರಾಜಸ್ಥಾನ ರಾಯಲ್ಸ್ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಜೋಡಿ ಯಶಸ್ವಿ ಜೈಸ್ವಾಲ್ (55; 36ಎ, 4x6, 6x3) ಮತ್ತು ವೈಭವ್ ಸೂರ್ಯವಂಶಿ (31; 18ಎ, 4x5, 6x1) ಪವರ್ ಪ್ಲೇನಲ್ಲಿ 70 ರನ್ ಸೇರಿಸಿದರು. ಈ ಅಡಿಪಾಯದ ಮೇಲೆ ಧ್ರುವ ಜುರೇಲ್ (75; 42ಎ, 4x5, 6x5) ಅವರು ದೊಡ್ಡ ಸೌಧ ಕಟ್ಟಲು ನೆರವಾದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 210 ರನ್ ಗಳಿಸಿತು.

ಕಠಿಣ ಗುರಿ ಬೆನ್ನಟ್ಟಿದ ಗುಜರಾತ್ ತಂಡಕ್ಕೆ ಸಾಯಿ ಸುದರ್ಶನ್ (73; 44ಎ, 4x9, 6x3) ಹಾಗೂ ಕುಮಾರ್ ಕುಶಾಗ್ರ (18; 14ಎ) ಅವರು ಮೊದಲ ವಿಕೆಟ್‌ಗೆ 78 ರನ್ ಸೇರಿಸಿ ಉತ್ತಮ ಆರಂಭ ಒದಗಿಸಿದರು. ಆದರೆ, ಬಿಷ್ಣೋಯಿ (41ಕ್ಕೆ4) ಅವರ ಸ್ಪಿನ್ ದಾಳಿ ಎದುರು ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ವಿಫಲರಾದರು.

ನಾಯಕ ರಶೀದ್ ಖಾನ್ (24; 16ಎ) ಹಾಗೂ ಕಗಿಸೊ ರಬಾಡ (23; 16ಎ) ಅವರು ಎಂಟನೇ ವಿಕೆಟ್‌ಗೆ 43 ರನ್ ಜೊತೆಯಾಟವಾಡಿ, ಗೆಲುವಿನ ಆಸೆ ಚಿಗುರಿಸಿದ್ದರು. ಟೈಟನ್ಸ್ ಗೆಲುವಿಗೆ ಕೊನೆಯ ಎರಡು ಓವರ್‌ಗಳಲ್ಲಿ 15 ರನ್ ಅಗತ್ಯವಿತ್ತು. ಜೋಫ್ರಾ ಆರ್ಚರ್ ಹಾಗೂ ತುಷಾರ್ ದೇಶಪಾಂಡೆ ಅವರು ಕ್ರಮವಾಗಿ 19 ಮತ್ತು 20ನೇ ಓವರ್‌ನಲ್ಲಿ ತಲಾ 4 ರನ್ ನೀಡಿ, ರಾಯಲ್ಸ್ ತಂಡಕ್ಕೆ ಗೆಲುವು ತಂದಿತ್ತರು.

ರಿಯಾನ್ ಪರಾಗ್ ಪಡೆ ಟೂರ್ನಿಯಲ್ಲಿ ಎರಡನೇ ಗೆಲುವಿನೊಂದಿಗೆ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು. ಶುಭಮನ್ ಗಿಲ್ ಅವರು ಕಣಕ್ಕಿಳಿಯದ ಕಾರಣ ರಶೀದ್ ಅವರು ಟೈಟನ್ಸ್ ನಾಯಕತ್ವ ವಹಿಸಿಕೊಂಡಿದ್ದರು.

ಸಂಕ್ಷಿಪ್ತ ಸ್ಕೋರು: ರಾಜಸ್ಥಾನ ರಾಯಲ್ಸ್: 20 ಓವರ್‌ಗಳಲ್ಲಿ 6ಕ್ಕೆ210 (ಯಶಸ್ವಿ ಜೈಸ್ವಾಲ್ 55, ವೈಭವ್ ಸೂರ್ಯವಂಶಿ 31, ಧ್ರುವ ಜುರೇಲ್ 75; ಕಗಿಸೊ ರಬಾಡ 42ಕ್ಕೆ2). ಗುಜರಾತ್ ಟೈಟನ್ಸ್: 20 ಓವರ್‌ಗಳಲ್ಲಿ 8ಕ್ಕೆ 204 (ಸಾಯಿ ಸುದರ್ಶನ್ 73, ಜೋಸ್ ಬಟ್ಲರ್ 26, ರಶೀದ್ ಖಾನ್ 24; ರವಿ ಬಿಷ್ಣೋಯಿ 41ಕ್ಕೆ4).
ಪಂದ್ಯದ ಆಟಗಾರ: ರವಿ ಬಿಷ್ಣೋಯಿ.



ವಿಕೆಟ್ ಪಡೆದ ಸಂಭ್ರಮದಲ್ಲಿ ರವಿ ಬಿಷ್ಣೋಯಿ ಪಿಟಿಐ ಚಿತ್ರ

ಚಿಟಿಕೆ ಸುದ್ದಿ

ಸವಾಲು ಎದುರಿಸಲು ಭಾರತ ಶಕ್ತ: ಜೈಶಂಕರ್



ಜೈಶಂಕರ್

ರಾಯಪುರ (ಪಿಟಿಐ): ಭಾರತವು ದೇಶೀಯ ಮತ್ತು ಬಾಹ್ಯ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸುತ್ತಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಶನಿವಾರ ಹೇಳಿದರು.

ರಾಯಪುರ ಐಐಎಂನಲ್ಲಿ ನಡೆದ ಘಟಿಕೋತ್ಸವದಲ್ಲಿ ಮಾತನಾಡಿ, 'ದೇಶದ ಸಾಮರ್ಥ್ಯವನ್ನು ಪರೀಕ್ಷೆಗೊಡ್ಡಿದ್ದ ಜಾಗತಿಕ ಸವಾಲನ್ನು ಭಾರತ ಸಮರ್ಥವಾಗಿ ಎದುರಿಸುತ್ತಿದೆ. ಮುಖ್ಯವಾಹಿನಿಯಿಂದ ದೂರವಿರುವ ಸಮಾಜದ ಮೇಲೂ ಪಶ್ಚಿಮ ಏಷ್ಯಾ ಯುದ್ಧವು ಪರಿಣಾಮವನ್ನು ಬೀರುತ್ತಿದೆ. ಇದು ಜಾಗತೀಕರಣವು ವ್ಯಾಪಿಸಿರುವುದಕ್ಕೆ ಸಾಕ್ಷಿಯಾಗಿದೆ' ಎಂದರು.

ಎಲ್ಲರನ್ನೂ ಒಳಗೊಂಡ ಅಭಿವೃದ್ಧಿ, ಪ್ರಾತಿನಿಧಿಕ ರಾಜಕೀವು ದೇಶಕ್ಕೆ ನೂತನ ಅಡಿಪಾಯವನ್ನು ನೀಡಿದೆ ಎಂದರು.

ಬಿಜೆಪಿ ಕಚೇರಿ ಹೊರಗೆ ಸ್ಫೋಟ: ಐವರ ಬಂಧನ

ಚಂಡೀಗಢ (ಪಿಟಿಐ): ಇಲ್ಲಿನ ಬಿಜೆಪಿ ಪಂಜಾಬ್ ರಾಜ್ಯ ಘಟಕದ ಕಚೇರಿ ಹೊರಗೆ ಸಂಭವಿಸಿದ ಸ್ಫೋಟಕ್ಕೆ ಸಂಬಂಧಿಸಿ ಐವರನ್ನು ಬಂಧಿಸಲಾಗಿದೆ ಎಂದು ಪಂಜಾಬ್ ಡಿಜಿಪಿ ಗೌರವ್ ಯಾದವ್ ತಿಳಿಸಿದ್ದಾರೆ.

'ಪಂಜಾಬ್ ಪೊಲೀಸ್ ಗುಪ್ತಚರ ವಿಭಾಗ ಮತ್ತು ಚಂಡೀಗಢ ಪೊಲೀಸ್ ಜಂಟಿಯಾಗಿ ನಡೆಸಿದ ಕಾರ್ಯಾಚರಣೆಯಲ್ಲಿ ಐವರನ್ನು ಬಂಧಿಸಿ, ದಾಳಿಯಲ್ಲಿ ಭಾಗಿಯಾಗಿದ್ದ ಇಬ್ಬರನ್ನು ಗುರುತಿಸಲಾಗಿದೆ' ಎಂದು 'ಎಕ್ಸ್'ನಲ್ಲಿ ಶನಿವಾರ ತಿಳಿಸಿದ್ದಾರೆ.

'ಸಂಚಿನ ಹಿಂದೆ ಪಾಕಿಸ್ತಾನದ ಗುಪ್ತಚರ ಇಲಾಖೆ ಐಎಸ್‌ಐ ಪಾತ್ರ ಇದೆ ಎಂಬುದು ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ. ಪೋರ್ಚುಗಲ್ ಮತ್ತು ಜರ್ಮನಿಯಲ್ಲಿರುವ ವಿದೇಶಿ ಹ್ಯಾಂಡ್ಲರ್‌ಗಳನ್ನು ಗುರುತಿಸಲಾಗಿದೆ' ಎಂದಿದ್ದಾರೆ. ಬುಧವಾರ ಸಂಜೆ 5 ಗಂಟೆ ಸುಮಾರಿಗೆ ಸ್ಫೋಟ ನಡೆದಿತ್ತು.

'ರಾಜ್ಯಗಳನ್ನು ಸಮಾನವಾಗಿ ಕಾಣಿ'

ಉಪನ್ಯಾಸ ಕಾರ್ಯಕ್ರಮ: ಕೇಂದ್ರಕ್ಕೆ ನ್ಯಾಯಮೂರ್ತಿ ಬಿ.ವಿ ನಾಗರತ್ನ ಕಿವಿಮಾತು



ನಾಗರತ್ನ

ಪಟ್ನಾ (ಪಿಟಿಐ): ಕೇಂದ್ರ ಸರ್ಕಾರವು ರಾಜ್ಯಗಳನ್ನು ತನ್ನ ಸಮಾನವಾಗಿ ಕಾಣಬೇಕೇ ಹೊರತು, ಅಧೀನರು ಎಂಬುದಾಗಿ ಅಲ್ಲ ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಬಿ.ವಿ ನಾಗರತ್ನ ಅವರು ಶನಿವಾರ ಒತ್ತಾಯಿಸಿದರು.

ಪಟ್ನಾದ ಚಾಣಕ್ಯ ಕಾನೂನು ವಿಶ್ವವಿದ್ಯಾಲಯದಲ್ಲಿ ಉಪನ್ಯಾಸ ನೀಡಿದ ಅವರು, 'ರಾಜ್ಯ ಮತ್ತು ಕೇಂದ್ರದ ಸಂಬಂಧಗಳಲ್ಲಿ ಪಕ್ಷಭೇದಗಳನ್ನು ಬದಿಗಿಡಬೇಕು. ಯಾವ ಪಕ್ಷವು ಕೇಂದ್ರದಲ್ಲಿ ಅಧಿಕಾರದಲ್ಲಿದೆ ಮತ್ತು ಯಾವ ಪಕ್ಷ ರಾಜ್ಯದಲ್ಲಿ ಅಧಿಕಾರದಲ್ಲಿದೆ ಎಂಬುದರ ಆಧಾರದ ಮೇಲೆ ಆಡಳಿತ ಕಾರ್ಯಗಳು ಅವಲಂಬಿತವಾಗಿರಬಾರದು' ಎಂದು ಹೇಳಿದರು.

'ಒಕ್ಕೂಟ ವ್ಯವಸ್ಥೆ ಎಂದರೆ ಕೇವಲ ಸ್ವಾಯತ್ತತೆ ಅಲ್ಲ. ವಿಭಿನ್ನ ಅಧಿಕಾರ ವ್ಯವಸ್ಥೆಗಳು ಒಂದಕ್ಕೊಂದು ಪ್ರತಿಕೂಲವಾಗಿ ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿರುತ್ತವೆ. ಆಡಳಿತ ಎಂದರೆ ಏಕಪಕ್ಷೀಯ ನಿರ್ಧಾರಗಳಲ್ಲ, ಬದಲಾಗಿ ಮಾತುಕತೆ ಮತ್ತು ಸಮನ್ವಯವನ್ನು ಒಳಗೊಂಡಿರುತ್ತದೆ ಎಂಬುವುದನ್ನು ಇದು ಪ್ರತಿಬಿಂಬಿಸುತ್ತದೆ' ಎಂದರು.

'ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ಸಮನ್ವಯದ ಅಗತ್ಯವಿದೆ. ಅಭಿವೃದ್ಧಿಯ ವಿಚಾರದಲ್ಲಿ ರಾಜ್ಯದ ಜನರು ವಂಚಿತರಾಗಬಾರದು. ನ್ಯಾಯಯುತವಾಗಿ ಸಮಾನತೆ ಇರಬೇಕು' ಎಂದು ಹೇಳಿದರು.

'ಪ್ರೌಢಿಮೆಯಿರುವ ಒಕ್ಕೂಟ ವ್ಯವಸ್ಥೆಯು ನ್ಯಾಯಾಲಯದ ಮೆಟ್ಟಿಲು ಏರುವುದಿಲ್ಲ. ಬದಲಾಗಿ ಮಾತುಕತೆ ಮತ್ತು ಮಧ್ಯಸ್ಥಿಕೆಗಾಗಿ ಪ್ರಯತ್ನಿಸುತ್ತದೆ. ರಾಜ್ಯಗಳು ಪರಸ್ಪರ ಅಥವಾ ಕೇಂದ್ರದ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಹೂಡುವುದು ಶಕ್ತಿಯ ಪ್ರತೀಕವಲ್ಲ. ಅದು ಒಕ್ಕೂಟ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತದೆ' ಎಂದರು.

'ಮಹಿಳೆಯರ ಮೇಲಿನ ದೌರ್ಜನ್ಯ: ರೋಗಪೀಡಿತ ಸಮಾಜದ ಸೂಚಕ'

'ಸುಪ್ರೀಂ' ಸುದ್ದಿ

ನವದೆಹಲಿ (ಪಿಟಿಐ): ಕೌಟುಂಬಿಕ ದೌರ್ಜನ್ಯ ಎಂಬುದು ರೋಗಪೀಡಿತ ಸಾಮಾಜಿಕ ವ್ಯವಸ್ಥೆಯ ಸೂಚಕವಾಗಿದ್ದು, ಮಹಿಳೆಯರ ವಿರುದ್ಧದ ಅಪರಾಧಗಳ ಕುರಿತಾದ ಅಂಕಿ–ಅಂಶಗಳು ಕಳವಳಕಾರಿ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

2012ರ ಅಕ್ಟೋಬರ್‌ನಲ್ಲಿ ಪತ್ನಿಗೆ ಬೆಂಕಿ ಹಚ್ಚಿ ಕೊಂದಿದ್ದ ವ್ಯಕ್ತಿಗೆ ಜೀವಾವಧಿ ಶಿಕ್ಷೆ ವಿಧಿಸಿದ್ದನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಸಂಜಯ್ ಕರೋಲ್ ಹಾಗೂ ಎನ್.ಕೋಟೀಶ್ವರ್ ಸಿಂಗ್ ಅವರಿದ್ದ ಪೀಠವು ವಿಚಾರಣೆ ನಡೆಸುತ್ತಿದ್ದ ವೇಳೆ ಈ ರೀತಿ ಹೇಳಿದೆ.

'ಭಾರತದಲ್ಲಿ ಗಣನೀಯ ಮಟ್ಟದ ಆರ್ಥಿಕ ಅಭಿವೃದ್ಧಿ ಆಗುತ್ತಿದ್ದು, ಸಾಕ್ಷರತೆ ಪ್ರಮಾಣ ಹಾಗೂ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯೂ ಹೆಚ್ಚುತ್ತಿದೆ. ಆದರೂ ಗ್ರಾಮೀಣ ಭಾಗಗಳಲ್ಲಿ, ಪಟ್ಟಣ ಪ್ರದೇಶಗಳಲ್ಲಿ ಪುರುಷ ಪ್ರಧಾನ ವ್ಯವಸ್ಥೆ ದೈನಂದಿನ ಜೀವನದ ಭಾಗವಾಗಿಯೇ ಉಳಿದಿದೆ. ಸಂವಿಧಾನವು ಲಿಂಗ ತಾರತಮ್ಯದ ವಿರುದ್ಧ ಸಮಾನತೆ ಮತ್ತು ಸ್ವಾತಂತ್ರ್ಯದ ಭರವಸೆಗಳನ್ನು ನೀಡುತ್ತದೆ. ಆದರೂ ಹಲವರಿಗೆ ಈ ಹಕ್ಕುಗಳು ಇನ್ನೂ ದಕ್ಕಿಲ್ಲ ಎಂಬುದಕ್ಕೆ ಈ ಪ್ರಕರಣಗಳೇ ಸಾಕ್ಷಿ' ಎಂದೂ ಪೀಠ ಹೇಳಿದೆ.

'ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋದ ಮಾಹಿತಿ ಪ್ರಕಾರ, 2023ರಲ್ಲಿ 4.48 ಲಕ್ಷ ಮಹಿಳೆಯರ ಮೇಲಿನ ಅಪರಾಧ ಪ್ರಕರಣಗಳು ದಾಖಲಾಗಿವೆ. ವರದಕ್ಷಿಣೆ ಕಿರುಕುಳದ ಪ್ರಕರಣಗಳೂ ಮುಂದುವರಿದಿದ್ದು, ಪ್ರತಿ ವರ್ಷ 6,000 ಜೀವಗಳು ಬಲಿಯಾಗುತ್ತಿವೆ. ಕಾನೂನುಬಾಹಿರ ಎಂದು ಹಲವು ವರ್ಷಗಳ ಹಿಂದೆಯೇ ಘೋಷಿಸಿರುವ ಪದ್ಧತಿಗಳ ಮುಂದುವರಿಕೆಯನ್ನು ಈ ಪ್ರಕರಣಗಳು ಬಹಿರಂಗಪಡಿಸುತ್ತಿವೆ' ಎಂದೂ ಪೀಠ ಹೇಳಿದೆ.

ಇದೇ ವೇಳೆ, ಮಹಿಳೆಯರ ಸಬಲೀಕರಣಕ್ಕಾಗಿ ಯೋಜನೆಗಳನ್ನು ರೂಪಿಸಿದ್ದರೂ ಅವು ಶಿಕ್ಷಣಕ್ಕೆ ಒತ್ತು ನೀಡುತ್ತವೆ ಹೊರತು ಮದುವೆ ಮತ್ತು ಕುಟುಂಬದಲ್ಲಿ ಮಹಿಳೆಯರ ಪಾತ್ರದ ಬಗ್ಗೆ ಹೊಂದಿರುವ ಕಲ್ಪನೆಯನ್ನು ಬದಲಿಸಲು ಸಾಧ್ಯವಾಗಿಲ್ಲ' ಎಂದಿದೆ.

ಉಲ್ಫಾ ಉಗ್ರ ಶರಣಾಗತಿ

ಇಟಾನಗರ (ಪಿಟಿಐ): ಅರುಣಾಚಲ ಪ್ರದೇಶದ ತಿರಾಪ್ ಜಿಲ್ಲೆಯಲ್ಲಿ ನಿಷೇಧಿತ ಉಲ್ಫಾ (ಯುನೈಟೆಡ್ ಲಿಬರೇಷನ್ ಫ್ರಂಟ್ ಆಫ್ ಅಸ್ಸಾಂ–ಸ್ವತಂತ್ರ) ಸಂಘಟನೆಗೆ ಸೇರಿದ ಬಂಡುಕೋರನೊಬ್ಬ ಭದ್ರತಾ ಪಡೆಗಳ ಮುಂದೆ ಶರಣಾಗಿದ್ದಾನೆ ಎಂದು ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

ಅಸ್ಸಾಂನ ಶಿವಸಾಗರ್ ಜಿಲ್ಲೆಯ ಸಿಂಘದಾವರ್ ಪೊಲೀಸ್ ಠಾಣೆ ವ್ಯಾಪ್ತಿಯ ಹಚಾರಾ ಗ್ರಾಮದ ನಿವಾಸಿ ಜಿಂಟು ಗೊಗೊಯ್ ಅಲಿಯಾಸ್ ಅರುಣ್ ಅಸೋಂ ಶರಣಾದ ಬಂಡುಕೋರ.

ಖೋನ್ಸಾ ಎಸ್‌ಪಿ ಕಚೇರಿಯಲ್ಲಿ ಅಸ್ಸಾಂ ರೈಫಲ್ಸ್ ಮತ್ತು ಸಿಆರ್‌ಪಿಎಫ್ ಪೊಲೀಸ್ ಪಡೆಯ ಮುಂದೆ ಈತ ಇಟಲಿ ನಿರ್ಮಿತ ಪಿಸ್ತೂಲ್, ಮದ್ದುಗುಂಡುಗಳ ಸಮೇತ ಶರಣಾಗಿದ್ದಾನೆ. ಬಂಡುಕೋರರನ್ನು ಮುಖ್ಯವಾಹಿನಿಗೆ ಕರೆತರುವ ಪ್ರಯತ್ನದ ಭಾಗ ಇದು ಎಂದು ಅಧಿಕಾರಿ ತಿಳಿಸಿದ್ದಾರೆ.

ಹಿಂದಿ ಸೇರಿದಂತೆ ತೃತೀಯ ಭಾಷೆಗೆ ಅಂಕಗಳ ಬದಲು ಗ್ರೇಡ್ ನೀಡುವ ಸರ್ಕಾರದ ನಿರ್ಧಾರ ಸರಿಯೇ?

• ಹೌದು • ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಒಂದೇ ಕುಟುಂಬದ 9 ಮಂದಿ ಸಾವು

ಪ್ರಜಾವಾಣಿ ವಾರ್ತೆ

ಮುಂಬೈ: ಮಾರುತಿ ಎರ್ಟಿಗಾ ಕಾರು ತೆರೆದ ಬಾವಿಗೆ ಬಿದ್ದ ಪರಿಣಾಮ ಆರು ಮಕ್ಕಳು ಸೇರಿದಂತೆ ಕಾರಿನಲ್ಲಿದ್ದ ಒಂದೇ ಕುಟುಂಬದ ಒಂಬತ್ತು ಮಂದಿ ಮೃತಪಟ್ಟ ಘಟನೆ ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ದಿಂಡೋರಿ ತಾಲ್ಲೂಕಿನಲ್ಲಿ ಶುಕ್ರವಾರ ರಾತ್ರಿ ನಡೆದಿದೆ.

ಮೃತರನ್ನು ಸುನಿಲ್ ದತ್ತು ದರ್ಗುಡೆ (32), ರೇಷ್ಮಾ ಸುನಿಲ್ ದರ್ಗುಡೆ (27), ಆಶಾ ಅನಿಲ್ ದರ್ಗುಡೆ (32), ಖುಷಿ ಅನಿಲ್ ದರ್ಗುಡೆ (14), ಮಾಧುರಿ ಅನಿಲ್ ದರ್ಗುಡೆ (13), ಶ್ರೇಯಸ್ ಅನಿಲ್ ದರ್ಗುಡೆ (11), ರಾಖಿ ಸುನಿಲ್ ದರ್ಗುಡೆ (11), ಶ್ರಾವಣಿ ಅನಿಲ್ ದರ್ಗುಡೆ (11) ಮತ್ತು ಸಮೃದ್ಧಿ ರಾಜೇಂದ್ರ ದರ್ಗುಡೆ (7) ಎಂದು ಗುರುತಿಸಲಾಗಿದೆ. ಶನಿವಾರ ಮುಂಜಾನೆವರೆಗೂ ರಕ್ಷಣಾ ಕಾರ್ಯಾಚರಣೆ ಮುಂದುವರಿದಿತ್ತು. ಕಾರಿನಲ್ಲಿದ್ದವರು ಯಾರೂ ಬದುಕುಳಿದಿಲ್ಲ.

ಮೃತರು ದಿಂಡೋರಿ ತಾಲ್ಲೂಕಿನ ಇಂದೋರ್ ಗ್ರಾಮದ ನಿವಾಸಿಗಳು. ಮಕ್ಕಳು ಕೋಚಿಂಗ್ ತರಗತಿ ಮುಗಿಸಿಕೊಂಡು ಹಾಗೂ ದೊಡ್ಡವರು ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡು ಊರಿಗೆ ವಾಪಸಾಗುವಾಗ ದಿಂಡೋರಿ ನಗರದ ಶಿವಾಜಿನಗರ ಪ್ರದೇಶದಲ್ಲಿ ಈ ದುರ್ಘಟನೆ ಸಂಭವಿಸಿದೆ.

₹5 ಲಕ್ಷ ಪರಿಹಾರ: ರಾಜ್ಯ ಸರ್ಕಾರ ಮೃತರ ಕುಟುಂಬದವರಿಗೆ ತಲಾ ₹ 5 ಲಕ್ಷ ಪರಿಹಾರ ಘೋಷಿಸಿದೆ. ಸುರಕ್ಷತಾ ವ್ಯವಸ್ಥೆ ಅಳವಡಿಸಲು ವಿಫಲವಾದ ಬಾವಿಯ ಮಾಲೀಕರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವ ಕುರಿತು ಆಡಳಿತ ಚಿಂತನೆ ನಡೆಸಿದೆ.

ಹಿಂದಿ ಹೇರಿಕೆಗೆ ಕೇಂದ್ರದ ಹುನ್ನಾರ: ಟೀಕೆ

ಒಂದನೇ ಪುಟದಿಂದ...

'ದಕ್ಷಿಣದ ರಾಜ್ಯಗಳ ವಿದ್ಯಾರ್ಥಿಗಳಿಗೆ ತ್ರಿಭಾಷಾ ಸೂತ್ರವು ಹಿಂದಿ ಕಲಿಕೆಯನ್ನು ಕಡ್ಡಾಯಗೊಳಿಸಲಿದೆ. ಆದರೆ, ಪರಸ್ಪರ ಕಲಿಕೆ ಎಲ್ಲಿದೆ? ಹಿಂದಿ ಮಾತನಾಡುವ ರಾಜ್ಯಗಳ ವಿದ್ಯಾರ್ಥಿಗಳು ತಮಿಳು, ತೆಲುಗು, ಕನ್ನಡ, ಮಲಯಾಳ ಅಥವಾ ಬಂಗಾಳಿ, ಮರಾಠಿ ಭಾಷೆಗಳನ್ನು ಕಲಿಯುವಂತೆ ಕಡ್ಡಾಯಗೊಳಿಸಲಾಗುತ್ತದೆಯೇ? ಇಂತಹ ಸ್ಪಷ್ಟತೆ ಇಲ್ಲದ ಈ ನೀತಿಯು ಏಕಪಕ್ಷೀಯ ಮತ್ತು ತಾರತಮ್ಯದಿಂದ ಕೂಡಿದೆ. ಇದು ಸ್ವೀಕಾರಾರ್ಹವಲ್ಲ' ಎಂದಿದ್ದಾರೆ.

'ನಮ್ಮ ಮಕ್ಕಳು ಭವಿಷ್ಯಕ್ಕೆ ಸಿದ್ಧರಾಗಬೇಕು. ಅವರಿಗೆ ಕೃತಕ ಬುದ್ಧಿಮತ್ತೆ, ಎವಿಜಿಸಿಯಂತಹ (ಅನಿಮೇಷನ್, ವಿಷುಯಲ್ ಎಫೆಕ್ಟ್ಸ್, ಗೇಮಿಂಗ್ ಮತ್ತು ಕಾಮಿಕ್ಸ್) ಉದಯೋನ್ಮುಖ ಕ್ಷೇತ್ರಗಳಲ್ಲಿ ಕೌಶಲ ನೀಡಬೇಕಿದೆ. ವೈಜ್ಞಾನಿಕ ಮನೋಭಾವ ಹಾಗೂ ವಿಮರ್ಶಾತ್ಮಕ ಚಿಂತನೆ ಬಲಪಡಿಸುವುದು ನಮ್ಮ ಆದ್ಯತೆ ಆಗಿರಬೇಕು. ಅದರ ಬದಲಾಗಿ ಕಠಿಣ ಭಾಷಾ ಹೊರೆಯು ಅವರ ಪ್ರಗತಿಯನ್ನು ಹಳಿತಪ್ಪಿಸುವ ಬೆದರಿಕೆ ಹಾಕುತ್ತದೆ' ಎಂದು ಹೇಳಿದ್ದಾರೆ.

ಸುಳ್ಳು ಸಂಕಥನ: ಧರ್ಮೇಂದ್ರ ಪ್ರಧಾನ್

ನವದೆಹಲಿ: 'ಹಿಂದಿ ಭಾಷೆಯನ್ನು ಹೇರಲಾಗುತ್ತಿದೆ ಎಂಬುದು ಸುಳ್ಳು ಸಂಕಥನ. ತಮ್ಮ ರಾಜಕೀಯ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಹೀಗೆ ಆರೋಪ ಮಾಡಲಾಗುತ್ತಿದೆ' ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದ್ದಾರೆ.

'ಪ್ರಗತಿಪರ ಹಾಗೂ ಅಂತರ್ಗತ ಸುಧಾರಣೆಯನ್ನು 'ಭಾಷಾ ಹೇರಿಕೆ' ಎಂದು ತಪ್ಪಾಗಿ ನಿರೂಪಿಸುವುದು ಅನಗತ್ಯ ಆತಂಕ ಮತ್ತು ಗೊಂದಲವನ್ನು ಸೃಷ್ಟಿಸುವ ಗುರಿ ಹೊಂದಿದೆ' ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ವಿರುದ್ಧ ಶನಿವಾರ ವಾಗ್ದಾಳಿ ನಡೆಸಿದ್ದಾರೆ.

'ರಾಷ್ಟ್ರೀಯ ಶಿಕ್ಷಣ ನೀತಿ–2020 ವಾಸ್ತವವಾಗಿ ಭಾಷಾ ವಿಮೋಚನೆಯ ಪ್ರಣಾಳಿಕೆ. ಇದು ಮಾತೃಭಾಷೆಗೆ ಆದ್ಯತೆ ನೀಡುತ್ತದೆ. ಪ್ರತಿಯೊಬ್ಬ ತಮಿಳು ಮಗು ಸಹ ತನ್ನ ಅದ್ಭುತ ಭಾಷೆಯಲ್ಲಿಯೇ ಉತ್ತಮ ಸಾಧನೆ ಮಾಡಬಹುದು' ಎಂದು ಸ್ಟಾಲಿನ್ ಆರೋಪಗಳಿಗೆ ತಿರುಗೇಟು ನೀಡಿದ್ದಾರೆ.

'ಭಾಷಾ ನೀತಿಯನ್ನು ತಪ್ಪಾಗಿ ನಿರೂಪಿಸುವ ಮೂಲಕ ನೀವು ತಮಿಳು ಭಾಷೆಯನ್ನು ರಕ್ಷಿಸುತ್ತಿಲ್ಲ. ನಮ್ಮ ಯುವ ಸಮೂಹಕ್ಕೆ ಬಹುಭಾಷಾ ಜಾಗತಿಕ ನಾಯಕರಾಗುವ ಅವಕಾಶಗಳನ್ನು ನಿರಾಕರಿಸುವ ಅಡೆತಡೆಗಳನ್ನು ಸೃಷ್ಟಿಸುತ್ತಿದ್ದೀರಿ' ಎಂದು 'ಎಕ್ಸ್'ನಲ್ಲಿ ಕೇಂದ್ರ ಸಚಿವರು ದೂರಿದ್ದಾರೆ.

'ಎನ್‌ಇಪಿ ಎಲ್ಲ ಭಾಷೆಗಳನ್ನು ಸಮಾನವಾಗಿ ಉತ್ತೇಜಿಸುವ ಮೂಲಕ ಸಾಂವಿಧಾನಿಕ ತತ್ವಗಳನ್ನು ಎತ್ತಿಹಿಡಿಯುತ್ತದೆ. ಅಸ್ತಿತ್ವದಲ್ಲಿರುವ ದ್ವಿಭಾಷಾ ವ್ಯವಸ್ಥೆಯ ಮಿತಿಗಳನ್ನು ಸಹ ಪರಿಹರಿಸುತ್ತದೆ' ಎಂದಿದ್ದಾರೆ.

'ಉದ್ದೇಶಪೂರ್ವಕ ಪ್ರತಿರೋಧವು ಕೇವಲ ಆಡಳಿತಾತ್ಮಕ ಪ್ರತಿಭಟನೆ ಅಲ್ಲ. ಇದು ಗುಣಮಟ್ಟದ, ಅರ್ಹತೆ ಆಧಾರಿತ ವಸತಿ ಶಿಕ್ಷಣದಿಂದ ಪ್ರಯೋಜನ ಪಡೆಯುವ ಲಕ್ಷ, ಲಕ್ಷ ಸಂಖ್ಯೆಯ ಹಿಂದುಳಿದ ವಿದ್ಯಾರ್ಥಿಗಳಿಗೆ ಮಾಡುವ ನೇರ ಅಪಚಾರವಾಗಿದೆ' ಎಂದೂ ಪ್ರಧಾನ್ ಅವರು ಸ್ಟಾಲಿನ್ ನಿಲುವನ್ನು ಟೀಕಿಸಿದ್ದಾರೆ.

'ಧುರಂಧರ್' ಸಿನಿಮಾದ ಸಂಭಾಷಣೆ ಉಲ್ಲೇಖಿಸಿ ವಿಡಿಯೊ ಹೇಳಿಕೆ ಬಿಡುಗಡೆ

ಗಾಯಗೊಂಡಿದ್ದೇನೆ: ಛಡ್ಡಾ ತಿರುಗೇಟು



ರಾಘವ್ ಛಡ್ಡಾ

ನವದೆಹಲಿ (ಪಿಟಿಐ): ಆಮ್ ಆದ್ಮಿ ಪಕ್ಷ (ಎಎಪಿ) ಮತ್ತು ರಾಜ್ಯಸಭೆಯ ಎಎಪಿ ಸದಸ್ಯ ರಾಘವ್ ಛಡ್ಡಾ ನಡುವಣ ಬಿರುಕು ಮತ್ತಷ್ಟು ತೀವ್ರವಾಗಿದೆ.

ರಾಘವ್ ಛಡ್ಡಾ ಅವರು, ಎಎಪಿಯು ತಮ್ಮ ಮೇಲೆ ಮಾಡಿರುವ ಆರೋಪವು 'ಸತ್ಯಕ್ಕೆ ದೂರವಾದುದು' ಎಂದು ಅಲ್ಲಗಳೆದಿದ್ದಾರೆ.

'ಎಲ್ಲ ಸುಳ್ಳುಗಳ ನಿಜಬಣ್ಣವೂ ಬಯಲಾಗಲಿದೆ. ನಾನು ಗಾಯಗೊಂಡಿದ್ದೇನೆ, ಹೀಗಾಗಿ ಅಪಾಯಕಾರಿಯಾಗಿದ್ದೇನೆ' ಎಂದು 'ಧುರಂಧರ್' ಸಿನಿಮಾದ ಸಂಭಾಷಣೆಯನ್ನು ಉಲ್ಲೇಖಿಸಿ ಶನಿವಾರ ವಿಡಿಯೊ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

'ನಾನು ಭಯಗೊಂಡಿದ್ದೇನೆ. ಅದಕ್ಕಾಗಿ ಉಪಯೋಗವಿಲ್ಲದ ವಿಷಯಗಳನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸುತ್ತಿದ್ದೇನೆ ಎಂದು ಹೇಳುತ್ತಿದ್ದಾರೆ. ಆದರೆ ಜನರ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತಲು ಸಂಸತ್ತಿಗೆ ಹೋಗುತ್ತೇನೆಯೇ ಹೊರತು, ಗಲಭೆ ಎಬ್ಬಿಸಲು ಹೋಗುವುದಿಲ್ಲ' ಎಂದು ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಸರ್ಕಾರದ ಬಗ್ಗೆ ಸಂಸತ್ತಿನಲ್ಲಿ ಮಾತನಾಡಲು ಛಡ್ಡಾ ಹಿಂದೇಟು ಹಾಕುತ್ತಾರೆ ಎಂದು ಎಎಪಿ ಆರೋಪಿಸಿದ ಬೆನ್ನಲ್ಲೇ ಛಡ್ಡಾ ಅವರು ಈ ಹೇಳಿಕೆ ನೀಡಿದ್ದಾರೆ.

'ಕಲಾಪ ಬಹಿಷ್ಕರಿಸುವ ವಿರೋಧ ಪಕ್ಷಗಳ ನಿರ್ಧಾರಕ್ಕೆ ಬೆಂಬಲ ನೀಡಲಿಲ್ಲ' ಎಂಬ ಆರೋಪಕ್ಕೆ ತಿರುಗೇಟು ನೀಡಿದ ಅವರು, 'ಇದೊಂದು ಹಸಿ ಸುಳ್ಳು. ವಿರೋಧ ಪಕ್ಷಗಳ ಪ್ರತಿಭಟನೆಗೆ ನಾನು ಬೆಂಬಲ ನೀಡಲಿಲ್ಲ ಎಂಬುದಕ್ಕೆ ಒಂದೇ ಒಂದು ಉದಾಹರಣೆ ಕೊಡಿ' ಎಂದು ಸವಾಲು ಹಾಕಿದ್ದಾರೆ.

'ಸಂಸತ್ತಿನ ಎಲ್ಲಾ ಕಡೆಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾಗಳಿವೆ. ಅದರ ದೃಶ್ಯಾವಳಿಗಳನ್ನು ತೋರಿಸಿ, ಆಗ ಸ್ಪಷ್ಟವಾಗುತ್ತದೆ' ಎಂದು ಹೇಳಿದ್ದಾರೆ.

'ಇನ್ನು, ಚುನಾವಣಾ ಆಯೋಗದ ವಿರುದ್ಧದ ನಿರ್ಣಯಕ್ಕೆ ಸಹಿ ಮಾಡುವಂತೆ ಪಕ್ಷದ ನಾಯಕತ್ವವು ಔಪಚಾರಿಕ ಅಥವಾ ಅನೌಪಚಾರಿಕವಾಗಿ ಯಾವುದೇ ಸೂಚನೆ ನೀಡಿರಲಿಲ್ಲ. ಪಕ್ಷದ ಅನೇಕ ಸಂಸದರು ನಿರ್ಣಯಕ್ಕೆ ಸಹಿ ಮಾಡಿರಲಿಲ್ಲ. ಇದರಲ್ಲಿ ನನ್ನದೇನು ತಪ್ಪಿದೆ? ನನ್ನನ್ನು ಏಕೆ ದೂರಲಾಗುತ್ತಿದೆ' ಎಂದೂ ಪ್ರಶ್ನಿಸಿದ್ದಾರೆ.

'ಪಂಜಾಬ್ ವಿಷಯ ಪ್ರಸ್ತಾಪಿಸಲು ವಿಫಲ'

ಸಂಸದ ರಾಘವ್ ಛಡ್ಡಾ ಅವರು ಪಂಜಾಬ್‌ನ ಪ್ರಮುಖ ವಿಷಯಗಳ ಬಗ್ಗೆ ಸಂಸತ್ತಿನಲ್ಲಿ ಪ್ರಸ್ತಾಪಿಸಲು ವಿಫಲರಾಗಿದ್ದಾರೆ. ಅವರ ನಿಷ್ಕ್ರಿಯತೆಯು ಪಕ್ಷದ ಸಿದ್ಧಾಂತಕ್ಕೆ ವಿರುದ್ಧವಾಗಿದೆ ಎಂದು ಎಎಪಿ ಶನಿವಾರ ಟೀಕಿಸಿದೆ.


ಪಂಜಾಬ್ ಹಣಕಾಸು ಸಚಿವ ಹರಪಾಲ್ ಸಿಂಗ್ ಚೀಮಾ ಮತ್ತು ಎಎಪಿ ರಾಜ್ಯ ಘಟಕದ ಅಧ್ಯಕ್ಷ ಅಮನ್ ಅರೋರಾ ಹಾಗೂ ಪಕ್ಷದ ನಾಯಕ ಕುಲದೀಪ್ ಸಿಂಗ್ ಧಲಿವಾಲ್ ಅವರು ಜಂಟಿ ಹೇಳಿಕೆಯಲ್ಲಿ, 'ಹಲವು ವಿಚಾರಗಳಲ್ಲಿ ಛಡ್ಡಾ ಅವರು ಮೌನವೇ ಅಸಮಾಧಾನಕ್ಕೆ ಕಾರಣ' ಎಂದು ಹೇಳಿದ್ದಾರೆ.

'ಪಂಜಾಬ್‌ನಿಂದ ಚುನಾಯಿತರಾದ ಛಡ್ಡಾ ಅವರು ರಾಷ್ಟ್ರ ಮಟ್ಟದಲ್ಲಿ ಪಕ್ಷದ ಬಲಿಷ್ಠ ಪ್ರತಿನಿಧಿಯಾಗಬಹುದೆಂದು ನಿರೀಕ್ಷಿಸಲಾಗಿತ್ತು. ಆದರೆ ಅವರು ರಾಜ್ಯದ ಕುರಿತ ಒಂದೇ ಒಂದು ಸೂಕ್ಷ್ಮ ಸಂಗತಿ ಬಗ್ಗೆ ಧ್ವನಿ ಎತ್ತಿಲ್ಲ' ಎಂದು ಚೀಮಾ ಅವರು ದೂರಿದ್ದಾರೆ.

ಹೆನ್ಲಿ ತೀರದಲ್ಲಿ...
ಇಂಗ್ಲೆಂಡ್‌ನ ಥೇಮ್ಸ್ ನದಿಯ ದಂಡೆಯ ಮೇಲೆ ಮಂಜಿನ ಮೃದುವಾದ ಹೊದಿಕೆಯಲ್ಲಿ ಮಲಗಿರುವ ಪುಟ್ಟ ಪಟ್ಟಣದಲ್ಲಿ ಹೆಜ್ಜೆ ಹಾಕುತ್ತಾ... 13



ಕೆನಡಾದಿಂದ ಮುತ್ತಾತನ ಸಮಾಧಿಗಾಗಿ ಮಡಿಕೇರಿಗೆ ಮೈಕ್



ಡಾ.ಡಂಕನ್ ಮೆಕ್‌ಫರ್ಸನ್ ಅವರ ಸಮಾಧಿ ಹುಡುಕುತ್ತಾ ಬಂದ ಮೈಕ್ (ಮಧ್ಯದವರು), ರೇಖಾ ಹಾಗೂ ಬೇಬಿ ಮ್ಯಾಥ್ಯೂ



ವಿಕ್ಟೋರಿಯಾ ರಾಣಿಯ ವೈದ್ಯರಾಗಿದ್ದ ಡಾ.ಡಂಕನ್ ಮೆಕ್‌ಫರ್ಸನ್

ಎಂದೋ ಬರೆದ ಡೈರಿಯೊಂದು ಈ ಹುಡುಕಾಟಕ್ಕೆ ಬೀಜ. ಸಾವಿರಾರು ಮೈಲು ದಾಟ ಮೈಕ್ ತನ್ನ ಮುತ್ತಾತನ ಸಮಾಧಿ ಹುಡುಕುತ್ತಾ ಮಡಿಕೇರಿಗೆ ಬರುತ್ತಾರೆ. ನಾಲ್ಕೈದು ದಿನಗಳ ಈ ಹುಡುಕಾಟದಲ್ಲಿ ಸಮಾಧಿಗಳಷ್ಟೇ ಅಲ್ಲ– ಡಾ. ಡಂಕನ್ ಅವರ ಬದುಕು, ಬ್ರಿಟಿಷ್ ಕಾಲದ ಮಡಿಕೇರಿ ಮತ್ತು ಮಣ್ಣಿನಡಿ ಹುದುಗಿರುವ ಇತಿಹಾಸವೂ ಒಂದೊಂದಾಗಿ ತೆರೆದುಕೊಳ್ಳುತ್ತವೆ.

• ಕೆ.ಎಸ್.ಗಿರೀಶ

ಎಂದಿನಂತೆ ಕಾರ್ಯಕ್ರಮವೊಂದರಲ್ಲಿ ಕುಳಿತಿದ್ದೆ. ವೇದಿಕೆಯ ಮೇಲೆ ಭಾಷಣ ಕೊಡಗಿನ ಮಳೆಯಂತೆ ಬಿರುಸಾಗಿಯೇ ಸಾಗುತ್ತಿತ್ತು. ಮಧ್ಯೆ ಮಧ್ಯೆ ಚಪ್ಪಾಳೆಗಳ ಮೊರೆತ. ನಾನು ಆ ಕಾರ್ಯಕ್ರಮದ ವರದಿ ಮಾಡುತ್ತಿದ್ದೆ. ಅಷ್ಟರಲ್ಲಿ ನನ್ನ ಮೊಬೈಲ್ ರಿಂಗಣಿಸಿತು. ಪರದೆಯ ಮೇಲೆ ಮಡಿಕೇರಿ ಕೋಟೆ ಆವರಣದಲ್ಲಿರುವ ಪ್ರಾಚ್ಯವಸ್ತು ಸಂಗ್ರಹಾಲಯದ ಕ್ಯೂರೇಟರ್ ರೇಖಾ ಅವರ ಹೆಸರು ಮೂಡಿತ್ತು.

ಕರೆ ಸ್ವೀಕರಿಸಿದ ತಕ್ಷಣವೇ ಅವರ ಧ್ವನಿಯಲ್ಲಿ ತುರ್ತು ಇರುವುದು ಗೊತ್ತಾಯಿತು. ‘ನಿಮ್ಮನ್ನು ಕಾಣಲೆಂದೇ ಕೆನಡಾದಿಂದ ಒಬ್ಬರು ಬಂದಿದ್ದಾರೆ... ಬೇಗ ಬನ್ನಿ’ ಎಂದು ವಿನಂತಿಸಿದರು. ನನಗೆ ವಿದೇಶದಲ್ಲಿ ಪರಿಚಿತರು ಯಾರೂ ಇರಲಿಲ್ಲ. ಕ್ಷಣಕಾಲ ಗೊಂದಲವಾಯಿತು. ‘ಮೇಡಂ, ಒಮ್ಮೆ ಚೆಕ್ ಮಾಡಿ ನೋಡಿ... ಬೇರೆ ಯಾರನ್ನೋ ಹುಡುಕಿಕೊಂಡು ಬಂದಿರಬಹುದು’ ಎಂದೆ. ಆದರೆ ಅವರ ಉತ್ತರ ದೃಢವಾಗಿತ್ತು– ‘ಇಲ್ಲ, ಅದು ನೀವೇ’.

ಆ ಒಂದು ಮಾತು ನನ್ನೊಳಗೆ ಕುತೂಹಲದ ಕಿಡಿ ಹೊತ್ತಿಸಿತು. ಕಾರ್ಯಕ್ರಮದ ಮಧ್ಯದಲ್ಲೇ ಎದ್ದು ನಿಂತೆ. ಆ ಕ್ಷಣದಲ್ಲಿ ವೇದಿಕೆಯ ಮಾತು ದೂರವಾಗಿದ್ದವು. ನನ್ನ ಮನಸ್ಸು ಈಗ ಒಂದೇ ಪ್ರಶ್ನೆಯ ಮೇಲೆ ಕೇಂದ್ರೀಕೃತವಾಗಿತ್ತು, ‘ಯಾರು ಅವರು? ಏಕೆ ನನ್ನನ್ನು ಹುಡುಕಿಕೊಂಡು ಬಂದಿದ್ದಾರೆ?’

ಹೆಜ್ಜೆಗಳು ಬಿರುಸು ಪಡೆದುಕೊಂಡವು. ಮ್ಯೂಸಿಯಂ ಕಡೆಗೆ ಸಾಗುತ್ತಿದ್ದ ನಾನು, ನನ್ನೊಳಗಿನ ಕುತೂಹಲದ ಜೊತೆಗೆ ಒಂದು ಅನುಮಾನವನ್ನೂ ಹೊತ್ತುಕೊಂಡಿದ್ದೆ.

ಮ್ಯೂಸಿಯಂ ಒಳಗೆ ಪ್ರವೇಶಿಸುತ್ತಿದ್ದಂತೆ ಗೋಡೆ ಮೇಲೆ ನೇತುಹಾಕಿದ್ದ ಬೆಂಜಮಿನ್ ಲೂಯಿಸ್ ರೈಸ್ ಅವರ ಭವ್ಯ ಚಿತ್ರಪಟ ಕಣ್ಣಿಗೆ ಬಿತ್ತು. ಕರ್ನಾಟಕದ ಶಾಸನಶಾಸ್ತ್ರದ ಪಿತಾಮಹನೆಂದೇ ಪರಿಗಣಿಸಲ್ಪಡುವ ಅವರ ಮುಖ ಇನ್ನೂ ತಣ್ಣಗೆ ಇತಿಹಾಸವನ್ನು ಕಾಪಾಡುತ್ತಿರುವಂತೆ ಭಾಸವಾಗುತ್ತಿತ್ತು.

ಅವರ ಚಿತ್ರಪಟದ ಮುಂದೆ ಕ್ಯೂರೇಟರ್ ರೇಖಾ ಕುಳಿತಿದ್ದರು. ಅವರ ಎದುರು ಒಬ್ಬ ವಿದೇಶಿ ಪ್ರಜೆ. ಎತ್ತರದ ಮೈಕಟ್ಟು, ವಯಸ್ಸಿಗೆ ತಕ್ಕನಾದ ಮೃದುವಾದ ಸುಕ್ಕುಗಳು, ಆದರೆ ಕಣ್ಣುಗಳಲ್ಲಿ ವಿಶೇಷ ತೀವ್ರತೆ ಮತ್ತು ಹುಡುಕಾಟದ ಕಾತರವಿತ್ತು.

‘ಇವರು ಕೆನಡಾದಿಂದ ಬಂದಿರುವ ಮೈಕ್ ತೇಲ್‌ಮಾನ್’ ಎಂದು ರೇಖಾ ಪರಿಚಯಿಸಿದರು.

72 ವರ್ಷದ ಮೈಕ್ ಕೈ ಕುಲುಕಿ ‘ಹಲೋ’ ಎಂದರು. ಅವರ ನಗುವಿನಲ್ಲಿ ಆತ್ಮೀಯತೆ ಇದ್ದರೂ, ಅದರೊಳಗೆ ಒಂದು ತೀವ್ರ ನಿರೀಕ್ಷೆ, ಮತ್ತು ಸ್ವಲ್ಪ ಕಳವಳವೂ ಮಿಶ್ರವಾಗಿತ್ತು. ಅವರು ಸುತ್ತಮುತ್ತ ನೋಡುತ್ತಿದ್ದರೂ, ಅವರ ಮನಸ್ಸು ಗತಕಾಲದ ಹುಡುಕಾಟದಲ್ಲೇ ತೊಡಗಿಸಿಕೊಂಡಂತೆ ಕಾಣುತ್ತಿತ್ತು.

‘ಸರ್’, ಅವರು ನಿಧಾನವಾಗಿ ಮಾತು ಆರಂಭಿಸಿದರು, ‘ನನ್ನ ಮುತ್ತಾತ ಡಾ. ಡಂಕನ್ ಮೆಕ್‌ಫರ್ಸನ್ ಅವರ ಸಮಾಧಿಯನ್ನು ಹುಡುಕಲು ಬಂದಿದ್ದೇನೆ. ನೀವು ಬ್ರಿಟಿಷರ ಸಮಾಧಿಗಳ ಬಗ್ಗೆ ಬರೆದಿದ್ದೀರಿ ಎಂದು ತಿಳಿದು ನಿಮ್ಮನ್ನು ಹುಡುಕಿಕೊಂಡು ಬಂದೆ’ ಎಂದರು. ಆ ಕ್ಷಣದಲ್ಲಿ ಈ ಭೇಟಿ ಕೇವಲ ಪರಿಚಯವಲ್ಲ; ಒಂದು ದೀರ್ಘಕಾಲದ ಹುಡುಕಾಟದ ಬಾಗಿಲು ತೆರೆಯುತ್ತಿರುವುದು ಸ್ಪಷ್ಟವಾಯಿತು.

ಡೈರಿಯೊಳಗಿಂದ ಉದಿಸಿದ ಯಾನ

ಮೈಕ್ ತಮ್ಮ ಕಥೆಯನ್ನು ನಿಧಾನವಾಗಿ ಬಿಚ್ಚಿಟ್ಟರು. ‘ನಾನು ಕೆನಡಾದಲ್ಲಿದ್ದೆ. ಇತ್ತೀಚೆಗೆ ಇಂಗ್ಲೆಂಡ್‌ನಲ್ಲಿ ನಮ್ಮ ಚಿಕ್ಕಪ್ಪ ನಿಧನರಾದರು. ಅವರ ಕೊಠಡಿಯ ಕೀಲಿ ನನಗೆ ಸಿಕ್ಕಿತು. ಅದನ್ನು ತೆರೆದಾಗ ಒಂದು ಹಳೆಯ ಡೈರಿ ಸಿಕ್ಕಿತು. ಅದು ನನ್ನ ಮುತ್ತಾತನದು. ಅದರಲ್ಲಿ ಎಲ್ಲ ವಿವರಗಳೂ ಇದ್ದವು. ಅದನ್ನೇ ಓದಿ ಇಲ್ಲಿಗೆ ಬಂದೆ’.

ಒಂದು ಹಳೆಯ ಡೈರಿ ಒಂದು ಕುಟುಂಬದ ಇತಿಹಾಸವನ್ನು ಪುನಃ ಜೀವಂತಗೊಳಿಸಿತು. ಕಾಗದದ ಪುಟಗಳಲ್ಲಿ ಬಂಧಿತವಾಗಿದ್ದ ನೆನಪುಗಳು ಇಂದು ಸಾವಿರಾರು ಮೈಲು ದೂರದಿಂದ ಅವರನ್ನು ಕೊಡಗಿನ ಮಣ್ಣಿನವರೆಗೆ ಕರೆತಂದಿದ್ದವು. ಆ ಡೈರಿಯ ಪುಟಗಳು ಕೇವಲ ನೆನಪುಗಳಲ್ಲ; ಅವು ದಿಕ್ಕು ತೋರಿಸುವ ನಕ್ಷೆಗಳು. ಒಂದು ಹೆಸರು, ಒಂದು ದಿನಾಂಕ, ಒಂದು ಸ್ಥಳ ಇವುಗಳೇ ಮೈಕ್ ಅವರನ್ನು ಇಲ್ಲಿಗೆ ಕರೆತಂದವು.

‘ಡೈರಿಯಲ್ಲಿ ಇರಿಸಿದ್ದ ದಾಖಲೆಗಳು ನನ್ನ ಮುತ್ತಾತ ಇಲ್ಲಿಯೇ ಮೃತಪಟ್ಟರು, ಇಲ್ಲಿಯೇ ಸಮಾಧಿ ಮಾಡಲಾಯಿತು ಎನ್ನುವುದನ್ನು ತಿಳಿಸಿದವು’ ಎಂದು ಅವರು ಹೇಳಿದರು. ಆ ವಾಕ್ಯದಲ್ಲಿ ಆಸೆಯೂ ಇತ್ತು, ಆಕಾಂಕ್ಷೆಯೂ ಇತ್ತು.

ಮೈಕ್ ನೀಡಿದ ವಿವರಗಳು ಡಾ. ಡಂಕನ್ ಮೆಕ್‌ಫರ್ಸನ್ ಅವರ ಜೀವನದ ಅಗಾಧತೆಯನ್ನು ತೆರೆದಿಟ್ಟವು. 1867ರ ಜೂನ್‌ನಲ್ಲಿ ಮಡಿಕೇರಿಯಲ್ಲಿ ನಿಧನರಾದ ಅವರು, ಬ್ರಿಟಿಷ್ ಸಾಮ್ರಾಜ್ಯದ ವಿಕ್ಟೋರಿಯಾ ರಾಣಿಯ ವೈದ್ಯರಾಗಿದ್ದರು. ಮದ್ರಾಸ್ ಪ್ರೆಸಿಡೆನ್ಸಿಯ ಆಸ್ಪತ್ರೆಗಳ ಇನ್‌ಸ್ಪೆಕ್ಟರ್ ಜನರಲ್ ಆಗಿದ್ದರು. ಸುಂಟಿಕೊಪ್ಪದಲ್ಲಿ ತೋಟವನ್ನೂ ಹೊಂದಿದ್ದರು.

ಆದರೆ ಅವರು ಕೇವಲ ವೈದ್ಯರಲ್ಲ. ಅವರು ಪ್ರಾಚ್ಯವಸ್ತು ಸಂಶೋಧಕರೂ ಆಗಿದ್ದರು. ಅವರು ವಿಶ್ವದ ಬೇರೆ ಬೇರೆ ದೇಶಗಳಲ್ಲಿ ಉತ್ಖನನ ನಡೆಸಿ ಪತ್ತೆಹಚ್ಚಿದ ವಸ್ತುಗಳು ಇಂದಿಗೂ ಲಂಡನ್‌ನ ಬ್ರಿಟಿಷ್ ಮ್ಯೂಸಿಯಂನಲ್ಲಿ ಸಂಗ್ರಹವಾಗಿವೆ. ಅವರು ಎಷ್ಟು ಪ್ರಮುಖರು ಎಂದರೆ, ಅವರ ಜೀವನಚರಿತ್ರೆ ಆಕ್ಸ್‌ಫರ್ಡ್ ರಾಷ್ಟ್ರೀಯ ಜೀವನಚರಿತ್ರೆಯಲ್ಲಿ ಸ್ಥಾನ ಪಡೆದಿದೆ.

ಅವರು ಫ್ಲಾರೆನ್ಸ್ ನೈಟಿಂಗೇಲ್ ಅವರ ಸ್ನೇಹಿತರಾಗಿದ್ದರು ಎಂಬ ಸಂಗತಿ ಮೈಕ್ ಅವರಿಗೆ ವಿಶೇಷ ಹೆಮ್ಮೆಯನ್ನು ತಂದಿತ್ತು.

ಒಬ್ಬ ವ್ಯಕ್ತಿಯ ಜೀವನ, ವೈದ್ಯಕೀಯ, ಸಂಶೋಧನೆ, ಆಡಳಿತ ಎಲ್ಲ ಕ್ಷೇತ್ರಗಳನ್ನೂ ಆವರಿಸಿಕೊಂಡಿತ್ತು. ಆದರೆ ಅಂತಹ ವ್ಯಕ್ತಿಯ ಸಮಾಧಿ ಇಂದು ಕಾಣೆಯಾಗಿರುವುದು ಇತಿಹಾಸದ ವಿಚಿತ್ರ ವ್ಯಂಗ್ಯ.

ಮೈಕ್ ಅವರ ಕಥೆ ಕೇಳುತ್ತಿದ್ದಂತೆ ಒಂದು ಸತ್ಯ ಸ್ಪಷ್ಟವಾಗುತ್ತದೆ. ಇದು ಅವರೊಬ್ಬರ ಹುಡುಕಾಟವಲ್ಲ. ತಮ್ಮ ಪೂರ್ವಜರ ಸಮಾಧಿಗಳನ್ನು ಹುಡುಕಲು ಪ್ರತಿ ವರ್ಷ ಬ್ರಿಟನ್‌ನಿಂದ ಕೆಲವರು ಕೊಡಗಿಗೆ ಬರುತ್ತಾರೆ. ಆದರೆ ಎದುರಾಗುವುದು ಗಿಡಗಂಟಿಗಳಿಂದ ಆವೃತವಾದ ಜಾಗ, ಕಾಣೆಯಾಗಿರುವ ಗುರುತುಗಳು ಮತ್ತು ನಿರಾಸೆಯಿಂದ ಹಿಂದಿರುಗುವ ದಾರಿ.

13ನೇ ಪುಟಕ್ಕೆ...



ಗಿಡಗಂಟಿಗಳಿಂದ ಮುಚ್ಚಿ ಹೋಗಿರುವ ಬ್ರಿಟಿಷರ ಸಮಾಧಿಗಳು



ಬಗೆ ಬಗೆಯ ತಳಿಗಳ ತಾವರೆ, ನೈದಿಲೆಗಳಿಗೆ ಮನೆಯಂಗಳವೇ ವೇದಿಕೆ... ಚಿತ್ರಗಳು: ಫಕ್ರುದ್ದೀನ್ ಎಚ್.

160 ತಾವರೆ, 200 ನೈದಿಲೆ ಅಂಗಳವೇ ಕೊಳವಾದ ಕಥೆ

• ಪ್ರವೀಣ್ ಕುಮಾರ್ ಪಿ.ವಿ.


ಮುಂಜಾನೆ ಬೆಳಕು ಅಂಗಳಕ್ಕೆ ಸುರಿಯುತ್ತಿದ್ದಂತೆ, ಪಡ್ನೂರಿನ ಆ ಮನೆಯಲ್ಲಿ ನೀರಿನ ಮೇಲೆ ಹಸಿರು ಎಲೆಗಳು ನಿಧಾನವಾಗಿ ತೇಲುತ್ತವೆ. ಅವುಗಳ ಮಧ್ಯೆ ಹತ್ತಿರ ಹತ್ತಿರವೇ ಅರಳಿರುವ ಗುಲಾಬಿ, ಬಿಳಿ, ನೇರಳೆ ಬಣ್ಣದ ತಾವರೆ ಹೂಗಳು ಕಂಗೊಳಿಸುತ್ತಿವೆ. ಗಾಳಿಯ ಮೃದುವಾದ ಸ್ಪರ್ಶಕ್ಕೆ ಅವುಗಳ ಮೇಲ್ಮೈ ಕಂಪಿಸುತ್ತಿದ್ದರೂ, ಅವುಗಳ ಸೌಂದರ್ಯ ಅಚಲ. ಕೊಳಗಳಲ್ಲಿ ಮಾತ್ರ ಕಾಣುವ ಈ ದೃಶ್ಯ ಇಲ್ಲಿ ಮನೆಯಂಗಳದಲ್ಲೇ ಜೀವಂತವಾಗಿದೆ.



ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಮುರ–ಕೆದಿಲ ರಸ್ತೆಯ ಬಳಿಯ ಪಡ್ನೂರಿನ ‘ಪುಷ್ಪಗಿರಿ’ ಮನೆಯಲ್ಲಿ ಈ ಅದ್ಭುತವನ್ನು ಸಾಧ್ಯವಾಗಿಸಿರುವವರು ಪುಷ್ಪಲತಾ. ಅವರಿಗಿದು ಕೇವಲ ತೋಟಗಾರಿಕೆಯ ಹವ್ಯಾಸವಲ್ಲ–ಒಂದು ಹಠ, ಒಂದು ಹುಡುಕಾಟ, ಒಂದು ಕನಸು ಮತ್ತು ಆದಾಯದ ಮೂಲ.

ತಾವರೆ ಹೂವಿನ ಮೇಲಿನ ಅವರ ಆಕರ್ಷಣೆ ಹೊಸದಲ್ಲ. ಬಾಲ್ಯದಿಂದಲೂ ನೀರಿನ ಮೇಲೆ ಅರಳುವ ಆ ಹೂವಿನ ಸೊಬಗು ಅವರನ್ನು ಸೆಳೆಯುತ್ತಿತ್ತು. ಆದರೆ ಕೊಳವಿಲ್ಲದ ಮನೆಯಂಗಳದಲ್ಲಿ ಅದನ್ನು ಬೆಳೆಸುವುದು ಸುಲಭವಲ್ಲ ಎಂಬ ಅರಿವೂ ಇದ್ದೇ ಇತ್ತು. ಆದರೂ ಆ ಆಸೆ ಅವರನ್ನು ಬಿಡಲಿಲ್ಲ. ‘ಒಂದು ದಿನ ನನ್ನ ಮನೆಯಲ್ಲೂ ತಾವರೆ ಅರಳಬೇಕು’ ಎಂಬ ಆಲೋಚನೆ ನಿಧಾನವಾಗಿ ಅವರ ಮನಸ್ಸಿನಲ್ಲಿ ಬೇರುಬಿಟ್ಟಿತು.

ಮೊದಲ ಪ್ರಯತ್ನ ಬೀಜಗಳಿಂದಲೇ ಆರಂಭವಾಯಿತು. ಎಲ್ಲೆಲ್ಲಿಂದಲೋ ತಾವರೆ ಬೀಜಗಳನ್ನು ಸಂಗ್ರಹಿಸಿ ಬಿತ್ತಿದರು. ದಿನಗಳು ಕಳೆಯುತ್ತಾ ಹೋದವು. ತಿಂಗಳುಗಳೂ ಕಳೆದವು. ಆದರೆ ಅವರು ನಿರೀಕ್ಷಿಸಿದ್ದಂತೆ ಹೂಗಳು ಅರಳಲಿಲ್ಲ. ನಿರಾಶೆಯಾಗುವಷ್ಟು ಸಮಯ ತಾಳ್ಮೆಯಿಂದ ಕಾದರೂ ಫಲ ಸಿಗಲಿಲ್ಲ. ಆದರೆ ಅವರು ಕೈಚೆಲ್ಲಲಿಲ್ಲ. ಪ್ರಯತ್ನದ ದಾರಿಯನ್ನು ಬದಲಿಸಿದರು. ತಾವರೆಯ ಗೆಡ್ಡೆ ಮತ್ತು ಬಳ್ಳಿಗಳ ಮೂಲಕ ಗಿಡ ಬೆಳೆಸುವ ವಿಧಾನವನ್ನು ಅಳವಡಿಸಿಕೊಂಡರು. ಮಣ್ಣಿನ ಮಿಶ್ರಣ, ನೀರಿನ ಪ್ರಮಾಣ, ತೊಟ್ಟಿಗಳ ಆಯ್ಕೆ– ಹೀಗೆ ಪ್ರತಿ ವಿಚಾರದತ್ತಲೂ ಅವರು ಗಮನಹರಿಸಿದರು. ನಿಧಾನವಾಗಿ ಗಿಡಗಳು ಹಿಡಿದುಕೊಳ್ಳತೊಡಗಿದವು. ಮೊದಲ ಹೂ ಅರಳಿದ ಕ್ಷಣವನ್ನು ಅವರು ಇಂದಿಗೂ ಮರೆಯುವುದಿಲ್ಲ. ಅದು ಕೇವಲ ಒಂದು ಹೂವಿನ ಅರಳಿಕೆಯಾಗಿರಲಿಲ್ಲ; ಅವರ ಹಠದ ಮೊದಲ ಗೆಲುವಾಗಿತ್ತು.



ಆ ಒಂದು ಹೂವೇ ಅವರ ವಿಶ್ವಾಸವನ್ನು ಹೆಚ್ಚಿಸಿತು. ನಂತರ ಅವರು ಹಿಂದಿರುಗಿ ನೋಡಲಿಲ್ಲ. ಹೊಸ ಹೊಸ ತಳಿಗಳನ್ನು ಹುಡುಕುವ ಕೆಲಸ ಆರಂಭಿಸಿದರು. ಒಂದು ಹೂವಿನ ಬಣ್ಣ ಮತ್ತೊಂದರೊಂದಿಗೆ ಸೇರಿಸಿದರೆ ಏನಾಗಬಹುದು ಎಂಬ ಕುತೂಹಲ ಅವರನ್ನು ಪರಾಗಸ್ಪರ್ಶದ ಪ್ರಯೋಗಗಳತ್ತ ಕರೆದೊಯ್ದಿತು. ಹೀಗೆ ಅವರ ಅಂಗಳ ನಿಧಾನವಾಗಿ ಬಣ್ಣಗಳಿಂದ ತುಂಬತೊಡಗಿತು.

ಇಂದು ‘ಪುಷ್ಪಗಿರಿ’ಯಲ್ಲಿ 160ಕ್ಕೂ ಹೆಚ್ಚು ತಳಿಯ ತಾವರೆಗಳು ಹಾಗೂ 200ಕ್ಕೂ ಹೆಚ್ಚು ಬಗೆಯ ನೈದಿಲೆಗಳು ಬೆಳೆದು ನಿಂತಿವೆ. ಹಿಂದೆ ಅಡಿಕೆ ಒಣಗಿಸಲು ಬಳಸುತ್ತಿದ್ದ ಜಾಗ ಈಗ ಪುಟ್ಟ ಪುಟ್ಟ ನೀರಿನ ತೊಟ್ಟಿಗಳಾಗಿ ಮಾರ್ಪಟ್ಟಿದೆ. ಪ್ರತಿಯೊಂದು ತೊಟ್ಟಿಯೂ ತನ್ನದೇ ಆದ ಬಣ್ಣದ ಕಥೆಯನ್ನು ಹೇಳುತ್ತದೆ. ಬೆಳಗಿನ ಹೊತ್ತಿನಲ್ಲಿ ಆ ಹೂಗಳ ನಡುವೆ ನಡೆಯುವಾಗ, ಅದು ಒಂದು ತೋಟವಲ್ಲ; ಒಂದು ಶಾಂತ ಲೋಕದೊಳಗೆ ನಡೆದಾಡುತ್ತಿರುವ ಅನುಭವ.

ಆದರೆ ಈ ಸೌಂದರ್ಯದ ಹಿಂದೆ ಅಷ್ಟೇ ಕಾಳಜಿಯೂ ಇದೆ. ಸದಾ ನೀರಿನಲ್ಲಿ ಬೆಳೆಯುವ ಈ ಗಿಡಗಳಿಗೆ ಕೀಟಬಾಧೆ ಹೆಚ್ಚಾಗುತ್ತದೆ. ಕೆಲವು ಎಲೆಗಳು ಕೊಳೆಯುತ್ತವೆ. ಕೆಲವು ಗಿಡಗಳು ದುರ್ಬಲವಾಗುತ್ತವೆ. ಅವುಗಳನ್ನು ತಕ್ಷಣ ಬೇರ್ಪಡಿಸಬೇಕು. ಋತುಮಾನಕ್ಕೆ ತಕ್ಕಂತೆ ಆರೈಕೆಯ ವಿಧಾನಗಳನ್ನು ಬದಲಾಯಿಸಬೇಕು. ಮಳೆಗಾಲ, ಬೇಸಿಗೆ, ಚಳಿಗಾಲ–ಪ್ರತಿ ಕಾಲಕ್ಕೂ ತನ್ನದೇ ನಿಯಮ.

12ನೇ ಪುಟಕ್ಕೆ...

ನೈದಿಲೆಯೇ..ನೈದಿಲೆಯೇ...

‘ಪುಷ್ಪಗಿರಿ’ಯಲ್ಲಿ 200ಕ್ಕೂ ಹೆಚ್ಚು ಬಗೆಯ ನೈದಿಲೆಗಳು ಬೆಳೆದು ನಿಂತಿವೆ. ವಿಕ್ಟೋರಿಯಾ, ಪರ್ಪಲ್ ಡೈಮಂಡ್, ಗೋಲ್ಡನ್ ಫ್ರೆಂಡ್ಶಿಪ್, ಮಿಯಾಮಿ ರೋಸ್, ಗೆಲಾಕ್ಸಿ, ಬುಲ್ಸ್ ಐ, ಪಿಂಕ್ ಫ್ಲೆಮಿಂಗೊ, ಟ್ರಾಪಿಕಲ್ ಸನ್ ಸೆಟ್, ಅನ್ನಪೂರ್ಣ ಸೇರಿದಂತೆ ಹಲವು ದೇಶಿ–ವಿದೇಶಿ ತಳಿಗಳ ನೈದಿಲೆಗಳು ಇಲ್ಲಿ ಕಂಗೊಳಿಸುತ್ತಿವೆ.

ಈಶ್ವಣ... ಇದು ಬರೀ ಮೀನಲ್ಲೋ ಅಣ್ಣ!

• ಬೀರಣ್ಣ ನಾಯಕ ಮೊಗಟಾ

ಭಾನುವಾರ ಬೆಳಿಗ್ಗೆ ಉತ್ತರ ಕನ್ನಡ ಜಿಲ್ಲೆಯ ಗೋಕರ್ಣ ಪಟ್ಟಣದ ಮೀನು ಪೇಟೆ ಕಡೆ ಹೆಜ್ಜೆ ಹಾಕಿದರೆ, ಸಮುದ್ರದ ಉಪ್ಪುಗಾಳಿಯೇ ಮೊದಲು ಮೈಗೆ ತಾಕುತ್ತದೆ. ನಂತರ ಕಿವಿಗೆ ಕೇಳಿಸುವುದು ಮೀನುಪ್ರಿಯರ ಗದ್ದಲ, ಮೀನುಗಾರರ ಕೂಗು, ಚೆಲೆಪೆಚ್ಚಿನ ಮಾತುಗಳು. ಆ ಗದ್ದಲದ ಮಧ್ಯೆ ಆ ದಿನ ಎಲ್ಲ ಬಾಯಲ್ಲೂ ಒಂದೇ ಮಾತು–‘ಈಶ್ವಣ ಬಂದಿದೆ!’

ಮೀನು ಪೇಟೆಗೆ ಕಾಲಿಟ್ಟಾಗ, ಜನರ ಮುಖದಲ್ಲಿ ವಿಶೇಷ ಉತ್ಸಾಹ ಕಾಣಿಸುತ್ತಿತ್ತು. ಮಳೆಗೆ ಕಾಯುವ ರೈತನಂತೆ, ಈಶ್ವಣ ಋತುವಿಗೆ ಕಾಯುವ ಮೀನುಪ್ರಿಯರ ಹೃದಯದಲ್ಲಿ ಆನಂದದ ತರಂಗಗಳು ಉಕ್ಕಿ ಹರಿಯುತ್ತಿವೆ ಎಂಬುದು ಸ್ಪಷ್ಟವಾಗಿತ್ತು.

ಕರಾವಳಿಯಲ್ಲಿ ಅಕ್ಟೋಬರ್ ತಿಂಗಳು ಎಂದರೆ ಕೇವಲ ಕ್ಯಾಲೆಂಡರ್‌ನ ಒಂದು ಪುಟ ಬದಲಾವಣೆ ಅಲ್ಲ. ಅದು ಸಮುದ್ರದ ಸ್ವಭಾವ ಬದಲಾವಣೆಯ ಸಂಕೇತ. ಮೇಲಿಂದ ಬೀಸುವ ಚಳಿಗಾಳಿ, ಕಡಲತೀರದ ಮೇಲೆ ಮೃದುವಾಗಿ ಹರಡುವ ಮಂಜು ಇವೆಲ್ಲವೂ ಮೀನುಗಾರರಿಗೆ ಒಂದು ಮುನ್ಸೂಚನೆ–‘ಈಶ್ವಣ ಬರುವ ಕಾಲ ಆಯಿತು!’

ಅಕ್ಟೋಬರ್‌ನಿಂದ ಮೇ ತಿಂಗಳವರೆಗೆ, ವಿಶೇಷವಾಗಿ ಉತ್ತರ ಕನ್ನಡ ಜಿಲ್ಲೆಯ ಅರಬ್ಬಿ ಸಮುದ್ರ ತೀರದಲ್ಲಿ ಈಶ್ವಣದ ಸುಗ್ಗಿ. ಈ ಅವಧಿಯಲ್ಲಿ ಮೀನು ಪೇಟೆಗಳಲ್ಲಿ ಜನಸಂದಣಿ ಸ್ವಾಭಾವಿಕ. ಕಾರಣ, ಈಶ್ವಣ ಎಂದರೆ ರುಚಿಯ ರಾಜ.

ಹೆಣ್ಣು ಈಶ್ವಣ– ದಾಂಡಿ ಈಶ್ವಣ

ಸ್ಥಳೀಯವಾಗಿ ‘ಸರ್ಮೆ’ ಎಂದೂ ಕರೆಯುವ ಈಶ್ವಣದಲ್ಲಿ ಎರಡು ರೀತಿ–ಹೆಣ್ಣು ಮತ್ತು ಗಂಡು. ಹೆಣ್ಣನ್ನು ‘ಹೆಣ್ಣು ಈಶ್ವಣ’ ಎಂದು ಕರೆಯುತ್ತಾರೆ; ಗಂಡನ್ನು ‘ದಾಂಡಿ ಈಶ್ವಣ’ ಎಂದು ಗುರುತಿಸುತ್ತಾರೆ.

ಮೀನಿನ ತಲೆ ನೋಡಿ ಗುರುತಿಸುವ ಕಲೆ ಅನುಭವಿಗಳಿಗಷ್ಟೇ ಸಾಧ್ಯ. ಹೆಣ್ಣು ಈಶ್ವಣ ಸಾಮಾನ್ಯವಾಗಿ ಐದು ಕೆ.ಜಿ.ಯವರೆಗೆ ತೂಗಿದರೆ, ದಾಂಡಿ ಈಶ್ವಣ ಇಪ್ಪತ್ತೈದು ಕೆ.ಜಿ.ಯವರೆಗೂ ಬೆಳೆದಿರುತ್ತದೆ. ಆದರೆ ರುಚಿಯಲ್ಲಿ ಹೆಣ್ಣು ಈಶ್ವಣ ಒಂದು ಕೈ ಮೇಲು ಎಂಬುದು ಮೀನುಪ್ರಿಯರ ಅಂಬೋಣ.

ಉತ್ತರ ಕನ್ನಡದ ಕರಾವಳಿಯಲ್ಲಿ ಇದನ್ನು ಸರಳವಾಗಿ ‘ದೊಡ್ಡ ಮೀನು’ ಎಂದೇ ಕರೆಯುತ್ತಾರೆ. ಹೆಸರು ಸರಳವಾದರೂ, ಅದರ ರುಚಿ ಸಾಮಾನ್ಯವಲ್ಲ.



ಹೀಗೆ ತುಂಡುಗಳಲ್ಲಿಯೂ ಈಶ್ವಣನ ಮಾರಾಟ ನಡೆಯುತ್ತದೆ...

ಬಾಯಲ್ಲಿ ನೀರೂರಿಸುವ ಫ್ರೈ

ಈಶ್ವಣ ಸೀಸನ್ ಆರಂಭವಾದರೆ ಸಾಕು, ಕೆ.ಜಿ.ಗೆ 600 ರಿಂದ 700 ರೂಪಾಯಿಯವರೆಗೆ ಬೆಲೆ. ಕೆಲ ಪೇಟೆಗಳಲ್ಲಿ ತುಂಡುಗಳಾಗಿ ಮಾರಾಟ. ಹೋಟೆಲ್‌ಗಳಲ್ಲಿ ಅದರ ಫ್ರೈಗೆ ವಿಶೇಷ ಬೇಡಿಕೆ. ಸೀಜನ್ ಹಾಗೂ ತುಂಡಿನ ಗಾತ್ರಕ್ಕೆ ಅನುಗುಣವಾಗಿ ಒಂದು ತುಂಡು 80 ರೂಪಾಯಿಯಿಂದ 400 ರೂಪಾಯಿವರೆಗೂ ದರ ಹೊಂದಿರುತ್ತದೆ.

ಹೋಟೆಲ್‌ಗಳಲ್ಲಿ ವಿಶೇಷವಾಗಿ ಈಶ್ವಣದ ಕಣ್ಣಿನ ಫ್ರೈಗೆ ಬೇಡಿಕೆ ಜಾಸ್ತಿ. ರುಚಿ, ಸುವಾಸನೆ, ಮೃದುವಾದ ಮಾಂಸದ ಅನುಭವ ಇದರಲ್ಲಿದೆ.

ಒಂದೇ ದೊಡ್ಡ ಮುಳ್ಳು

ಬಹುತೇಕ ಮೀನಿನಲ್ಲಿ ಸಣ್ಣ-ಸಣ್ಣ ಮುಳ್ಳುಗಳಿದ್ದು, ಬಲು ಎಚ್ಚರಿಕೆಯಿಂದ ತಿನ್ನುವಂತೆ ಮಾಡುತ್ತವೆ. ಆದರೆ ಈಶ್ವಣದ ವಿಶೇಷತೆ ಎಂದರೆ ಒಂದೇ ದೊಡ್ಡ ಮುಳ್ಳು. ಅದನ್ನು ಸುಲಭವಾಗಿ ತೆಗೆದು ಫ್ರೈ ಮಾಡಬಹುದಾಗಿದ್ದು, ತಿನ್ನುವುದೂ ಸುಲಭ. ಮಕ್ಕಳಿಂದ ಹಿಡಿದು ವೃದ್ಧರ ತನಕ ಎಲ್ಲರೂ ಭಯವಿಲ್ಲದೆ ಸವಿಯಬಹುದಾದ ಮೀನು.

ಆದರೆ ಈ ಮೀನನ್ನು ಇತರ ಮೀನಿನಂತೆ ಒಣಗಿಸಿ ಒಣಮೀನಾಗಿ ಮಾಡುವುದು ಸುಲಭವಲ್ಲ. ತಾಜಾ ರೂಪದಲ್ಲೇ ಅದರ ಸುವಾಸನೆ ಮತ್ತು ರುಚಿಯನ್ನು ಸವಿಯಬೇಕು.

ಕರಾವಳಿಯ ಮನೆಗಳಲ್ಲಿ ಈಶ್ವಣ ಬಂದರೆ ಅಡುಗೆಮನೆಯಲ್ಲಿ ಹಬ್ಬದ ಸಂಭ್ರಮ. ಫ್ರೈ, ಮಸಾಲಾ, ಸುಕ್ಕಾ, ಸಾರು, ಚಿಲ್ಲಿ ಫ್ರೈ– ಪ್ರತಿ ರೂಪದಲ್ಲೂ ಈಶ್ವಣ ತನ್ನದೇ ಆದ ರುಚಿಯನ್ನು ಹೊಂದಿರುತ್ತದೆ. ತೆಂಗಿನಎಣ್ಣೆಯಲ್ಲಿ ಬಾಡಿಸಿದ ಮಸಾಲೆ ಹಚ್ಚಿದ ತುಂಡು, ಬೆಂದಾಗ ಹೊರಹೊಮ್ಮುವ ಸುವಾಸನೆ, ಊಟದ ಮೇಜಿನಲ್ಲಿ ಹಬ್ಬದ ವಾತಾವರಣ ಸೃಷ್ಟಿಸುತ್ತದೆ.

ಸಾಗರದಾಚೆಗೂ...

ಗಾಳ ಹಾಕಿ ಹಾಗೂ ಬಲೆಯ ಮೂಲಕ ಮೀನುಗಾರರು ಈಶ್ವಣವನ್ನು ಬೇಟೆಯಾಡುತ್ತಾರೆ. ಸ್ಥಳೀಯ ಪೇಟೆಗಳನ್ನು ಮಾತ್ರವಲ್ಲ, ಹೊರ ದೇಶಗಳಿಗೂ ಈಶ್ವಣ ರಫ್ತು ಆಗುತ್ತದೆ. ಕರಾವಳಿಯ ಸಮುದ್ರದಿಂದ ಹೊರಟ ಈ ಮೀನು, ದೂರದ ಊರುಗಳಲ್ಲಿ ಸಹ ತನ್ನ ರುಚಿಯ ಸೊಗಸು ತೋರಿಸುತ್ತದೆ.

ಭಾನುವಾರ ಗೋಕರ್ಣ ಮೀನು ಪೇಟೆಯಿಂದ ಮನೆಗೆ ಮರಳುವಾಗ, ಕೈಯಲ್ಲಿ ಈಶ್ವಣದ ತುಂಡು ಇರದಿದ್ದರೂ ಮನಸ್ಸಿನಲ್ಲಿ ಅದರ ಸುವಾಸನೆ ಉಳಿದಿತ್ತು. ಸಮುದ್ರದ ಉಪ್ಪುಗಾಳಿಯ ಜೊತೆ ಬೆರೆತ ಈಶ್ವಣದ ಕಥೆ ಕರಾವಳಿಯ ಜನಜೀವನದ ಅವಿಭಾಜ್ಯ ಅಂಗ.

ಇದೀಗ ಸೀಜನ್ ಆರಂಭವಾಗಿದೆ. ಮೇ ತಿಂಗಳು ಮುಗಿಯುವವರೆಗೆ ಈಶ್ವಣದ ಸುದ್ದಿ, ಸುಗ್ಗಿ, ಸಂಭ್ರಮ–ಇವೆಲ್ಲವೂ ಕರಾವಳಿಯ ಜೀವಂತ ಪರಂಪರೆಯೊಂದಾಗಿ ಮುಂದುವರಿಯುತ್ತವೆ.

ಈಶ್ವಣ ಎಂದರೆ ಕೇವಲ ಒಂದು ಮೀನು ಅಲ್ಲ; ಅದು ಕರಾವಳಿಯ ರುಚಿ ಸಂಸ್ಕೃತಿಯ ಪ್ರತೀಕ.

ಸ್ಥಳೀಯರ ಬಾಯಲ್ಲಿ ಇದು ದೊಡ್ಡಮೀನು!




ಕೌಂಡ್ಲಿಕನ ವಧಾ ಪ್ರಸಂಗದ ದೃಶ್ಯ

ಕನಕಗಿರಿಯ ಜೂಲಕೇರಿ ಓಣಿಯಲ್ಲಿ ಬಯಲಾಟ ಕೇವಲ ನಾಟಕವಲ್ಲ; ಅದು ಭಾವೈಕ್ಯವನ್ನು ಬದುಕಿಸುವ ಒಂದು ಸಂಸ್ಕೃತಿ. ಮುಸ್ಲಿಂ ಕಲಾವಿದರು ಮಹಾಭಾರತದ ಪಾತ್ರಗಳನ್ನು ನಿರ್ವಹಿಸುವ ಈ ಅಟ್ಟದಲ್ಲಿ, ಧರ್ಮಗಳ ಗಡಿ ಕರಗಿ, ಕಲೆ ಮಾನವೀಯತೆಯ ಸೇತುವೆಯಾಗುತ್ತದೆ.

ಜೂಲಕೇರಿ ಬಯಲಾಟ ಭಾವೈಕ್ಯ ಬೆಸೆಯುವ ಅಟ್ಟ


ಬಯಲಾಟ ನೋಡಲು ಕಿಕ್ಕಿರಿದ ಜನ

• ಮನೋಹರ ಬೊಂದಾಡೆ

ರಾತ್ರಿ ನಿಧಾನವಾಗಿ ಇಳಿಯುತ್ತಿತ್ತು. ಕೊಪ್ಪಳ ಜಿಲ್ಲೆಯ ಕನಕಗಿರಿಯ ಜೂಲಕೇರಿ ಓಣಿಯ ಶ್ರೀ ಯಮನೂರಸ್ವಾಮಿ ಬಯಲು ಮೈದಾನದಲ್ಲಿ ಕೆಲವೇ ಕ್ಷಣಗಳಲ್ಲಿ ಹೊಸದೊಂದು ಜಗತ್ತು ಅನಾವರಣಗೊಳ್ಳುವುದರಲ್ಲಿತ್ತು. ಆ ಮೈದಾನದಲ್ಲಿ ಸಾವಿರಾರು ಜನರು ತಮ್ಮ ತಮ್ಮ ಜಾಗ ಹಿಡಿದುಕೊಂಡು ಕಾತರದಿಂದ ಕಾಯುತ್ತಿದ್ದರು.ಆಗ ಸಮಯ ರಾತ್ರಿ ಹತ್ತೂವರೆ ಗಂಟೆ. ಪೇಟಿ (ಹಾರ್ಮೋನಿಯಂ) ನಾದ ಮೃದುವಾಗಿ ಹರಿಯತೊಡಗಿತು. ತಬಲಾದ ಲಯ ಅದಕ್ಕೆ ಸೇರ್ಪಡೆಯಾಗಿ ಚುರುಕು ತಂದಿತು. ತಾಳ-ಮೇಳಗಳ ಸದ್ದು ಮೈದಾನ ತುಂಬ ಹರಡಿ, ಕ್ಷಣಾರ್ಧದಲ್ಲೇ ಆ ಬಯಲು ಒಂದು ಜೀವಂತ ರಂಗಭೂಮಿಯಾಗಿ ರೂಪಾಂತರಗೊಂಡಿತು. ಅಲ್ಲಿ 'ರತಿ ಕಲ್ಯಾಣ' ಅರ್ಥಾತ್ 'ಕೌಂಡ್ಲಿಕನ ವಧಾ' ಬಯಲಾಟ ಆರಂಭವಾಯಿತು.

ಮೊದಲ ನೋಟದಲ್ಲಿ ಇದು ಇನ್ನೊಂದು ಜನಪದ ನಾಟಕದಂತೆಯೇ ಕಾಣುತ್ತದೆ. ಆದರೆ ಕ್ಷಣಗಳು ಕಳೆದಂತೆ, ಈ ಕಥೆಯೊಳಗೆ ಮತ್ತೊಂದು ಕಥೆ ತೆರೆದುಕೊಳ್ಳುತ್ತದೆ.

ವೇದಿಕೆಯ ಮೇಲೆ ಭೀಮನಾಗಿ ಲತೀಫಸಾಬ ಜೂಲಕೇರಿ ಪ್ರವೇಶಿಸುತ್ತಾರೆ. ಅವರ ಹೆಜ್ಜೆಯಲ್ಲಿ ಬಲ, ಮಾತಿನಲ್ಲಿ ಅಬ್ಬರ. ಅರ್ಜುನನಾಗಿ ಶ್ಯಾಮೀದ ಜೂಲಕೇರಿ ಬಿಲ್ಲು ಎಳೆಯುತ್ತಾರೆ. ಕಮಲರಾಜನಾಗಿ ರಾಜಾಸಾಬ ಜೂಲಕೇರಿ, ಸುಬಟಮಂತ್ರಿಯಾಗಿ ಖಾಜಾಸಾಬ ಬಸಿರಿಹಾಳ, ಮನ್ಮಥನಾಗಿ ಪಾಪಣ್ಣಿ ಜೂಲಕೇರಿ ತಮ್ಮ ತಮ್ಮ ಪಾತ್ರಗಳನ್ನು ಜೀವಂತಗೊಳಿಸುತ್ತಾರೆ. ದ್ರೌಪದಿಯಾಗಿ ರಾಜಸಾಬ ದೊಡ್ಡಮನಿ, ಕೌಂಡ್ಲಿಕನಾಗಿ ಶ್ಯಾಮೀದಸಾಬ ಜೂಲಕೇರಿ, ರತಿಯಾಗಿ ಹುಸೇನಬಾಷಾ ಜೂಲಕೇರಿ, ನಾರದನಾಗಿ ಲಾಲಸಾಬ ಜೂಲಕೇರಿ–ಹೀಗೆ ಪ್ರತಿ ಪಾತ್ರವೂ ತನ್ನದೇ ಆದ ತೂಕ ಹೊಂದಿದೆ. ಕುಸಮಗಂಧಿಯಾಗಿ ರೇಷ್ಮಾ ಬೇಗಂ, ರುಕ್ಮಿಣಿಯಾಗಿ ಹೊನ್ನೂರಸಾಬ ಬಸಿರಿಹಾಳ ಅಭಿನಯಿಸುತ್ತಾರೆ. ಬಾಲಪ್ರತಿಭೆಗಳಾಗಿ ನಕುಲನಾಗಿ ಫಯಾಜ್, ಸಹದೇವನಾಗಿ ರಿಯಾಜ್ ವೇದಿಕೆಗೆ ಬರುತ್ತಾರೆ.

ಒಟ್ಟು 18 ಪಾತ್ರಗಳಲ್ಲಿ 14 ಪಾತ್ರಗಳನ್ನು ಮುಸ್ಲಿಂ ಕಲಾವಿದರು ನಿರ್ವಹಿಸುತ್ತಾರೆ. ಉಳಿದ ಪಾತ್ರಗಳಲ್ಲಿ ಕೃಷ್ಣನಾಗಿ ಶೇಖರಪ್ಪ ಭಾವಿಕಟ್ಟಿ, ಧರ್ಮರಾಜನಾಗಿ ಕರೆಡೆಪ್ಪ ತೆಗ್ಗಿನಮನಿ, ದೇವಿಯಾಗಿ ಬಾಳಪ್ಪ ತೆಗ್ಗಿನಮನಿ, ದೃಷ್ಟಬುದ್ದಿಮಂತ್ರಿಯಾಗಿ ಗರುಡಪ್ಪ ರಡ್ಡೇರ್, ಕಮಲಗಂಧಿಯಾಗಿ ಗಿರೀಶ್ ಮಡ್ಡೇರ್, ಆಚಾರಿ ಹಾಗೂ ಮರಿ ಆಚಾರಿಮಂತ್ರಿಯಾಗಿ ಹನುಮಂತಪ್ಪ ಆರೇರ್, ಸಾರಥಿಯಾಗಿ ಬಸವರಾಜ ತೆಗ್ಗಿನಮನಿ ಅಭಿನಯಿಸುತ್ತಾರೆ.

ಈ ಎಲ್ಲ ಹೆಸರುಗಳು ಒಂದೇ ಅಟ್ಟದ ಮೇಲೆ (ವೇದಿಕೆ) ಸೇರುತ್ತವೆ.

ಆದರೆ ಕಥೆ ಮುಂದುವರಿದಂತೆ, ಹೆಸರುಗಳಿಗಿಂತ ಪಾತ್ರಗಳು ಮುಖ್ಯವಾಗುತ್ತವೆ. ಪಾತ್ರಗಳಿಗಿಂತ ಕಥೆ ಮುಖ್ಯವಾಗುತ್ತದೆ. ಕಥೆಯಿಗಿಂತ ಅನುಭವ ಮುಖ್ಯವಾಗುತ್ತದೆ. ಅಲ್ಲಿ ಧರ್ಮ ಮಸುಕಾಗುತ್ತದೆ. ವೇದಿಕೆಯ ಹಿಂದೆ, ಧ್ವನಿಯ ಮತ್ತೊಂದು ಲೋಕ ಹರಿಯುತ್ತಿದೆ. ಹಿನ್ನೆಲೆ ಗಾಯನದಲ್ಲಿ ವಲೀಸಾಬ ಜೂಲಕೇರಿ, ಖಾಸಿಂಸಾಬ ಇರಕಲಗಡ, ಖಾಸಿಂಸಾಬ ದೊಡ್ಡಮನಿ ತಮ್ಮ ಸ್ವರಗಳಿಂದ ಕಥೆಗೆ ಜೀವ ತುಂಬುತ್ತಾರೆ. ಅವರ ಗಾಯನ ಪಾತ್ರಗಳಿಗೆ ಉಸಿರು ನೀಡುತ್ತದೆ. ಒಂದು ಕ್ಷಣ ರೌದ್ರ. ಮತ್ತೊಂದು ಕ್ಷಣ ಮೃದುವು. ಪ್ರೇಕ್ಷಕರು ನಗುತ್ತಾರೆ, ಕೇಕೆ ಹಾಕುತ್ತಾರೆ, ಮತ್ತೆ ಮೌನವಾಗುತ್ತಾರೆ.

ಈ ಬಯಲಾಟದ ಬೇರುಗಳು ಶತಮಾನಗಳ ಹಿಂದೆ ಹೋಗುತ್ತವೆ. ಗುರುಬಸಯ್ಯ ವಸ್ತ್ರದ ರಚನೆಯ 'ರತಿ ಕಲ್ಯಾಣ' ಒಂದು ಹಂತದಲ್ಲಿ ನಶಿಸಿತು. ಆದರೆ ಕಥೆ ಅಲ್ಲೇ ನಿಂತಿಲ್ಲ. ಅದನ್ನು ಮರುಸೃಷ್ಟಿಸಿದವರು ದಿವಂಗತ ಬಡೇ ಹುಸೇನಸಾಬ ಜೂಲಕೇರಿ. ಅವರು ಅನಕ್ಷರಸ್ಥರು. ಆದರೆ ಕಥೆಯನ್ನು ಮನಸ್ಸಿನಲ್ಲಿ ಕಟ್ಟಿಕೊಂಡು, ಸಂಭಾಷಣೆಯಲ್ಲಿ ಜೀವ ತುಂಬಿದವರು. ಅವರ ರಚನೆಗೆ ಪ್ರೇರಣೆಯಾದವರು ಸಮಗಂಡಿ ಮಲ್ಲಯ್ಯತಾತ ಎಂದು ಹಿರಿಯರು ನೆನಪಿಸಿಕೊಳ್ಳುತ್ತಾರೆ.

ಇಂದು ವೇದಿಕೆಗೆ ಏರುವ ಪ್ರತಿಯೊಂದು ಸಂಭಾಷಣೆಯಲ್ಲೂ ಅವರ ಸ್ಪಂದನೆ ಕೇಳಿಸುತ್ತದೆ.

ಭಾವೈಕ್ಯತೆ ಜೀವಂತ

ಕನಕಗಿರಿಯ ಜೂಲಕೇರಿ ಓಣಿಯ ಮುಸ್ಲಿಮರ ಬಯಲಾಟ ಪ್ರೇಮ ಇಂದು ನಿನ್ನೆಯದ್ದಲ್ಲ. ದಶಕಗಳಿಂದ ಜೂಲಕೇರಿ ಕುಟುಂಬದವರೇ ಈ ಕಲೆಯಲ್ಲಿ ಪ್ರಮುಖ ಪಾತ್ರಗಳನ್ನು ನಿರ್ವಹಿಸುತ್ತಾ ಬಂದಿದ್ದಾರೆ. ಸುಮಾರು ನಾಲ್ಕು ದಶಕಗಳು ನನ್ನ ತಂದೆ ರಾಮಚಂದ್ರಪ್ಪ ತುಪ್ಪದ ಅವರು ಈ ಬಯಲಾಟಕ್ಕೆ ನಿರ್ದೇಶನ ನೀಡಿ ಮಾರ್ಗದರ್ಶನ ಮಾಡಿದರು. ಹಿರಿಯರ ಜೊತೆಗೆ ಮುಸ್ಲಿಂ ಯುವಕರೂ ಕಲಾರಾಧಕರಾಗಿ ಬೆಳೆದಿದ್ದು, ಇಲ್ಲಿ ಹಿಂದು–ಮುಸ್ಲಿಮರ ನಿಜವಾದ ಭಾವೈಕ್ಯತೆ ಜೀವಂತವಾಗಿ ಕಾಣುತ್ತದೆ ಎನ್ನುತ್ತಾರೆ ಕನಕಗಿರಿಯ ರತಿ ಕಲ್ಯಾಣ ಬಯಲಾಟ ನಿರ್ದೇಶಕ ಪಂಪಾಪತಿ ತುಪ್ಪದ.

ಈ ದೊಡ್ಡಾಟದಲ್ಲಿ ಕಲಾವಿದರು ಹಗಲು ಕೂಲಿ ಕಾರ್ಮಿಕ, ಹಮಾಲಿ, ಮಿಲ್‌ಗಳ ದುಡಿಮೆಯುವ ಆಗಿರುತ್ತಾರೆ. ಆದರೆ ರಾತ್ರಿ ಅವರು ಭೀಮನಾಗಿ, ಅರ್ಜುನನಾಗಿ, ಕಮಲರಾಜನಾಗಿ, ಮನ್ಮಥನಾಗಿ ಬದಲಾಗುತ್ತಾರೆ. ತಾಲೀಮು ಆರಂಭವಾಗುತ್ತದೆ. ದಿನದ ಶ್ರಮ ಕರಗುತ್ತದೆ. ಕಲೆ ಅವರೊಳಗೆ ಅರಳುತ್ತದೆ. ಅಕ್ಷರಜ್ಞಾನ ಕಡಿಮೆ ಇದ್ದರೂ, ಅವರ ಉಚ್ಚಾರಣೆ, ಭಾವನೆಗಳ ಅಭಿವ್ಯಕ್ತಿಯ ಸ್ಪಷ್ಟತೆ ಪ್ರೇಕ್ಷಕರನ್ನು ಸೆಳೆಯುತ್ತದೆ.

ಈ ಅಟ್ಟದ ಮೇಲೆ ಎಲ್ಲರಿಗೂ ಜಾಗ ಇದೆ. ಲಿಂಗತ್ವ ಅಲ್ಪಸಂಖ್ಯಾತರೊಬ್ಬರು ಪಾತ್ರಧಾರಿಯಾಗುತ್ತಾರೆ. ಐದು ವರ್ಷದ ಬಾಲಪ್ರತಿಭೆಯಾದ ಗೌರೀಶರೆಡ್ಡಿ ನಕಲು ಪಾತ್ರದಲ್ಲಿ ಕಾಣಿಸಿಕೊಂಡು ಎಲ್ಲರ ಗಮನ ಸೆಳೆಯುತ್ತಾನೆ. ಇಲ್ಲಿ ಯಾರು ಮುಖ್ಯರಲ್ಲ, ಯಾರು ಅಮುಖ್ಯರಲ್ಲ.

ಈ ಬಯಲಾಟದ ಹಿಂದೆ ಇನ್ನೊಬ್ಬರ ನೆನಪು ಕೂಡ ಇದೆ. ನಾಲ್ಕು ದಶಕಗಳು ಈ ಕಲೆಗೆ ದಿಕ್ಕು ತೋರಿಸಿದವರು ರಾಮಚಂದ್ರಪ್ಪ ತುಪ್ಪದ. ಅವರ ಮಾರ್ಗದರ್ಶನ ಈ ಪರಂಪರೆಯನ್ನು ಗಟ್ಟಿಗೊಳಿಸಿದೆ. ಇಂದು ಈ ಪರಂಪರೆಯನ್ನು ಮುಂದುವರಿಸುತ್ತಿರುವವರು ನಿರ್ದೇಶಕ ಪಂಪಾಪತಿ ತುಪ್ಪದ. ಹಿರಿಯರ ಅನುಭವ, ಕಿರಿಯರ ಉತ್ಸಾಹ ಇವುಗಳನ್ನು ಜೋಡಿಸುವ ಸೇತುವೆಯಾಗಿದ್ದಾರೆ.

ಕೊಪ್ಪಳ, ಬಳ್ಳಾರಿ, ರಾಯಚೂರು ಭಾಗಗಳಲ್ಲಿ ಬಯಲಾಟ ಇನ್ನೂ ಜೀವಂತವಾಗಿದೆ. ಹಬ್ಬ, ಜಾತ್ರೆ, ಯುಗಾದಿ, ಶಿವರಾತ್ರಿ ಈ ಸಂದರ್ಭಗಳಲ್ಲಿ ಇದು ಜನರನ್ನು ಒಂದಾಗಿಸುತ್ತದೆ. ಆದರೆ ಜೂಲಕೇರಿ ಓಣಿಯಲ್ಲಿ ಈ ಬಯಲಾಟ ಇನ್ನಷ್ಟು ವಿಶಾಲ ಅರ್ಥ ಹೊಂದಿದೆ. ಇದು ಕೇವಲ ನಾಟಕವಲ್ಲ. ಇದು ಒಂದು ಮಾದರಿ. ವಿಭಜನೆಯ ಮಾತುಗಳು ಗಟ್ಟಿಯಾಗುತ್ತಿರುವ ಕಾಲದಲ್ಲಿ, ಈ ಸಣ್ಣ ಓಣಿ ಒಂದು ದೊಡ್ಡ ಸಂದೇಶ ನೀಡುತ್ತದೆ: ಮನುಷ್ಯರನ್ನು ಬೇರ್ಪಡಿಸುವುದು ಹೆಸರುಗಳು. ಅವರನ್ನು ಒಂದಾಗಿಸುವುದು ಮನುಷ್ಯತ್ವ.

ನಿಧಾನಕ್ಕೆ ಕತ್ತಲು ಹಿಂದಕ್ಕೆ ಸರಿಯುತ್ತದೆ. ಬೆಳಕು ಆರಿಸಿಕೊಳ್ಳತೊಡಗುತ್ತದೆ. ಆಗ ಮುಂಜಾನೆ ಐದೂವರೆ ಗಂಟೆ. ಜನರು ಮನೆ ಕಡೆ ತೆರಳುತ್ತಾರೆ. ಮೈದಾನ ಮೌನವಾಗುತ್ತದೆ. ಆದರೆ ಏನೋ ಉಳಿಯುತ್ತದೆ. ಒಂದು ಕಥೆ. ಒಂದು ಅನುಭವ. ಒಂದು ನಂಬಿಕೆ. ಬೇಧಗಳನ್ನು ಮನುಷ್ಯ ನಿರ್ಮಿಸುತ್ತಾನೆ. ಅವನ್ನು ಕರಗಿಸುವುದು ಕಲೆ.


ತಾಳಕ್ಕೆ ತಕ್ಕ ಹೆಜ್ಜೆ

ಗುಬ್ಬಚ್ಚಿ ಸಂಗದಲಿ ಪ್ರಕಾಶ್ ಕುಟುಂಬ


ಗುಬ್ಬಿ ಗೂಡಿನಲ್ಲಿ...


• ಸಾವಿತ್ರಿ ಶ್ಯಾನುಭಾಗ್

ಬಾಲ್ಯದಲ್ಲಿ ಮನೆಯಂಗಳದಲ್ಲಿ ಹಿಂಡುಹಿಂಡಾಗಿ ಬಂದು ಕೂಗುತ್ತಿದ್ದ ಗುಬ್ಬಿಗಳ ಜೊತೆ ಬೆಳೆದ ಪ್ರಕಾಶ್ ನಾಡಿಗ್ ಅವರಿಗೆ ಪಕ್ಷಿಗಳ ಜಗತ್ತು ಅಂದಿನಿಂದಲೇ ಆಪ್ತ. ಪ್ರಾಣಿಶಾಸ್ತ್ರ ಅಭ್ಯಾಸ ಮಾಡಿರುವ ಅವರು, ದಿನಗಳು ಕಳೆಯುತ್ತಾ ಹೋದಂತೆ ತಮ್ಮ ಸುತ್ತಮುತ್ತಲಿನಿಂದ ಗುಬ್ಬಿಗಳು ನಿಧಾನವಾಗಿ ಕಾಣೆಯಾಗುತ್ತಿರುವುದನ್ನು ಗಮನಿಸಿದರು. ಒಂದೊಮ್ಮೆ ಮನೆಯನ್ನು ಚಿಲಿಪಿಲಿಯಿಂದ ತುಂಬಿಸುತ್ತಿದ್ದ ಆ ಪುಟ್ಟ ಜೀವಿಗಳು ಈಗ ಅಪರೂಪವಾಗುತ್ತಿರುವುದು ಅವರ ಮನಸ್ಸಿಗೆ ಕಳವಳ ತಂದಿತು. ಕಾರಣ ಹುಡುಕಲು ಮುಂದಾದಾಗ ನಾಸಿಕ್‌ನ 'ಸ್ಪ್ಯಾರೋ ಮ್ಯಾನ್' ಮೊಹಮದ್ ದಿಲಾವರ್ ಅವರ ಕೆಲಸದ ಬಗೆಗೆ ತಿಳಿಯಿತು. ನಗರೀಕರಣದ ನಡುವೆ ಗುಬ್ಬಿಗಳ ಸಂರಕ್ಷಣೆಗೆ ಅವರು ಕೈಗೊಂಡಿದ್ದ ಚಳವಳಿಯಿಂದ ಪ್ರೇರಿತರಾದ ತುಮಕೂರಿನ ಪ್ರಕಾಶ್, ಅದೇ ದಾರಿಗೆ ತಮ್ಮ ಜೀವನವನ್ನೂ ತಿರುಗಿಸುವ ನಿರ್ಧಾರ ಕೈಗೊಂಡರು.


ಗುಟ್ಟೊಂದ ಹೇಳುವೆ...

ಮಕ್ಕಳಲ್ಲಿ ಪ್ರಕೃತಿ ಮತ್ತು ಪಕ್ಷಿಗಳ ಬಗ್ಗೆ ಸಹಜ ಕುತೂಹಲವಿರುವುದನ್ನು ಅರಿತ ಅವರು, ಆ ಆಸಕ್ತಿಯನ್ನು ಸಕಾರಾತ್ಮಕವಾಗಿ ಬಳಸಿಕೊಳ್ಳಲು 'ಗುಬ್ಬಚ್ಚಿ ಪರಿಸರ ಸಂಘ'ವನ್ನು ಸ್ಥಾಪಿಸಿದರು. ತಮ್ಮ ಮಗ ಅಭಯ್‌ನನ್ನೇ ಅಧ್ಯಕ್ಷನನ್ನಾಗಿ ನೇಮಿಸಿ, ಅನೇಕ ಶಾಲಾ ಮಕ್ಕಳನ್ನು ಸದಸ್ಯರನ್ನಾಗಿ ಸೇರಿಸಿಕೊಂಡರು. ಸಂಘದ ಮೂಲಕ ವಿಶ್ವ ಗುಬ್ಬಿ ದಿನ, ವಿಶ್ವ ಪರಿಸರ ದಿನ, ಭೂಮಿ ದಿನ, ಜಲ ದಿನ ಹಾಗೂ ಓಜೋನ್ ದಿನದಂತಹ ಪರಿಸರ ಸಂಬಂಧಿತ ದಿನಗಳಲ್ಲಿ ಪ್ರಬಂಧ, ಚಿತ್ರಕಲೆ ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದಾರೆ. ನೂರಾರು ಮಕ್ಕಳಿಗೆ ಬಹುಮಾನ ನೀಡಿ ಪ್ರೋತ್ಸಾಹಿಸುವ ಮೂಲಕ ಪಕ್ಷಿ ಸಂರಕ್ಷಣೆಯ ಬೀಜವನ್ನು ಎಳೆಯಮನಗಳಲ್ಲಿ ಬಿತ್ತುತ್ತಿದ್ದಾರೆ.

ಮಕ್ಕಳ ಹುಟ್ಟುಹಬ್ಬದ ಸಂದರ್ಭಗಳಲ್ಲಿ ಆಟಿಕೆಗಳ ಬದಲು ಹಕ್ಕಿಗಳಿಗೆ ಆಹಾರ ಹಾಕುವ ಡಬ್ಬಿ ಹಾಗೂ ಗೂಡು ಕಟ್ಟಲು ಅನುಕೂಲವಾಗುವ ಪೆಟ್ಟಿಗೆಗಳನ್ನು ಉಡುಗೊರೆಯಾಗಿ ನೀಡುವುದು ಅವರ ವಿಶೇಷತೆ. ಆರಂಭದಲ್ಲಿ ಸಿದ್ಧವಾಗಿರುವ ಡಬ್ಬಿಗಳನ್ನು ತರಿಸುತ್ತಿದ್ದ ಅವರು, ನಂತರ ಖಾಲಿ ನೀರಿನ ಮತ್ತು ತಂಪುಪಾನೀಯಗಳ ಬಾಟಲ್‌ಗಳಿಂದ ಆಹಾರ ಡಬ್ಬಿ ತಯಾರಿಸುವುದು, ರಟ್ಟಿನ ಪೆಟ್ಟಿಗೆಗಳಿಂದ ಗೂಡು ನಿರ್ಮಿಸುವುದು ಮುಂತಾದ ಸರಳ ವಿಧಾನಗಳನ್ನು ಕಲಿತುಕೊಂಡರು. ಇದೇ ವಿಧಾನವನ್ನು ಶಾಲೆಗಳಿಗೆ ಹೋಗಿ ಮಕ್ಕಳಿಗೂ ಕಲಿಸುತ್ತಿದ್ದಾರೆ. ತ್ಯಾಜ್ಯ ವಸ್ತುಗಳನ್ನು ಮರುಬಳಕೆ ಮಾಡಿ ಪಕ್ಷಿಗಳಿಗೆ ಆಶ್ರಯ ಕಲ್ಪಿಸುವ ಈ ಪ್ರಯತ್ನ ಪರಿಸರ ಸ್ನೇಹಿ ಮನೋಭಾವವನ್ನೂ ಬೆಳೆಸುತ್ತಿದೆ.


ಗುಬ್ಬಿ ಸಂಗಡ ಪ್ರಕಾಶ್

'ನಿಮ್ಮ ಪರಿಸರದಲ್ಲಿ ಗುಬ್ಬಿ ಕಾಣಿಸದಿದ್ದರೆ, ಆ ಪ್ರದೇಶ ಮನುಷ್ಯರ ವಾಸಕ್ಕೂ ಯೋಗ್ಯವಲ್ಲ' ಎಂಬುದು ಪ್ರಕಾಶ್ ಅವರ ಸ್ಪಷ್ಟ ನಿಲುವು. ಗುಬ್ಬಿಗಳು 'ಬಯೋ ಇಂಡಿಕೇಟರ್'ಗಳಂತೆ ಕಾರ್ಯನಿರ್ವಹಿಸುತ್ತವೆ ಎಂದು ಅವರು ವಿವರಿಸುತ್ತಾರೆ. ಹಿಂದೆ ಹಂಚಿನ ಮನೆಗಳ ಸಂದುಗೊಂದುಗಳಲ್ಲಿ, ದೇವರ ಫೋಟೊಗಳ ಹಿಂದೆ ಗೂಡು ಕಟ್ಟುತ್ತಿದ್ದ ಗುಬ್ಬಿಗಳಿಗೆ ಇಂದಿನ ತಾರಸಿ ಮನೆಗಳಲ್ಲಿ ಜಾಗವಿಲ್ಲ. ಸೂಪರ್ ಮಾರ್ಕೆಟ್ ಸಂಸ್ಕೃತಿಯಿಂದ ಕಾಳುಗಳು ಸಿಗದೇ ಇರುವುದು, ಹೆಚ್ಚುತ್ತಿರುವ ವಾಯು ಮಾಲಿನ್ಯ ಇವೆಲ್ಲವೂ ಅವುಗಳ ಸಂಖ್ಯೆ ಕುಸಿತಕ್ಕೆ ಕಾರಣವೆಂದು ಅವರು ವಿಶ್ಲೇಷಿಸುತ್ತಾರೆ.

ಪ್ರಕಾಶ್ ಅವರ ಮನೆ ಪೋರ್ಟಿಕೊದಲ್ಲಿ ಸದಾ ಗುಬ್ಬಿಗಳ ಚಿಲಿಪಿಲಿ. ಆಹಾರ ಡಬ್ಬಿ ಖಾಲಿಯಾದರೆ ಅವುಗಳೇ ಎಚ್ಚರಿಸುವಂತಿದೆ. ಅಕ್ಕಿ ನುಚ್ಚು, ನವಣೆ, ಸಜ್ಜೆ ಮೊದಲಾದ ಸಿರಿಧಾನ್ಯಗಳನ್ನು ಹಾಕಿದರೆ ವಿವಿಧ ಬಗೆಯ ಹಕ್ಕಿಗಳು ಹುಡುಕಿಕೊಂಡು ಬರುತ್ತವೆ. ಅವರ ಮನೆಯಲ್ಲಿ ಇಟ್ಟಿರುವ ಗೂಡುಗಳಲ್ಲಿ ಇದುವರೆಗೆ ಗುಬ್ಬಿಯಷ್ಟೇ ಅಲ್ಲ, ಮೈನಾ, ಬುಲ್‌ಬುಲ್ ಸೇರಿ ಎಂಟು ಬಗೆಯ ಪಕ್ಷಿಗಳು ಮರಿಗಳನ್ನು ಮಾಡಿವೆ. ಅಳಿಲುಗಳೂ ಕೂಡ ಅಲ್ಲಿ ಆಶ್ರಯ ಪಡೆದಿವೆ. ಯಾವ ಹಕ್ಕಿ ಯಾವ ಗೂಡಿನಲ್ಲಿ ಎಷ್ಟು ಮರಿ ಮಾಡಿತು ಎಂಬುದರ ದಾಖಲೆಯನ್ನು ಸಂಗ್ರಹಿಸಿರುವುದು ಅವರ ಬದ್ಧತೆಯನ್ನು ತೋರಿಸುತ್ತದೆ.

ಶಿರಸಿಯ ರಾಮಚಂದ್ರ ಹೆಗಡೆ, ಬೆಂಗಳೂರಿನ ವಿಜಯಾ ಭಟ್, ಶಿವಮೊಗ್ಗದ ಉಷಾ ಗುಂಡೂರಾವ್ ಮೊದಲಾದವರು ಪ್ರಕಾಶ್ ಅವರಿಂದ ಪ್ರೇರಿತರಾಗಿ ತಮ್ಮ ಮನೆಯಲ್ಲಿ ಆಹಾರ ಡಬ್ಬಿ ಇಟ್ಟು ಗುಬ್ಬಿಗಳ ಸಂಖ್ಯೆ ಹೆಚ್ಚಾಗಿರುವುದನ್ನು ಗಮನಿಸಿ ಖುಷಿಪಡುತ್ತಿದ್ದಾರೆ.

ಗುಬ್ಬಿಗಳಿಗೆ ಆಹಾರ ಒದಗಿಸುವುದರಿಂದ ಪರಿಸರಕ್ಕೂ ಲಾಭವಿದೆ. ಮರಿಗಳಿಗೆ ಪ್ರೋಟೀನ್‌ಯುಕ್ತ ಕೀಟಗಳನ್ನು ತಿನ್ನಿಸುವುದರಿಂದ ಬೆಳೆಗಳಿಗೆ ಕೀಟಬಾಧೆ ಕಡಿಮೆಯಾಗುತ್ತದೆ. ಹೂ–ಹಣ್ಣು ಗಿಡಗಳ ಪರಾಗಸ್ಪರ್ಶಕ್ಕೂ ಸಹಾಯವಾಗುತ್ತದೆ. ಪಕ್ಷಿ ವೀಕ್ಷಣೆ ಮಾನಸಿಕ ಒತ್ತಡವನ್ನು ತಗ್ಗಿಸಿ ಮನಸ್ಸಿಗೆ ಉಲ್ಲಾಸ ನೀಡುತ್ತದೆ ಎಂಬುದು ಅವರ ಅನುಭವ.

ಶಿವಮೊಗ್ಗ ಮತ್ತು ತುಮಕೂರಿನ ಊರುಕೆರೆಯಲ್ಲಿ ಸಾವಿರಕ್ಕೂ ಹೆಚ್ಚು ಗಿಡಗಳನ್ನು ನೆಟ್ಟು ಬೆಳೆಸಿರುವ ಅವರು, ಪರಿಸರ ಹಾನಿಗೆ ವಿರುದ್ಧ ಧ್ವನಿ ಎತ್ತುತ್ತಿದ್ದಾರೆ. ಮಗ ಅಭಯ್ ಮತ್ತು ಮಗಳು ರಾಘವಿ ಕೂಡ ಗಿಡಗಳಿಗೆ ನೀರೆರೆದು, ಮನೆ ತ್ಯಾಜ್ಯದಿಂದ ಗೊಬ್ಬರ ತಯಾರಿಸುವ ಬಗ್ಗೆ ಅರಿವು ಮೂಡಿಸುವ ಕಾರ್ಯದಲ್ಲಿ ತೊಡಗಿದ್ದಾರೆ.

ಪರಿಸರ ಕಾಳಜಿಗೆ ಅವರಿಗೆ 'ಸಮರ್ಥ ಕನ್ನಡಿಗ' ಪ್ರಶಸ್ತಿ ಹಾಗೂ 'ನಮ್ಮ ಪರಿಸರ ರಕ್ಷಕ' ರಾಜ್ಯ ಪ್ರಶಸ್ತಿ ಲಭಿಸಿದೆ. ಮಕ್ಕಳ ಕುತೂಹಲವನ್ನು ಪೋಷಿಸಿ, ಅದನ್ನು ಪರಿಸರ ಸಂರಕ್ಷಣೆಯ ಚಳವಳಿಯಾಗಿ ರೂಪಿಸಿರುವ ಪ್ರಕಾಶ್ ಅವರ ಕಾರ್ಯ ನಿಜಕ್ಕೂ ಮಾದರಿ. ಗುಬ್ಬಿಗಳ ಚಿಲಿಪಿಲಿಯಲ್ಲಿ ಅವರು ಕಂಡುಕೊಂಡಿರುವುದು ಕೇವಲ ಹಕ್ಕಿಗಳ ಪ್ರೀತಿ ಮಾತ್ರವಲ್ಲ; ಮಾನವ ಮತ್ತು ಪ್ರಕೃತಿ ನಡುವಿನ ನಂಟಿನ ಪುನರುಜ್ಜೀವನವೇ ಆಗಿದೆ.

ಮುನ್ನೋಟ 05-04-2026 ರಿಂದ 11-04-2026

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಅಲಂಕಾರಕ್ಕೆ ಹೆಚ್ಚು ಗಮನ ಕೊಡುವಿರಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಹೈನುಗಾರಿಕೆ ಮಾಡುವವರ ಆದಾಯ ಬಹಳ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲ ಮಾತ್ರ ಇರುತ್ತದೆ. ನರರೋಗ ತಜ್ಞರಿಗೆ ಬೇಡಿಕೆ ಹೆಚ್ಚುತ್ತದೆ. ನರ ದೌರ್ಬಲ್ಯ ಇರುವವರು ಹೆಚ್ಚು ಎಚ್ಚರವಹಿಸಿ. ತಾಯಿಯಿಂದ ನಿರೀಕ್ಷೆಗೆ ಮೀರಿ ಸಹಕಾರ ದೊರೆಯುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಗುರುಹಿರಿಯರು ನಿಮ್ಮ ಬಗ್ಗೆ ಸಹಾನುಭೂತಿ ತೋರುವರು. ಆಸ್ತಿ ಮಾಡುವ ಯೋಗವಿದೆ. ಹೈನುಗಾರಿಕೆ ಮಾಡುವವರ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳು ಹೆಚ್ಚು ಶ್ರಮಪಟ್ಟು ಓದಲೇಬೇಕು. ವೈದ್ಯಕೀಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರಿಗೆ ಲಾಭವಿದೆ. ಪ್ರೀತಿ, ಪ್ರೇಮದಲ್ಲಿ ಇರುವವರಿಗೆ ಯಶಸ್ಸು ದೊರೆಯುತ್ತದೆ. ವೃತ್ತಿಯಲ್ಲಿ ಸ್ವಲ್ಪ ಕಿರಿಕಿರಿಗಳಿದ್ದು, ಅದನ್ನು ನಿಭಾಯಿಸಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಅಲಂಕಾರದ ಬಗ್ಗೆ ಬಹಳಷ್ಟು ಚಿಂತೆ ಮಾಡುವಿರಿ. ಆದಾಯವು ಉತ್ತಮವಾಗಿರುತ್ತದೆ. ನಿಮ್ಮ ಧರ್ಮ ಕಾರ್ಯಗಳಿಗೆ ಬಂಧುಗಳ ಸಹಕಾರ ಸಿಗಬಹುದು. ಹಿರಿಯರ ಆಸ್ತಿ ದೊರೆಯುವ ಸಂದರ್ಭವಿದೆ. ಹರಿತವಾದ ಆಯುಧಗಳನ್ನು ಉಪಯೋಗಿಸುವಾಗ ಗಾಯಗಳಾಗಬಹುದು. ಸಂಗಾತಿಯಿಂದ ಎಲ್ಲ ರೀತಿಯ ಸಹಕಾರ ನಿಮಗೆ ದೊರೆಯುತ್ತದೆ. ವೃತ್ತಿಯಲ್ಲಿ ಸ್ವಲ್ಪ ಕಸಿವಿಸಿಗಳಿರುತ್ತವೆ. ಸರ್ಕಾರಿ ಕೆಲಸದಲ್ಲಿರುವವರಿಗೆ ಕೆಲಸದ ಒತ್ತಡ ಹೆಚ್ಚಾಗುವ ಸಾಧ್ಯತೆಗಳಿವೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಮನಸ್ಸಿನಲ್ಲಿ ಸಂತೋಷವಿದ್ದರೂ ಒಂದು ರೀತಿಯ ಚಿಂತೆ ನಿಮ್ಮನ್ನು ಕಾಡುತ್ತಿರುತ್ತದೆ. ಈಗ ಆದಾಯವು ತಕ್ಕಮಟ್ಟಿಗೆ ಇರುತ್ತದೆ. ಬಂಧುಗಳು ಸಹಕರಿಸುವ ನೆಪದಲ್ಲಿ ನಿಮಗೆ ತೊಂದರೆ ಕೊಡಬಹುದು. ಹಿರಿಯರ ಆಸ್ತಿಯನ್ನು ಅಭಿವೃದ್ಧಿ ಮಾಡಬಹುದು. ಎಲೆಕ್ಟ್ರಾನಿಕ್ ಉಪಕರಣಗಳ ಮಾರಾಟಗಾರರಿಗೆ ವ್ಯಾಪಾರ ಸ್ವಲ್ಪ ಕುಂಠಿತವಾಗಬಹುದು. ಈಗ ಲೇವಾದೇವಿ ವ್ಯವಹಾರ ಮಾಡುವುದು ಖಂಡಿತ ಬೇಡ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಮನಸ್ಸಿನಲ್ಲಿ ಸರಿಯಾದ ನಿರ್ಧಾರವಿಲ್ಲದೆ ಒದ್ದಾಡುವಿರಿ. ಆದಾಯವು ಕಡಿಮೆ ಇದ್ದು, ನಿಮ್ಮ ಸಂಗಾತಿಯಿಂದ ಆದಾಯವನ್ನು ನಿರೀಕ್ಷೆ ಮಾಡಬಹುದು. ಕೃಷಿಯಿಂದ ನಿರೀಕ್ಷಿತ ಆದಾಯವಿಲ್ಲದಿದ್ದರೂ, ನಷ್ಟ ಇರುವುದಿಲ್ಲ. ಕೃಷಿಭೂಮಿ ಮಾರಾಟ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಕೆಲವರಿಗೆ ಮೂಳೆಯ ತೊಂದರೆಗಳು ಕಾಣಿಸಬಹುದು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ನಿಮ್ಮ ಸ್ವಂತ ಬುದ್ಧಿಯಿಂದ ಮುನ್ನಡೆಯುವುದು ಉತ್ತಮ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಆದರೆ ಖರ್ಚು ಹೆಚ್ಚಾಗುವ ಸಂದರ್ಭಗಳಿವೆ. ಸಂಗಾತಿ ಕಡೆಯ ಬಂಧುಗಳಿಂದ ಕಿರಿಕಿರಿ ಹೆಚ್ಚಾಗಬಹುದು. ವೃತ್ತಿಯಿಂದ ಬಂದ ಹಣದಲ್ಲಿ ಆಸ್ತಿ ಮಾಡಿಕೊಳ್ಳುವ ಯೋಗವಿದೆ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹೆಚ್ಚು ಶ್ರಮಪಡಬೇಕಾಗುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ವಾರದ ಆರಂಭದಲ್ಲಿ ಬಹಳ ಆನಂದವಿರುತ್ತದೆ. ಆದಾಯವು ನಿರೀಕ್ಷಿತ ಮಟ್ಟದಲ್ಲಿ ಇರುವುದಿಲ್ಲ. ನಿಮ್ಮ ಕೆಲವೊಂದು ವಿಷಯಗಳಿಗೆ ಮಾತ್ರ ಹಿರಿಯರು ಸಹಕರಿಸುವರು. ವಿದೇಶದಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಅನುಕೂಲತೆಗಳು ಹೆಚ್ಚುತ್ತವೆ. ಉಷ್ಣ ಸ್ಥಾವರಗಳಲ್ಲಿ ಕೆಲಸ ಮಾಡುವವರು ಎಚ್ಚರದಿಂದಿರಿ. ಸಂಗಾತಿಯಿಂದ ನಿಮಗೆ ಅನುಕೂಲವಾಗುತ್ತದೆ. ದ್ರವರೂಪದ ವಸ್ತುಗಳನ್ನು ಮಾರಾಟ ಮಾಡುವವರ ಆದಾಯ ಹೆಚ್ಚುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ನಿಮ್ಮಲ್ಲಿ ಸ್ಥಿರತೆ ಕಡಿಮೆ ಇರುತ್ತದೆ. ಆದಾಯವು ಅವಶ್ಯವನ್ನು ಪೂರೈಸುತ್ತದೆ. ವಿದೇಶದಲ್ಲಿ ಆಸ್ತಿ ವ್ಯವಹಾರ ಮಾಡುವವರಿಗೆ ಲಾಭ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರುತ್ತದೆ. ಮಕ್ಕಳ ಏಳಿಗೆಯಲ್ಲಿ ಸ್ವಲ್ಪ ಹಿನ್ನಡೆ ಇರುತ್ತದೆ. ಮೂತ್ರ ಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ನಿಮ್ಮ ಸಂಗಾತಿಯಿಂದ ನಿರೀಕ್ಷಿತ ಸಹಕಾರ ಸಿಗುವುದು ಕಡಿಮೆ. ಪುಸ್ತಕ ವ್ಯಾಪಾರಿಗಳಿಗೆ ವ್ಯವಹಾರದಲ್ಲಿ ಮಂದಗತಿ ಇರುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ವಿಶೇಷ ಗೌರವಕ್ಕೆ ಪಾತ್ರರಾಗುವಿರಿ. ಆದಾಯವು ನಿಮ್ಮ ಅಗತ್ಯವನ್ನು ಪೂರೈಸುವಷ್ಟಿರುತ್ತದೆ. ಸ್ವಂತ ಆಸ್ತಿ ಮಾಡಿಕೊಳ್ಳಲು ಮುಂದಾಗಬಹುದು. ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲ ಇರುತ್ತದೆ. ಫ್ಯಾಷನ್ ಡಿಸೈನಿಂಗ್ ಮಾಡುತ್ತಿರುವವರಿಗೆ ಬಹಳಷ್ಟು ಅನುಕೂಲವಿರುತ್ತದೆ. ಭೂ ಸಂಬಂಧಿ ವ್ಯವಹಾರಗಳಲ್ಲಿ ಜಗಳವಾಗಬಹುದು. ಸಂಗಾತಿಯಿಂದ ಅತಿ ಹೆಚ್ಚು ಆರ್ಥಿಕ ಸಹಕಾರ ಸಿಗುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಎಲ್ಲರೊಂದಿಗೂ ಬೆರೆಯಲು ಬಹಳ ಪ್ರಯತ್ನಪಡುವಿರಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಬಂಧುಗಳಲ್ಲಿ ಹೆಚ್ಚಿನವರು ನಿಮಗೆ ಸಹಕಾರ ನೀಡುವವರು. ಆಡಳಿತಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಯಶಸ್ಸು ಲಭಿಸುತ್ತದೆ. ಕೆಲವರಿಗೆ ಪಿತ್ತವಿಕಾರವಾಗಬಹುದು. ವೃತ್ತಿಯ ಸ್ಥಳದಲ್ಲಿ ನಿಮಗೆ ಹೊಸ ಸ್ಥಾನ ಸಿಗುವ ಸಾಧ್ಯತೆಗಳಿವೆ. ಅನಿರೀಕ್ಷಿತ ಖರ್ಚುಗಳು ಎದುರಾಗಬಹುದು.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಯಾರೊಂದಿಗೂ ಅಗೌರವಯುತವಾಗಿ ಮಾತನಾಡದಿರುವುದು ಬಹಳ ಒಳ್ಳೆಯದು. ದೃಢ ನಿರ್ಧಾರಗಳನ್ನು ಹೊಂದುವುದು ಬಹಳ ಮುಖ್ಯ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಕೃಷಿಯಿಂದ ಆದಾಯವಿರುತ್ತದೆ. ವಿದ್ಯಾರ್ಥಿಗಳಿಗೆ ಅತಿ ಹೆಚ್ಚು ಯಶಸ್ಸು ಪಡೆಯುವ ಯೋಗವಿದೆ. ತಂದೆಯ ಆರೋಗ್ಯದಲ್ಲಿ ವ್ಯತ್ಯಾಸವಾಗಬಹುದು. ಉದ್ಯೋಗದ ಸ್ಥಳದಲ್ಲಿದ್ದ ಕಿರಿಕಿರಿಗಳು ತಪ್ಪಿ ಸಂತೋಷ ಮೂಡುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ವೈಯಕ್ತಿಕ ಗೌರವವನ್ನು ಹೆಚ್ಚು ಮಾಡಿಕೊಳ್ಳಲು ಹೋಗಿ ಜನರನ್ನು ಕಳೆದುಕೊಳ್ಳುವಿರಿ. ಆದಾಯವು ಸ್ವಲ್ಪ ಏರಿಕೆ ಕಾಣುತ್ತದೆ. ಈಗ ಬಂಧುಗಳಿಂದ ಸಹಕಾರವನ್ನು ನಿರೀಕ್ಷೆ ಮಾಡಬಹುದು. ಆಸ್ತಿ ವ್ಯವಹಾರ ಮಾಡುವವರ ಆದಾಯ ನಿರೀಕ್ಷೆಗಿಂತ ಹೆಚ್ಚಿರುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಯಶಸ್ಸು ಇರುವುದಿಲ್ಲ.

ಪದಬಂಧ 2938



ಮೇಲಿಂದ ಕೆಳಕ್ಕೆ

1. ಶ್ರೀಗಂಧದ ಕಾಡಿನಂತೆ ಹಬ್ಬಿರುವ ಕನ್ನಡ ಸಿನಿಮಾ ರಂಗ	5
2. ನಮ್ರತೆ ನಾಜೂಕಿನ ಕಣ್ಣು	3
3. ಸೊನ್ನೆಯಾಗಿ ಸುತ್ತಿಕೊಳ್ಳುವ ಹಾವಿನ ಮೇಲೆ ಮಲಗಿದವನು	5
4. ಪರಸ್ಪರ ಸೇಡು ತೀರಿಸಿಕೊಳ್ಳುವ ಅಲ್ಪಖಾರ	4
6. ಚಿಕ್ಕ ಹೆಜ್ಜೆ ಹಾಕುವ ಮಗುವಿನ ಕಿರಿದಾದ ಪಾದ	4
8. ಚಾಂದ್ರಮಾಸದ ಮೂರನೆ ದಿನ	3
11. ತಲೆಕೆಳಗಾದ ಹಾಡುಗಾರಿಕೆ	3
12. ಮನೆಯ ಒಳಹೊರಗೆ ಓಡಾಡಬೇಕಾದರೆ ದಾಟಬೇಕಾದ ಬಾಗಿಲ ಮಂಗಳ ತಡೆ	3
13. ಇದು ದೊಡ್ಡ ಶ್ರೇಷ್ಠ ಕಡಲು	5
14. ಹುರಿದು ಖಾರ ಹಚ್ಚಿದ ಕಾಳುಗಳ ಬೆರಕೆ	4
15. ಅರಿಷ್ಟಕ್ಕೆ ಸಮನಾದ ಶ್ರೇಷ್ಠ	3
16. ತಿಂಗಳ ಆದಿಯಲ್ಲಿ ಬರುವ ಪಗಾರದ ದಿವಸ	5
17. ಹೇಷಾರವ ಕಟ್ಟಿದ ಕ್ಷೀರ	4
19. ಸಸಿ ನೆಡಲು ಭೂಮಿಗೆ ಮಾಡುವ ಸಂಸ್ಕಾರ	3

ಎಡದಿಂದ ಬಲಕ್ಕೆ

1. ಸುಂದರ ಶಶಿ ಮುಖಿ	5
4. ಪ್ರಥಮ ನೋಟದಲ್ಲಿ ಆಮೋದದ ವಿನೋದ	3
5. ಮಹಾಯಾಗದಲ್ಲಿ ಅವಾಹನೆಯಾಗುವ ಗಂಡು ಶ್ರೇಷ್ಠ	5
7. ಹೊಸ ಸಂಕೇತದ ಬಾವುಟ	5
9. ಕಾಳಿಂಗ ಸರ್ಪಕ್ಕೆ ಉತ್ತರಭಾರತದ ಪಲಕು	3
10. ರಸವನ್ನು ಆಸ್ವಾದಿಸುವ ನಾಲಿಗೆ	3
11. ಹಾಸ್ಯದ ಬೆಳಕು ಬೆಳದಿಂಗಳಿನಂತೆ ಹರಡಿದೆ	5
14. ದನಕ್ಕೆ ಗ್ರಾಸ ಒದಗಿಸುವ ಬಯಲು	5
16. ಸಂಗ್ರಹಿತ ಲೇಖನಗಳ ಹೊತ್ತಿಗೆ	3
18. ಬಂದಿರುವುದಕ್ಕೆ ದಾಖಲೆ	3
19. ಕೇರಳದಲ್ಲಿ ಪ್ರಚಲಿತ ಜ್ಯೋತಿಷ್ಯದ ಎಂಟರ ಶುಭ ಪ್ರಶ್ನಾವಳಿ	5
20. ನಗೆಯಲ್ಲಿ ಮುಳುಗದೆ ತುಟಿಯಂಚಿನಲ್ಲಿ ತೇಲಿಬಿಡುವ ತಿಳಿ ಹಾಸ	5
21. ಹೆದರಿಕೆ ಮತ್ತು ಭಯಕ್ಕೊಂದು ಪರ್ಯಾಯ	3
22. ಸಿದ್ಧಾಂತವನ್ನೊಳಗೊಂಡ ಶರಣರ ನುಡಿ	5

ಪದಬಂಧ ಉತ್ತರ -2937

ಮೇಲಿಂದ ಕೆಳಕ್ಕೆ

1.ನಿರುಪಮ 2.ದನಗಾಹಿ 3.ಅಧಿಷ್ಠಾನ 4.ಶಮಂತಕ 7.ಹಾಲಕ್ಕಿಜನ 8.ಮಹಾಜನತೆ 9. ಮನೋಕಾಮನೆ 10.ಹಳೆಗನ್ನಡ 12.ವಜ್ರದೇಹ 13.ದ್ರವ್ಯಪತಿ 15.ಲಕಲಕ 16. ಲೆಕ್ಕಾಚಾರ

ಎಡದಿಂದ ಬಲಕ್ಕೆ

1.ನಿತ್ಯಾನಂದ 3. ಅಪಭ್ರಂಶ 5. ನರಸಾಂಬುಧಿ 6.ಮಹಾಮಹಿಮ 9.ಮನಮೋಹಕ 11.ಜಟಕಾ 12.ವನಸಾಂದ್ರತೆ 14.ನೆಲಗಡಲೆ 17.ಪವಿತ್ರನೆಲ 18.ಹಸ್ತಪ್ರತಿ 19.ಕರಭಾರ

ಕೊಂಕಣಿ ವಿಮರ್ಶೆಗೆ ಹೊಸ ಹೊಳಪು: ಹೆನ್ರಿ ಮೆಂಡೋನ್ಸ

• ವಿಕ್ರಂ ಕಾಂತಿಕೆರೆ

ಉಡುಪಿ ಜಿಲ್ಲೆಯ ಪೆರ್ನಾಲ್‌ನಲ್ಲಿ ಬೆಳೆದು, ಮುಂಬೈಯಲ್ಲಿ ಉದ್ಯೋಗ ಆರಂಭಿಸಿ ಸಂಕಷ್ಟಕ್ಕೆ ಸಿಲುಕಿದ ಸಂದರ್ಭದಲ್ಲಿ ಮಂಗಳೂರಿಗೆ ಬಂದು ನೆಲೆಸಿದವರು ಎಚ್.ಎಂ. ಪೆರ್ನಾಲ್ ಎಂದೇ ಪರಿಚಿತರಾದ ಹೆನ್ರಿ ಮೆಂಡೋನ್ಸ. ಕನ್ನಡದಲ್ಲಿ ಸಾಹಿತ್ಯ ಕೃಷಿ ಆರಂಭಿಸಿದ ಅವರು, ಬಳಿಕ ಕೊಂಕಣಿ ಭಾಷೆಯತ್ತ ತಿರುಗಿ ನಿಯತಕಾಲಿಕೆ, ಅಂತರ್ಜಾಲ ಪತ್ರಿಕೆ ಮತ್ತು ಪ್ರಶಸ್ತಿ ಕಾರ್ಯಕ್ರಮಗಳ ಮೂಲಕ ಭಾಷೆ–ಸಾಹಿತ್ಯದ ಬೆಳವಣಿಗೆಗೆ ಶ್ರಮಿಸುತ್ತಿದ್ದಾರೆ. ಅವರ 'ಕೊಂಕಣಿ ಕಾವ್ಯಂ: ರುಪಾಂ ಆನಿ ರೂಪಕಾಂ' ಕೃತಿ 2025ನೇ ಸಾಲಿನಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಭಾಜನವಾಗಿದೆ. ಈ ಹಿನ್ನೆಲೆಯಲ್ಲಿ 'ಭಾನುವಾರದ ಪುರವಣಿ'ಗೆ ನೀಡಿದ ಸಂದರ್ಶನದ ಆಯ್ದ ಭಾಗ ಇಲ್ಲಿದೆ.


ಹೆನ್ರಿ ಮೆಂಡೋನ್ಸ ಚಿತ್ರ: ಫಕ್ರುದ್ದೀನ್ ಎಚ್

• 1975ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಮಾನ್ಯ ಮಾಡಿದ ಕೊಂಕಣಿ ಭಾಷಾ ಸಾಹಿತ್ಯವನ್ನು 1977ರಿಂದ ಪ್ರಶಸ್ತಿಗಳಿಗೂ ಪರಿಗಣಿಸುತ್ತಿದೆ. ಇಷ್ಟು ವರ್ಷಗಳಲ್ಲಿ ಇದೇ ಮೊದಲು ಸಾಹಿತ್ಯ ವಿಮರ್ಶಾ ಕೃತಿಯೊಂದನ್ನು ಪುರಸ್ಕರಿಸಿದೆ. ಇದರಿಂದ ಈ ಪ್ರಕಾರದ ಪುನರುಜ್ಜೀವನ ಆಗುವ ನಿರೀಕ್ಷೆ ಇದೆಯೇ?

ಕಾವ್ಯ, ಗದ್ಯ, ನಾಟಕ ಪ್ರಕಾರಗಳಷ್ಟು ಕೊಂಕಣಿಯಲ್ಲಿ ವಿಮರ್ಶಾ ಸಾಹಿತ್ಯ ಬೆಳೆಯಲಿಲ್ಲ. ಇಲ್ಲವೇ ಇಲ್ಲ ಎನ್ನಲು ಆಗುವುದಿಲ್ಲ, ಆದರೆ ಬೆರಳೆಣಿಕೆಯಷ್ಟು ಜನ ಮಾತ್ರ ಈ ಕ್ಷೇತ್ರದಲ್ಲಿ ಕೆಲಸ ಮಾಡಿದ್ದಾರೆ. ಕೃತಿಗಳನ್ನು ತೌಲನಿಕವಾಗಿ ನೋಡುವುದು, ವಸ್ತುವಿನ ವಿಶ್ಲೇಷಣೆ, ಸಿದ್ಧಾಂತಾಧಾರಿತ ವಿಮರ್ಶೆ–ಇವುಗಳ ಅಭ್ಯಾಸ ಕಡಿಮೆ. ಇಂತಹ ಸಂದರ್ಭದಲ್ಲಿ ವಿಮರ್ಶಾ ಕೃತಿಗೆ ಪ್ರಶಸ್ತಿ ಲಭಿಸಿರುವುದು ಮಹತ್ವದ್ದಾಗಿದೆ. ಇದರಿಂದ ಕೊಂಕಣಿಯಲ್ಲಿ ವಿಮರ್ಶಾ ಸಾಹಿತ್ಯ ಹೆಚ್ಚು ಚೇತರಿಸಿಕೊಳ್ಳುವ ಭರವಸೆ ಮೂಡಿದೆ.

• ನಿಮ್ಮ ಪ್ರಶಸ್ತಿ ಪಡೆದ ಕೃತಿಯ ಕುರಿತು ಸ್ವಲ್ಪ ವಿವರಿಸುವಿರಾ?

'ಕೊಂಕಣಿ ಕಾವ್ಯಂ: ರುಪಾಂ ಆನಿ ರೂಪಕಾಂ' ಎಂದರೆ 'ಕೊಂಕಣಿ ಕಾವ್ಯದ ರೂಪ ಮತ್ತು ರೂಪಕಗಳು' ಎಂಬರ್ಥ. ಇಪ್ಪತ್ತೈದು ಕವಿಗಳ ಕಾವ್ಯಗಳನ್ನು ಆಧಾರವಾಗಿ ತೆಗೆದುಕೊಂಡು ತೌಲನಿಕ ಅಧ್ಯಯನ ಮಾಡಿದ್ದೇನೆ. ಒಂದೇ ವಸ್ತುವನ್ನು ವಿಭಿನ್ನ ಕವಿಗಳು ಹೇಗೆ ರೂಪಕವಾಗಿ ಬಳಸಿದ್ದಾರೆ ಎಂಬುದನ್ನು ವಿಶ್ಲೇಷಿಸಲಾಗಿದೆ. ಉದಾಹರಣೆಗೆ, ನಾಯಿಯ ರೂಪಕವನ್ನು ಅರುಣ್ ಸಾಖರದಂಡೆ ಮತ್ತು ಆ್ಯಂಟನಿ ಬಾರ್ಕೂರ್ ವಿಭಿನ್ನ ರೀತಿಯಲ್ಲಿ ಬಳಸಿದ್ದಾರೆ. ರೂಪಾಯಿ ಎಂಬ ಸಂಕೇತವನ್ನು ವಿಲ್ಸನ್ ಕಟೀಲ್ ಮತ್ತು ರಾಜಯ್ ಪವಾರ್ ಬೇರೆ ಬೇರೆ ಅರ್ಥಗಳಲ್ಲಿ ಬಳಸಿದ್ದಾರೆ. ಜೊತೆಗೆ ವರ್ಗ ಸಂಘರ್ಷ, ಸ್ತ್ರೀ ಸಂವೇದನೆ ಮತ್ತು ವಿಮೋಚನೆಯ ವಿಚಾರಗಳನ್ನೂ ಕಾವ್ಯದಲ್ಲಿ ಹೇಗೆ ಬಿಂಬಿಸಲಾಗಿದೆ ಎಂಬುದರ ಮೇಲೂ ಗಮನ ಹರಿಸಲಾಗಿದೆ.

• ಸದ್ಯದ ಕೊಂಕಣಿ ಸಾಹಿತ್ಯದ ಸ್ಥಿತಿ ಹೇಗಿದೆ? ಬೆಳವಣಿಗೆಗೆ ಏನು ಅಗತ್ಯ?

ಕರ್ನಾಟಕ, ಗೋವಾ, ಕೇರಳ, ಮಹಾರಾಷ್ಟ್ರ ಮತ್ತು ಗುಜರಾತ್‌ಗಳಲ್ಲಿ ಕೊಂಕಣಿ ಪ್ರಚಲಿತದಲ್ಲಿದೆ. ಗೋವಾದಲ್ಲಿ ಸರ್ಕಾರದಿಂದ ಬೆಂಬಲ ಇದೆ. ಕರ್ನಾಟಕದಲ್ಲಿ ರಾಜ್ಯಭಾಷೆಯ ಸ್ಥಾನವಿಲ್ಲದ ಕಾರಣ ಸರ್ಕಾರದ ಸಹಾಯ ಸೀಮಿತ. ಓದುಗರು ಇದ್ದರೂ ಬರಹಗಾರರ ಸಂಖ್ಯೆ ಕಡಿಮೆಯಾಗುತ್ತಿದೆ. ಡಿಜಿಟಲ್ ಓದು ಹೆಚ್ಚಾಗಿದೆ. ಸುಮಾರು ಹದಿನೈದು ಪತ್ರಿಕೆಗಳಿವೆ. ಆದರೆ ಹೆಚ್ಚಿನವು ಧಾರ್ಮಿಕ ವಿಷಯಗಳಿಗೆ ಸೀಮಿತವಾಗಿವೆ. ಸಾಹಿತ್ಯ ಬೆಳೆಯಲು ಸಾಹಿತಿಗಳು ಮತ್ತು ಓದುಗರು ಒಟ್ಟಾಗಿ ಕೆಲಸ ಮಾಡಬೇಕು. ವೈಯಕ್ತಿಕ ಸಾಧನೆಗಿಂತ ಭಾಷೆಯ ಒಟ್ಟಾರೆ ಬೆಳವಣಿಗೆಯತ್ತ ಗಮನ ಕೊಡಬೇಕಿದೆ.

• ನೀವು ವೈಯಕ್ತಿಕವಾಗಿ ಭಾಷೆಗಾಗಿ ಕೈಗೊಂಡಿರುವ ಕೆಲಸಗಳ ಬಗ್ಗೆ ಹೇಳಿ.

ಕಳೆದ ಹದಿನಾಲ್ಕು ವರ್ಷಗಳಿಂದ 'ಕಿಟಾಲ್' ಅಂತರ್ಜಾಲ ಪತ್ರಿಕೆ ನಡೆಸುತ್ತಿದ್ದೇನೆ. 'ಆರ್ಸೊ' ಸಾಹಿತ್ಯ ಪತ್ರಿಕೆಯಲ್ಲಿ ಸಹ ತೊಡಗಿಸಿಕೊಂಡಿದ್ದೇನೆ. ಯುವ ಸಾಹಿತಿಗಳಿಗೆ ಪ್ರಶಸ್ತಿ ನೀಡುವ ಕಾರ್ಯವೂ ನಡೆಯುತ್ತಿದೆ. ಉದ್ಯಮಿಗಳಿಂದ ದೇಣಿಗೆ ಸಂಗ್ರಹಿಸಿ ಈ ಕಾರ್ಯಗಳನ್ನು ನಡೆಸುತ್ತಿದ್ದೇವೆ. ದಿನಕ್ಕೆ ಸುಮಾರು ಒಂದೂವರೆ ಸಾವಿರ ಮಂದಿ ವೆಬ್‌ಸೈಟ್‌ಗೆ ಭೇಟಿ ನೀಡುತ್ತಾರೆ. ಕೆಲವು ಲೇಖನಗಳನ್ನು ಓದುಗರು ನಂತರ ಓದಲು ಉಳಿಸಿಕೊಳ್ಳುತ್ತಾರೆ. ಹೀಗಾಗಿ ಇದು ಒಂದು ಆರ್ಕೈವ್ ಸ್ವರೂಪ ಪಡೆದುಕೊಂಡಿದೆ.

• ಕೊಂಕಣಿಗೆ ವಿವಿಧ ಲಿಪಿಗಳ ಬಳಕೆ ಇರುವುದರಿಂದ ಸಮಸ್ಯೆ ಉಂಟಾಗುತ್ತದೆಯೇ?

ಕೊಂಕಣಿ ವಿವಿಧ ರಾಜ್ಯಗಳಲ್ಲಿ ವಿಭಿನ್ನ ಲಿಪಿಗಳಲ್ಲಿ ಬರೆಯಲಾಗುತ್ತದೆ. ಅಧಿಕೃತ ಬಳಕೆಗಾಗಿ ದೇವನಾಗರಿ ಅನಿವಾರ್ಯ. ಆದರೆ ಕರ್ನಾಟಕದಲ್ಲಿ ಕನ್ನಡ ಲಿಪಿಯಲ್ಲೇ ಬರೆಯುವ ಅವಕಾಶ ಇದೆ. ತಂತ್ರಜ್ಞಾನದ ಸಹಾಯದಿಂದ ಲಿಪ್ಯಂತರ ಈಗ ಸುಲಭವಾಗಿದೆ. ಯುನಿಕೋಡ್ ಪಠ್ಯವನ್ನು ಪರಿವರ್ತಿಸಿದರೆ ಬಹುತೇಕ ನಿಖರವಾಗಿ ದೇವನಾಗರಿಯಲ್ಲಿ ಸಿಗುತ್ತದೆ. ಆದ್ದರಿಂದ ಲಿಪಿ ದೊಡ್ಡ ತೊಂದರೆ ಆಗುವುದಿಲ್ಲ. ಕೆಲ ಸಂದರ್ಭಗಳಲ್ಲಿ ಎರಡು ಲಿಪಿಗಳಲ್ಲಿಯೂ ಪ್ರಕಟಣೆ ಮಾಡಬೇಕಾಗುತ್ತದೆ.

• ನಿಮ್ಮ ಬಾಲ್ಯ ಮತ್ತು ಸಾಹಿತ್ಯ ಪ್ರವೇಶ ಹೇಗೆ?

ಪೆರ್ನಾಲ್‌ನಲ್ಲಿ ಚರ್ಚ್ ಆವರಣದಲ್ಲಿ ಬೆಳೆದದ್ದು. ಶಾಲೆ–ಕಾಲೇಜಿನಲ್ಲಿ ಕಾಸರಗೋಡು ವಾಸು ಆಚಾರ್ಯ, ಬಾಲಸುಬ್ರಹ್ಮಣ್ಯ ಅಯ್ಯರ್ ಮೊದಲಾದವರು ಸಾಹಿತ್ಯ ಆಸಕ್ತಿ ಮೂಡಿಸಿದರು. ಆರಂಭದಲ್ಲಿ ಕನ್ನಡದಲ್ಲೇ ಬರೆಯುತ್ತಿದ್ದೆ. 'ಅಮ್ಚೊ ಯುವಕ್' ಪತ್ರಿಕೆಗೆ ಬರೆಯಲು ಆರಂಭಿಸಿದ ಬಳಿಕ ಕೊಂಕಣಿಯಲ್ಲಿ ಬರವಣಿಗೆ ಮುಂದುವರಿಯಿತು.

• ಸಾಹಿತ್ಯ ಕ್ಷೇತ್ರಕ್ಕೆ ಬರಲು ಪ್ರೇರಣೆ ಏನು?

ದೈಹಿಕವಾಗಿ ದುರ್ಬಲವಾಗಿದ್ದ ಕಾರಣ ಕ್ರೀಡೆಯಲ್ಲಿ ಭಾಗವಹಿಸಲು ಆಗುತ್ತಿರಲಿಲ್ಲ. ಓದಿನತ್ತ ತಿರುಗಿದೆ. ಪದವಿಯ ನಂತರ ಗಂಭೀರ ಓದು ಆರಂಭವಾಯಿತು. ಪುಸ್ತಕಗಳು ಹೊಸ ಜಗತ್ತನ್ನು ಪರಿಚಯಿಸಿದವು. ಓದಿಲ್ಲದೆ ಬರವಣಿಗೆ ಸಾಧ್ಯವಿಲ್ಲ ಎನ್ನುವ ನಂಬಿಕೆ ಇನ್ನೂ ಇದೆ. ರಂಗಭೂಮಿಯೂ ನನ್ನ ಆಸಕ್ತಿಯ ಕ್ಷೇತ್ರ.

• ಕೊಂಕಣಿಯ ಭವಿಷ್ಯವನ್ನು ಹೇಗೆ ನೋಡುತ್ತೀರಿ?

ತಕ್ಷಣದ ಆತಂಕ ಏನೂ ಇಲ್ಲ. ಇನ್ನೂ ಹತ್ತು–ಹನ್ನೆರಡು ವರ್ಷ ಸ್ಥಿರವಾಗಿರುತ್ತದೆ. ಹಿಂದೆ ಹಲವರು ಕನ್ನಡದಲ್ಲೇ ಬರೆಯುತ್ತಿದ್ದರು. ಈಗ ಹೊಸ ತಲೆಮಾರು ಕೊಂಕಣಿಯತ್ತ ಬರುತ್ತಿದೆ. ಅವರಿಗೆ ಬೆಂಬಲ ನೀಡುವ ವಾತಾವರಣವೂ ರೂಪುಗೊಳ್ಳುತ್ತಿದೆ. ❖

ಜುಂಜಪ್ಪನ ಕಾವ್ಯದೊಳ್ ಸೀರೆ ಪ್ರಸಂಗ


ಜುಂಜಪ್ಪ ಕಾವ್ಯಕ್ಕೆ ಗಣೆ, ಅರೆವಾದ್ಯಗಳ ಸಾಥ್... ಚಿತ್ರಗಳು: ರಂಜು ಪಿ

• ವೀಣಾಶ್ರೀ

ಚಿಗುರು ಮೀಸೆಯ ಯಲಪೇನಹಳ್ಳಿಯ ಮಂಜುನಾಥನ ಹೆಗಲ ಮೇಲೆ ಕಂಬಳಿ, ಹಣೆ ಮೇಲೆ ವಿಭೂತಿ, ಸೊಂಟಕ್ಕೆ ಕಟ್ಟಿದ ಟವೆಲ್, ಬಿಳಿ ಪಂಚೆ, ಮುಖದಲ್ಲಿ ನಗು. ಆತ ಮೈಮರೆತು ಹಾಡುತ್ತಾನೆ:

ಅಕ್ಕಿ ಮಡುಲಕ್ಕಿ ಸುಕ್ಕೆ ಬಣ್ಣದ ಸೀರೆ
ಹಟ್ಟಿ ಗೌಡುಗುಳ ಮನಿಯಾಗೆ...

ಅವನ ಪಕ್ಕದಲ್ಲಿ ನಿಂತಿದ್ದ ಗಣೆ ರಾಮಣ್ಣ ಗಣೆ ವಾದ್ಯವನ್ನು ಮೃದುವಾಗಿ ನುಡಿಸುತ್ತಾರೆ. ಗಣೆಗೂ ಜುಂಜಪ್ಪನ ಕಾವ್ಯಕ್ಕೂ ಅವಿನಾಭಾವ ಸಂಬಂಧ. ಹಾಡಿನ ಜೀವವೇ ಅದು. ಇಡೀ ಸಭಾಂಗಣ ಕಿವಿಗೊಟ್ಟು ಕೇಳುತ್ತಿದೆ; ಆಗಾಗ ಚಪ್ಪಾಳೆಗಳಿಂದ ಮೆಚ್ಚುಗೆ ವ್ಯಕ್ತವಾಗುತ್ತಿದೆ.

ಆ ಮಂತ್ರಮುಗ್ಧ ಕ್ಷಣಗಳ ಮಧ್ಯೆ ನಡೆಯುತ್ತಿದ್ದದ್ದು ಮಹಿಳಾ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ವಿಶೇಷ ಕಾರ್ಯಕ್ರಮ–'ಸೀರೆಯ ಕಥೆಗಳು: ಜುಂಜಪ್ಪನ ಕಾವ್ಯದಿಂದ ಸೀರೆಯ ಸುತ್ತ'. 'ನೂರಕ್ಕೆ ನೂರು ಕರ್ನಾಟಕ' ಮತ್ತು 'ರೇಡಿಯೊ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ' ಸಹಯೋಗದಲ್ಲಿ ಬೆಂಗಳೂರಿನ ಕೋರಮಂಗಲದ 'ಇಂಡಿಯನ್ ಹೆರಿಟೇಜ್ ಅಕಾಡೆಮಿ'ಯಲ್ಲಿ ಈ ಕಾರ್ಯಕ್ರಮ ಜರುಗಿತು. ಹಾಡಿನ ಮೂಲಕವೇ ಸೀರೆ ಮತ್ತು ಹೆಣ್ಣಿನ ಸಂಬಂಧವನ್ನು ಅನಾವರಣಗೊಳಿಸಿದ ಅಪರೂಪದ ಕಾವ್ಯಧಾರೆ.

ಕಾವ್ಯದ ತುಣುಕನ್ನು ಹಾಡಿ ಮುಗಿಸಿದ ಕೂಡಲೇ ಆ ಯುವಕ ಅದರ ಅರ್ಥ ವಿವರಣೆಗೆ ಇಳಿಯುತ್ತಾನೆ. ಕೇಳುತ್ತಿರೋದು ಕೇವಲ ಕಾವ್ಯವಲ್ಲ; ಬದುಕಿನ ಕಥೆ.

ರಾಗಿ ಮಡುಲಕ್ಕಿ ನಾಗಾಭರಣದ ಸೀರೆ
ನಾಡಗೌಡುಗುಳ ಮನಿಯಾಗೆ...

ಕರ್ನಾಟಕದ ಕಾಡುಗೊಲ್ಲ ಸಮುದಾಯದ 'ಜುಂಜಪ್ಪನ ಕಾವ್ಯ'ವು ಜನಪದ ಮಹಾಕಾವ್ಯ. ಭಕ್ತಿ, ದೈನಂದಿನ ಬದುಕು, ಸಂಬಂಧಗಳ ಸೂಕ್ಷ್ಮತೆ–ಇವೆಲ್ಲವೂ ಇದರ ಪದ್ಯಗಳಲ್ಲಿ ಜೀವಂತವಾಗಿವೆ. 'ಸೀರೆಯ ಸುತ್ತ' ಎನ್ನುವ ಸನ್ನಿವೇಶದಲ್ಲಿ ಹೆಣ್ಣಿನ ಬಯಕೆ ಮತ್ತು ಅದರ ಹಿಂದೆ ಇರುವ ಮನಸ್ಥಿತಿಯನ್ನು ಕಾವ್ಯ ಅನಾವರಣಗೊಳಿಸುತ್ತದೆ.

ತುಮಕೂರು ಜಿಲ್ಲೆಯ ಸಿರಾ ತಾಲ್ಲೂಕಿನ ಬೇವಿನಹಳ್ಳಿಯ 'ಜಿಗುರು ಅಕಾಡೆಮಿ ಆಫ್ ಪರ್ಫಾರ್ಮಿಂಗ್ ಆರ್ಟ್ಸ್' ತಂಡ ಈ ಕಾವ್ಯವನ್ನು ವೇದಿಕೆಗೆ ತಂದಿತ್ತು. 15 ದಿನಗಳವರೆಗೂ ಮುಂದುವರಿಯಬಹುದಾದ ಈ ಮಹಾಕಾವ್ಯದ ಒಂದು ಭಾಗವನ್ನು ಮಾತ್ರ ಆಯ್ದು, 85 ವರ್ಷದ ಕೆಂಚಮ್ಮ, 63 ವರ್ಷದ ಮಡ್ನಕ್ಕ, 60 ವರ್ಷದ ಸಣ್ಣಮ್ಮ, 65 ವರ್ಷದ ಚಿಕ್ಕನಾಗಮ್ಮ ಮೊದಲು ಕಾವ್ಯವನ್ನು ಹಾಡಿ ವೇದಿಕೆ ಇಳಿದರು. ಬಳಿಕ ದ್ವಿತೀಯ ಪಿಯುಸಿ ಅಭ್ಯಾಸ ಮಾಡುತ್ತಿರುವ 17 ವರ್ಷದ ಮಂಜುನಾಥನ ಸರದಿ, ಈತನೇ ಕಾರ್ಯಕ್ರಮದ ಕೇಂದ್ರಬಿಂದು.

ಕಾವ್ಯದ ತಿರುಳು...

ಏಳು ಅಣ್ಣಂದಿರಿಗೆ ಒಬ್ಬಳು ತಂಗಿ. ಮನೆಯ ಮುದ್ದಿನವಳು. ಒಂದು ದಿನ ಕಟ್ಟಿಗೆ ತರಲು ಕಾಡಿಗೆ ಹೋದಾಗ, ಆಕೆಯ ಮೈಮೇಲಿದ್ದ ಸೀರೆ ಸುಂಟರಗಾಳಿಗೆ ಸಿಕ್ಕಿ ಹಾರಿ ಹೋಗುತ್ತದೆ. ಅಕಸ್ಮಾತ್ ಎದುರಾದ ಆ ಸ್ಥಿತಿ–ನಾಚಿಕೆ, ಭಯ, ಅಸಹಾಯಕತೆ ಒಟ್ಟಾಗಿ ಆಕೆಯನ್ನು ಆವರಿಸಿಕೊಳ್ಳುತ್ತವೆ.

ಓಡಿಬಂದು ಆಕೆ ಆಲದಮರದ ಹಿಂದೆ ಅಡಗಿಕೊಳ್ಳುತ್ತಾಳೆ. ಹೊರಗೆ ಬರಲು ಹೆದರುತ್ತಾ, ಕಣ್ಣೀರು ಸುರಿಸುತ್ತಾ ಕುಳಿತುಕೊಳ್ಳುತ್ತಾಳೆ.

ಅಷ್ಟರಲ್ಲಿ ಪೇಟೆಯಿಂದ ಮರಳುತ್ತಿದ್ದ ಅಣ್ಣಂದಿರು ಅದೇ ದಾರಿಯಲ್ಲಿ ಬರುತ್ತಾರೆ. ಯಾರೋ ಅಳುತ್ತಿರುವ ಶಬ್ದ ಕೇಳಿ ನಿಂತು, 'ಯಾರಮ್ಮ ನೀನು? ಭೂತವೋ, ಪ್ರೇತವೋ?' ಎಂದು ಕೇಳುತ್ತಾರೆ.

ಆಗ ಆಲದಮರದ ಹಿಂದಿನಿಂದ ಕೇಳಿಬರುವ ಧ್ವನಿ: 'ಒಡಹುಟ್ಟಿದ ತಂಗಿಯ ಧ್ವನಿಯೂ ಗೊತ್ತಾಗಲಿಲ್ಲವೇ ಅಣ್ಣ?'

ಆ ಒಂದು ವಾಕ್ಯವೇ ಸಂಬಂಧದ ಆಳವನ್ನು ತೆರೆದಿಡುತ್ತದೆ.

ಅಣ್ಣಂದಿರು ಆತಂಕದಿಂದ ಮುಂದೆ ಬಂದು ವಿಚಾರಿಸುತ್ತಾರೆ. 'ಯಾಕಮ್ಮಾ ಹೀಗೆ ಅಡಗಿಕೊಂಡಿದ್ದೀಯ?'

ಆಕೆ ಅಳುತ್ತಲೇ ಹೇಳುತ್ತಾಳೆ–'ನನ್ನ ಮೈಮೇಲಿದ್ದ ಸೀರೆ ಹಾರಿ ಹೋಗಿದೆ ಅಣ್ಣ... ನಾನು ಹೇಗೆ ನಿಮ್ಮ ಮುಂದೆ ಬರಲಿ?'

ತಂಗಿಯ ಸ್ಥಿತಿಯನ್ನು ಅರಿತ ಅಣ್ಣನ ಮನಸ್ಸು ಕರಗುತ್ತದೆ. 'ನಿನಗೆ ಎಂಥ ಉಡುಪು ಬೇಕೋ ಹೇಳು. ನೀನು ಹೇಳಿದ ಹಾಗೆಯೇ ತಂದು ಕೊಡುತ್ತೇವೆ' ಎಂದು ಧೈರ್ಯ ಕೊಡುತ್ತಾನೆ.

ಆದರೆ ತಂಗಿಯ ಬಯಕೆ ಸಾಮಾನ್ಯವಲ್ಲ. ಅದು ಕೇವಲ ಅಗತ್ಯವಲ್ಲ–ಅದು ಕಲ್ಪನೆಯ, ಆಸೆಯ, ಅತಿರೇಕದ ರೂಪ.

ಒಬ್ಬ ಅಣ್ಣನಿಗೆ–
'ಪ್ರತಿ ಎಳೆಯೂ ಬಂಗಾರದ ಎಳೆಯಾಗಿರಬೇಕು' ಎಂದು ಹೇಳುತ್ತಾಳೆ.

ಮತ್ತೊಬ್ಬನಿಗೆ–
'ನನ್ನ ಸೆರಗಿನಲ್ಲಿ ನಾಗಾಭರಣದ ರೂಪ ಕಾಣಬೇಕು' ಎಂದು ಬೇಡಿಕೊಳ್ಳುತ್ತಾಳೆ.

ಇನ್ನೊಬ್ಬನಿಗೆ–
'ನನ್ನ ಮಡಿಲಕ್ಕಿ ಬೀಳುವಾಗ ನಕ್ಷತ್ರದಂತೆ ಪಳಪಳನೆ ಹೊಳೆಯಬೇಕು' ಎಂದು ಹೇಳುತ್ತಾಳೆ.

ಹೀಗೆ ಪ್ರತಿಯೊಬ್ಬ ಅಣ್ಣನಿಗೂ ಒಂದೊಂದು ವಿಭಿನ್ನ ಬಯಕೆಯನ್ನು ಹೇಳುತ್ತಾಳೆ.

ತಂಗಿಯ ಮಾನ ಕಾಪಾಡುವುದು, ಅವಳ ಆಸೆಯನ್ನು ಈಡೇರಿಸುವುದು ಅಣ್ಣಂದಿರಿಗೆ ಕೇವಲ ಕರ್ತವ್ಯವಲ್ಲ, ಪ್ರೀತಿ. ತಮ್ಮ ಆಸ್ತಿಪಾಸ್ತಿಯನ್ನೇ ಮಾರಿ, ಬಂಗಾರದ ಎಳೆಗಳನ್ನು ನೇಯ್ದು, ಅವಳು ಕೇಳಿದಂತೆ ಸೀರೆಗಳನ್ನು ತಂದು ಕೊಡುತ್ತಾರೆ.

ಕೊನೆಗೆ ತಂಗಿ ಆ ಸೀರೆಗಳನ್ನು ತೊಟ್ಟು ಸಂತೋಷದಿಂದ ಊರಿನವರಿಗೆ ತೋರಿಸಲು ಹೊರಡುತ್ತಾಳೆ. ಆದರೆ ಮುಳ್ಳಿಗೆ ಸಿಕ್ಕಿ ಆ ಅಮೂಲ್ಯ ಸೀರೆ ಹರಿದುಹೋಗುತ್ತದೆ.

ಮತ್ತೆ ಆಕೆ ನಿಂತುಕೊಳ್ಳುತ್ತಾಳೆ–ಮತ್ತೆ ಅಣ್ಣಂದಿರ ಬಳಿಗೆ ಹೋಗಬೇಕಾದ ಪರಿಸ್ಥಿತಿ. ಮತ್ತೆ ಅದೇ ಬಯಕೆ, ಅದೇ ಹುಡುಕಾಟ. ಈ ಕಥೆ ಇಲ್ಲಿ ನಿಂತು ಹೋಗುವುದಿಲ್ಲ; ಅದು ಒಂದು ಚಕ್ರದಂತೆ ಮುಂದುವರಿಯುತ್ತದೆ.

ಇದು ಕೇವಲ ಸೀರೆಯ ಕಥೆಯಲ್ಲ. ಹೆಣ್ಣಿನ ಆಸೆ, ಅತೃಪ್ತಿ, ಸಂಬಂಧಗಳ ತ್ಯಾಗ ಮತ್ತು ಬದುಕಿನ ಅಂತ್ಯವಿಲ್ಲದ ಹುಡುಕಾಟದ ರೂಪಕ.

ಈ ಕಾವ್ಯವು ಕೃಷ್ಣಮೂರ್ತಿ ಎನ್. ಜಿ. ಹಾಗೂ ನರಸಿಂಹರಾಜು ಬಿ. ಕೆ. ಅವರ ಅರೆವಾದ್ಯದೊಂದಿಗೆ ಮಣೇವು ಹಾಕುವ ಮೂಲಕ ಕೊನೆಯಾಗುತ್ತದೆ. ಆಗ ಪ್ರೇಕ್ಷಕರು ಎದ್ದುನಿಂತು ಚಪ್ಪಾಳೆ ತಟ್ಟುತ್ತಾರೆ. ಹಿರಿಯ ಜೀವಗಳೇ ಹೆಚ್ಚಾಗಿದ್ದ ಸಭೆಯಲ್ಲಿ ಒಬ್ಬರು ಹೇಳಿದ ಮಾತು, ಎಲ್ಲರ ಮನದ ಮಾತಾಗಿತ್ತು: 'ಈ ಕಾವ್ಯವನ್ನು ಯೂಟ್ಯೂಬ್‌ನಲ್ಲಿ ನೋಡಿದ್ದೆ. ಆದರೆ ನೇರವಾಗಿ ಕೇಳಿದ ಅನುಭವವೇ ಬೇರೆ. ಮಂಜುನಾಥ ಇಷ್ಟು ಚಿಕ್ಕ ವಯಸ್ಸಿನಲ್ಲಿ ಇಷ್ಟೊಂದು ದೊಡ್ಡ ಪ್ರತಿಭೆ–ಅದ್ಭುತ'.

ಆ ಮಾತಿನಲ್ಲೇ ಆ ಸಂಜೆಯ ಸಾರವಿತ್ತು. ಇದು ಕೇವಲ ಒಂದು ಕಾರ್ಯಕ್ರಮವಲ್ಲ. ಪೀಳಿಗೆಯಿಂದ ಪೀಳಿಗೆಗೆ ಹರಿದು ಬಂದ ಸಂಸ್ಕೃತಿ, ಸ್ಮೃತಿ ಮತ್ತು ಬದುಕಿನ ಕಾವ್ಯ ಜೀವಂತವಾಗಿ ಮೂಡಿಬಂದ ಕ್ಷಣ. ❖


ಈ ಮಹಿಳೆಯರ ಎದೆಯಲ್ಲುಂಟು ಜುಂಜಪ್ಪ


ಮನೆಯಂಗಳದ ನೈದಿಲೆಗಳೊಂದಿಗೆ ಪುಷ್ಪಲತಾ

ತಾವರೆ, ನೈದಿಲೆ...

10ನೇ ಪುಟದಿಂದ...

ತೊಟ್ಟಿಗಳಲ್ಲಿ ನೀರು ನಿಂತಿರುವುದರಿಂದ ಸೊಳ್ಳೆಗಳ ಸಮಸ್ಯೆಯೂ ಎದುರಾಗುತ್ತದೆ. 'ನೀರು ಸ್ವಚ್ಛವಾಗಿಟ್ಟುಕೊಳ್ಳುವುದು ಬಹಳ ಮುಖ್ಯ. ನಿಯಮಿತವಾಗಿ ಹೊಸ ನೀರನ್ನು ಸೇರಿಸಿದರೆ ಸೊಳ್ಳೆಗಳ ಸಮಸ್ಯೆಯನ್ನು ನಿಯಂತ್ರಿಸಬಹುದು' ಎಂದು ಪುಷ್ಪಲತಾ ಹೇಳುತ್ತಾರೆ.

ಕೆಲವರು ಮೀನಿನ ಮರಿಗಳನ್ನು ಬಳಸುವ ಸಲಹೆ ನೀಡಿದರೂ, ಅದು ಯಾವಾಗಲೂ ಸೂಕ್ತವಲ್ಲ ಎಂಬುದನ್ನೂ ಅವರು ಅನುಭವದಿಂದ ಕಲಿತಿದ್ದಾರೆ.

ಹೀಗೆ ನಿತ್ಯದ ಆರೈಕೆಯ ನಡುವೆ, ಈ ಹವ್ಯಾಸ ಮತ್ತೊಂದು ರೂಪವನ್ನೂ ಪಡೆದುಕೊಂಡಿತು. ಅಂಗಳದ ಅಂದವನ್ನು ಹೆಚ್ಚಿಸಿದ್ದ ಈ ತೋಟ, ಅವರಿಗೊಂದು ಆದಾಯದ ದಾರಿಯನ್ನೂ ತೆರೆಯಿತು. ತಾವರೆ ಗಿಡಗಳು ಮತ್ತು ಗೆಡ್ಡೆಗಳಿಗೆ ಬೇಡಿಕೆ ಹೆಚ್ಚಾಗತೊಡಗಿತು. ಈಗ ಕೆಲವು ತಳಿಗಳಿಗೆ ₹250ರಿಂದ ₹2500ರವರೆಗೆ ಬೆಲೆ ಸಿಗುತ್ತದೆ. ವಿಶೇಷ ಬಣ್ಣದ ಹೊಸ ತಳಿಗಳಿಗೆ ಇನ್ನಷ್ಟು ಬೆಲೆ ಹೆಚ್ಚು.

'ಆರಂಭದಲ್ಲಿ ಇದು ಕೇವಲ ಕುತೂಹಲ. ಆದರೆ ಈಗ ಇದರಿಂದ ನನಗೆ ಸಂತೋಷವೂ, ಆದಾಯವೂ ಎರಡೂ ಸಿಗುತ್ತಿವೆ' ಎನ್ನುತ್ತಾರೆ ಪುಷ್ಪಲತಾ.

ಈ ಪಯಣದಲ್ಲಿ ಕುಟುಂಬವೂ ಅವರೊಂದಿಗೆ ಕೈಜೋಡಿಸಿದೆ. ಪುತ್ರಿಯರು ತೋಟದ ಹೂಗಳ ಫೋಟೊಗಳು, ವಿಡಿಯೊಗಳನ್ನು ತೆಗೆದು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳುತ್ತಾರೆ. ಅದನ್ನು ನೋಡಿ ಹಲವರು ಸಂಪರ್ಕಿಸುತ್ತಾರೆ. ಗಿಡಗಳನ್ನು ಸುರಕ್ಷಿತವಾಗಿ ಕೊರಿಯರ್ ಮಾಡುವಲ್ಲಿ ಪತಿ ವಿಜಯಕುಮಾರ್ ಕೈಜೋಡಿಸುತ್ತಾರೆ. ಹೀಗೆ ಇದು ಒಬ್ಬರ ಹವ್ಯಾಸದಿಂದ ಕುಟುಂಬದ ಒಟ್ಟುಗೂಡಿದ ಪ್ರಯತ್ನವಾಗಿ ಬೆಳೆದಿದೆ.


ಅರಳಿದ ತಾವರೆ

ಇತ್ತೀಚೆಗೆ ಮನೆಗಳಲ್ಲಿ ಪುಟ್ಟ ಕೊಳಗಳನ್ನು ನಿರ್ಮಿಸಿ ತಾವರೆ ಬೆಳೆಸುವ ಪ್ರವೃತ್ತಿ ಹೆಚ್ಚುತ್ತಿದೆ. ಕಚೇರಿಗಳಲ್ಲೂ ಅಲಂಕಾರಿಕವಾಗಿ ಇವುಗಳನ್ನು ಬೆಳೆಸಲು ಆಸಕ್ತಿ ಕಾಣುತ್ತಿದೆ. ಈ ಬದಲಾವಣೆ ಪುಷ್ಪಲತಾ ಅವರ ಪ್ರಯತ್ನಕ್ಕೂ ಹೊಸ ಅರ್ಥ ನೀಡಿದೆ.

ಅಂಗಳದ ಒಂದು ಮೂಲೆಯಲ್ಲಿ ನಿಂತು ಹೂಗಳನ್ನು ನೋಡುತ್ತಿರುವಾಗ, ಇದು ಕೇವಲ ತೋಟವಲ್ಲ ಎಂಬುದು ಸ್ಪಷ್ಟವಾಗುತ್ತದೆ. ಇದು ಒಂದು ಕನಸಿನ ರೂಪ. ಕೊಳವಿಲ್ಲದ ಮನೆಯಲ್ಲೂ ತಾವರೆ ಅರಳಬಹುದು ಎಂಬ ನಂಬಿಕೆಯ ರೂಪ.

ಒಮ್ಮೆ ಅರಳಿದ ಆ ಮೊದಲ ಹೂವಿನಂತೆ, ಒಂದು ಚಿಕ್ಕ ಆಸೆಯೂ ಜೀವನವನ್ನು ನಿಧಾನವಾಗಿ ಬದಲಾಯಿಸಬಲ್ಲದು ಎಂಬುದಕ್ಕೆ 'ಪುಷ್ಪಗಿರಿ' ಸಾಕ್ಷಿಯಾಗಿದೆ. ❖

ಕಥೆ

ಮೂಲ: ಪ್ರೇಮಚಂದ್
ಕನ್ನಡಕ್ಕೆ: ಡಿ.ಎನ್. ಶ್ರೀನಾಥ್
ಅವರ **ಮಹಾತೀರ್ಥ**

prajavani.net/short-story

ಕವನ

ಎಡೆಯೂರು ಪಲ್ಲವಿ, ಸ್ಮಿತಾ ಅಮೃತರಾಜ್. ಸಂಪಾಜೆ, ಸದಾಶಿವ ಸೊರಟೂರು, ಲೋಕೇಶ ಬೆಕ್ಕಳಲೆ, ಕುಮಾರ ಬೇಂದ್ರೆ, ಗಿರಿಜಾಶಂಕರ್ ಜಿ ಎಸ್ ಇಡೇಹಳ್ಳಿ ಅವರ **ಯುದ್ಧ ಕವಿತೆಗಳ ಗುಚ್ಛ**


www.prajavani.net/poetry

ಸಾದರ ಸ್ವೀಕಾರ

ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in

ಮೊದಲ ಓದು



ಹೇಳವ್ವ ಚಾಮುಂಡಾ... ಯಾರು ನೀನು?
ಲೇ: ಪಿ.ವಿ. ನಂಜರಾಜ ಅರಸು
ಪ್ರ: ಅಭಿರುಚಿ ಪ್ರಕಾಶನ
ಸಂ: 9980560013

ಚಾಮುಂಡಿ ಸನ್ನಿಧಿಯಲ್ಲಿ ಸತ್ಯಶೋಧದ ಹಾದಿಯಲ್ಲಿ...


ಇತಿಹಾಸ ತಜ್ಞ ಪಿ.ವಿ.ನಂಜರಾಜ ಅರಸು ಅವರು ರಮ್ಯ ನಿರೂಪಣೆಯಿಂದ ಮೈಸೂರು ಚಾಮುಂಡೇಶ್ವರಿಯ ಕಥೆಯನ್ನು 'ಹೇಳವ್ವ ಚಾಮುಂಡಾ... ಯಾರು ನೀನು?' ಕೃತಿಯಲ್ಲಿ ಅನಾವರಣ ಮಾಡಿದ್ದಾರೆ. ಮೈಸೂರು ಮತ್ತು ಅರಸು ಸಾಮ್ರಾಜ್ಯದ ಬಗ್ಗೆ ಅವರಿಗಿರುವ ಅಪಾರ ತಿಳಿವಳಿಕೆ ಇಲ್ಲಿ ಒಡಮೂಡಿದೆ. ಸಂಶೋಧನಾ ನೋಟದಿಂದಲೇ ಅವರ ಶ್ರಮ ಒಂದು ಆಕೃತಿಯ ರೂಪವನ್ನು ಹೀಗೆ ಪಡೆದುಕೊಂಡಂತಿದೆ.

ಪೌರಾಣಿಕ, ಜನಪದ, ನಂಬಿಕೆಗೆ ಇರುವ ಐತಿಹ್ಯ ಮತ್ತು ಜನಪದ ಆಕರ ಸಾಮಗ್ರಿಗಳ ಮೂಲಕ ಸತ್ಯಶೋಧವನ್ನು ಲೇಖಕ ಮಾಡಿದ್ದಾರೆ. ಮೈಸೂರಿನ ನಾಡದೇವಿ ಚಾಮುಂಡೇಶ್ವರಿಯೇ ಕೃತಿಯ ಕೇಂದ್ರ. ದೇವಿಯ ಹುಟ್ಟು ಬೆಳವಣಿಗೆ ಮತ್ತು ಆಕೆಯ ಬಗ್ಗೆ ಇರುವ ನಂಬಿಕೆಗಳ ಅವಲೋಕನ ಇಲ್ಲಿದೆ. ದೇವಿ ನೆಲೆಗೊಂಡ ಬೆಟ್ಟ, ಊರು, ಅರಸು ಮನೆತನದ ದೇವತೆಯಾದ ಇತಿಹಾಸವನ್ನೂ ಹೇಳುತ್ತಾರೆ.

'ಚಾಮುಂಡಿ ಸನ್ನಿಧಿಯಲ್ಲಿ ನೀ ಕೇಳಿದ ಪ್ರಶ್ನೆಗೆ ಉತ್ತರ...' ಎನ್ನುವ ಲೇಖಕರ ಮಾತು ಕಾಂತ ಸಂವಹನದಿಂದಲೇ ತೆರೆದುಕೊಳ್ಳುತ್ತದೆ. 'ಕೋಣನ ಅರೆಯ ಮೇಲೆ', 'ವೇದಗಳ ಅರಣ್ಯದೊಳಗೆ'...ಸೇರಿದಂತೆ 'ದಸರಾ ಜಂಬೂ ಸವಾರಿ: ಮಹಾರಾಜರಿಂದ ಚಾಮುಂಡಿವರೆಗೆ' ಹೀಗೆ ಒಟ್ಟು ಹದಿಮೂರು ಅಧ್ಯಾಯಗಳನ್ನು ಈ ಕೃತಿ ಒಳಗೊಂಡಿದೆ.

'ಇದೊಂದು ರೀತಿಯ ಪಯಣ... ಬೌದ್ಧಿಕ ಪಯಣ... ಸತ್ಯಾನ್ವೇಷಣೆಯ ಪಯಣ... ಚಾಮುಂಡಿ ಕುರಿತ ಸತ್ಯಾನ್ವೇಷಣೆಯ ಬೌದ್ಧಿಕ ಪಯಣ...' ಎಂದು ಅನ್ವೇಷಣೆಯ ಹಾದಿಯಲ್ಲಿ ಎಂಬ ಅಧ್ಯಾಯವನ್ನು ಲೇಖಕರು ಆರಂಭಿಸುತ್ತಾರೆ. ಚಾಮುಂಡಿ ಹುಟ್ಟು ಮತ್ತು ವಿಕಾಸದ ಬಗ್ಗೆ ಇರುವ ಕಥನಗಳನ್ನು ಲೇಖಕರು ವೇದ ಮತ್ತು ಪುರಾಣಗಳಲ್ಲಿ ಹುಡುಕಿದ್ದಾರೆ. ಅಧ್ಯಾಯದ ಕೊನೆಗೆ 'ವೇದಪ್ರಿಯರು ಮತ್ತು ಪುರಾಣಪ್ರಿಯರ ವಾದ–ಪ್ರತಿವಾದಗಳನ್ನು ಆಲಿಸಿದಾಗ ಹಾಗೂ ಈ ಪಾಮರರು ಮತ್ತು ಪಂಡಿತರ ಮಾತುಗಳನ್ನು ಗಮನಿಸಿದಾಗ ಇವುಗಳಲ್ಲಿ ಯಾವುದೇ ರೀತಿಯ ಏಕಸಾಮ್ಯತೆ ಕಾಣಿಸೋದಿಲ್ಲ' ಎನ್ನುವ ನಿಲುವನ್ನು ಪ್ರಕಟಿಸಿ ಸತ್ಯ ಶೋಧಕ್ಕೆ 'ಸ್ವಯತ್ನವೇ ಶ್ರೇಷ್ಠಮಾರ್ಗ' ಎಂದು ತಮ್ಮ ಸಂಶೋಧನಾ ವಿಧಾನದಲ್ಲಿ ವಿಸ್ತಾರಗೊಂಡು ಸ್ಪಷ್ಟ ರೂಪವನ್ನು ಪಡೆದ ಸುಂದರ ಕೃತಿ.

ಪುಟ: 372 ₹650



ನನ್ನೂರ ನೆನಪುಗಳು
ಲೇ: ಉತ್ತನೂರು ವೆಂಕಟೇಶ
ಪ್ರ: ಕದಂಬ ಪ್ರಕಾಶನ
ಸಂ: 77955 06693

ಕಾಡುವ ಊರಿನ ನೆನಪಿಗೆ ಅಕ್ಷರ ರೂಪ


ಹುಟ್ಟೂರು ಎಂಬುದು ಪ್ರತಿಯೊಬ್ಬರೂ ಹಂಬಲಿಸುವ ನೆಮ್ಮದಿ ನೀಡುವ ಸ್ಥಳ. ಬದುಕು ಕಟ್ಟಿಕೊಳ್ಳಲು ಊರು ಬಿಟ್ಟರೂ, ಆಗಾಗ್ಗ ಹುಟ್ಟೂರಿಗೆ ಭೇಟಿ ನೀಡಿ ಸಂಭ್ರಮಿಸುವ ಸುಖವನ್ನು ಬಹುತೇಕರು ವ್ಯಕ್ತಪಡಿಸಿರುತ್ತಾರೆ. ಹೀಗೆ ಹುಟ್ಟೂರು ಮತ್ತು ಅಲ್ಲಿ ಕಳೆದ ಪ್ರತಿಯೊಂದು ಕ್ಷಣವನ್ನು ಸಂಭ್ರಮಿಸಿ ಅದಕ್ಕೆ ಅಕ್ಷರ ರೂಪವನ್ನು ಕೆಲವರು ನೀಡಿದ್ದಾರೆ. ಅಂಥದ್ದರಲ್ಲಿ ಉತ್ತನೂರು ವೆಂಕಟೇಶ ಅವರು 'ನನ್ನೂರ ನೆನಪುಗಳು' ಒಂದು.

ವೆಂಕಟೇಶ ಅವರು ಈ ಕೃತಿಯಲ್ಲಿ ತಮ್ಮ ಹುಟ್ಟೂರಾದ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಉತ್ತನೂರು ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ. 60ರ ದಶಕದಲ್ಲಿ ಊರಿನ ಚಿತ್ರಣ ಹೇಗಿತ್ತು ಎಂಬುದನ್ನು ಇಲ್ಲಿ ವಿವರಿಸಿದ್ದಾರೆ. ಚಾರಿತ್ರಿಕ ಹಾಗೂ ಸಾಂಸ್ಕೃತಿಕವಾಗಿ ತಮ್ಮ ಹುಟ್ಟೂರಿನ ಸೊಬಗನ್ನು ಇಲ್ಲಿ ದಾಖಲಿಸಿದ್ದಾರೆ. ಆಗಿನ ಸಂದರ್ಭದಲ್ಲಿ ಕೊರತೆಗಳ ನಡುವೆಯೂ ಒಂದು ಬಗೆಯ ಉಲ್ಲಾಸದ ಬದುಕನ್ನು ಆವರಿಸಿಕೊಂಡಿದ್ದ ಕಾಲಘಟ್ಟದ ಊರಿನ ಕಥನವನ್ನು ಲೇಖಕರು ಕಟ್ಟಿಕೊಟ್ಟಿದ್ದಾರೆ.

ಕೃತಿಯಲ್ಲಿ ಹಬ್ಬಗಳು, ಧಾರ್ಮಿಕ ಉತ್ಸವಗಳು, ಊರಿನ ಸಾಮರಸ್ಯದ ಆಚರಣೆಯ ಜತೆಗೆ ಸಾಂಸ್ಕೃತಿಕ ವೈವಿಧ್ಯವನ್ನು ವಿವರಿಸಿದ್ದಾರೆ. ಇದು ಒಂದೂರಿನ ಕಥೆಯಾಗಿಯೂ ಮತ್ತು ಲೇಖಕ ವೆಂಕಟೇಶ ಅವರ ಆತ್ಮಕಥನ ರೂಪದಲ್ಲೂ ಇದೆ. ಕೃತಿಯಲ್ಲಿ 21 ವಿಭಾಗಗಳಿವೆ. ಅವುಗಳಲ್ಲಿ ಊರಿನ ಚಿತ್ರಣ, ಅದರ ಪೌರಾಣಿಕ ಮತ್ತು ಐತಿಹಾಸಿಕ ಹಿನ್ನೆಲೆ, ಆಗಿನ ಜನಜೀವನ, ಕೃಷಿ ಮತ್ತು ಜಾನಪದ, ವಿವಿಧ ದೇವಾಲಯಗಳ ಐತಿಹ್ಯ ಮತ್ತು ಅಲ್ಲಿನ ಆಚರಣೆ ಸಹಿತ ಉತ್ತನೂರು ಗ್ರಾಮವನ್ನು ಕಣ್ಣೆದುರು ತಂದಿದ್ದಾರೆ.

ನನ್ನೂರ ನೆನಪುಗಳು ಕಥನಕ್ಕೆ ಕಲಾವಿದ ಪಿ.ವಿಶ್ವನಾಥ್ ಅವರ ರೇಖಾಚಿತ್ರಗಳು ಇನ್ನಷ್ಟು ಮೆರಗು ನೀಡಿವೆ.

ಪುಟ: 472 ₹450



ಪ್ರೀತಿಲಿ ಬಿದ್ದ ಪಾಪಸ್ಕಳ್ಳಿ
ಲೇ: ಜಯರಾಮಚಾರಿ
ಪ್ರ: ಸಸಿ
ಸಂ: 9513018456

ಹೊಸ ತಲೆಮಾರಿನ ಚಿತ್ರಣ

ಹೊಸ ತಲೆಮಾರಿನ ಪ್ರೀತಿ, ಆಕರ್ಷಣೆ, ಪ್ರಣಯ, ಸಂಬಂಧ, ಕನಸು, ತಲ್ಲಣ, ಸೆಳೆತ, ಹಪಾಹಪಿ, ಜೀವಶೈಲಿ, ಚೇಷ್ಟೆ, ಭಂಡತನವನ್ನು ಚಿತ್ರಿಸುವ ಪುಸ್ತಕವಿದು. ಜೆನ್-ಝೀ ಹಾಗೂ ಮಿಲೆನಿಯಲ್ ವಯಸ್ಸಿನವರ ತೊಳಲಾಟಕ್ಕೆ ಹಿಡಿಯ ಕನ್ನಡಿಯೂ ಹೌದು. ಇಲ್ಲಿರುವ ಹನ್ನೊಂದು ಕಥೆಗಳೂ ಇದೇ ವಯಸ್ಸಿನವರಿಗೆ ಸಂಬಂಧಿಸಿದ್ದೇ ಆಗಿವೆ. ಈಗಿನ ಯುವಕರ ಯೋಚನಾ ಲಹರಿ, ಪ್ರೀತಿ ಬಗ್ಗೆ ಅವರಿಗೆ ಇರುವ ಕಲ್ಪನೆಗಳು, ಯಾವುದಕ್ಕೂ ತಯಾರು ಎನ್ನುವ ಅವರ ಧೈರ್ಯವನ್ನು ಇಲ್ಲಿನ ಕಥೆಗಳು ಹೇಳುತ್ತವೆ.

ಇಲ್ಲಿನ ಕಥೆಗಳಲ್ಲಿ ಇರುವ ಘಟನೆಗಳು ನಮ್ಮ ಜೀವನದಲ್ಲಿಯೂ ನಡೆದಿದೆ ಎಂದು ಮೆಲುಕು ಹಾಕಿಕೊಳ್ಳುವಷ್ಟು ಆಪ್ತವಾದವು. ವಯಸ್ಸಿನ ಹುಡುಗರ ಹುಡುಗಾಟಿಕೆಗಳನ್ನು, ಅವರು ಎದುರಿಸುವ ಶೋಷಣೆಯನ್ನು ಕೂಡ ಲೇಖಕರು ಸೂಚ್ಯವಾಗಿ ದಾಖಲಿಸಿದ್ದಾರೆ. ಹದಿಹರೆಯದ ಬಯಕೆಗಳನ್ನು ತಣಿಸಲು ಈಗಿನ ಯುವಕರು ಕಂಡುಕೊಳ್ಳುವ ದಾರಿ, ಅದಕ್ಕಾಗಿ ಅವರು ತೆಗೆದುಕೊಳ್ಳುವ ಅಪಾಯಕಾರಿ ಹೆಜ್ಜೆಗಳ ಚಿತ್ರಣವಿದೆ. ಹೊಸ ತಲೆಮಾರು ಹೇಗೆ ಭಿನ್ನವಾಗಿ ಯೋಚಿಸುತ್ತದೆ, ಸಾಮಾಜಿಕ ಜಾಲತಾಣಗಳು ಅವರನ್ನು ಪ್ರಭಾವಿಸಿದ ಬಗೆಯೂ ಇಲ್ಲಿನ ಕಥೆಗಳಲ್ಲಿವೆ. ಕಟ್ಟಳೆಗಳನ್ನು ಮೀರಿ ಹೊಸತನವನ್ನು ಅರಸುವ, ಅದಕ್ಕೆ ಹಪಹಪಿಸುವ ಯುವಕರ ಮನದ ಆಕಾಂಕ್ಷೆಗಳ ಬಗ್ಗೆಯೂ ಪುಸ್ತಕ ಬೆಳಕು ಚೆಲ್ಲುತ್ತದೆ. ತಲೆಮಾರುಗಳ ನಡುವಿನ ವ್ಯತ್ಯಾಸವೂ ಓದುಗರಿಗೆ ಗೋಚರಿಸುತ್ತದೆ. ಶತಮಾನಗಳು ಉರುಳಿದರೂ, ಜನರ ಮೆದುಳನ್ನು ಆಳುತ್ತಿರುವ 'ವ್ಯಸನ'ಗಳೂ ಇಲ್ಲಿ ಪ್ರಸ್ತಾಪವಾಗುತ್ತವೆ. 'ಸುಬಗತನ'ದ ತೋರ್ಪಡಿಕೆ ಬಿಟ್ಟು ಎಲ್ಲರಲ್ಲಿಯೂ ಇರುವ ಮಾನವ ಸಹಜ ಬಯಕೆಯನ್ನು ಅಷ್ಟೇ ಸಹಜವಾಗಿ ಕಥೆಗಾರ ವರ್ಣಿಸಿದ್ದಾರೆ. ಎಲ್ಲವೂ ಕೊನೆಯದಾಗಿ ಪ್ರೀತಿ ಎನ್ನುವ ಬಳ್ಳಿಗೇ ಸೇರಿದ್ದು ಎನ್ನುವುದನ್ನು ಪುಸ್ತಕ ಸಾರುತ್ತದೆ.

ಭಿನ್ನ ಪ್ರಸ್ತುತಿ ಈ ಪುಸ್ತಕದ ವಿಶೇಷ. ಮುನ್ನುಡಿಯಾಗಿ ಕಥೆಯೇ ಇದೆ. ಪುಸ್ತಕದ ನಿರೂಪಣೆ ವಿಷಯಕ್ಕೆ ತಕ್ಕಂತೆ ಇದೆ. ಈಗಿನ ಓದುಗರಿಗೆ ಪುಸ್ತಕ ಇಷ್ಟವಾಗಬಹುದು. ಹೊಸ ಬಗೆಯ ನಿರೂಪಣೆ, ಭಾಷೆ ಎಲ್ಲರಿಗೂ ಪಥ್ಯವಾಗಬೇಕೆಂದಿಲ್ಲ.

ಪುಟ: 108 ₹150


ಪ್ರವಾಸಿಗರಿಗೆ ಕನಸಿನ ಲೋಕ ಈ ಹೆನ್ಲಿ

ಥೇಮ್ಸ್ ತೀರದ ಹೆನ್ಲಿ

• ಮೋಹನ ಭಟ್ಟ, ಅಗಸೂರು

ಮೌನವೇ ಈ ಪಟ್ಟಣದ ಗುರುತು. ಥೇಮ್ಸ್ ನದಿಗೆ ಅಂಟಿಕೊಂಡಿರುವ ಈ ಪ್ರದೇಶ ಪುಟ್ಟದಾಗಿದ್ದರೂ ನೀಡುವ ಅನುಭವ ಅಗಾಧ. ಇಲ್ಲಿ ಹೆಜ್ಜೆ ಹಾಕಿದ ಲೇಖಕರು ಅದರ ನಿಶ್ಶಬ್ದದಲ್ಲೇ ಮಾತುಗಳನ್ನು ಆಲಿಸಿದ್ದಾರೆ...

ಪ್ರವಾಸ


ಇಂಗ್ಲೆಂಡ್‌ನ ಥೇಮ್ಸ್ ನದಿಯ ದಂಡೆಯ ಮೇಲೆ ಮಂಜಿನ ಮೃದುವಾದ ಹೊದಿಕೆಯಲ್ಲಿ ಮಲಗಿರುವ ಪುಟ್ಟ ಪಟ್ಟಣ – ಹೆನ್ಲಿ ಒನ್ ಥೇಮ್ಸ್. ಹೆಸರಿನಲ್ಲಿ ಉದ್ದ, ಬದುಕಿನಲ್ಲಿ ಸರಳತೆ. ಸ್ಥಳೀಯರ ತುಟಿಗಳಲ್ಲಿ ಅದು ಕೇವಲ 'ಹೆನ್ಲಿ' ಆಗಿ ಉಳಿಯುತ್ತದೆ. ಥೇಮ್ಸ್‌ನ ನೀರಿನಂತೆ ಇಲ್ಲಿ ಕಾಲವೂ ನಿಧಾನವಾಗಿ ಹರಿಯುವಂತೆ ಕಾಣುತ್ತದೆ.

ಪಟ್ಟಣದ ಹೃದಯ ಭಾಗದಲ್ಲಿ ಮಾರುಕಟ್ಟೆ. ಐದು-ಆರು ರಸ್ತೆಗಳಲ್ಲೇ ಸಣ್ಣ ಜಗತ್ತು ಅಡಗಿದೆ. ಕೇಕ್, ಚಾಕಲೇಟ್, ಐಸ್‌ಕ್ರೀಮ್‌ಗಳ ಸುಗಂಧ ಗಾಳಿಯಲ್ಲಿ ಬೆರೆತು ಹಬ್ಬದ ವಾತಾವರಣ ಸೃಷ್ಟಿಸುತ್ತದೆ. ಹಳೆಯ ಹಾಗೂ ಹೊಸ ಪುಸ್ತಕಗಳ ಅಂಗಡಿಗಳು ಪುಸ್ತಕಪ್ರಿಯರ ಆತ್ಮಸಂತೋಷಕ್ಕೆ ಸಾಕ್ಷಿಯಾಗಿವೆ. ಪಾರ್ಕುಗಳಲ್ಲಿ ಬೆಂಚುಗಳ ಮೇಲೆ ಕುಳಿತು ಪುಸ್ತಕದ ಪುಟಗಳನ್ನು ತಿರುಗಿಸುವವರ ಮೌನ ಏಕಾಗ್ರತೆ – ಅದೇ ಹೆನ್ಲಿಯ ನಿಜವಾದ ನಾದ. ಇಲ್ಲಿ ಗದ್ದಲವಿಲ್ಲ, ಗಲಾಟೆಯಿಲ್ಲ; ಗೌರವ ಮತ್ತು ಶಾಂತಿ ಮಾತ್ರ.

ಸ್ವಲ್ಪ ದೂರ ನಡೆದರೆ ಥೇಮ್ಸ್ ನದಿ ಎದುರುಗೊಳ್ಳುತ್ತದೆ. ಹರಿಯುವುದಕ್ಕಿಂತ ನಿಂತಿರುವಂತೆ ಕಾಣುವ ಆ ನೀರಿನ ಮೇಲ್ಮೈಯಲ್ಲಿ ಸಾಲು ಸಾಲಾಗಿ ಲಂಗರು ಹಾಕಿರುವ ದೋಣಿಗಳು. ಕೆಲವೆಡೆ ಹಳೆಯ ಮರದ ದೋಣಿಗಳು, ಇನ್ನೊಂದೆಡೆ ಐಷಾರಾಮಿ ಯಾಚ್‌ಗಳು; ಎರಡು ಕಿಲೋಮೀಟರ್‌ಗೂ ಹೆಚ್ಚು ಉದ್ದಕ್ಕೂ ನೀರಿನ ಮೇಲೆ ನಿಂತಿರುವ ಅವುಗಳ ನಿಶ್ಚಲ ಸೌಂದರ್ಯ ಮನಸೆಳೆಯುತ್ತದೆ. ಬಾತುಕೋಳಿಗಳ ಹಿಂಡು ದೂರ ಹೋಗಿ ಮತ್ತೆ ವಾಪಸು ತೇಲಿ ಬರುವ ದೃಶ್ಯ, ನದಿಯ ಮೇಲೆ ತೇಲುವ ರೆಸ್ಟೋರೆಂಟ್‌ಗಳು, ವಸತಿ ದೋಣಿಗಳು– ಪ್ರವಾಸಿಗರಿಗೆ ಕನಸಿನ ಲೋಕ. ಪ್ರವಾಸೋದ್ಯಮವೇ ಇಲ್ಲಿನ ಪ್ರಮುಖ ಆದಾಯವೆಂಬುದು ಸ್ಪಷ್ಟ.

ಇಲ್ಲಿನ ಒಂದು ವೈಶಿಷ್ಟ್ಯ ದೋಣಿಗಳ ಲಾಕ್ ವ್ಯವಸ್ಥೆ. ಪನಾಮಾ ಕಾಲುವೆಯ ನೆನಪನ್ನು ತರಿಸುವಂತೆ ನೀರನ್ನು ತುಂಬಿ-ಖಾಲಿ ಮಾಡಿ, ಬಾಗಿಲು ತೆರೆಯುವ-ಮುಚ್ಚುವ ತಂತ್ರದ ಮೂಲಕ ದೋಣಿಗಳನ್ನು ಎತ್ತರ-ತಗ್ಗು ಪ್ರದೇಶಗಳಿಗೆ ದಾಟಿಸಲಾಗುತ್ತದೆ. ದೋಣಿಯನ್ನು ತಂದವರೇ ಈ ಕ್ರಮವನ್ನು ಅನುಸರಿಸಬೇಕು. ಅದನ್ನು ಕಣ್ಣಾರೆ ನೋಡುವ ಆಸಕ್ತರು ಸೇರುವ ದೃಶ್ಯವೂ ವಿಶೇಷ.

ಹೆನ್ಲಿ ಸಾಹಿತ್ಯದ ತಂಗಾಳಿಯನ್ನೂ ಹೊತ್ತುಕೊಂಡಿದೆ. ವಿಶ್ವವಿಖ್ಯಾತ ಲೇಖಕ ಜಾರ್ಜ್ ಆರ್ವೆಲ್ ಈ ಪ್ರದೇಶದಲ್ಲಿ ಹಲವು ವರ್ಷ ನೆಲೆಸಿದ್ದರೆಂಬ ನೆನಪು ಇಲ್ಲಿ ಇನ್ನೂ ತಾಜಾ. ಅವರ ಕೃತಿಗಳ ಸ್ಪಂದನೆ, ಅದರಿಂದ ಪ್ರೇರಿತರಾದ ಬರಹಗಾರರ ಪೈಪೋಟಿ – ಹೆನ್ಲಿಯ ಸಾಹಿತ್ಯಿಕ ಗುರುತು. ಪ್ರತಿ ಅಕ್ಟೋಬರ್‌ನಲ್ಲಿ ನಡೆಯುವ ಸಾಹಿತ್ಯ, ಕಲೆ, ಶಿಲ್ಪ ಮುಂತಾದ ಸೃಜನಾತ್ಮಕ ಚಟುವಟಿಕೆಗಳ ಉತ್ಸವ ವಾರಪೂರ್ತಿ ಪಟ್ಟಣವನ್ನು ಚೈತನ್ಯಗೊಳಿಸುತ್ತದೆ. ವಿವಿಧ ದೇಶಗಳಿಂದ ಆಗಮಿಸುವ ಕಲಾವಿದರು ತಮ್ಮ ಪ್ರತಿಭೆಯನ್ನು ಹಂಚಿಕೊಳ್ಳುವ ಈ ಹಬ್ಬ, ಹೆನ್ಲಿಯ ಸಾಂಸ್ಕೃತಿಕ ಜೀವನಾಡಿ.


ಹೆನ್ಲಿ ಸಮೀಪದ ಟೆಂಪಲ್ ಐಲ್ಯಾಂಡ್

ಜುಲೈ ತಿಂಗಳಲ್ಲಿ ನಡೆಯುವ ಅಂತರರಾಷ್ಟ್ರೀಯ ದೋಣಿ ಸ್ಪರ್ಧೆ ಪಟ್ಟಣದ ಹೆಗ್ಗಳಿಕೆ. 1839ರಲ್ಲಿ ಆರಂಭವಾದ ಈ ಪ್ರತಿಷ್ಠಿತ ಸ್ಪರ್ಧೆ ವಿಶ್ವದ ಗಮನ ಸೆಳೆಯುತ್ತದೆ. ಹೆನ್ಲಿ ರಾಯಲ್ ರೆಗಟ್ಟಾ ಹೆಸರಿನಲ್ಲಿ ಪ್ರಸಿದ್ಧಿಯಾದ ಈ ಹಬ್ಬಕ್ಕೆ ನೂರಾರು ದೋಣಿಗಳು, ಪರಿಣತ ನಾವಿಕರು, ಒಲಿಂಪಿಕ್ ಪದಕ ವಿಜೇತರು ಆಗಮಿಸುತ್ತಾರೆ. ನದಿಯ ಎರಡೂ ಬದಿಯಲ್ಲಿ ಕಿಲೋಮೀಟರ್‌ಗಳಷ್ಟು ದೂರ ನಿಂತು ಪ್ರೇಕ್ಷಕರು ಕೇಕೆ ಹಾಕುವ ದೃಶ್ಯ ರೋಮಾಂಚನಕಾರಿಯದು. ಸಮೀಪದ ಟೆಂಪಲ್ ಐಲ್ಯಾಂಡ್‌ನಿಂದ ಆರಂಭವಾಗುವ ಸ್ಪರ್ಧೆ, ಥೇಮ್ಸ್‌ನ ನೀರಿನ ಮೇಲೆಯೇ ಇತಿಹಾಸ ಬರೆದಂತೆ ಸಾಗುತ್ತದೆ. ಇಂತಹ ಅಚ್ಚುಕಟ್ಟಾದ ಆಯೋಜನೆಗೆ ಆಕ್ಸ್‌ಫರ್ಡ್‌ಶೈರ್ ಜಿಲ್ಲೆಯ ಶಿಸ್ತಿನ ಪರಂಪರೆ ಕಾರಣವೆಂದು ಸ್ಥಳೀಯರು ಹೆಮ್ಮೆಪಡುತ್ತಾರೆ.

ಹೆನ್ಲಿಯ ಸುತ್ತಮುತ್ತಲಿನ ಪ್ರವಾಸಿ ತಾಣಗಳೂ ಆಕರ್ಷಕ. 13ನೇ ಶತಮಾನದ ಸೇಂಟ್ ಮೇರೀಸ್ ಚರ್ಚ್ ಹೆನ್ಲಿ, ನದಿಯ ಇತಿಹಾಸವನ್ನು ಹೇಳುವ ನದಿ ಮತ್ತು ರೋವಿಂಗ್ ಮ್ಯೂಸಿಯಂ – ಇವೆಲ್ಲವೂ ಕಾಲದ ಸಾಕ್ಷಿಗಳಂತೆ ನಿಂತಿವೆ.

ಆಧುನಿಕ ಐಷಾರಾಮಿ ಬದುಕಿನ ಚಮತ್ಕಾರದಿಂದ ದೂರ ಸರಿದು, ಪ್ರಕೃತಿಯ ಮೌನವನ್ನು ಆಸ್ವಾದಿಸಲು ಜನರು ಹೆನ್ಲಿಯತ್ತ ಬರುತ್ತಿದ್ದಾರೆ. ಆದರೆ ಹೆಚ್ಚುತ್ತಿರುವ ಪ್ರವಾಸಿಗರ ಸಂಖ್ಯೆ ತ್ಯಾಜ್ಯ ನಿರ್ವಹಣೆ, ಮಾಲಿನ್ಯ ನಿಯಂತ್ರಣ ಮುಂತಾದ ಸವಾಲುಗಳನ್ನು ತಂದಿವೆ. ಸ್ಥಳೀಯರು ಪ್ರಕೃತಿಯನ್ನು ಕಾಪಾಡುವ ಅಭಿಯಾನಕ್ಕೆ ವರ್ಷಗಳ ಹಿಂದೆಯೇ ಚಾಲನೆ ನೀಡಿದ್ದಾರೆ. 'ಮೊದಲು ಪ್ರಕೃತಿಯನ್ನು ಉಳಿಸೋಣ' ಎಂಬ ಅವರ ನಿಶ್ಚಯವೇ ಈ ಪಟ್ಟಣದ ಭವಿಷ್ಯ.

ಥೇಮ್ಸ್ ತೀರದ ಹೆನ್ಲಿ – ವೈಭವಕ್ಕಿಂತ ಸಹಜತೆಯನ್ನೇ ಆರಿಸಿಕೊಂಡ, ನಿಶ್ಶಬ್ದದಲ್ಲೇ ತನ್ನ ಮಹತ್ವವನ್ನು ಸಾರುವ ಇಂಗ್ಲೆಂಡ್‌ನ ಮೌನ ಕವಿತೆ.


ಹೆನ್ಲಿ ಪಟ್ಟಣದ ಮನಮೋಹಕ ದೃಶ್ಯ

...ಮಡಿಕೇರಿಗೆ ಮೈಕ್

10ನೇಪುಟದಿಂದ....

ಕೊಡಗಿನ ಮಣ್ಣಿನಡಿ ಹುದುಗಿರುವ ಕಥೆಗಳು ನೂರಾರು. ಅವುಗಳಲ್ಲಿ ಕೆಲವರು ಅಧಿಕಾರಿಗಳು, ಕೆಲವರು ವೈದ್ಯರು, ಕೆಲವರು ಸಾಮಾನ್ಯ ಕುಟುಂಬದವರು. ಆದರೆ ಎಲ್ಲರಿಗೂ ಒಂದೇ ಅಂತ್ಯ, ಅದು ಮೌನ. ಅದು ಕೇವಲ ನಿಶ್ಶಬ್ದವಲ್ಲ, ನಿರ್ಲಕ್ಷ್ಯದ ಗುರುತು.

ಮಣ್ಣಿನಡಿ ಹುದುಗಿದ ನೆನಪುಗಳು

1834ರ ಏಪ್ರಿಲ್ 24ರಂದು ಕೊಡಗಿನ ಕೊನೆಯ ದೊರೆ ಚಿಕ್ಕ ವೀರರಾಜೇಂದ್ರರನ್ನು ಬ್ರಿಟಿಷರು ಗಡಿಪಾರು ಮಾಡಿದರು. ಆ ದಿನದಿಂದ ಕೊಡಗು ಬ್ರಿಟಿಷರ ಆಡಳಿತಕ್ಕೆ ಒಳಪಟ್ಟಿತು. ಮುಂದಿನ 113 ವರ್ಷಗಳು ಬ್ರಿಟಿಷ್ ಅಧಿಕಾರಿಗಳು ಇಲ್ಲಿಯೇ ನೆಲೆಸಿದರು. ಅವರಲ್ಲಿ ನೂರಾರು ಮಂದಿ ಇಲ್ಲಿಯೇ ಮೃತಪಟ್ಟರು. ಅವರ ಸಮಾಧಿಗಳನ್ನು ರಾಜಾಸೀಟ್ ಪ್ರದೇಶದಲ್ಲಿ ನಿರ್ಮಿಸಲಾಯಿತು. ಆದರೆ ಸ್ವಾತಂತ್ರ್ಯ ಬಂದ ನಂತರ ಬ್ರಿಟಿಷರು ಹೋದರು. ಮತ್ತು ಅವರ ನೆನಪುಗಳನ್ನೂ ಮಣ್ಣಿನಡಿ ಹೂತುಬಿಟ್ಟರು. ರಾಜಾಸೀಟ್ ಉದ್ಯಾನವನ ನಿರ್ಮಾಣಕ್ಕಾಗಿ ಸಮಾಧಿಗಳನ್ನು ತೆರವುಗೊಳಿಸಿ ಮಡಿಕೇರಿ ಹೊರವಲಯಕ್ಕೆ ಹಾಕಲಾಯಿತು. ಕಾಲಕ್ರಮೇಣ ಆ ಜಾಗ ದಟ್ಟವಾದ ಕಾಡಾಗಿ ಮಾರ್ಪಟ್ಟಿತು.

ಒಂದು ಕಾಲದಲ್ಲಿ ಗೌರವದಿಂದ ನಿಂತಿದ್ದ ಸಮಾಧಿಗಳು ಇಂದು ಕಳೆದುಹೋಗಿವೆ. ಅವುಗಳ ಮೇಲೆ ಬೆಳೆಯುತ್ತಿರುವುದು ಕೇವಲ ಗಿಡಗಳು ಅಲ್ಲ, ನಿರ್ಲಕ್ಷ್ಯದ ಇತಿಹಾಸ.

ಮೈಕ್, ರೇಖಾ ಮತ್ತು ನಾನು ಹುಡುಕಾಟಕ್ಕೆ ಹೊರಟೆವು.

ಮೊದಲಿಗೆ ರಾಜಾಸೀಟ್. ಗಿಡಗಂಟಿಗಳ ನಡುವೆ ಹೆಜ್ಜೆ ಹಾಕುತ್ತಾ ಹುಡುಕಾಟ ನಡೆಸಿದೆವು. ಅಲ್ಲಿ ಒಂದು ಕಂಬ ಕಣ್ಣಿಗೆ ಬಿತ್ತು. ಅದರ ಸುತ್ತಲಿನ ಗಿಡಗಳನ್ನು ತೆರವುಗೊಳಿಸಿದಾಗ 1929ರಲ್ಲಿ ಭಾರತದ ವೈಸ್‌ರಾಯ್ ಲಾರ್ಡ್ ಇರ್ವಿನ್ ಅವರ ದರ್ಬಾರದ ಸ್ಮರಣ ಫಲಕವೆಂದು ತಿಳಿಯಿತು. ಸಮಾಧಿ ಸಿಗಲಿಲ್ಲ. ಆದರೆ ಇತಿಹಾಸದ ಒಂದು ತುಣುಕು ಸಿಕ್ಕಿತು. ಮುಂದೆ ಐಟಿಐ ಹಿಂಭಾಗದ ಪ್ರದೇಶಕ್ಕೆ ಹೊರಟೆವು. ಅಲ್ಲಿ ಸಮಾಧಿ ಫಲಕಗಳನ್ನು ಎಸೆದಿರುವುದಾಗಿ ತಿಳಿದು ಹೋದೆವು. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಬೇಬಿ ಮ್ಯಾಥ್ಯೂ ನಮ್ಮೊಂದಿಗೆ ಸೇರಿಕೊಂಡರು.

ಆದರೆ ಅಲ್ಲಿ ದಟ್ಟವಾಗಿ ಗಿಡಗಂಟಿಗಳು ಬೆಳೆದುನಿಂತಿದ್ದವು. ದಾರಿಯೇ ಕಾಣದ ಸ್ಥಿತಿ. ಒಂದು ಒಂದು ಫಲಕವನ್ನು ಸ್ವಚ್ಛಗೊಳಿಸಿ ನೋಡಿದರೂ ಮೈಕ್ ಹುಡುಕುತ್ತಿದ್ದ ಹೆಸರು ಕಾಣಿಸಲಿಲ್ಲ. ಅವರ ಮುಖದಲ್ಲಿ ನಿರಾಸೆ ನಿಧಾನವಾಗಿ ಆವರಿಸಿತು. ಹುಡುಕಾಟದ ಉತ್ಸಾಹ ನಿಧಾನಕ್ಕೆ ಕರಗುತ್ತಿತ್ತು.

ಮ್ಯೂಸಿಯಂಗೆ ಮರಳಿದಾಗ ಅಪರೂಪದ ಕ್ಷಣ ಎದುರಾಯಿತು. ಗೋಡೆ ಮೇಲೆ ಇದ್ದ ಒಂದು ಫಲಕ ಮೈಕ್ ಅವರ ಕಣ್ಣಿಗೆ ಬಿತ್ತು. ಅವರು ಕೂಡಲೇ ಎದ್ದು ಉತ್ಸಾಹದಿಂದ ಹೇಳಿದರು– 'ಇದು ನನ್ನ ಮುತ್ತಜ್ಜಿ ಮಾರ್ಗರೇಟ್ ಮತ್ತು ಅವರ ಸಹೋದರ ಅಲನ್ ಅವರ ಸ್ಮರಣ ಫಲಕ!'. ಆ ಕ್ಷಣದಲ್ಲಿ ಅವರ ಕಣ್ಣುಗಳಲ್ಲಿ ಮಿಂಚಿದ ಸಂತೋಷ ಹುಡುಕಾಟದ ಕಷ್ಟವನ್ನು ಕ್ಷಣಕಾಲ ಮರೆಮಾಚಿತು.

ಆದರೆ ಆ ಸಂತೋಷದ ನೆರಳಲ್ಲಿ ಒಂದು ಅಪೂರ್ಣತೆಯ ನೋವು ಇನ್ನೂ ಉಳಿದಿತ್ತು. ಅವರ ಮುತ್ತಾತನ ಸಮಾಧಿ ಇನ್ನೂ ಸಿಕ್ಕಿರಲಿಲ್ಲ.

ಕೊಡಗಿನಲ್ಲಿ ಐದು ದಿನ ಕಳೆದ ಮೈಕ್ ಇಲ್ಲಿನ ಪ್ರಕೃತಿ ಸೌಂದರ್ಯದಿಂದ ಮಂತ್ರಮುಗ್ಧರಾದರು. 'ಲೇಡಿ ಕ್ಯಾನಿಂಗ್ ಕೊಡಗನ್ನು ಸ್ಕಾಟ್ಲೆಂಡ್ ಎಂದು ಕರೆಯುವುದೇಕೆ ಎಂಬುದು ಇಲ್ಲಿ ಬಂದಾಗ ಅರ್ಥವಾಯಿತು' ಎಂದು ಅವರು ಹೇಳಿದರು. ಬೆಟ್ಟಗಳು, ಮಂಜು, ಹಸಿರು ಅವು ಕೇವಲ ದೃಶ್ಯವಲ್ಲ, ಒಂದು ಭಾವನೆ. 'ನನ್ನ ಮುತ್ತಾತ ಇಲ್ಲಿ ಏಕೆ ವಾಸವಿದ್ದರು ಎಂಬುದು ಈಗ ಸ್ಪಷ್ಟವಾಗಿದೆ' ಎಂದರು.


